ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಸೆಪ್ಟೆಂಬರ್ 14 ಭಾನುವಾರ 2025

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 46 | ಸಂಚಿಕೆ: 148 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ರಾಜ್ಯದಲ್ಲಿ ದೇಶದಲ್ಲೇ ಮೊಟ್ಟ ಮೊದಲ

ಸೈಬರ್ ಕಮಾಂಡ್ ಸೆಂಟರ್ ಸ್ಥಾಪನೆ



- ಡಿಐಜಿ ಪ್ರಣಬ್ ಮೊಹಂತಿ ಇದರ ಮುಖ್ಯಸ್ಥರು
- ರಾಜ್ಯದ ಎಲ್ಲಾ ಪ್ರಕರಣ ಈ ಕೇಂದ್ರದಿಂದ ತನಿಖೆ

ಬೆಂಗಳೂರು,ಸೆ.13(ಕೆಎಂಶಿ)–ಸಾಮಾಜಿಕ ಜಾಲತಾಣಗಳ ಮೂಲಕ ವಂಚನೆ ಮಾಡುವವರ ವಿರುದ್ಧ ಕ್ರಮ ಕೈಗೊಳ್ಳಲು ಸೈಬರ್ ಕಮಾಂಡ್ ಸೆಂಟರ್ ಅನ್ನು ರಾಜ್ಯ ಸರ್ಕಾರ ಪ್ರಾರಂಭಿಸಿದೆ. ಕರ್ನಾಟಕ ಹೈಕೋರ್ಟ್ ಆದೇಶದ ಮೇರೆಗೆ ರಾಷ್ಟ್ರದಲ್ಲೇ ಮೊದಲ ಸೈಬರ್ ಅಪರಾಧ ಪತ್ತೆ ಕೇಂದ್ರ ಪ್ರಾರಂಭಗೊಂಡಿದೆ.

ಇದರ ಮುಖ್ಯಸ್ಥರಾಗಿ ಡಿಐಜಿ ಪ್ರಣಬ್ ಮೊಹಂತಿ ನೇಮಕವಾಗಿದ್ದು, ಜಾಲತಾಣಗಳ ಮೂಲಕ ವಂಚನೆಗೊಳಗಾಗಿ ರಾಜ್ಯದ ಯಾವುದೇ ಮೂಲೆಯಲ್ಲಿ ದಾಖಲಾಗುವ ದೂರುಗಳನ್ನು ಇದರ ಮೇಲೆ ತನಿಖೆ ಮಾಡಲಾಗುವುದು. ಬ್ಯಾಂಕ್ ಖಾತೆ, ಸಾಮಾಜಿಕ ಜಾಲತಾಣ, ಸಾಫ್ಟ್‌ವೇರ್ ಹ್ಯಾಕ್, ಆನ್‌ಲೈನ್ ಗೇಮ್ ಮೂಲಕ ವಂಚನೆಗೆ ಒಳಗಾಗುವವರು ದೂರು ನೀಡಿದರೆ ಸೈಬರ್ ಅಪರಾಧಗಳ ಪತ್ತೆ ಕೇಂದ್ರ ತನಿಖೆ ನಡೆಸಲಿದೆ.




ಪ್ರಣಬ್ ಮೊಹಂತಿ

ಸೈಬರ್ ಅಪರಾಧಗಳ ಪತ್ತೆಗೆ ಸೈಬರ್ ಕ್ರೈಂ ವಿಂಗ್, ಸೈಬರ್ ಸೆಕ್ಯೂರಿಟಿ ವಿಂಗ್, ಐಡಿಟಿಯು ವಿಂಗ್ ಹಾಗೂ ತರಬೇತಿ, ಸಾಮರ್ಥ್ಯ ವೃದ್ಧಿ ಮತ್ತು ಜನಜಾಗೃತಿ ದಳ ಎಂಬುದಾಗಿ ನಾಲ್ಕು ವಿಭಾಗಗಳನ್ನು ಮಾಡಲಾಗಿದೆ.

ಸೈಬರ್ ಕ್ರೈಂ ವಿಂಗ್ ಸೈಬರ್ ಅಪರಾಧಗಳನ್ನು ಪತ್ತೆ ಮಾಡಿ, ದೂರು ದಾಖಲಿಸಿಕೊಂಡು ತನಿಖೆ ನಡೆಸಲಿದೆ. ಸೈಬರ್ ಸೆಕ್ಯೂರಿಟಿ ವಿಂಗ್ ಬ್ಯಾಂಕ್ ಖಾತೆ, ಸಾಮಾಜಿಕ ಜಾಲತಾಣ, ಸಾಫ್ಟ್‌ವೇರ್ ಹ್ಯಾಕ್ ಮಾಡುವವರನ್ನು ಪತ್ತೆ ಮಾಡುತ್ತದೆ. ಐಡಿಟಿಯು ವಿಂಗ್ ಸೈಬರ್ ಅಪರಾಧಿಗಳ ಸ್ಥಳ ಪತ್ತೆ ಮಾಡುವುದು, ಸಾಮಾಜಿಕ ಜಾಲತಾಣಗಳ ಸಂಸ್ಥೆಗಳಿಂದ ಮಾಹಿತಿ ಪಡೆಯುವುದು, ಐಪಿ ಅಡ್ರೆಸ್ ಪತ್ತೆ ಮಾಡಲಿದೆ. ತರಬೇತಿ, ಸಾಮರ್ಥ್ಯ ವೃದ್ಧಿ ಮತ್ತು ಜನಜಾಗೃತಿ ದಳವು ಸೈಬರ್ ಕಮಾಂಡ್ ಸೆಂಟರ್ ಅಧಿಕಾರಿಗಳಿಗೆ ತರಬೇತಿ, ತಾಂತ್ರಿಕ ಜ್ಞಾನ ವೃದ್ಧಿ, ಅಂದರೆ, ಹೊಸ ತಂತ್ರಜ್ಞಾನಗಳ ಕುರಿತು ತಿಳುವಳಿಕೆ ನೀಡುವುದು, ಸಾರ್ವಜನಿಕರು ಮತ್ತು ವಿದ್ಯಾರ್ಥಿಗಳಿಗೆ ಸೈಬರ್ ಅಪರಾಧ ಅರಿವು ಮೂಡಿಸುವ ಕೆಲಸ ಮಾಡಲಿದೆ. ಬೆಂಗಳೂರಿನಲ್ಲಿ 45 ಸೈಬರ್ ಪೊಲೀಸ್ ಠಾಣೆಗಳು ಇರಲಿವೆ. ಜಿಲ್ಲಾ ವ್ಯಾಪ್ತಿಯ ಪೊಲೀಸ್ ಠಾಣೆಗಳಲ್ಲೂ ದೂರು ದಾಖಲಿಸಬಹುದು. ಜಿಲ್ಲೆಗಳಲ್ಲಿ ದಾಖಲಾಗುವ ಪ್ರಕರಣಗಳು ಎಸ್‌ಪಿಗಳ ಅಧೀನದಲ್ಲಿ ತನಿಖೆಗೆ ಒಳಪಡಲಿವೆ. ರಾಜ್ಯದಲ್ಲಿ 16,000 ಪ್ರಕರಣ ಇತ್ಯರ್ಥಕ್ಕೆ ಬಾಕಿ ಇವೆ. ದಿನೇ ದಿನೇ ಸೈಬರ್ ಅಪರಾಧ ಪ್ರಕರಣಗಳು ಹೆಚ್ಚುತ್ತಲೇ ಇದ್ದು, ಕಮಾಂಡ್ ಸೆಂಟರ್ ಸೈಬರ್ ಅಪರಾಧ ನಿಯಂತ್ರಿಸುವಲ್ಲಿ ಪರಿಣಾಮಕಾರಿ ಕ್ರಮ ಕೈಗೊಳ್ಳಲಿದೆ.

ಎಂಎಂ ವನ್ಯಧಾಮ ಹುಲಿ ಸಂರಕ್ಷಿತ ಪ್ರದೇಶ

ಕೇಂದ್ರ ಉನ್ನತಾಧಿಕಾರ ಸಮಿತಿ ಶಿಫಾರಸು



ನವದೆಹಲಿ,ಸೆ.13–ಹುಲಿಗಳ ವಾಸಕ್ಕೆ ಪೂರಕ ವಾತಾವರಣ ಹೊಂದಿರುವ ಮಲೆ ಮಹದೇಶ್ವರ (ಎಂಎಂ) ವನ್ಯಜೀವಿ ಧಾಮವನ್ನು ಹುಲಿ ಸಂರಕ್ಷಿತ ಪ್ರದೇಶವನ್ನಾಗಿ ಘೋಷಿಸಬೇಕು ಎಂದು ಸುಪ್ರೀಂಕೋರ್ಟ್ ನೇಮಿಸಿರುವ ಕೇಂದ್ರ ಉನ್ನತಾಧಿಕಾರ ಸಮಿತಿ (ಸಿಇಸಿ) ಶಿಫಾರಸು ಮಾಡಿದೆ.

ಮಲೆ ಮಹದೇಶ್ವರ ವನ್ಯಜೀವಿ ವಿಭಾಗದ ಹೂಗ್ಯಂ ವಲಯದಲ್ಲಿ ಇತ್ತೀಚೆಗೆ ಸಂಭವಿಸಿದ 5 ಹುಲಿಗಳ ಸಾವಿನ ಪ್ರಕರಣದ ಬಗ್ಗೆ ಸಮಿತಿ ತನಿಖೆ ನಡೆಸಿ 55 ಪುಟಗಳ ವರದಿ ಸಿದ್ಧಪಡಿಸಿ ಸುಪ್ರೀಂ ಕೋರ್ಟ್‌ಗೆ ಸಲ್ಲಿಸಿದೆ. ಪಶ್ಚಿಮಘಟ್ಟದಲ್ಲಿ ಪದೇ ಪದೆ ಸಂಭವಿಸುತ್ತಿರುವ ಇಂತಹ ಘಟನೆಗಳಿಂದಾಗಿ ಹುಲಿಗಳ ಸಂರಕ್ಷಣೆ ಕುರಿತು ಗಂಭೀರ ಯೋಜನೆಗಳನ್ನು ರೂಪಿಸಬೇಕಿದೆ ಎಂದು ಸಮಿತಿ ಸಲಹೆ ನೀಡಿದೆ. ಮಹದೇಶ್ವರ ಬೆಟ್ಟ, ಹನೂರು ಹಾಗೂ ಯಡೆಯಾರಳ್ಳಿ ಮೀಸಲು ▶ 6ನೇ ಪುಟಕ್ಕೆ

ಇಂದು ಭಾರತ–ಪಾಕಿಸ್ತಾನ ಏಷ್ಯಾ ಕಪ್ ಪಂದ್ಯ: ಬಹಿಷ್ಕಾರಕ್ಕೆ ಬಿಸಿಸಿಐ ಚಿಂತನೆ



ದುಬೈ: ಭಾರತ ಮತ್ತು ಪಾಕಿಸ್ತಾನ ನಡುವಿನ 2025ರ ಏಷ್ಯಾ ಕಪ್ ಕ್ರಿಕೆಟ್ ಪಂದ್ಯವನ್ನು ಭಾನುವಾರ ಬಹಿಷ್ಕರಿಸಲು ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಸಜ್ಜಾಗಿದೆ. ದೈನಿಕ್ ಜಾಗರಣ್ ವರದಿ ಪ್ರಕಾರ, ಭಾರತ ಅಧಿಕೃತ ಆತಿಥೇಯರಾಗಿದ್ದರೂ ಬಿಸಿಸಿಐ ಈ ಪಂದ್ಯವನ್ನು ಬಹಿಷ್ಕರಿಸುತ್ತಿದೆ ಎಂಬ ಮಾಹಿತಿ ಲಭ್ಯವಾಗಿದೆ.

ಪಹಲ್ಗಾಮ್ ಭಯೋತ್ಪಾದಕ ದಾಳಿಯ ನಂತರ ಭಾರತ ಮತ್ತು ಪಾಕಿಸ್ತಾನ ನಡುವೆ ಹೆಚ್ಚುತ್ತಿರುವ ರಾಜಕೀಯ ಉದ್ವಿಗ್ನತೆಯ ಹಿನ್ನೆಲೆಯಲ್ಲಿ ಏಷ್ಯಾ ಕಪ್ ಪಂದ್ಯಗಳನ್ನು ಯುಎಇಗೆ ಸ್ಥಳಾಂತರಿಸಲಾಯಿತು. ಇಲ್ಲಿವರೆಗೆ ಯಾವುದೇ ಬಿಸಿಸಿಐ ಅಧಿಕಾರಿ ದುಬೈ ತಲುಪಿಲ್ಲ. ಈ ಮೂಲಕ ದುಬೈನಲ್ಲಿ ನಡೆಯುವ ಪಂದ್ಯಕ್ಕೆ ಬಿಸಿಸಿಐ ಪರೋಕ್ಷ ಬಹಿಷ್ಕಾರ ಹಾಕಲು ಮುಂದಾಗಿದೆ. ಪಂದ್ಯದ ದಿನದಂದು ಒಬ್ಬ ಅಧಿಕಾರಿ ಮಾತ್ರ ಕ್ರೀಡಾಂಗಣದಲ್ಲಿ ಹಾಜರಿರುವ ನಿರೀಕ್ಷೆಯಿದೆ ಎಂದು ▶ 6ನೇ ಪುಟಕ್ಕೆ

ಸಂಚಾರ ನಿಯಮ ಉಲ್ಲಂಘನೆ ಶೇ.50 ರಿಯಾಯ್ತಿಯಡಿ ಮೈಸೂರು ನಗರ, ಜಿಲ್ಲೆಯಲ್ಲಿ 31.36 ಕೋಟಿ ದಂಡ ಪಾವತಿ; 13.26 ಲಕ್ಷ ಪ್ರಕರಣಕ್ಕೆ ಮುಕ್ತಿ



ಮೈಸೂರು, ಸೆ.13(ಎಂಕೆ)– ಸಂಚಾರ ನಿಯಮ ಉಲ್ಲಂಘನೆ ಪ್ರಕರಣಗಳ ಬಾಕಿ ದಂಡದ ಮೊತ್ತ ಪಾವತಿಗೆ ರಾಜ್ಯ ಸರ್ಕಾರ ಶೇ.50ರಷ್ಟು ರಿಯಾಯ್ತಿ ನೀಡಿದ 21 ದಿನಗಳ ಅವಧಿಯಲ್ಲಿ ಮೈಸೂರು ನಗರ ಮತ್ತು ಜಿಲ್ಲೆಯಲ್ಲಿ ಬರೋಬ್ಬರಿ 31.36 ಕೋಟಿ ರೂ. ದಂಡ ಪಾವತಿಯಾಗಿದ್ದು, 13.26 ಲಕ್ಷ ಪ್ರಕರಣಗಳು ಇತ್ಯರ್ಥಗೊಂಡಿವೆ. ಸಂಚಾರ ನಿಯಮ ಉಲ್ಲಂಘನೆ ಪ್ರಕರಣಗಳ ಬಾಕಿ ದಂಡ 400 ಕೋಟಿ ರೂ.ಗಳ ವಸೂಲಿ ಹಿನ್ನೆಲೆಯಲ್ಲಿ ಆ.23ರಿಂದ ಸೆ.12ರವರೆಗೆ ಶೇ.50ರಷ್ಟು ರಿಯಾಯ್ತಿಯೊಂದಿಗೆ ದಂಡ ಪಾವತಿ ಮಾಡಲು ▶ 6ನೇ ಪುಟಕ್ಕೆ

ಹಾಸನ ಕ್ಯಾಂಟರ್ ದುರಂತದಲ್ಲಿ 10 ಬಲಿ

ಗಾಯಾಳುಗಳ ಆರೋಗ್ಯ ವಿಚಾರಿಸಲು ವ್ಹೀಲ್‌ಚೇರ್‌ನಲ್ಲೇ ಆಸ್ಪತ್ರೆಗೆ ಬಂದ ಹೆಚ್.ಡಿ.ದೇವೇಗೌಡರು; ಮೃತರ ಕುಟುಂಬಗಳಿಗೆ ಜೆಡಿಎಸ್‌ನಿಂದ ತಲಾ ಒಂದು ಲಕ್ಷ ಪರಿಹಾರ; ಸರ್ಕಾರದಿಂದ ಪರಿಹಾರ ಹೆಚ್ಚಳಕ್ಕೆ ಆಗ್ರಹ; ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣ ಬೈರೇಗೌಡ ದುರಂತ ಸ್ಥಳ, ಆಸ್ಪತ್ರೆಗೆ ಭೇಟಿ



ಹಾಸನ: ಗಣೇಶ ವಿಸರ್ಜನೆ ಮೆರವಣಿಗೆ ವೇಳೆ ಟ್ರಕ್ ಹರಿದು 10 ಮಂದಿ ಸಾವಿಗೀಡಾಗಿದ್ದು, ಹಲವರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ತಾನು ಹಿಂದೆ ಪ್ರತಿನಿಧಿಸುತ್ತಿದ್ದ ಕ್ಷೇತ್ರದ ಜನರ ಕಷ್ಟ ಕೇಳಲು ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು ದುರಂತ ಸ್ಥಳಕ್ಕೆ ಭೇಟಿ ನೀಡಿದ್ದರು. ಜಿಲ್ಲಾಸ್ಪತ್ರೆಯ ಹೊರಭಾಗದಿಂದ ವ್ಹೀಲ್ ಚೇರ್‌ನಲ್ಲೇ ಕುಳಿತು ದೇವೇಗೌಡರು ಪ್ರತಿಯೊಬ್ಬರ ಯೋಗಕ್ಷೇಮ ವಿಚಾರಿಸಿದರು. ಮೃತರ ಕುಟುಂಬಸ್ಥರಿಗೆ ಸಾಂತ್ವನ ಹೇಳಿದರು. ಭೇಟಿಗೂ ಮುನ್ನ ದುರಂತದ ಕುರಿತು ಹಾಸನದ ಪ್ರವಾಸಿಮಂದಿರದಲ್ಲಿ ದೇವೇಗೌಡರು ▶ 6ನೇ ಪುಟಕ್ಕೆ


ಪ್ರಧಾನಿ ಮೋದಿ ಸಂತಾಪ; ಮೃತರ ಕುಟುಂಬಕ್ಕೆ 2 ಲಕ್ಷ, ಗಾಯಾಳುಗಳಿಗೆ 50 ಸಾವಿರ ಪರಿಹಾರ



ಬೆಂಗಳೂರು,ಸೆ.13(ಕೆಎಂಶಿ)–ಹಾಸನ ತಾಲೂಕು ಮೊಸಳೆ ಹೊಸಳ್ಳಿ ದುರಂತದಲ್ಲಿ ಮೃತಪಟ್ಟವರಿಗೆ ಪ್ರಧಾನಿ ನರೇಂದ್ರ ಮೋದಿ ಸಂತಾಪ ವ್ಯಕ್ತಪಡಿಸಿದ್ದಾರೆ. ಈ ಸಂಬಂಧ ಟ್ವೀಟ್ ಮಾಡಿರುವ ಮೋದಿ, ಕರ್ನಾಟಕದ ಹಾಸನದಲ್ಲಿ ಸಂಭವಿಸಿದ ರಸ್ತೆ ದುರಂತ ಹೃದಯ ವಿದ್ರಾವಕವಾಗಿದೆ. ಮೃತರ ಆತ್ಮಕ್ಕೆ ಶಾಂತಿ ಕೋರುವೆ. ಮೃತರ ಕುಟುಂಬದ ದುಃಖದಲ್ಲಿ ತಾವೂ ಭಾಗಿಯಾಗಿದ್ದು, ಅಪಘಾತದಲ್ಲಿ ಗಾಯಗೊಂಡವರು ▶ 6ನೇ ಪುಟಕ್ಕೆ

ಗಗನಚುಕ್ಕಿ ಜಲಪಾತೋತ್ಸವಕ್ಕೆ ಚಾಲನೆ

ಮೇಕೆದಾಟು ಯೋಜನೆಗೆ ಕೇಂದ್ರ, ತಮಿಳ್ನಾಡು ಸಹಕರಿಸಬೇಕು: ಸಿಎಂ ಸಿದ್ದರಾಮಯ್ಯ



ಮಂಡ್ಯ ಜಿಲ್ಲೆಯ ಮಳವಳ್ಳಿ ತಾಲೂಕಿನ ಗಗನಚುಕ್ಕಿ ಜಲಪಾತೋತ್ಸವದಲ್ಲಿ ಕಂಗೊಳಿಸುತ್ತಿರುವ ಲೇಸರ್ ಶೋ.

ಮಳವಳ್ಳಿ, ಸೆ.13(ಎಂಆರ್)–ಮೇಕೆದಾಟು ಯೋಜನೆಗೆ ಕೇಂದ್ರ ಸರ್ಕಾರ ಒಪ್ಪಿಗೆ ನೀಡಬೇಕು. ಅದೇ ರೀತಿ ರಾಜಕೀಯ ಕಾರಣಕ್ಕಾಗಿ ಈ ಯೋಜನೆಯನ್ನು ವಿರೋಧಿಸುತ್ತಿರುವ ತಮಿಳ್ನಾಡು ಸರ್ಕಾರವೂ ಅಣೆಕಟ್ಟು ನಿರ್ಮಾಣಕ್ಕೆ ಅನುವು ಮಾಡಿಕೊಡಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಒತ್ತಾಯಿಸಿದರು.

ಮಂಡ್ಯ ಜಿಲ್ಲಾಡಳಿತ, ಪ್ರವಾಸೋದ್ಯಮ ಇಲಾಖೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಂಯುಕ್ತಾಶ್ರಯದಲ್ಲಿ ಶಿವನಸಮುದ್ರದ ಬಳಿ ಇರುವ ಗಗನ ಚುಕ್ಕಿಯಲ್ಲಿ ಶನಿವಾರ ರಾತ್ರಿ ಆಯೋಜಿಸಿದ್ದ ವರ್ಣರಂಜಿತ ಜಲಪಾತೋತ್ಸವವನ್ನು ಉದ್ಘಾಟಿಸಿ, ಮಾತನಾಡಿದ ಅವರು, ಮೇಕೆದಾಟು ಅಣೆಕಟ್ಟೆ ನಿರ್ಮಾಣದಿಂದ ಕರ್ನಾಟಕಕ್ಕೆ ಮಾತ್ರವಲ್ಲದೆ, ತಮಿಳ್ನಾಡಿಗೂ ಉಪಯೋಗವಾಗುತ್ತದೆ. ಅದು ತಿಳಿದಿದ್ದರೂ ತಮಿಳ್ನಾಡು ಸರ್ಕಾರವು ರಾಜಕೀಯ ಕಾರಣಕ್ಕಾಗಿ ಅಣೆಕಟ್ಟೆ ನಿರ್ಮಾಣಕ್ಕೆ ವಿರೋಧ ವ್ಯಕ್ತಪಡಿಸುತ್ತಿದೆ ಎಂದರು.

ಈಗ ಕಾವೇರಿ ಜಲ ವಿವಾದ ಇಲ್ಲ. ತಮಿಳ್ನಾಡಿಗೆ 177.25 ಟಿಎಂಸಿ ನೀರನ್ನು ಬಿಡಬೇಕು ಎಂದು ತೀರ್ಮಾನವಾಗಿ ಬಿಟ್ಟಿದೆ. ಉತ್ತಮವಾಗಿ ಮಳೆಯಾದಾಗ ಮಾತ್ರ ಅಷ್ಟು ಪ್ರಮಾಣದ ನೀರನ್ನು ಬಿಡಬೇಕು. ಒಂದು ವೇಳೆ ಮಳೆ ಅಭಾವ ಉಂಟಾದಲ್ಲಿ ಅಣೆಕಟ್ಟೆಯಲ್ಲಿ ▶ 6ನೇ ಪುಟಕ್ಕೆ

ಮೈಸೂರು ಮಿತ್ರ ಭಾನುವಾರ 14 ಸೆಪ್ಟೆಂಬರ್ 2025

ಕಾರ್ಯಕ್ರಮಕ್ಕೆ ಆಹ್ವಾನ...



ಮೈಸೂರು ಬ್ರಹ್ಮಶ್ರೀ ನಾರಾಯಣಗುರು ಜಯಂತ್ಯುತ್ಸವ ಸಮಿತಿಯಿಂದ ಕಲಾಮಂದಿರದಲ್ಲಿ ಸೆ.15ರಂದು ನಡೆಯುವ ನಾರಾಯಣಗುರು ಜಯಂತಿ ಕಾರ್ಯಕ್ರಮಕ್ಕೆ ಶಾಸಕ ಜಿ.ಟಿ.ದೇವೇಗೌಡರಿಗೆ ಸಮಾಜ ಸೇವಕ ಎಸ್.ಶ್ರೀಕಾಂತ್ ಆಹ್ವಾನ ಪತ್ರಿಕೆ ನೀಡಿ, ಆಹ್ವಾನಿಸಿದರು. ಈ ವೇಳೆ ಕೆ.ವಿ.ಶ್ರೀಕಾಂತ್, ಎಸ್.ಟಿ.ರಾಜು, ಮಹದೇವಪ್ಪ, ಶ್ರೀನಿವಾಸ್, ಅಣ್ಣಪ್ಪಸ್ವಾಮಿ, ಆನಂದ್, ಕೆ.ಬಿ.ಶಿವಕುಮಾರ್ ಇನ್ನಿತರರು ಉಪಸ್ಥಿತರಿದ್ದರು.

ಜಾತಿಗಣತಿ ವೇಳೆ ಉಪ್ಪಾರ ಎಂದು ನಮೂದಿಸಲು ಮನವಿ

ಮೈಸೂರು, ಸೆ.13(ಜಿಎ)–ರಾಜ್ಯ ಸರ್ಕಾರದ ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗವು ಸೆ.22ರಿಂದ ಅ.9ರವರಗೆ ನಡೆಸಲಿರುವ ಜಾತಿ ಸಮೀಕ್ಷೆಯಲ್ಲಿ ರಾಜ್ಯದ ಉಪ್ಪಾರ ಸಮಾಜದವರು ಜಾತಿ ಕಾಲಂನಲ್ಲಿ ಉಪ್ಪಾರ ಎಂದೇ ನಮೂದಿಸಬೇಕು ಎಂದು ಮೈಸೂರು ಜಿಲ್ಲಾ ಭಗೀರಥ ಉಪ್ಪಾರ ಸಂಘದ ಜಿಲ್ಲಾಧ್ಯಕ್ಷ ಎಸ್.ಯೋಗೀಶ ಉಪ್ಪಾರ ಮನವಿ ಮಾಡಿದರು.

ಸಮೀಕ್ಷೆ ನಡೆಸಲು ಮನೆಗಳಿಗೆ ಜಾತಿ, ಶೈಕ್ಷಣಿಕ, ಆರ್ಥಿಕ ಮತ್ತು ಪ್ರತಿ ಕುಟುಂಬದ 60 ಮಾಹಿತಿಯ ವೈಜ್ಞಾನಿಕ ಸಮೀಕ್ಷೆಗೆ ಸರಿಯಾದ ಮಾಹಿತಿ ನೀಡಿ. ರಾಜ್ಯದಲ್ಲಿ ಸುಮಾರು 20ರಿಂದ 25 ಲಕ್ಷ ಜನಸಂಖ್ಯೆ ಇರುವ ಪ್ರವರ್ಗ 1ರ ಅಡಿಯಲ್ಲಿ ಬರುವ ಉಪ್ಪಾರ ಸಮಾಜದವರು ನಿಖರವಾದ ಮಾಹಿತಿ ನೀಡಬೇಕು ಎಂದು ಸುದ್ದಿಗೋಷ್ಠಿಯಲ್ಲಿ ಕೋರಿದರು.

9ನೇ ಕಾಲಂನಲ್ಲಿ ಜಾತಿಯ ಹೆಸರು ಬಂದಾಗ ಉಪ್ಪಾರ ಎಂದು ಮಾತ್ರ ನಮೂದಿಸಬೇಕು. ನಂತರ ಬರುವ 10ನೇ ಕಾಲಂನಲ್ಲಿ ಉಪಜಾತಿಗಳ ಹೆಸರಿನಲ್ಲಿ ತಮ್ಮನ್ನು ಕರೆಯಲ್ಪಡುವ ಯಾವುದಾದರೂ ಇದ್ದರೆ ಮಾತ್ರ ನಮೂದಿಸಿದರೆ, ಆಗ ಉಪ್ಪಾರ ಸಮಾಜದ ಜನಸಂಖ್ಯೆಯನ್ನು ತಿಳಿಯಬಹುದು. ಸಮುದಾಯದ ಮುಖಂಡರು ಇದರ ಬಗ್ಗೆ ಆಸಕ್ತಿ ವಹಿಸಬೇಕು ಎಂದರು. ಗೋಷ್ಠಿಯಲ್ಲಿ ಪದಾಧಿಕಾರಿಗಳಾದ ರಾಮಶೆಟ್ಟಿ, ಸಿದ್ದಪ್ಪ, ಮಹದೇವ್ ಕಾಟ್ನಾಳು, ಸಂದೀಪ್, ಬಸವನಹಳ್ಳಿ ನಾರಾಯಣ, ಸಿದ್ದರಾಜು, ಮತ್ತಿತರರು ಉಪಸ್ಥಿತರಿದ್ದರು.

ಅಭಿನಂದನೆ...



ಬೆಂಗಳೂರು ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ ನಿರ್ದೇಶಕರಾಗಿ ಆಯ್ಕೆಯಾದ ಮೈಸೂರು ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ ಅಧ್ಯಕ್ಷ ಕೆ.ಬಿ.ಲಿಂಗರಾಜು ಅವರನ್ನು ದಿ ಮೈಸೂರು ಕೋ–ಆಪರೇಟಿವ್ ಬ್ಯಾಂಕ್ ಅಧ್ಯಕ್ಷ ಜೆ.ಯೋಗೇಶ್, ಉಪಾಧ್ಯಕ್ಷ ಟಿ.ರವಿ, ನಿರ್ದೇಶಕ ಪಡುವಾರಹಳ್ಳಿ ಎಂ.ರಾಮಕೃಷ್ಣ, ಕಾರ್ಯದರ್ಶಿ ಕೆ.ಹರ್ಷಿತ್ ಗೌಡ ಇನ್ನಿತರರು ಆತ್ಮೀಯವಾಗಿ ಅಭಿನಂದಿಸಿದರು.

ಸೆ.23ಕ್ಕೆ ಕಾವೇರಿ ಕ್ರಿಯಾ ಸಮಿತಿಯಿಂದ ಧರ್ಮಸ್ಥಳ ಚಲೋ

ಅಂದು ಮುಂಜಾನೆ ಮೂರು ಬಸ್‌ಗಳಲ್ಲಿ ಪ್ರಯಾಣ

ಮೈಸೂರು, ಸೆ.13(ಜಿಎ)–ಮೈಸೂರಿನಿಂದ ಸೆ.23ರಂದು ಕಾವೇರಿ ಕ್ರಿಯಾ ಸಮಿತಿ ವತಿಯಿಂದ ಧರ್ಮಸ್ಥಳ ಚಲೋ ಹೊರಡಲು ನಿರ್ಧರಿಸಲಾಗಿದೆ ಎಂದು ಸಮಿತಿಯ ತೇಜಸ್ ಲೋಕೇಶ್‌ಗೌಡ ತಿಳಿಸಿದರು. ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಬೆಳಗ್ಗೆ 5 ಗಂಟೆಗೆ ಕಾವೇರಿ ಕ್ರಿಯಾ ಸಮಿತಿ ಅಧ್ಯಕ್ಷ ಜಯಪ್ರಕಾಶ್ (ಜೆಪಿ) ನೇತೃತ್ವದಲ್ಲಿ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದಿಂದ ಬಸ್‌ಗಳ ಮೂಲಕ ಧರ್ಮಸ್ಥಳಕ್ಕೆ ತೆರಳಲು ಸಿದ್ಧತೆ ಮಾಡಿಕೊಳ್ಳಲಾಗಿದೆ. ಶ್ರೀ ಕ್ಷೇತ್ರ ಧರ್ಮಸ್ಥಳದ ಬಗ್ಗೆ ನಡೆಯುತ್ತಿರುವ ಷಡ್ಯಂತರ ವಿರುದ್ಧ ಈ ಚಲೋ ಮಾಡಲಾಗುತ್ತಿದ್ದು, ಧರ್ಮಾಧಿಕಾರಿ ವೀರೇಂದ್ರ ಹೆಗ್ಗಡೆ ಅವರಿಗೆ ಸಂಪೂರ್ಣ ಬೆಂಬಲ ಸೂಚಿಸಲು ವಿವಿಧ ಸಂಘ–ಸಂಸ್ಥೆಯವರು ಧರ್ಮಸ್ಥಳ ಚಲೋದಲ್ಲಿ ಪಾಲ್ಗೊಳ್ಳುತ್ತಿದ್ದಾರೆ. 3 ಬಸ್‌ಗಳ ಮೂಲಕ ತೆರಳಲು ನಿರ್ಧರಿಸಿದ್ದು, ಚಲೋನಲ್ಲಿ ಪಾಲ್ಗೊಳ್ಳಲು ಇಚ್ಛಿಸುವವರು 9880853893 ಸಂಪರ್ಕಿಸಿ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಸಿಂಧುವಳ್ಳಿ ಶಿವಕುಮಾರ್, ಶ್ರೀನಿವಾಸ್, ಟೈಗರ್ ಬಾಲಾಜಿ, ಮಂಜುಳ, ನೇಹ, ಭಾಗ್ಯ ಮತ್ತಿತರರು ಉಪಸ್ಥಿತರಿದ್ದರು.

ಗುದ್ದಲಿಪೂಜೆ...



ಮೈಸೂರಿನ ವಾರ್ಡ್ ನಂ.63ರಲ್ಲಿ ಸುಮಾರು 43 ಲಕ್ಷ ರೂ. ವೆಚ್ಚದ ಒಳಚರಂಡಿ ಅಭಿವೃದ್ಧಿ ಕಾಮಗಾರಿಗಳಿಗೆ ಕೆ.ಆರ್. ಕ್ಷೇತ್ರದ ಶಾಸಕ ಟಿ.ಎಸ್.ಶ್ರೀವತ್ಸ ಗುದ್ದಲಿಪೂಜೆ ನೆರವೇರಿಸಿದರು. ಈ ವೇಳೆ ಕ್ಷೇತ್ರದ ಬಿಜೆಪಿ ಅಧ್ಯಕ್ಷ ಗೋಪಾಲರಾಜೇಅರಸ್, ಪ್ರಧಾನ ಕಾರ್ಯದರ್ಶಿ ಜಯರಾಮ್, ಪಾಲಿಕೆ ಮಾಜಿ ಸದಸ್ಯೆ ಶಾರದಮ್ಮ ಈಶ್ವರ್, ವಾರ್ಡಿನ ಬಿಜೆಪಿ ಅಧ್ಯಕ್ಷೆ ರೇಣುಕಾ, ಬಿಜೆಪಿ ಮುಖಂಡರಾದ ಈಶ್ವರ್, ದೇವರಾಜೇಗೌಡ, ನಾಗೇಂದ್ರ, ಅಕ್ಷಯ್, ವೆಂಕಟೇಶ್ ಹಾಗೂ ನಿವಾಸಿಗಳು ಹಾಜರಿದ್ದರು.

ವಾರ್ಷಿಕ ಮಹಾಸಭೆ...



ಹಿಂದುಳಿದ ವರ್ಗಗಳ ವಿವಿಧೋದ್ದೇಶ ಸಹಕಾರ ಸಂಘದ 14ನೇ ವಾರ್ಷಿಕ ಮಹಾಸಭೆ ಸಂಘದ ಅಧ್ಯಕ್ಷ ಎಂ.ಡಿ.ಶ್ರೀನಿವಾಸ್ ಅಧ್ಯಕ್ಷತೆಯಲ್ಲಿ ನಡೆಯಿತು. ಸಂಘದ ಉಪಾಧ್ಯಕ್ಷ ಮಲ್ಲೇಶ, ನಿರ್ದೇಶಕರಾದ ಸ್ವಾಮಿ ಸತ್ಯನಾರಾಯಣ, ಅನಿಲ್‌ಕುಮಾರ್, ದರ್ಶನ್, ಸವಿತಾ, ರೇಖಾ, ಸಂಘದ ಹಿರಿಯ ಸದಸ್ಯರಾದ ಮಾಜಿ ಮೇಯರ್ ಅನಂತು, ವಕೀಲ ವರದರಾಜು, ಪಾಲಿಕೆ ಮಾಜಿ ಸದಸ್ಯ ನಾಗಭೂಷಣ, ಮಾಜಿ ಅಧ್ಯಕ್ಷ ವೆಂಕಟಾಚಲ, ಜೈರಾಮು, ಯದುರಾಜು ಇದ್ದರು.

ಮರಗಳಿಗೆ ದೀಪಾಲಂಕಾರ: ಇಂದು 'ಅಪ್ಪಿಕೋ ಚಳವಳಿ'

ಮೈಸೂರು, ಸೆ.13(ಎಸ್‌ಪಿಎನ್)– ದಸರಾ ಮಹೋತ್ಸವ ಹಿನ್ನೆಲೆಯಲ್ಲಿ ಮೈಸೂರು ನಗರದಾದ್ಯಂತ ಮರಗಳಿಗೆ ದೀಪದ ವೈರ್‌ಗಳನ್ನು ಸುತ್ತಿ ಮರಗಳ ಬೆಳವಣಿಗೆ, ಪರಿಸರ ಹಾನಿಗೆ ದಸರಾ ದೀಪಾಲಂಕಾರ ಉಪಸಮಿತಿ ಸದಸ್ಯರು ಕೈಜೋಡಿಸಿರುವುದನ್ನು ಖಂಡಿಸಿ ಸೆ.14ರಂದು ಬೆಳಗ್ಗೆ 9.30ಕ್ಕೆ ಮೈಸೂರು– ಹುಣಸೂರು ರಸ್ತೆಯ ಜಿಲ್ಲಾಧಿಕಾರಿಗಳ ನಿವಾಸ ಎದುರು 'ಅಪ್ಪಿಕೋ ಚಳವಳಿ' ನಡೆಸಲು ಮೈಸೂರು ಗ್ರಾಹಕರ ಪರಿಷತ್ ಸದಸ್ಯರು ಹಮ್ಮಿಕೊಂಡಿದ್ದಾರೆ.

ಉತ್ತಮ ಶಿಕ್ಷಕರಿಗೆ ಇಂದು ಪ್ರಶಸ್ತಿ ಪ್ರದಾನ

ಮೈಸೂರು,ಸೆ.13(ಜಿಎ)–ಸಾಲಿಗ್ರಾಮದ ಶ್ರೀಚನ್ನಕೇಶವಸ್ವಾಮಿ ವಿದ್ಯಾ ಸಂಸ್ಥೆಯ 52ನೇ ವರ್ಷದ ವಾರ್ಷಿಕೋತ್ಸವ ಸಮಾರಂಭ, 2024ನೇ ಸಾಲಿನ ಸಂಸ್ಥೆಯ ಉತ್ತಮ ಶಿಕ್ಷಕರಿಗೆ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಕಲಾಮಂದಿರದಲ್ಲಿ ಸೆ.14ರಂದು ಹಮ್ಮಿಕೊಳ್ಳಲಾಗಿದೆ ಎಂದು ಸಂಸ್ಥೆಯ ಅಧ್ಯಕ್ಷ ಲೋಕೇಶ್ವರ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಮಧ್ಯಾಹ್ನ 3ಕ್ಕೆ ಶಾಸಕ ಜಿ.ಟಿ.ದೇವೇಗೌಡರು ಉದ್ಘಾಟಿಸುವರು. ನಿವೃತ್ತ ಉಪನ್ಯಾಸಕ ಎಂ.ಎಸ್.ರಾಮಯ್ಯ ಭಾಷಣ ಮಾಡುವರು. ಮುಖ್ಯ ಅತಿಥಿಗಳಾಗಿ ಕರ್ನಾಟಕ ಸುಗಮ ಸಂಗೀತ ಪರಿಷತ್ತಿನ ಜಿಲ್ಲಾಧ್ಯಕ್ಷ ನಾಗರಾಜ್ ವಿ.ಬೈರಿ, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಸಮಾಜ ಸೇವಕರಾದ ಸಿ.ಎನ್.ಮಹೇಶ್ ಕುದರ್, ಮಹಾವೀರ ಕುಮಾರ್‌ಜೈನ್, ಕುಮಾರ್, ಕೆ.ಎಂ.ಮಹೇಶ್, ಆರ್.ಸತೀಶ್, ಜಿ.ಬಿ.ಪ್ರಶಾಂತ್, ಟಿ.ಪ್ರಜ್ವಲ್, ಎಚ್.ಸಿ. ಶಿವಕುಮಾರ್ ಆಗಮಿಸುವರು ಎಂದರು.

ಉಪಾಧ್ಯಕ್ಷೆ ನಾಗರತ್ನ, ಕಾರ್ಯದರ್ಶಿ ಎಂ.ಚನ್ನಮಲ್ಲಯ್ಯ, ನಿರ್ದೇಶಕರಾದ ಕೆ.ಆರ್.ಬಸವರಾಜು, ಕೆ.ಎಲ್.ಶಿವಪ್ಪ ಅವರು ಉತ್ತಮ ಶಿಕ್ಷಕರಿಗೆ ಸನ್ಮಾನಿಸುವರು. ಶ್ರೀರಾಂಪುರ, ಸಾಲಿಗ್ರಾಮ, ಕೊರಟೀಕೆರೆ ಕನ್ನಡ ಮಾಧ್ಯಮ ಶಾಲೆಗಳ ಸಹಾಯಾರ್ಥವಾಗಿ ಧರ್ಮದೇವತೆ ಹಾಸ್ಯ ನಾಟಕ ಪ್ರದರ್ಶನವು ಇರಲಿದೆ. ಹಿರಿಯ ನಟರಾದ ಡಿಂಗ್ರಿ ನಾಗರಾಜ್, ರೇಖಾದಾಸ್ ಮತ್ತಿತರರು ಪಾತ್ರ ಮಾಡಲಿದ್ದಾರೆ. ಬೆಳಗ್ಗೆ 9ರಿಂದ ಮಧ್ಯಾಹ್ನ 3ರವರೆಗೆ ಕರೋಕೆ ಗಾಯನ ಕಾರ್ಯಕ್ರಮ ನಡೆಯಲಿದೆ ಎಂದರು. ಗೋಷ್ಠಿಯಲ್ಲಿ ಕಾರ್ಯದರ್ಶಿ ಎಂ.ಚನ್ನಮಲ್ಲಯ್ಯ, ಗೋಪಾಲ್, ಮಹದೇವಸ್ವಾಮಿ, ವಿಜಯಶ್ರೀ, ನಯನ ಉಪಸ್ಥಿತರಿದ್ದರು.

ಜೆಎಸ್‌ಎಸ್ ಸಂಸ್ಥೆಯಿಂದ ಪರಿಸರ, ಕ್ರೀಡೆಗೂ ಆದ್ಯತೆ

ಮೈಸೂರು ವಿವಿ ಕುಲಸಚಿವೆ ಎಂ.ಕೆ.ಸವಿತಾ ಅಭಿಮತ



ಲಿಂಗೈಕ್ಯ ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮೀಜಿಯವರ 110ನೇ ಜಯಂತಿ ಕಾರ್ಯಕ್ರಮದಲ್ಲಿ ಅವರ ಭಾವಚಿತ್ರಕ್ಕೆ ಮೈಸೂರು ವಿವಿ ಕುಲಸಚಿವೆ ಎಂ.ಕೆ.ಸವಿತಾ ಪುಷ್ಪಾರ್ಚನೆ ಸಲ್ಲಿಸಿದರು.

ಮೈಸೂರು,ಸೆ.13(ಎಸ್‌ಪಿಎನ್)–ಶಾಲಾ ಮಕ್ಕಳಿಗೆ ಕಲಿಕಾ ಹಂತದಲ್ಲಿ ಜೆಎಸ್‌ಎಸ್ ಶಿಕ್ಷಣ ಸಂಸ್ಥೆಯು ಉತ್ತಮ ಶೈಕ್ಷಣಿಕ ಪರಿಸರ ಹಾಗೂ ಕ್ರೀಡೆ, ಸಾಂಸ್ಕೃತಿಕ ಚಟುವಟಿಕೆಗಳಿಗೂ ಹೆಚ್ಚಿನ ಆದ್ಯತೆ ನೀಡುತ್ತಿದೆ ಎಂದು ಮೈಸೂರು ವಿವಿ ಕುಲಸಚಿವೆ ಎಂ.ಕೆ.ಸವಿತಾ ಅಭಿಪ್ರಾಯಪಟ್ಟರು.

ಮೈಸೂರು ನಗರದ ಜೆಎಸ್‌ಎಸ್ ಆಸ್ಪತ್ರೆ ಆವರಣದ ಶ್ರೀ ರಾಜೇಂದ್ರ ಶತಮಾನೋತ್ಸವ ಸಭಾಂಗಣದಲ್ಲಿ ಜೆಎಸ್‌ಎಸ್ ಕಾಲೇಜ್ ಆಫ್ ನರ್ಸಿಂಗ್, ಜೆಎಸ್‌ಎಸ್ ವಾಕ್ ಮತ್ತು ಶ್ರವಣ ಸಂಸ್ಥೆ, ಜೆಎಸ್‌ಎಸ್ ಕಾಲೇಜ್ ಆಫ್ ಫಿಸಿಯೋಥೆರಪಿ ಹಾಗೂ ಜೆಎಸ್‌ಎಸ್ ಸ್ಕೂಲ್ ಅಫ್ ನರ್ಸಿಂಗ್ ಸಹಯೋಗದೊಂದಿಗೆ ಏರ್ಪಡಿಸಿದ್ದ ಲಿಂಗೈಕ್ಯ ಡಾ ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮೀಜಿಯವರ 110ನೇ ಜಯಂತಿ ಕಾರ್ಯಕ್ರಮದಲ್ಲಿ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿ ಮಾತನಾಡಿದರು.

ರಾಜೇಂದ್ರ ಶ್ರೀಗಳು ಗ್ರಾಮೀಣ ಪ್ರದೇಶ ವಿದ್ಯಾರ್ಥಿಗಳನ್ನು ಗಮನದಲ್ಲಿಟ್ಟುಕೊಂಡು ಹಲವು ಶೈಕ್ಷಣಿಕ ಸಂಸ್ಥೆಗಳನ್ನು ಸ್ಥಾಪಿಸಿ, ಉತ್ತಮ ಗುಣಮಟ್ಟದ ಶಿಕ್ಷಣ ನೀಡಲು ಮುಂದಾಗಿದ್ದರು. ಜ್ಞಾನ ಎನ್ನುವುದು ಕೇವಲ ನಗರ ಪ್ರದೇಶಕ್ಕೆ ಸೀಮಿತವಾಗದೇ ಗ್ರಾಮೀಣ ಪ್ರದೇಶಕ್ಕೂ ವಿಸ್ತರಿಸಬೇಕೆಂಬ ಮಹದಾಸೆಂಯೊಂದಿಗೆ ಮೈಸೂರು ಮತ್ತು ಚಾಮರಾಜನಗರ ಜಿಲ್ಲೆ ಸೇರಿದಂತೆ ದೇಶ ವ್ಯಾಪ್ತಿ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿರುವುದು ಸಂತೋಷದ ಸಂಗತಿ ಎಂದು ತಿಳಿಸಿದರು.

ವಿದ್ಯಾರ್ಥಿಗಳಲ್ಲಿ ಶಿಸ್ತು, ತಾಳ್ಮೆ, ಸಹನೆ, ಸಾಮಾಜಿಕ ನಡವಳಿಕೆ ಮತ್ತು ಬದ್ಧತೆ ಕುರಿತು ಶಾಲಾ ಹಂತದಲ್ಲಿ ಪರಿಚಯಿಸುತ್ತಿರುವ ಜೆಎಸ್‌ಎಸ್ ಸಂಸ್ಥೆಯ ಕಾರ್ಯ ಉತ್ತಮವಾಗಿದೆ. 12ನೇ ಶತಮಾನದಲ್ಲಿ ದಯವೇ ಧರ್ಮದ ಮೂಲ ಎಂಬಂತೆ ಬಸವಣ್ಣ ಅವರ ತತ್ವಾದರ್ಶಗಳನ್ನು ಅಳವಡಿಸಿಕೊಂಡು ಶಿಕ್ಷಣ ನೀಡುತ್ತಿರುವ ಜೆಎಸ್‌ಎಸ್ ಶಿಕ್ಷಣ ಸಂಸ್ಥೆ ಕಾರ್ಯ ಉತ್ತಮ ಎಂದು ಹೇಳಿದರು.

ಸರ್ಕಾರದ ಉನ್ನತ ಹುದ್ದೆಯಲ್ಲಿರುವ ಅಧಿಕಾರಿಗಳು ಬಹುತೇಕರು ಗ್ರಾಮೀಣ ಹಿನ್ನಲೆಯಿಂದಲೇ ಬಂದಿರುತ್ತಾರೆ. ನಮ್ಮಂತಹ ಅಧಿಕಾರಿಗಳಿಗೆ ದಾರ್ಶನಿಕರ ಮಾತುಗಳೇ ಸ್ಫೂರ್ತಿ. ಇತ್ತೀಚಿನ ದಿನಗಳಲ್ಲಿ ಮಕ್ಕಳಲ್ಲಿ ಮೊಬೈಲ್ ಬಳಕೆ ಹೆಚ್ಚಾಗುತ್ತಿದೆ. ಇದರಿಂದ ಮಕ್ಕಳನ್ನು ಹೊರತರಲು ಪೋಷಕರು, ಶಿಕ್ಷಕರು, ಸಮುದಾಯ ಕ್ರಮವಹಿಸಬೇಕಿದೆ ಎಂದು ಸಲಹೆ ನೀಡಿದರು. ಈ ವೇಳೆ ಶ್ರೀ ಶಾಂತ ಮಲ್ಲಿಕಾರ್ಜುನ ಸ್ವಾಮಿ ಆಶೀರ್ವಚನ ನೀಡಿದರು.

ಅ.9ರಿಂದ ಮೈಸೂರಲ್ಲಿ ರಾಷ್ಟ್ರೀಯ ಯೋಗ ಕ್ರೀಡಾ ಚಾಂಪಿಯನ್‌ಶಿಪ್

ಮೈಸೂರು, ಸೆ.13(ಜಿಎ)–ಮೊಟ್ಟ ಮೊದಲ ಬಾರಿಗೆ ಮೈಸೂರಿನಲ್ಲಿ ಅ.9ರಿಂದ ರಾಷ್ಟ್ರೀಯ ಯೋಗ ಕ್ರೀಡಾ ಚಾಂಪಿಯನ್‌ಶಿಪ್ ಏರ್ಪಡಿಸಲಾಗಿದೆ ಎಂದು ಕರ್ನಾಟಕ ರಾಜ್ಯ ಅಮೆಚೂರ್ ಯೋಗ ಕ್ರೀಡಾ ಸಂಘದ ಅಧ್ಯಕ್ಷ ಡಾ.ಪಿ.ಎನ್.ಗಣೇಶ್‌ಕುಮಾರ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕರ್ನಾಟಕ ರಾಜ್ಯ ಅಮೆಚೂರ್ ಯೋಗ ಕ್ರೀಡಾ ಸಂಘ, ಗ್ಲೋಬಲ್ ಯೋಗ ಫೋರಮ್, ಮೈಸೂರು ವಿವೇಕಾನಂದ ಯೋಗ ಶಿಕ್ಷಣ ಹಾಗೂ ಸಂಶೋಧನಾ ಸಂಸ್ಥೆ, ಜಿಲ್ಲಾ ಯೋಗ ಕ್ರೀಡಾ ಫೌಂಡೇಷನ್, ಜೆಎಸ್‌ಎಸ್ ಯೋಗ ಮತ್ತು ಗ್ಲೋಬಲ್ ವೆಲ್‌ನೆಸ್ ಯೋಗ ಸೆಂಟರ್‌ಗಳ ಸಹಯೋಗದೊಂದಿಗೆ ಯೋಗ ಫೆಡರೇಷನ್ ಆಫ್ ಇಂಡಿಯಾ ಅಡಿಯಲ್ಲಿ 50ನೇ ರಾಷ್ಟ್ರೀಯ ಯೋಗ ಕ್ರೀಡಾ ಚಾಂಪಿಯನ್ ಶಿಪ್ ಸುವರ್ಣ ಮಹೋತ್ಸವದ ಅಂಗವಾಗಿ ರಾಷ್ಟ್ರೀಯ ಯೋಗ ಕ್ರೀಡಾ ಚಾಂಪಿಯನ್‌ಶಿಪ್ ಅ.9ರಿಂದ 12ರವರೆಗೆ ಮೈಸೂರಿನ ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದಲ್ಲಿ ನಡೆಯಲಿದೆ ಎಂದರು.

ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದ ನಾದಮಂಟಪದಲ್ಲಿ ನಡೆಯಲಿರುವ ರಾಷ್ಟ್ರೀಯ ಯೋಗ ಕ್ರೀಡಾ ಚಾಂಪಿಯನ್‌ಶಿಪ್‌ನಲ್ಲಿ ದೇಶದ 34 ರಾಜ್ಯಗಳಿಂದ 1000ಕ್ಕೂ ಹೆಚ್ಚು ಸ್ಪರ್ಧಿಗಳು ಭಾಗವಹಿಸಲಿದ್ದಾರೆ. ಸುಮಾರು 200 ರಾಷ್ಟ್ರೀಯ ತೀರ್ಪುಗಾರರು ಕಾರ್ಯ ನಿರ್ವಹಿಸಲಿದ್ದಾರೆ. ಈಗಾಗಲೇ ಎಲ್ಲಾ ಸ್ಪರ್ಧಿಗಳಿಗೆ ಸೂಕ್ತ ವ್ಯವಸ್ಥೆ ಕಲ್ಪಿಸಲಾಗಿದೆ. ಸುವರ್ಣ ಮಹೋತ್ಸವಕ್ಕೆ ಏಷ್ಯನ್ ಯೋಗ ಫೆಡರೇಷನ್ ಅಧ್ಯಕ್ಷ ಅಗರ್ವಾಲ್, ಸಿಇಒ ಇಂದು ಅಗರ್ವಾಲ್, ಯೋಗ ಫೆಡರೇಷನ್ ಆಫ್ ಇಂಡಿಯಾ ಅಧ್ಯಕ್ಷ ಅನಿರುದ್ಧ್ ಗುಪ್ತ, ಕಾರ್ಯದರ್ಶಿ ಡಾ.ಅಭಿನವ್ ಜೋಶಿ, ಪದಾಧಿಕಾರಿಗಳು ಹಾಗೂ 34 ರಾಜ್ಯಗಳ ಅಧ್ಯಕ್ಷರು, ಕಾರ್ಯದರ್ಶಿಗಳ ಜೊತೆಗೆ ದೇಶದ ಗಣ್ಯರು, ಪ್ರತಿನಿಧಿಗಳು ಪಾಲ್ಗೊಳ್ಳಲಿದ್ದಾರೆ ಎಂದು ತಿಳಿಸಿದರು.

ನಾದಮಂಟಪದ ವೇದಿಕೆಯಲ್ಲಿ ಏಕಕಾಲಕ್ಕೆ ವಯೋಮಿತಿಗೆ ಅನುಗುಣವಾಗಿ ಸ್ಪರ್ಧೆಗಳು ನಡೆಯಲಿದ್ದು, ವಿಜೇತರನ್ನು ಅಂದೇ ಘೋಷಿಸಲಾಗುತ್ತದೆ. ಆದರೆ, ಬಹುಮಾನವನ್ನು ಅ.12ರಂದು ಪ್ರದಾನ ಮಾಡಲಾಗುತ್ತದೆ. ರಾಷ್ಟ್ರೀಯ ಯೋಗ ಕ್ರೀಡಾ ಚಾಂಪಿಯನ್‌ಶಿಪ್‌ನಲ್ಲಿ ವಿಜೇತರಾದವರಿಗೆ ಮುಂಬರುವ ಏಷ್ಯನ್ ಯೋಗ ಚಾಂಪಿಯನ್‌ಶಿಪ್‌ನಲ್ಲಿ ಭಾರತದಲ್ಲಿ ಪ್ರತಿನಿಧಿಸುವ ಅವಕಾಶ ನೀಡಲಾಗುತ್ತದೆ ಎಂದರು. ಸುದ್ದಿಗೋಷ್ಠಿಯಲ್ಲಿ ಜಿ.ಎನ್.ಕೃಷ್ಣಮೂರ್ತಿ, ಗಂಗಾಧರಪ್ಪ, ಎ.ನಟರಾಜ, ಉಮೇಶ್ ಗಣಪತಿ ಶೇಟ್, ಮಂಜುಳ, ಶ್ರೀಧರ್, ಹೆಚ್.ಕೆ.ಗೀತಾಕುಮಾರ್ ಉಪಸ್ಥಿತರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

14.09.2025 ಭಾನುವಾರ, ಮಳೆ ನಕ್ಷತ್ರ: ಉತ್ತರಾ 14.09.2025 ರಿಂದ 26.09.2025 ವಿಶ್ವವಸು ನಾಮ ಸಂವತ್ಸರ, ದಕ್ಷಿಣಾಯಣ, ವರ್ಷ ಋತು, ಭಾದ್ರಪದ ಮಾಸ, ಕೃಷ್ಣ ಪಕ್ಷ, ತಿಥಿ: ಸಪ್ತಮಿ, ನಕ್ಷತ್ರ: ರೋಹಿಣಿ, ರಾಹುಕಾಲ: ಸಂಜೆ 4.30ರಿಂದ 6ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಗುದಗತ ರೋಗಗಳಾದ ಪೈಲ್ಸ್, ಮೂಲವ್ಯಾಧಿ, ಫಿಸ್ಟುಲಾ/ಭಗಂದರ, ನಾಡಿವ್ರಣ, ಫಿಸರ್ ಮತ್ತು ಶರದ್ ವಿರೇಚನ ಪಂಚಕರ್ಮ ಚಿಕಿತ್ಸಾ ಶಿಬಿರ, ಬೊಜ್ಜು ನಿವಾರಣಾ ಚಿಕಿತ್ಸಾ ಶಿಬಿರ, ಗ್ಯಾಸ್ಟ್ರೈಟಿಸ್ ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 9 ರಿಂದ.

■ **ರಾಷ್ಟ್ರ ಭಾರತಿ ಚಾರಿಟಬಲ್ ಟ್ರಸ್ಟ್ :** ದಿಗ್ವಿಜಯ್ ದಿವಸ್ ಆಚರಣೆ, ಯುವ ಸಮುದಾಯದಿಂದ ಭಾರತದ ಪರಮವೈಭವ ಕುರಿತು ರಾಜ್ಯ ಮಟ್ಟದ ಭಾಷಣ ಸ್ಪರ್ಧೆ, ಸ್ಥಳ: ಬಿ.ಎಸ್.ಎಸ್. ವಿದ್ಯೋದಯ ಸಂಸ್ಥೆ, ಕೃಷ್ಣಮೂರ್ತಿಪುರಂ, ಬೆಳಗ್ಗೆ 9.30 ರಿಂದ.

■ **ದಸರಾ ಮಹೋತ್ಸವ :** ಮೈಸೂರು ನಗರಾದ್ಯಂತ ಮರಗಳಿಗೆ ದೀಪದ ವೈರ್‌ಗಳನ್ನು ಸುತ್ತಿ ಮರಗಳ ಬೆಳವಣಿಗೆ, ಪರಿಸರ ಹಾನಿಗೆ ದಸರಾ ದೀಪಾಲಂಕಾರ ಉಪಸಮಿತಿ ಸದಸ್ಯರು ಕೈಜೋಡಿಸಿರುವುದನ್ನು ಖಂಡಿಸಿ 'ಅಪ್ಪಿಕೋ ಚಳವಳಿ', ಸ್ಥಳ: ಮೈಸೂರು– ಹುಣಸೂರು ರಸ್ತೆಯ ಜಿಲ್ಲಾಧಿಕಾರಿಗಳ ನಿವಾಸ ಎದುರು, ಬೆಳಗ್ಗೆ 9.30ಕ್ಕೆ

■ **ಕಾವೇರಿ ಆಯುರ್ವೇದ ಆಸ್ಪತ್ರೆ :** ಯುವಕರ ಮಾನಸಿಕ ಆರೋಗ್ಯ ಜಾಗೃತಿ, ಗರ್ಭ ಸಂಸ್ಕಾರ, ನರುಳಿ ಮತ್ತು ಸೊಂಟ ನೋವಿಗೆ ಉಚಿತ ತಪಾಸಣೆ ಮತ್ತು ಚಿಕಿತ್ಸಾ ಶಿಬಿರ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್, ಬೆಳಗ್ಗೆ 10 ರಿಂದ.

■ **ರಾಮಸನ್ಸ್ ಬೊಂಬೆ ಮನೆ:** ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10 ರಿಂದ.

■ **ಜವಳಿ ಮಂತ್ರಾಲಯ, ಭಾರತ ಸರ್ಕಾರ, ಜೆಎಸ್‌ಎಸ್ ಮೈಸೂರು ಅರ್ಬನ್ ಹಾತ್ :** ಗಾಂಧಿ ಶಿಲ್ಪ ಬಜಾರ್, ಕರಕುಶಲ ಹಾಗೂ ಕೈಮಗ್ಗ ಉತ್ಪನ್ನಗಳ ಬೃಹತ್ ಪ್ರದರ್ಶನ ಮತ್ತು ಮಾರಾಟ, ಸ್ಥಳ: ಜೆಎಸ್‌ಎಸ್ ಅರ್ಬನ್ ಹಾತ್, ಹೆಬ್ಬಾಳು ಕೈಗಾರಿಕಾ ಪ್ರದೇಶ, ಬೆಳಗ್ಗೆ 10 ರಿಂದ.

■ **ಶ್ರೀ ಮಾಯಕಾರ ಗುರುಕುಲ :** ಗುರುಪಾದುಕಾ ಪೂಜೆ, ವಾಸ್ತು ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರ ವಿತರಣೆ, ವಿದ್ವಾನ್ ಮೂಗೂರು ಮಧು ದೀಕ್ಷಿತ್ ಅವರಿಂದ ಉಪನ್ಯಾಸ, ಸ್ಥಳ: ಐಡಿಯಲ್ ಜಾವಾ ರೋಟರಿ ಶಾಲೆ ಸಭಾಂಗಣ, ಬೆಳಗ್ಗೆ 10 ರಿಂದ.

■ **ಹನುಮಂತನಗರ ಬಳಕೆದಾರರ ಸಹಕಾರ ಸಂಘ :** ವಾರ್ಷಿಕ ಮಹಾಸಭೆ, ಅಧ್ಯಕ್ಷತೆ : ಸಂಘದ ಅಧ್ಯಕ್ಷ ಹೆಚ್. ಸುದರ್ಶನ್, ಸ್ಥಳ: ನವಗ್ರಹ ಗಣಪತಿ ದೇವಸ್ಥಾನದ ಛತ್ರ, ಬೆಳಗ್ಗೆ 10ಕ್ಕೆ.

■ **ಅರಸು ಮಹಿಳಾ ಜಾಗೃತಿ ಸಭಾ :** ಶಿಕ್ಷಕರ ದಿನಾಚರಣೆ, ಸಾಧಕರಿಗೆ ಶಿಕ್ಷಕರಿಗೆ ಶ್ರೇಷ್ಠ ಶಿಕ್ಷಕ ಪ್ರಶಸ್ತಿ ಪ್ರದಾನ ಸಮಾರಂಭ, ಅಧ್ಯಕ್ಷತೆ : ಚುಟುಕು ಯುಗಾಚಾರ್ಯ ಡಾ. ಎಂ.ಜಿ.ಆರ್. ಅರಸ್, ಉದ್ಘಾಟನೆ: ಇನ್ಸ್‌ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಅಧ್ಯಕ್ಷ ಡಾ. ಆರ್. ದೀಪು, ಶಿಕ್ಷಣ ತಜ್ಞ ಭ್ರಮರ ಬಹದ್ದೂರು ಅವರಿಂದ ಶಿಕ್ಷಕರ ದಿನಾಚರಣೆ ಬಗ್ಗೆ ವಿಶೇಷ ಉಪನ್ಯಾಸ, ಮುಖ್ಯ ಅತಿಥಿಗಳು : ಮೈಸೂರು ಜಿಲ್ಲಾ ಸಣ್ಣ ಕೈಗಾರಿಕೆಗಳ ಸಂಸ್ಥೆ ಅಧ್ಯಕ್ಷ ಎ.ಎಸ್. ಸತೀಶ್, ಶ್ರೀ ರಾಮ ಸೇವಾ ಅರಸು ಸಂಘದ ಅಧ್ಯಕ್ಷ ಸುಂದರ್‌ರಾಜೇ ಅರಸ್, ಹೆಚ್.ಡಿ. ಕೋಟೆಯ ಅರಸು ಸಂಘದ ಅಧ್ಯಕ್ಷ ಎಚ್.ಎಂ.ಟಿ. ಲಿಂಗರಾಜ ಅರಸ್, ಸ್ಥಳ: ಇನ್ಸ್‌ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಸಭಾಂಗಣ, ಜೆಎಲ್‌ಬಿ ರಸ್ತೆ, ಬೆಳಗ್ಗೆ 10.30ಕ್ಕೆ.

■ **ಶ್ರೀ ಕೇಶವ ಪತ್ತಿನ ಸಹಕಾರ ಸಂಘ :** ವಾರ್ಷಿಕ ಮಹಾಸಭೆ, ಸ್ಥಳ: ನಾದಬ್ರಹ್ಮ ಸಂಗೀತ ಸಭಾ, ಬೆಳಗ್ಗೆ 10.30ಕ್ಕೆ.

■ **ಮೈಸೂರು ಬಸವ ಬಳಗ ಟ್ರಸ್ಟ್, ಪೂರ್ವ ವಲಯ, ಜೆ.ಎಸ್.ಎಸ್. ಬಡಾವಣೆ :** ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ 110ನೇ ಜಯಂತಿಯ ಅಂಗವಾಗಿ ಸುತ್ತೂರು ಶ್ರೀಕ್ಷೇತ್ರದ ಕುರಿತು ಚಿತ್ರಕಲಾಕೃತಿ ರಚನಾ ಸ್ಪರ್ಧೆ, ಸ್ಥಳ: ನಂ: 599, ಮೆಡಿ ಪ್ಲೇಸ್, ಮುಖ್ಯ ರಸ್ತೆ, ಕೆ.ಆರ್.ಶ್ರೀನಿವಾಸ್ ಐಪಿಎಸ್ ನಗರ, ಬೆಳಗ್ಗೆ 10.30 ಗಂಟೆಗೆ

■ **ಹಿಮಾಲಯ ಪ್ರತಿಷ್ಠಾನ :** ಯೋಗ ಸಾಧಕರಿಗೆ ಯೋಗ ವಿಭೂಷಣ, ಯೋಗಭೂಷಣ ಮತ್ತು ಯೋಗ ನಕ್ಷತ್ರ ಪ್ರಶಸ್ತಿ ಪ್ರದಾನ ಸಮಾರಂಭ, ಉದ್ಘಾಟನೆ : ಜೆಎಸ್‌ಎಸ್ ಯೋಗ ಸಂಸ್ಥಾಪಕ ಶ್ರೀಹರಿ ದ್ವಾರಕಾನಾಥ್, ಶ್ರೀ ಪತಂಜಲಿ ಮಹರ್ಷಿಗಳಿಗೆ ಪುಷ್ಪಾರ್ಚನೆ : ಶಾಸಕ ಟಿ.ಎಸ್. ಶ್ರೀವತ್ಸ, ಆರೋಗ್ಯ ಕಿರಣ ಮಾಸಿಕ ಬಿಡುಗಡೆ : ವಿಧಾನಪರಿಷತ್ ಸದಸ್ಯ ಡಾ. ಡಿ. ತಿಮ್ಮಯ್ಯ, ಅಧ್ಯಕ್ಷತೆ : ಸಮಾಜ ಸೇವಕ ಡಾ. ಕೆ. ರಘುರಾಂ ವಾಜಪೇಯಿ, ಪ್ರಶಸ್ತಿ ಪ್ರದಾನ : ಜಿಲ್ಲಾ ಆಯುಷ್ ಅಧಿಕಾರಿ ಡಾ. ಸಿ. ರೇಣುಕಾದೇವಿ, ಮುಖ್ಯ ಅತಿಥಿಗಳು : ಮೈಸೂರು ಯೋಗ ಅಕಾಡೆಮಿ ಸಂಸ್ಥಾಪಕ ಎಂ.ಎಸ್. ರಮೇಶ್‌ಕುಮಾರ್, ಸ್ಥಳ: ಶಿವಾನಂದ ಜ್ಞಾನಾಲಯ, ಜೆಎಲ್‌ಬಿ ರಸ್ತೆ, ಬೆಳಗ್ಗೆ 10.30ಕ್ಕೆ.

■ **ಸಮುದ್ಯತಾ ಶ್ರೋತೃ ಸಂಘ, ಮೈಸೂರು ಆಕಾಶವಾಣಿ ಕೇಳುಗರ ಸಂಘ :** ಬೀಳ್ಕೊಡುಗೆ ಸಮಾರಂಭ, ಸನ್ಮಾನಿತರು : ಮೈಸೂರು ಆಕಾಶವಾಣಿ ನಿವೃತ್ತ ಉಪ ನಿರ್ದೇಶಕ ಎಸ್.ಎಸ್. ಉಮೇಶ್, ಅಧ್ಯಕ್ಷತೆ: ಸಂಘದ ಅಧ್ಯಕ್ಷ ಕಣ್ಣೂರು ವಿ. ಗೋವಿಂದಾಚಾರಿ, ಉಪಸ್ಥಿತರು : ಶ್ರೀಮತಿ ಭಾರತಿ ಘನಶ್ಯಾಂ, ಶ್ರೀಮತಿ ರಾಜೇಶ್ವರಿ ಉಮೇಶ್, ಸ್ಥಳ: ವಿಜಯ ವಿಠ್ಠಲ ವಿದ್ಯಾಸಂಸ್ಥೆ, ಸರಸ್ವತಿಪುರಂ, ಬೆಳಗ್ಗೆ 10.30ಕ್ಕೆ

■ **ಮೈಸೂರು ಸೌಹಾರ್ದ ಗೃಹ ನಿರ್ಮಾಣ ಸಹಕಾರ ಸಂಘ :** ವಾರ್ಷಿಕ ಸರ್ವ ಸದಸ್ಯರ ಸಭೆ, ಅಧ್ಯಕ್ಷತೆ : ಸಂಘದ ಅಧ್ಯಕ್ಷ ಹೆಚ್. ರವಿಕುಮಾರ್, ಸ್ಥಳ: ಶ್ರೀ ರಾಮ ಕಲ್ಯಾಣ ಮಂದಿರ, ಕಾಳಿದಾಸ ರಸ್ತೆ, ವಿ.ವಿ. ಮೊಹಲ್ಲಾ, ಬೆಳಗ್ಗೆ 11ಕ್ಕೆ.

■ **ಡಿಎನ್‌ಕೆ ಸ್ನೇಹ ಬಳಗ, ಮೈಸೂರು ಕನ್ನಡ ವೇದಿಕೆ, ಸ್ವಜನ್ಯ ಸಾಹಿತ್ಯ ಕಲಾ ವೇದಿಕೆ :** ಹಿರಿಯ ಸಾಹಿತಿ ಡಿ.ಎನ್. ಕೃಷ್ಣಮೂರ್ತಿ ಅವರ ಮಹಾಚೈತನ್ಯ ವಿವೇಚನೆ ಮತ್ತು ವಿಜಯಯಾತ್ರೆ ಸಾಹಿತ್ಯ ಕೃತಿಗಳ ಬಿಡುಗಡೆ ಮತ್ತು ಸನ್ಮಾನ ಸಮಾರಂಭ, ಉದ್ಘಾಟನೆ : ಶಾಸಕ ಟಿ.ಎಸ್.ಶ್ರೀವತ್ಸ, ಸನ್ಮಾನ: ಶಾಸಕ ಜಿ.ಟಿ. ದೇವೇಗೌಡ, ಉಪಸ್ಥಿತರು : ಹಿರಿಯ ಸಾಹಿತಿ ಡಾ. ಸಿ.ಪಿ. ಕೃಷ್ಣಕುಮಾರ್, ಮಹಾಕವಿ ಡಾ. ಕಬ್ಬಿನಾಲೆ ವಸಂತ ಭಾರದ್ವಾಜ, ಸಾಹಿತಿ ಡಾ. ಎಸ್. ಶಿವರಾಜಪ್ಪ, ಅಧ್ಯಕ್ಷತೆ : ಸಮಾಜ ಸೇವಕ ಮೈ.ವಿ. ರವಿಶಂಕರ್, ಎಂಐಟಿ ಶಿಕ್ಷಣ ಸಂಸ್ಥೆ ಅಧ್ಯಕ್ಷ ಡಾ. ಎಸ್. ಮುರಳಿ, ಹಿರಿಯ ಸಾಹಿತಿ ಡಿ.ಎನ್. ಕೃಷ್ಣಮೂರ್ತಿ, ಸ್ಥಳ: ಗೋಪಾಲಸ್ವಾಮಿ ಪದವಿಪೂರ್ವ ಕಾಲೇಜು ಸಭಾಂಗಣ, ನಂಜು ಮಳಿಗೆ, ಬೆಳಗ್ಗೆ 11ಕ್ಕೆ.

■ **ಅರಸು ಮಂಡಳಿ ಸಹಕಾರ ಸಂಘ ನಿಯಮಿತ :** ವಾರ್ಷಿಕ ಸರ್ವ ಸದಸ್ಯರ ಸಭೆ, ಅಧ್ಯಕ್ಷತೆ : ಸಂಘದ ಅಧ್ಯಕ್ಷ ಎ.ಆರ್. ಮಲ್ಲರಾಜೇ ಅರಸ್, ಸ್ಥಳ: ಶ್ರೀ ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಸಮುದಾಯ ಭವನ, ತ್ಯಾಗರಾಜ ರಸ್ತೆ, ಬೆಳಗ್ಗೆ 11ಕ್ಕೆ.

■ **ಸ್ನೇಹನಿಧಿ ಪತ್ತಿನ ಸಹಕಾರ ಸಂಘ :** ವಾರ್ಷಿಕ ಸರ್ವ ಸದಸ್ಯರ ಸಭೆ, ಅಧ್ಯಕ್ಷತೆ : ಸಂಘದ ಅಧ್ಯಕ್ಷ ಚಲುವಯ್ಯ, ಸ್ಥಳ: ಸಂಘದ ಆವರಣ, ಬೆಳಗ್ಗೆ 11ಕ್ಕೆ.

■ **ಮೈಸೂರು ಮೆಲೋಡಿ ಸಿಂಗರ್ಸ್ ಗ್ರೂಪ್ :** ಡಾ. ವಿಷ್ಣುವರ್ಧನ್ ಅವರ 75ನೇ ಹುಟ್ಟುಹಬ್ಬದ ಪ್ರಯುಕ್ತ ವಿಷ್ಣು ಗಾನ ಮಂಜರಿ ಕಾರ್ಯಕ್ರಮ, ವಿಶೇಷ ಆಹ್ವಾನಿತರು : ಸುಗಮ ಸಂಗೀತ ಪರಿಷತ್ತಿನ ಜಿಲ್ಲಾಧ್ಯಕ್ಷ ನಾಗರಾಜ್ ವಿ. ಭೈರಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್. ಮಲ್ಲಿಕಾರ್ಜುನಸ್ವಾಮಿ, ಆಟೋಮೋಟಿವ್ ಆಕ್ಸೆಲ್ಸ್ ಲಿಮಿಟೆಡ್‌ನ ಅಧ್ಯಕ್ಷ ನಾಗರಾಜ್ ಗರ್ಗೇಶ್ವರಿ, ಚಲನಚಿತ್ರ ನಿರ್ಮಾಪಕ ಎಂ.ಡಿ. ಪಾರ್ಥಸಾರಥಿ, ಸ್ಥಳ: ಡಾ. ವಿಷ್ಣುವರ್ಧನ್ ಸ್ಮಾರಕ ಭವನ, ಉದ್ಬೂರ್ ಗೇಟ್ ಬಳಿ, ಬೆಳಗ್ಗೆ 11 ರಿಂದ.

■ **ಸರ್ ಎಂ. ವಿಶ್ವೇಶ್ವರಯ್ಯ ನಲ್ಲಿ ಮತ್ತು ಒಳಚರಂಡಿ ಕಾರ್ಮಿಕರ ಕ್ಷೇಮಾಭಿವೃದ್ಧಿ ಸಂಘ :** ಸರ್ ಎಂ. ವಿಶ್ವೇಶ್ವರಯ್ಯ ಜಯಂತಿ, ಸದಸ್ಯರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ, ಉಪಸ್ಥಿತರು : ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ. ರಾಜೀವ್, ಹಿರಿಯ ನಟ ಶಂಕರ್ ಅಶ್ವಥ್, ಆರಕ್ಷಕ ನಿರೀಕ್ಷಕ ಜಿ. ಪುರುಷೋತ್ತಮ್, ನಗರ ಪಾಲಿಕೆ ಮಾಜಿ ಸದಸ್ಯ ಜೆ. ಗೋಪಿ, ರೋಟರಿ ಪಶ್ಚಿಮ ಸಂಸ್ಥೆ ಅಧ್ಯಕ್ಷ ದೇವರಾಜ್, ಸ್ಥಳ: ರೋಟರಿ ಪಶ್ಚಿಮ ಶಾಲೆ ಸಭಾಂಗಣ, ವಿಜಯ ವಿಠ್ಠಲ ಶಾಲೆ ಪಕ್ಕ, ಬೆಳಗ್ಗೆ 11ಕ್ಕೆ.

■ **ಚಾತುರ್ಮಾಸ್ಯ ವರ್ಷಾಯೋಗ – 2025 :** ಜೈನ ಧಾರ್ಮಿಕ ಪರ್ವ ದಶಧರ್ಮದ ನಿಮಿತ್ತ ಶ್ರೀ 108 ಪುಣ್ಯ ಸಾಗರ ಮುನಿ ಮಹಾರಾಜರ ಸಾನ್ನಿಧ್ಯದಲ್ಲಿ ಕುದುರೆ ಸಾರೋಟ್‌ನೊಂದಿಗೆ ಭವ್ಯ ರಥದ ಮೆರವಣಿಗೆ, ಸ್ಥಳ: ಶ್ರೀ ಶಾಂತಿನಾಥ ಬಸದಿಯಿಂದ, ಮಧ್ಯಾಹ್ನ 3.30ಕ್ಕೆ.

■ **ಮೈಸೂರು ಗ್ರಾಹಕರ ಪರಿಷತ್ :** ಮೈಸೂರು ನಗರದಲ್ಲಿ 'ಪಾರಂಪರಿಕ ಮರಗಳ ಗಣತಿ' ನಡೆಸಲು ತೀರ್ಮಾನಿಸಿರುವ ಡಾ.ಸ್ಮಿತಾ ಹೆಗ್ಡೆ, ಸಂಜಯ್ ದತ್ತಾತ್ರಿ ಅವರೊಂದಿಗೆ ಸಂವಾದ, ಸ್ಥಳ: ಮೈಸೂರು ಗ್ರಾಹಕರ ಪರಿಷತ್ ಕಚೇರಿ, ಯಾದವಗಿರಿ, ಸಂಜೆ 4ಕ್ಕೆ.

■ **ದಕ್ಷ ಪದವಿ ಕಾಲೇಜು :** ವಿದ್ಯಾರ್ಥಿಗಳಿಗೆ ಮಾದಕ ವಸ್ತುಗಳ ಕುರಿತು ಅರಿವು ಮೂಡಿಸುವ ಉದ್ದೇಶದಿಂದ 'ಯುವ ಜಾಗೃತಿ' ವಿಶೇಷ ಕಾರ್ಯಕ್ರಮ ಮತ್ತು 'ಯುವಕರು' ಚಲನಚಿತ್ರ ಪ್ರದರ್ಶನ, ಚಾಲನೆ : ಪಂಪ ಪ್ರಶಸ್ತಿ ಪುರಸ್ಕೃತ ಬಹುಶ್ರುತ ವಿದ್ವಾಂಸ ಡಾ. ಸಿ.ಪಿ. ಕೃಷ್ಣಕುಮಾರ್ (ಸಿಪಿಕೆ), ಅಧ್ಯಕ್ಷತೆ : ದಕ್ಷ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಡಾ.ಪಿ. ಜಯಚಂದ್ರರಾಜು, ಮುಖ್ಯ ಅತಿಥಿಗಳು : ಸ್ಪಂದನ ಸಾಂಸ್ಕೃತಿಕ ಪರಿಷತ್ತಿನ ಅಧ್ಯಕ್ಷ ಹಾಗೂ ಸಾಹಿತಿ ಟಿ. ಸತೀಶ್ ಜವರೇಗೌಡ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಚಲನಚಿತ್ರ ನಿರ್ದೇಶಕ ಡಾ. ಗುಣವಂತ ಮಂಜು, ಚಲನಚಿತ್ರ ನಿರ್ಮಾಪಕ ಪುಷ್ಪ ಅಯ್ಯಂಗಾರ್, ಸುಕನ್ಯಾ ಹಿರೇಮಠ ಮತ್ತು ವೈದೇಹಿ, ನಟ ಚೇತನ್, ನಟಿ ಪವಿತ್ರ ಹಿರೇಮಠ, ಗಾಯಕಿ ಜಯಂತಿ ಭಟ್, ಸಾಹಿತಿ ಅಕ್ಬರ್ ಪಾಷಾ, ರಾಷ್ಟ್ರ ಪ್ರಶಸ್ತಿ ಪುರಸ್ಕೃತ ನಿವೃತ್ತ ಶಿಕ್ಷಕ ಗೌಡಯ್ಯ, ಪಿಡಿಓ ಕೆ.ಎಸ್. ಸತೀಶ್ ಕುಮಾರ್, ಸ್ಥಳ: ಕಾಲೇಜು ಸಭಾಂಗಣ, ಸಂಜೆ 5.30ಕ್ಕೆ.

■ **ಶ್ರೀ ರಾಮಕೃಷ್ಣ ಆಶ್ರಮ :** ಸ್ವಾಮಿ ಜ್ಞಾನಯೋಗಾನಂದ ಅವರಿಂದ ಶ್ರೀರಾಮಕೃಷ್ಣ ವಚನವೇದ ಕುರಿತು ಪ್ರವಚನ, ಸ್ಥಳ: ಸ್ವಾಮಿ ಶಾಂಭವಾನಂದಜೀ ಸ್ಮಾರಕ ಸಭಾಂಗಣ, ಯಾದವಗಿರಿ, ಸಂಜೆ 6 ರಿಂದ.

■ **ರಂಗಾಯಣ :** ಭಾರತೀಯ ರಂಗ ಶಿಕ್ಷಣ ಕೇಂದ್ರದ ವಿದ್ಯಾರ್ಥಿಗಳಿಂದ ಹಡೆದ ಕೊಡಲಿಗಳು ನಾಟಕ ಪ್ರದರ್ಶನ, ನಿರ್ದೇಶನ : ಕೆ.ಜಿ. ಮಹಾಬಲೇಶ್ವರ, ಸ್ಥಳ: ಭೂಮಿಗೀತ ರಂಗ ಮಂದಿರ, ಸಂಜೆ 6.30ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಸಿನೆಮಾ ಯಾನ– ಕನ್ನಡ ಕಲಾತ್ಮಕ ಚಿತ್ರಗಳ ಪರಿಚಯ ಮಾಲಿಕೆ, ಪ್ರಸ್ತುತಿ : ಶ್ರೀನಿವಾಸ್ ಪ್ರಸಾದ್, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ಎಂ.ಎ.ಜ್ಯೋತಿ, ನಿತಿನ್ ರಾಜಾರಾಂಶಾಸ್ತ್ರಿ, ವ್ಯಾಖ್ಯಾನ–ಡಾ.ಬೋರೇಗೌಡ ಚಿಕ್ಕಮರಳಿ, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು–ಪಂಚಂ ಹಳಿಬಂಡಿ, 8.30 ಕನ್ನಡ ಚಿತ್ರಗೀತೆಗಳು, 9.40 ನಮ್ಮ ಆರೋಗ್ಯ ಡೆಂಟಲ್ ಇಂಪ್ಲಾಂಟ್ಸ್ ಕುರಿತು ಮೈಸೂರಿನ ಜೆ.ಎಸ್.ಎಸ್. ದಂತ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯ ಒಸಡುಶಾಸ್ತ್ರ ವಿಭಾಗದ ಪ್ರೊಫೆಸರ್ ಹಾಗೂ ಮುಖ್ಯಸ್ಥರಾದ ಡಾ.ಸುಮನ್ ಬಸವರಾಜು ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ –ಬೇದ್ರೆ ಮಂಜುನಾಥ್, 10.00 ಕೇಳಿ ಗಿಳಿಗಳೇ – ಕಥೆ ಕೇಳು ಪುಟ್ಟ, ಪ್ರಸ್ತುತಿ– ಬಿ.ಜಿ.ಕವಿತಾ, 10.30 KRISH TRISH and Balty boy ನಾವು ಭಾರತೀಯರು– ಭಾರತೀಯ ಸ್ವಾತಂತ್ರ್ಯ ಸಂಗ್ರಾಮದ ತೆರೆಮರೆಯ ನಾಯಕರ ಬಗ್ಗೆ ಬೆಳಕ ಚೆಲ್ಲುವ ಬಾನುಲಿ ಸರಣಿ, 10.45 ಮಕ್ಕಳ ಮಂಟಪ–ಚೈತನ್ಯ ಚಿಲುಮೆ ಮಾಲಿಕೆಯಲ್ಲಿ ಬಾಲ ಪ್ರತಿಭೆ ಮುಕ್ತಶ್ರೈವ ಹಾಗೂ ಅವರ ತಾಯಿ ಕೃತಿಕಾ ಅವರೊಂದಿಗೆ ಮಾತುಕತೆ, 11.00 ಮಿಶ್ರಮಾಧುರ್ಯ

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ, 12.45 ಜನಪದ ಸಂಗೀತ : ಚಾಮರಾಜನಗರ ಜಿಲ್ಲೆ ರಾಮಸಮುದ್ರದ ಚಿನ್ನಮ್ಮ ಮತ್ತು ಸಂಗಡಿಗರಿಂದ ಜೋಗುಳದ ಹಾಡು ಹಾಗೂ ತಿಬ್ಬಳ್ಳಿ ಮಾರಮ್ಮನ ಹಾಡು, 1.00 ಪ್ರಗತಿಪಥ – ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು : ಪ್ರಚೇತಿ ಕುಲಕರ್ಣಿ, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.40 ಕನ್ನಡ ಚಲನಚಿತ್ರ ಧ್ವನಿವಾಹಿನಿ ಆಘಾತ, 3.40 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ: ಜಿ.ಕೆ.ರವೀಂದ್ರಕುಮಾರ್, 3.45 ಕರ್ನಾಟಕ ಶಾಸ್ತ್ರೀಯ ಸಂಗೀತ: ಪಾಪನಾಶಂ ಅಶೋಕ್ ರಮಣಿ ಅವರ ಹಾಡುಗಾರಿಕೆಯಲ್ಲಿ ಪಾಪನಾಶಂ ಶಿವನ್ ಅವರ ಕೃತಿಗಳು, 5.05 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.51 ಕೃಷಿರಂಗ: ತೋರಣ ಹೂರಣ–ಸಾಪ್ತಾಹಿಕ ಸರಣಿ ಕಾರ್ಯಕ್ರಮ, ಪ್ರಸ್ತುತಿ: ಎನ್. ಕೇಶವಮೂರ್ತಿ, ಆರ್. ಲೋಕೇಶ್ವರಿ, ಡಾ. ಮೈಸೂರು ಉಮೇಶ್, ಕೃಷಿ ಲೋಕ, ಕೃಷಿದರ್ಪಣ–ವಾರದ ಕೃಷಿರಂಗ, ಕಿಸಾನ್‌ವಾಣಿ ಕಾರ್ಯಕ್ರಮಗಳ, ಮುನ್ನೋಟ ಪ್ರಸ್ತುತಿ: ಆರ್. ಲೋಕೇಶ್ವರಿ, 7.45 ಏಷ್ಯಾ ಕಪ್ ಕ್ರಿಕೆಟ್ 2025ರ ಅಂಗವಾಗಿ ಭಾರತ ಹಾಗೂ ಪಾಕಿಸ್ತಾನ ತಂಡಗಳ ನಡುವೆ ದುಬೈನ ಅಂತರಾಷ್ಟ್ರೀಯ ಕ್ರಿಕೆಟ್ ಕ್ರೀಡಾಂಗಣದಲ್ಲಿ ನಡೆಯಲಿರುವ ಟಿ 20 ಪಂದ್ಯದ ವೀಕ್ಷಕ ವಿವರಣೆ, 10.00 ಕ್ರಿಕೆಟ್ ಪಂದ್ಯದ ವೀಕ್ಷಕ ವಿವರಣೆ

ದೇಶದ ಭಾವಿ ಪ್ರಜೆಗಳ ರೂಪಿಸುವ ಹೊಣೆ ಶಿಕ್ಷಕ ಸಮುದಾಯದ ಮೇಲಿದೆ; ಶಾಲೆಗಳ ನಿಮ್ಮ ಮನೆಗಳಂತೆ ನಿರ್ವಹಣೆ ಮಾಡಿ

•ಶಿಕ್ಷಕ ಸಮುದಾಯಕ್ಕೆ ಶಾಸಕ ಜಿ.ಟಿ.ದೇವೇಗೌಡರ ಕಿವಿಮಾತು •ಮೈಸೂರು ತಾಲೂಕು ಮಟ್ಟದ ಶಿಕ್ಷಕರ ದಿನಾಚರಣೆ ಅದ್ಧೂರಿ ಸಮಾರಂಭ •ನಿಮ್ಮ ನಿಮ್ಮ ಶಾಲೆಯ ಆಸ್ತಿಯನ್ನು ಭದ್ರಪಡಿಸಿಕೊಳ್ಳಿ

ಮೈಸೂರು, ಸೆ.13– ದೇಶದ ಉತ್ತಮ ಭವಿಷ್ಯ ರೂಪಿಸುವ ನಿಟ್ಟಿನಲ್ಲಿ ಮಕ್ಕಳನ್ನು ತಯಾರು ಮಾಡುವ ಮಹತ್ವದ ಜವಾಬ್ದಾರಿ ಶಿಕ್ಷಕರ ಮೇಲಿದೆ ಎಂದು ಮಾಜಿ ಸಚಿವರೂ ಆದ ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡರು ಹೇಳಿದರು.

ಹೂಟಗಳ್ಳಿಯ ಸರಸ್ವತಿ ಕನ್ವೆನ್ಷನ್‌ಹಾಲ್‌ನಲ್ಲಿ ಡಾ.ಸರ್ವಪಲ್ಲಿ ರಾಧಾಕೃಷ್ಣನ್ ಅವರ ಜನ್ಮ ದಿನ ಅಂಗವಾಗಿ ಆಯೋಜಿಸಿದ್ದ ಮೈಸೂರು ತಾಲೂಕು ಮಟ್ಟದ ಶಿಕ್ಷಕರ ದಿನಾಚರಣೆ ಸಮಾರಂಭ ವನ್ನು ಉದ್ಘಾಟಿಸಿ ಮಾತನಾಡಿದ ಅವರು, ಪ್ರಸ್ತುತ ದಿನಗಳಲ್ಲಿ ಮೊಬೈಲ್ ಗೀಳಿಗೆ ಬಿದ್ದಿರುವ ಮಕ್ಕಳಲ್ಲಿ ಓದುವ ಆಸಕ್ತಿ ಹೆಚ್ಚಿಸುವ ಮೂಲಕ ದೇಶದ ಉತ್ತಮ ಭವಿಷ್ಯಕ್ಕಾಗಿ ಅವರನ್ನು ಸಜ್ಜುಗೊಳಿಸುವ ಜವಾಬ್ದಾರಿ ನಿಮ್ಮ ಮೇಲಿದೆ ಎಂದರು.

ಖಾಸಗಿ ಶಾಲೆಗಳಿಗಿಂತಲೂ ಸರ್ಕಾರಿ ಶಾಲೆಗಳಲ್ಲಿ ಉತ್ತಮ ಫಲಿತಾಂಶ ಬರುತ್ತಿದೆ. ಅನೇಕ ಪ್ರತಿಭಾವಂತ ವಿದ್ಯಾರ್ಥಿಗಳು ಸರ್ಕಾರಿ ಶಾಲೆಗಳಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ಅಂತಹವರನ್ನು ಗುರುತಿಸಿ ಇನ್ನೂ ಹೆಚ್ಚಿನ ಪ್ರೋತ್ಸಾಹ ನೀಡಬೇಕು. ಸರ್ಕಾರಿ ಶಾಲೆಗಳಲ್ಲೂ ಖಾಸಗಿ ಶಾಲೆಗಳ ಮಾದರಿ ಸೌಲಭ್ಯ ಕಲ್ಪಿಸುವ ನಿಟ್ಟಿನಲ್ಲಿ ಬೇಕಾದ ಕ್ರಮ ವಹಿಸಲಾಗುತ್ತಿದೆ. ಶಿಕ್ಷಕರೂ ಇದಕ್ಕೆ ಪೂರಕವಾಗಿ ಕಾರ್ಯ ನಿರ್ವಹಿಸಬೇಕು ಎಂದು ತಿಳಿಸಿದರು.

ಬಡವರ ಮಕ್ಕಳಿಗೆ ಶಿಕ್ಷಣ ನೀಡುವ ಅವಕಾಶವನ್ನು ದೇವರು ನಿಮಗೆ ಕಲ್ಪಿಸಿದ್ದಾನೆ. ಕೇವಲ ಸಂಬಳಕ್ಕಾಗಿ ಕೆಲಸ ಮಾಡದೆ ಮಕ್ಕಳ ಭವಿಷ್ಯದ ಬಗ್ಗೆ ಯೋಚಿಸಿ, ನಿಸ್ವಾರ್ಥ ಸೇವೆ ಸಲ್ಲಿಸಬೇಕು. ಮುಖ್ಯ ಶಿಕ್ಷಕರು ತಮ್ಮ ಶಾಲೆಯನ್ನು ಶಿಸ್ತಿನಲ್ಲಿಟ್ಟುಕೊಳ್ಳಬೇಕು. ಶೌಚಾಲಯ, ಕುಡಿಯುವ ನೀರು ಇನ್ನಿತರ ಮೂಲಸೌಕರ್ಯಗಳ ಕೊರತೆಯಾಗದಂತೆ ನಿಗಾ ವಹಿಸಬೇಕು. ಸ್ವಚ್ಛತೆಗೆ ಆದ್ಯತೆ ನೀಡಬೇಕು. ಶಾಲೆಯನ್ನು ತಮ್ಮ ಮನೆಯಂತೆ ಜವಾಬ್ದಾರಿಯಿಂದ ನಿರ್ವಹಣೆ ಮಾಡಬೇಕು. ತಮ್ಮ ಶಾಲೆಯ ಸರ್ವೆ ಮಾಡಿಸಿ, ಹಕ್ಕುಪತ್ರ ಪಡೆದು ಬಂದೋಬಸ್ತ್ ಮಾಡಿಟ್ಟುಕೊಳ್ಳಬೇಕು ಎಂದು ಸಲಹೆ ನೀಡಿದರು.



ಮೈಸೂರಿನ ಹೂಟಗಳ್ಳಿ ಸರಸ್ವತಿ ಕನ್ವೆನ್ಷನ್‌ಹಾಲ್‌ನಲ್ಲಿ ಆಯೋಜಿಸಿದ್ದ ತಾಲೂಕು ಮಟ್ಟದ ಶಿಕ್ಷಕರ ದಿನಾಚರಣೆ ಸಮಾರಂಭವನ್ನು ಶಾಸಕ ಜಿ.ಟಿ.ದೇವೇಗೌಡರು ಉದ್ಘಾಟಿಸಿದರು.

ಬಡತನದ ಬದುಕು: ನಮ್ಮ ತಂದೆ ಬಡ ರೈತರಾಗಿದ್ದರು. ಹಾಗಾಗಿ ಚಿಕ್ಕ ವಯಸ್ಸಿನಿಂದಲೇ ಕೃಷಿಯಲ್ಲಿ ತೊಡಗಿಸಿಕೊಂಡಿದ್ದೆ. ಊರ ಹೊರಗೆ ಹೋಗಿ ಹಸುಗಳಿಗೆ ಮೇವು ತರುತ್ತಿದ್ದೆ. ಕುಟುಂಬದ ಜವಾಬ್ದಾರಿ ಹೊತ್ತು ಹಗಲು–ರಾತ್ರಿ ದುಡಿದೆ. ಸೊಸೈಟಿಯಲ್ಲಿ ಅಕ್ಕಿ ಅಳೆಯುತ್ತಿದ್ದಾಗ ಅಲ್ಲಿಯೇ ಮಲಗಿ ಜನರ ವಿಶ್ವಾಸ ಸಂಪಾದಿಸಿದೆ ನಂತರ ಸಹಕಾರ ಕ್ಷೇತ್ರದಿಂದ ಹಂತ ಹಂತವಾಗಿ ಬೆಳೆದು ಬಂದಿದ್ದೇನೆ ಎಂದು ತಿಳಿಸುವ ಮೂಲಕ ಪಠ್ಯದೊಂದಿಗೆ ಜೀವನ ಪಾಠ ಕಲಿಯುವುದು ಬಹಳ ಮುಖ್ಯ ಎಂದು ಮಕ್ಕಳಿಗೆ ಕಿವಿಮಾತು ಹೇಳಿದರು.

ಸಮಾಜದಲ್ಲಿ ಭ್ರಷ್ಟಾಚಾರ ಇಲ್ಲದೆ ನಡೆಯುತ್ತಿರುವ ಕ್ಷೇತ್ರವಿದೆ ಎಂದಾದರೆ ಅದು ಶಿಕ್ಷಕರ ಕ್ಷೇತ್ರ. ಸೇವಾ ಮನೋಭಾವ ಮತ್ತು ಪ್ರಾಮಾಣಿಕತೆಯಿಂದ ಕಾರ್ಯ ನಿರ್ವಹಿಸುವ ವೃತ್ತಿಪರರೆಂದರೆ ಶಿಕ್ಷಕರು ಮಾತ್ರ. ಪ್ರಧಾನಮಂತ್ರಿಗಳು ಹಾಗೂ ಮುಖ್ಯಮಂತ್ರಿಗಳೂ ಶಿಕ್ಷಕರ ದಿನದಂದು ತಮ್ಮ ಗುರುಗಳನ್ನು ಸ್ಮರಿಸಿಕೊಂಡರು. ಹಿಂದಿನಂತೆ ಮೈಲುಗಟ್ಟಲೆ ನಡಿಗೆಯಲ್ಲಿ ಶಾಲೆಗೆ ಹೋಗುವ ಪರಿಸ್ಥಿತಿ ಇಲ್ಲ. ಎಲ್ಲಾ ಸೌಕರ್ಯಗಳೂ ಇರುವುದರಿಂದ ಮಕ್ಕಳಿಗಾಗಿ ನಿಗದಿಗಿಂತ ಹೆಚ್ಚು ಸಮಯ ನೀಡಬೇಕು. ಶಿಕ್ಷಣದ ಜೊತೆಗೆ ಕಲೆ, ಸಾಹಿತ್ಯ, ಸಂಗೀತ, ಯೋಗ, ಧ್ಯಾನ, ಕ್ರೀಡೆ ಕಲಿಸಬೇಕು ಎಂದರು.

ಮಾಜಿ ರಾಷ್ಟ್ರಪತಿ ದಿವಂಗತ ಸರ್ವಪಲ್ಲಿ ಡಾ.ರಾಧಾಕೃಷ್ಣನ್ ಅವರ ಜನ್ಮದಿನವನ್ನು ಶಿಕ್ಷಕರ ದಿನವನ್ನಾಗಿ ಆಚರಿಸಿಕೊಂಡು ಬರಲಾಗುತ್ತಿದೆ. ಅವರು ದೇಶದಲ್ಲೇ ತತ್ವಜ್ಞಾನಿ, ದೊಡ್ಡ ಮೇಧಾವಿಯಾಗಿದ್ದರು. ಶಿಕ್ಷಕರೊಬ್ಬರು ಏನೆಲ್ಲಾ ಪದವಿಗೇರಲು ಸಾಧ್ಯ ಎಂಬುದಕ್ಕೆ ಅವರೇ ಉದಾಹರಣೆಯಾಗಿದ್ದಾರೆ. ಹಾಗೆಯೇ ದಲಿತ ಮಹಿಳೆ ಸಾವಿತ್ರಿ ಬಾಫುಲೆ ಅವರು ಶಾಲೆ ತೆರೆದು ಮಕ್ಕಳಿಗೆ ಅಕ್ಷರ ಕಲಿಸಿದ ಮೊದಲ ಶಿಕ್ಷಕಿ. ಇಂತಹ ಮಹಾತ್ಮರ ತತ್ವ, ಸಿದ್ಧಾಂತಗಳನ್ನು ಅಳವಡಿಸಿಕೊಂಡು ಮಾದರಿಯಾಗಬೇಕು ಎಂದು ಹೇಳಿದರು.

ಕೆನರಾ ಬ್ಯಾಂಕ್‌ನಿಂದ 1 ಕೋಟಿ, ಕಲಿಸು ಫೌಂಡೇಷನ್‌ನಿಂದ 20 ಲಕ್ಷ, ಟಿವಿಎಸ್, ಐಟಿಸಿ ಕಂಪೆನಿ, ಸಾಯಿ ಗಾರ್ಮೆಂಟ್ಸ್, ಜೆ.ಕೆ.ಟೈರ್ಸ್ ಸೇರಿದಂತೆ ಅನೇಕ ಕಂಪನಿಗಳು ಹಾಗೂ ಕಾರ್ಖಾನೆಗಳ ವತಿಯಿಂದ ಸಾಕಷ್ಟು ನೆರವು ನೀಡಿ, ಮಕ್ಕಳ ಕಲಿಕೆಗೆ ಅನುಕೂಲವಾಗುವಂತೆ ಸ್ಮಾರ್ಟ್‌ಕ್ಲಾಸ್ ಕೊಠಡಿಗಳನ್ನು ನಿರ್ಮಿಸಿ ಕೊಟ್ಟಿರುವುದು ಅಭಿನಂದನಾರ್ಹ ಎಂದು ಇದೇ ವೇಳೆ ಬಣ್ಣಿಸಿದರು.

'ಸರಳ ವಿವಾಹ' ಜಾಗೃತಿ ಮೂಡಿಸಿ

ಜಮೀನು ಮಾರಾಟ ಮಾಡಿ ಅದ್ಧೂರಿಯಾಗಿ ಮದುವೆ ಮಾಡುವವರು ಹೆಚ್ಚಾಗುತ್ತಿದ್ದಾರೆ. ಈ ಸಂದರ್ಭದಲ್ಲಿ ಸರಳ ವಿವಾಹದ ಬಗ್ಗೆ ಶಿಕ್ಷಕರು ಅರಿವು ಮೂಡಿಸುವ ಮೂಲಕ ಸಮಾಜದ ಸುಧಾರಣೆಗೆ ಮುಂದಾಗಬೇಕು. ನಾನು ಮಗ ಹಾಗೂ ಇಬ್ಬರು ಹೆಣ್ಣು ಮಕ್ಕಳಿಗೆ ತಿರುಪತಿಯಲ್ಲಿ, ಸಹೋದರನ ಮಗನಿಗೆ ಧರ್ಮಸ್ಥಳದಲ್ಲಿ ಸರಳವಾಗಿ ವಿವಾಹ ಮಾಡಿಸಿದ್ದೇನೆ. ಹೀಗೆ ಹೆಣ್ಣು ಮಕ್ಕಳಿಗೆ ಸರಳ ವಿವಾಹ ಮಾಡಿ, ಮಾರಲು ಮುಂದಾಗಿದ್ದ ಜಮೀನನ್ನು ಅವರಿಗೇ ಉಡುಗೊರೆಯಾಗಿ ನೀಡುವುದು ಒಳ್ಳೆಯದು.

–ಶಾಸಕ ಜಿ.ಟಿ.ದೇವೇಗೌಡರು

ಸಮಾರಂಭದಲ್ಲಿ ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯೆ ಚಂದ್ರಿಕಾ ಸುರೇಶ್, ತಾಪಂ ಕಾರ್ಯ ನಿರ್ವಹಣಾಧಿಕಾರಿ ಸಿ.ಕೃಷ್ಣ, ಕ್ಷೇತ್ರ ಶಿಕ್ಷಣಾಧಿಕಾರಿ ಎಂ.ಪ್ರಕಾಶ್ ಮತ್ತಿತರರು ಭಾಗವಹಿಸಿದ್ದರು.



ಭರತನಾಟ್ಯ ಪ್ರದರ್ಶಿಸಿದ ಗುಂಗ್ರಾಲ್ ಛತ್ರ ಸ.ಹಿ.ಪ್ರಾ.ಶಾಲೆ ಶಿಕ್ಷಕಿ ವೀಣಾ ಕುಮಾರಿ ಅವರ ಪುತ್ರಿ ವಿದುಷಿ ವೈಭವಿ ಅವರನ್ನು ಅಭಿನಂದಿಸಲಾಯಿತು

ಸಹಕಾರ ಪ್ರಶಸ್ತಿ ಪ್ರದಾನ



ಬೆಂಗಳೂರು ಜಯನಗರದಲ್ಲಿರುವ ಭಾರತ್ ವಿದ್ಯಾಸಂಸ್ಥೆ ಆವರಣದಲ್ಲಿ ನಡೆದ ಸಮಾರಂಭದಲ್ಲಿ ದಿ ಭಾರತಿ ಕೋ–ಆಪರೇಟಿವ್ ಕ್ರೆಡಿಟ್ ಸೊಸೈಟಿ ವತಿಯಿಂದ 13ನೇ ವರ್ಷದ 'ಸಹಕಾರ ರತ್ನ ಶ್ರೀ ಬಿ.ಎಲ್.ಲಕ್ಕೇಗೌಡ ಪ್ರಶಸ್ತಿ'ಯನ್ನು ಹಿರಿಯ ಸಹಕಾರಿಯಾದ ಮೈಸೂರಿನ ಶ್ರೀಮತಿ ಕೆ.ಲಲಿತಾ ಜಿ.ಟಿ.ದೇವೇಗೌಡರಿಗೆ ಮಾಜಿ ಸಚಿವರೂ ಆದ ಯಶವಂತಪುರ ಕ್ಷೇತ್ರದ ಶಾಸಕ ಎಸ್.ಟಿ.ಸೋಮಶೇಖರ್ ಪ್ರದಾನ ಮಾಡಿ ಗೌರವಿಸಿದರು. ಈ ವೇಳೆ ಪ್ರೊ.ಜಯಪ್ರಕಾಶ್‌ಗೌಡ, ಜಯದೇವ, ಡಾ.ಹೆಚ್.ಎಂ.ವೆಂಕಟಪ್ಪ ಸೇರಿದಂತೆ ಹಲವಾರು ಸಹಕಾರಿಗಳು ಉಪಸ್ಥಿತರಿದ್ದರು.

ಹಣ, ಆಸ್ತಿ ಗಳಿಸುವ ನಾಗಾಲೋಟದಲ್ಲಿ ವೈಯಕ್ತಿಕ ಆರೋಗ್ಯ ಕಡೆಗಣನೆ

ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಬೇಸರ



ಮೈಸೂರು, ಸೆ.13– ಇಂದಿನ ನಾಗರಿಕ ಪ್ರಪಂಚ ಹಣ, ಆಸ್ತಿ ಗಳಿಸುವ ನಾಗಾಲೋಟದಲ್ಲಿ ತಮ್ಮ ವೈಯಕ್ತಿಕ ಆರೋಗ್ಯವನ್ನು ಕಡೆಗಣಿಸುತ್ತಿದೆ ಎಂದು ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಬೇಸರ ವ್ಯಕ್ತಪಡಿಸಿದರು.

ಮೈಸೂರಿನ ಹೆಬ್ಬಾಳು ಕೈಗಾರಿಕಾ ಪ್ರದೇಶದಲ್ಲಿ ಸಾಯಿ ಸಿದ್ದ ಗ್ರೂಪ್ ಆಫ್ ಇನ್ಸ್ಟಿಟ್ಯೂಷನ್ ಸಂಸ್ಥೆಯನ್ನು ಉದ್ಘಾಟಿಸಿ ಮಾತನಾಡಿದ ಅವರು, ಪ್ರತಿಯೊಬ್ಬರೂ ಆರೋಗ್ಯದ ಬಗ್ಗೆ ಕಾಳಜಿ ವಹಿಸಬೇಕೆಂದು ಸಲಹೆ ನೀಡಿದರು.

ಆರ್ಥಿಕ ಲಾಭ ಗಳಿಸುವ ದೃಷ್ಟಿಯಿಂದ ಸ್ಥಾಪಿತವಾಗುತ್ತಿರುವ ನೂರಾರು ಉದ್ಯಮಗಳ ಮಧ್ಯೆ ಸಮಾಜಕ್ಕೆ ಬಹುಮುಖ್ಯವಾಗಿ ಅತ್ಯಂತ ಅಗತ್ಯವಿರುವ ಆರೋಗ್ಯ ಶಿಕ್ಷಣ ನೀಡುವ ಸಮಾಜಮುಖಿ ಸೇವೆಯನ್ನು ಮುನ್ನಡೆಸುವ ಒಂದು ಆಲೋಚನೆಯನ್ನು ಯಶಸ್ವಿಯಾಗಿ ಸಾಕಾರಗೊಳಿಸಿರುವ ಸಂಸ್ಥೆಯವರ ದೂರದೃಷ್ಟಿ ನಿಜಕ್ಕೂ ಶ್ಲಾಘನೀಯ. ಹೆಚ್ಚುತ್ತಿರುವ ಜನಸಂಖ್ಯೆ, ಹೆಚ್ಚುತ್ತಿರುವ ಅನಾರೋಗ್ಯಗಳನ್ನು ನಿಯಂತ್ರಣಕ್ಕೆ ತರಲು ಆರೋಗ್ಯ ಶಿಕ್ಷಣ ಅತ್ಯಂತ ಅವಶ್ಯಕ. ಆ ಕೆಲಸವನ್ನು ಸಾಯಿ ಸಿದ್ದ ಇನ್ಸ್ಟಿಟ್ಯೂಷನ್ ಮಾಡುತ್ತಿರುವುದು ಸಮಾಜಮುಖಿ ಸೇವೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಸಂಸ್ಥೆಯ ಅಧ್ಯಕ್ಷರಾದ ಪೂರ್ಣಿಮಾ ಕೋದಂಡರಾಮು, ಉಪಾಧ್ಯಕ್ಷರಾದ ಕುಮಾರಿ ಎಂ.ವಿ.ವಿನುತಾ, ಲಕ್ಷ್ಮಮ್ಮ, ವರ್ಗೀಸ್, ನಾರಾಯಣ್, ತುಳಸಮ್ಮ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಜಿ.ಸೋಮಶೇಖರ್, ಮುಖಂಡರಾದ ವಿಶ್ವನಾಥ್ ಉಪಸ್ಥಿತರಿದ್ದರು.

ಮೈಸೂರು ಓಆರ್‌ಐನಿಂದ ದೆಹಲಿಯಲ್ಲಿ ಕೌಟಿಲ್ಯನ ಅರ್ಥಶಾಸ್ತ್ರದ ಮೂಲ ಹಸ್ತಪತ್ರಿಗಳ ಪ್ರದರ್ಶನ...



ನವದೆಹಲಿಯ ವಿಜ್ಞಾನ ಭವನದಲ್ಲಿ ಸೆ.11ರಿಂದ 13ರವರೆಗೆ ನಡೆದ ಭಾರತದ ಮೊದಲ 'ಜ್ಞಾನ ಭಾರತಂ ಅಂತಾರಾಷ್ಟ್ರೀಯ ಸಮ್ಮೇಳನ–2025'ರಲ್ಲಿ ಮೈಸೂರಿನ ಪ್ರಾಚ್ಯವಸ್ತು ಸಂಶೋಧನಾಲಯದ (ಓಆರ್‌ಐ) ವತಿಯಿಂದ ಇದೇ ಪ್ರಥಮ ಬಾರಿಗೆ ಪ್ರದರ್ಶಿಸಿದ್ದ ಕೌಟಿಲ್ಯನ ಅರ್ಥಶಾಸ್ತ್ರದ ಮೂಲ ಹಸ್ತಪತ್ರಿಗಳು ಹಾಗೂ ಸುಂದರ ಕಾಂಡದ ನ್ಯಾನೋ ಲಿಪಿಯನ್ನು ಪ್ರಧಾನಿ ನರೇಂದ್ರ ಮೋದಿ ಯವರು ವೀಕ್ಷಿಸಿದರು. ಅವುಗಳ ಬಗ್ಗೆ ಓಆರ್‌ಐ ನಿರ್ದೇಶಕ ಡಾ.ಡಿ.ಪಿ.ಮಧುಸೂದನಾಚಾರ್ಯ ಅವರು ಪ್ರಧಾನಿಗಳಿಗೆ ವಿವರಿಸಿದರು. ಕೇಂದ್ರದ ಸಂಸ್ಕೃತಿ ಸಚಿವಾಲಯ ಆಯೋಜಿಸಿದ್ದ ಈ ಸಮ್ಮೇಳನದಲ್ಲಿ ಓಆರ್‌ಐ, ಭಾರತೀಯ ಜ್ಞಾನ ಪರಂಪರೆಯ ಹಲವು ಹಸ್ತಪ್ರತಿ ಪ್ರದರ್ಶಿಸಿತು. ಈ ಸಮ್ಮೇಳನವು ಪ್ರಾಚೀನ ಭಾರತದ ಅಪಾರ ಹಸ್ತಪ್ರತಿ ಪರಂಪರೆ ಸಂರಕ್ಷಿಸಲು ಹಾಗೂ ಭವಿಷ್ಯದ ಪೀಳಿಗೆಗೆ ತಂತ್ರಜ್ಞಾನದೊಂದಿಗೆ ಪರಂಪರೆಯನ್ನು ಸಂರಕ್ಷಿಸುವ ಸಂದೇಶ ನೀಡುವ ಉದ್ದೇಶ ಹೊಂದಿದೆ.

ಬುಗತಗಳ್ಳಿ ಗ್ರಾಮದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಪ್ರತಿಮೆ ಅನಾವರಣ

•ಗ್ರಾಮದಲ್ಲಿ ನಡೆದ ಅದ್ಧೂರಿ ಸಮಾರಂಭದಲ್ಲಿ ಅನಾವರಣಗೊಳಿಸಿದ ಸಿಎಂ ಸಿದ್ದರಾಮಯ್ಯ •ಅಂಬೇಡ್ಕರ್ ಸಿದ್ಧಾಂತ ಅನುಸರಿಸುವುದು ಅತ್ಯಂತ ಮುಖ್ಯ ; ಡಾ.ಕಲ್ಯಾಣಸಿರಿ ಬಂತೇಜಿ

ಮೈಸೂರು,ಸೆ.13(ಪಿಎಂ)– ಮೈಸೂರು ತಾಲೂಕು ವರುಣ ಹೋಬಳಿಯ ಬುಗತಗಳ್ಳಿ ಗ್ರಾಮದಲ್ಲಿ ಶನಿವಾರ ಹಮ್ಮಿಕೊಂಡಿದ್ದ ಅದ್ಧೂರಿ ಸಮಾರಂಭದಲ್ಲಿ ಗ್ರಾಮದಲ್ಲಿ ಪ್ರತಿಷ್ಠಾಪಿಸಿರುವ ಡಾ.ಬಿ.ಆರ್.ಅಂಬೇಡ್ಕರ್ ಪ್ರತಿಮೆಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅನಾವರಣಗೊಳಿಸಿದರು.

ಗೋಪುರ ಮಾದರಿ ಮಂಟಪದ ಒಳಗೆ ಫೈಬರ್‌ನಲ್ಲಿ ನಿರ್ಮಿಸಿರುವ 7 ಅಡಿ ಎತ್ತರದ ಡಾ.ಅಂಬೇಡ್ಕರ್ ಪ್ರತಿಮೆ ಸ್ಥಾಪಿಸಿದ್ದು, ಸಿದ್ದರಾಮಯ್ಯ ಪುಷ್ಪನಮನ ಸಲ್ಲಿಸಿದರು. ಪ್ರತಿಮೆ ಇರುವ ಮಂಟಪವನ್ನು ಹೂಮಾಲೆಗಳಿಂದ ಶೃಂಗರಿಸಲಾಗಿತ್ತು.



ಮೈಸೂರು ತಾಲೂಕಿನ ಬುಗತಗಳ್ಳಿ ಗ್ರಾಮದಲ್ಲಿ ಪ್ರತಿಷ್ಠಾಪಿಸಿರುವ ಡಾ.ಬಿ.ಆರ್. ಅಂಬೇಡ್ಕರ್ ಅವರ ಪ್ರತಿಮೆಯನ್ನು ಶನಿವಾರ ಮುಖ್ಯಮಂತ್ರಿ ಸಿದ್ದರಾಮಯ್ಯ ಅನಾವರಣಗೊಳಿಸಿದರು.

ಬಳಿಕ ನಡೆದ ಸಭಾ ಕಾರ್ಯಕ್ರಮದಲ್ಲಿ ಬುದ್ಧ, ಬಸವಣ್ಣ ಹಾಗೂ ಅಂಬೇಡ್ಕರ್ ಅವರ ಪುತ್ಥಳಿಗಳಿಗೆ ಪುಷ್ಪ ನಮನ ಸಲ್ಲಿಸಿ ಮಾತನಾಡಿದ ಸಿದ್ದರಾಮಯ್ಯನವರು, ಇಂದು ಗ್ರಾಮದಲ್ಲಿ ನಾನು ಮತ್ತು ಎಲ್ಲಾ ಗಣ್ಯರು ಡಾ.ಅಂಬೇಡ್ಕರ್ ಅವರ ಪ್ರತಿಮೆಯನ್ನು ಅತ್ಯಂತ ಸಂತೋಷದಿಂದ ಲೋಕಾರ್ಪಣೆ ಮಾಡಿದ್ದೇವೆ. ಗಗನಚುಕ್ಕಿ ಜಲಪಾತೋತ್ಸವ ಉದ್ಘಾಟನೆ ಸಮಾರಂಭಕ್ಕೆ ಹೋಗಬೇಕಿರುವ ಕಾರಣ, ಸಮಯದ ಅಭಾವವಿದೆ ಎಂದು ತಿಳಿಸಿ, ನಿರ್ಗಮಿಸಿದರು.

ನಂತರ ಸಾನ್ನಿಧ್ಯ ವಹಿಸಿದ್ದ ಮೈಸೂರಿನ ಅಶೋಕ ವೃತ್ತ ಸಮೀಪದ ವಿಶ್ವಮೈತ್ರಿ ಬುದ್ಧವಿಹಾರದ ಪೂಜ್ಯ ಡಾ.ಕಲ್ಯಾಣಸಿರಿ ಬಂತೇಜಿ ಮಾತನಾಡಿ, ಬುದ್ಧನ ನಂತರ ಮಧ್ಯಕಾಲೀನ ಯುಗದಲ್ಲಿ ಬಸವಣ್ಣನವರು ಸಮಾನತೆ ಸಂದೇಶ ಸಾರಿದರು. ನಂತರ ಆಧುನಿಕ ಭಾರತದಲ್ಲಿ ಸಮಾನತೆ ಸಂದೇಶ ಸಾರಿದವರು ಡಾ.ಅಂಬೇಡ್ಕರ್. ಅವರೆಲ್ಲರನ್ನೂ ನಾವು ಸ್ಮರಿಸಬೇಕು. ಬುಗತಗಳ್ಳಿ ಗ್ರಾಮದಲ್ಲಿ ಅಂಬೇಡ್ಕರ್ ಅವರ ಪ್ರತಿಮೆ ಅನಾವರಣ ಮಾಡಿರುವ ಕಾರಣ ಗ್ರಾಮದ ಜನತೆಗೆ ಇಂದು ಸಂತಸದ ದಿನ ಎಂದು ಹರ್ಷ ವ್ಯಕ್ತಪಡಿಸಿದರು.

ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಪ್ರತಿಮೆ ಉದ್ಘಾಟನೆ ಮಾಡಿದ್ದೇವೆ. ಅವರ ಪ್ರತಿಮೆ ಜ್ಞಾನ ಮತ್ತು ಸಮಾನತೆಯ ಸಂಕೇತವೆಂದು ನಾವು ಅರ್ಥಮಾಡಿಕೊಳ್ಳಬೇಕು. ಅವರ ಪ್ರತಿಮೆಯು ಎಲ್ಲರ ಬಾಂಧವ್ಯದ ಕೇಂದ್ರಬಿಂದುವಾಗಬೇಕು. ಜೊತೆಗೆ ಅಂಬೇಡ್ಕರ್ ಅವರ ತತ್ವ–ಸಿದ್ಧಾಂತಗಳನ್ನು ಅಳವಡಿಸಿಕೊಳ್ಳುವುದು ಅತ್ಯಂತ ಮುಖ್ಯ. ಅವರ ತತ್ವ–ಸಿದ್ಧಾಂತ ಅನುಸರಿಸುವುದರಿಂದ ನಮ್ಮ ಬದುಕು ಬೆಳಕಾಗಲಿದೆ. ಅಂಬೇಡ್ಕರ್ ಅವರಿಗೆ ಇದ್ದ ಆಶಯವೂ ಅದೇ ಆಗಿದೆ ಎಂದು ತಿಳಿಸಿದರು.

ನಮ್ಮೂರಿನಲ್ಲಿಂದು ಅಂಬೇಡ್ಕರ್ ಪ್ರತಿಮೆ ಅನಾವರಣ ಮಾಡಿದ್ದೇವೆ. ಅವರ ತತ್ವ–ಸಿದ್ಧಾಂತಗಳನ್ನು ಬದುಕಿನಲ್ಲಿ ಅಳವಡಿಸಿಕೊಳ್ಳುತ್ತೇವೆಂಬ ಪ್ರತಿಜ್ಞೆಯನ್ನು ನಿಮ್ಮ ಮನಸ್ಸಿನಲ್ಲೇ ಇಂದು ಮಾಡಿಕೊಳ್ಳಿ. ಆಗ ಪ್ರತಿಮೆ ಪ್ರತಿಷ್ಠಾಪನೆ ಮಾಡಿದ್ದಕ್ಕೂ ಒಂದು ಅರ್ಥ ಬರಲಿದೆ. ನಮ್ಮ ಮನಸ್ಸಿನ ವಿಕಸನ ಯಾವಾಗ ಆಗುತ್ತದೋ ಆಗ ನಮ್ಮ ಬದುಕು ಕೂಡ ಪ್ರಬುದ್ಧವಾಗಲಿದೆ ಎಂದು ಸಂದೇಶ ನೀಡಿದರು.

ಮೈಸೂರಿನ ಗಾಂಧಿನಗರದ ಉರಿಲಿಂಗ ಪೆದ್ದಿಮಠದ ಶ್ರೀ ಜ್ಞಾನಪ್ರಕಾಶ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ಶಾಸಕರಾದ ರಮೇಶ್ ಬಂಡಿಸಿದ್ದೇಗೌಡ, ದರ್ಶನ್ ಧ್ರುವನಾರಾಯಣ್, ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್, ವಿಧಾನಪರಿಷತ್ ಸದಸ್ಯರಾದ ಡಾ.ಡಿ.ತಿಮ್ಮಯ್ಯ, ಕೆ.ಶಿವಕುಮಾರ್, ಮಾಜಿ ಮೇಯರ್ ಪುರುಷೋತ್ತಮ್, ಕಾಂಗ್ರೆಸ್ ಜಿಲ್ಲಾಧ್ಯಕ್ಷ ಡಾ.ಬಿ.ಜೆ.ವಿಜಯ್‌ಕುಮಾರ್, ಹಿರಿಯ ವಕೀಲ ಸಿ.ಎಂ.ಜಗದೀಶ್, ವಿ.ಶ್ರೀನಿವಾಸ ಪ್ರಸಾದ್ ಸಹೋದರ ರಾಮಸ್ವಾಮಿ, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರ ಉಪಾಧ್ಯಕ್ಷೆ ಡಾ.ಪುಷ್ಪಾ ಅಮರ್‌ನಾಥ್, ವಾಜಮಂಗಲ ಗ್ರಾಪಂ ಅಧ್ಯಕ್ಷೆ ಮಂಜುಳಾ ಸೇರಿದಂತೆ ಗ್ರಾಮದ ಮುಖಂಡರು ಹಾಗೂ ಗ್ರಾಮಸ್ಥರು ಹಾಜರಿದ್ದರು.

ಇಂದು 'ಉಚಿತ ಕಾನೂನು ನೆರವು ಕೇಂದ್ರ' ಉದ್ಘಾಟನೆ

ಮೈಸೂರು, ಸೆ.13– ರಾಷ್ಟ್ರೀಯ ಕಾನೂನು ಸೇವಾ ಸಮಿತಿಯ ವೀರ್ ಪರಿವಾರ್ ಸಹಾಯಕ ಯೋಜನೆ–2025 ಅನ್ವಯ ಮೈಸೂರು ಜಿಲ್ಲಾ ಸೈನಿಕ್ ಭವನದಲ್ಲಿ ಕಾನೂನು ಸೇವಾ ಸಮಿತಿಯ 'ಉಚಿತ ಕಾನೂನು ನೆರವು ಕೇಂದ್ರ'ವನ್ನು ಭಾನುವಾರ(ಸೆ.14) ಬೆಳಗ್ಗೆ 10.30ಕ್ಕೆ ಹೈಕೋರ್ಟ್ ನ್ಯಾಯಮೂರ್ತಿ ಹಾಗೂ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ಕಾರ್ಯನಿರ್ವಾಹಕ ಅಧ್ಯಕ್ಷರಾದ ಶ್ರೀಮತಿ ಅನು ಶಿವರಾಮನ್ ಉದ್ಘಾಟಿಸಲಿದ್ದಾರೆ.

ಇಂದು ಆಕಾಶವಾಣಿ ನಿವೃತ್ತ ಉಪನಿರ್ದೇಶಕರಿಗೆ ಬೀಳ್ಕೊಡುಗೆ

ಮೈಸೂರು,ಸೆ.13(ಪಿಎಂ)– ಸಮುದ್ಯತಾ ಶ್ರೋತೃ ಸಂಘ, ಎಫ್‌ಎಂ 100.6 ಮೈಸೂರು ಆಕಾಶವಾಣಿ ಕೇಳುಗರ ಬಳಗದ ಜಂಟಿ ಆಶ್ರಯದಲ್ಲಿ ಮೈಸೂರು ಆಕಾಶವಾಣಿಯಲ್ಲಿ ಉಪನಿರ್ದೇಶಕರಾಗಿ ಸೇವೆ ಸಲ್ಲಿಸಿ, ಕಳೆದ ತಿಂಗಳು ನಿವೃತ್ತರಾಗಿರುವ ಎಸ್.ಎಸ್.ಉಮೇಶ್ ಅವರಿಗೆ ಸೆ.14ರಂದು ಬೀಳ್ಕೊಡುಗೆ ಸಮಾರಂಭ ಹಮ್ಮಿಕೊಳ್ಳಲಾಗಿದೆ.



ಉಮೇಶ್

ಮೈಸೂರಿನ ಸರಸ್ವತಿಪುರಂನ ವಿಜಯವಿಠಲ ವಿದ್ಯಾಸಂಸ್ಥೆ ಆವರಣದಲ್ಲಿ ಅಂದು ಬೆಳಗ್ಗೆ 10.30ಕ್ಕೆ ಕಾರ್ಯಕ್ರಮ ನಡೆಯಲಿದೆ. ಸಮುದ್ಯತಾ ಶ್ರೋತೃ ಸಂಘದ ಅಧ್ಯಕ್ಷ ಕಣ್ಣೂರು ವಿ.ಗೋವಿಂದಾಚಾರಿ ಅಧ್ಯಕ್ಷತೆ ವಹಿಸುವರು. ಆಕಾಶವಾಣಿಯ ಜನಕ ಎಂ.ವಿ.ಗೋಪಾಲಸ್ವಾಮಿಯವರ ಮೊಮ್ಮಗಳಾದ ಭಾರತಿ ಘನಶ್ಯಾಮ್ ವಿಶೇಷ ಆಹ್ವಾನಿತರಾಗಿ ಪಾಲ್ಗೊಳ್ಳುವರು ಹಾಗೂ ರಾಜೇಶ್ವರಿ ಉಮೇಶ್ ಹಾಜರಿರುವರು ಎಂದು ಪ್ರಕಟಣೆ ತಿಳಿಸಿದೆ.

ಸೆ.16ರಂದು ಹೊಸಹುಂಡಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಸರ್ವ ಸದಸ್ಯರ ಸಭೆ

ಮೈಸೂರು,ಸೆ.13– ಹೊಸಹುಂಡಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ 2024–25ನೇ ಸಾಲಿನ ಸರ್ವ ಸದಸ್ಯರ ಸಭೆಯನ್ನು ಸೆ.16ರಂದು ಬೆಳಗ್ಗೆ 10.30ಕ್ಕೆ ಸಂಘದ ಆವರಣದಲ್ಲಿ ಆಯೋಜಿಸಲಾಗಿದೆ.

ನಕ್ಕರೆ ಅದೇ ಸ್ವರ್ಗ

ಮಗನನ್ನು ಇಂಜಿನಿಯರಿಂಗ್ ಕಾಲೇಜಿಗೆ ದಾಖಲು ಮಾಡಿಸಿ ಹೊರ ಬಂದ ಅಪ್ಪ ಗೇಟಿನ ಬಳಿ ನಿಂತಿದ್ದ ಸೆಕ್ಯೂರಿಟಿಗೆ ಕೇಳಿದ: ಈ ಕಾಲೇಜು ಹೇಗಿದೆಯಪ್ಪ?
ಸೆಕ್ಯೂರಿಟಿ : ಸಾರ್ ಸೂಪರ್ ಕಾಲೇಜು ಸರ್, ನಾನಿಲ್ಲೇ ಓದಿದ್ದು!

ಮೈಸೂರು ಮಿತ್ರ

ಭಾನುವಾರ, 14 ಸೆಪ್ಟೆಂಬರ್ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತ ವಾಹಿನಿ......

ನೂರು ಒಳ್ಳೆಯ ಕೆಲಸ ಮಾಡಿ, ಸಮಾಜ ಅದರ ಬಗ್ಗೆ ಒಂದು ಒಳ್ಳೆಯ ಮಾತನಾಡುವುದಿಲ್ಲ. ಒಂದೇ ಒಂದು ಸಣ್ಣ ತಪ್ಪು ಮಾಡಿ, ಗುಂಪು ಕಟ್ಟಿಕೊಂಡು ನಿಮ್ಮನ್ನು ಕಟಕಟೆಯಲ್ಲಿ ನಿಲ್ಲಿಸಿ ಬಿಡುತ್ತಾರೆ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಅಂಕೆ ಇಲ್ಲದ ಕುದುರೆ ಅಂಗಳ ಹಾರಿತು

ನಿಮ್ಮ ಪತ್ರಗಳು

ನಿರ್ಗತಿಕರ, ದಾರಿಹೋಕರ ತಂಗುದಾಣಗಳಾಗಿರುವ ಬಸ್ ನಿಲ್ದಾಣಗಳು

ಮಾನ್ಯರೆ,



ಮೈಸೂರಿನ ಶಾಂತಲಾ ಚಿತ್ರ ಮಂದಿರದ ಸಿಗ್ನಲ್ ಬಳಿಯಲ್ಲಿರುವ ಬಸ್ ನಿಲ್ದಾಣದಲ್ಲಿ ಪ್ರತಿನಿತ್ಯ ಕಂಡು ಬರುವ ದೃಶ್ಯವಿದು. ನಿಲ್ದಾಣದ ಎಡ, ಬಲದಲ್ಲಿ ದೊಡ್ಡ ಮೋರಿಗೆ ಹೊಂದಿಕೊಂಡಂತೆ ಎರಡು ಮಾಂಸಹಾರಿ ಫುಟ್ ಪಾತ್ ಗಾಡಿಗಳು, ಅಲ್ಲಿಗೆ ತಿನ್ನಲು ಸೇರಿದ ಜನ ಸಂದಣಿ ಜೊತೆಗೆ ಅವರ ಸ್ಕೂಟರ್‌ಗಳ ಅಡ್ಡಾದಿಡ್ಡಿ ನಿಲುಗಡೆ, ಇದರೊಂದಿಗೆ ನಿಲ್ದಾಣದ ಎದುರು ಇರುವ ಔಷದಿ ಫಾರ್ಮ್‌ದ ಪ್ರತಿನಿಧಿಗಳು ಸಹ ಇಲ್ಲಿಯೇ ನಿಲ್ಲಿಸುವ ಸ್ಕೂಟರ್‌ಗಳು. ಇದೆಲ್ಲದರ ಮಧ್ಯ ಪ್ರಂಯಾಣಿಕರ ಸೇವೆಗಾಗಿ ಇರುವ ಬಸ್ ನಿಲ್ದಾಣದ ಸಂಪೂರ್ಣ ಜಗುಲಿಯನ್ನು ಮೂರ್ನಾಲ್ಕು ಜನ ಅಕ್ರಮಿಸಿಕೊಂಡು ಜೀವನದ ಯಾವುದೇ ಜಂಜಾಟವಿಲ್ಲದೆ 'ಚಿಂತೆ ಇಲ್ಲದವನಿಗೆ ಸಂತೆಯಲ್ಲೂ ನಿದ್ದೆ' ಎಂಬಂತೆ ತಮ್ಮ ಗಂಟುಮೂಟೆ, ಪರಿಕರದೊಂದಿಗೆ ಜಗದ ಪರಿವೆ ಇಲ್ಲದೆ, ಯಾರ ಭಯವೂ ಇಲ್ಲದೆ ಯಾವುದೇ ಶಬ್ದಕ್ಕೂ ಜಗ್ಗುವುದಿಲ್ಲವೆಂಬಂತೆ, ನಿಶ್ಚಿಂತೆಯಿಂದ, ನೆಮ್ಮದಿಯಿಂದ ಹಗಲು ಹೊತ್ತಿನಲ್ಲೇ ನಿದ್ರೆಗೆ ಜಾರಿರುವ ದೃಶ್ಯ ನೋಡಿದರೆ ಇವರೇನು ಭಿಕ್ಷುಕರೇ, ದಾರಿ ಹೋಕರೇ, ವಸತಿರಹಿತರೆ, ನಿರುದ್ಯೋಗಿಗಳೋ? ಅಥವಾ ನಿರ್ಗತಿಕರೆ? ಎಂಬುದನ್ನು ಮಹಾ ನಗರಪಾಲಿಕೆಯೇ ನಿರ್ಧರಿಸಬೇಕಿದೆ.ಈ ಸ್ಥಳ ಕೊಡ ಗಬ್ಬು ನಾರುತ್ತಿದ್ದು ಮೂಗು ಮುಚ್ಚಿಕೊಂಡು, ಭಯದಿಂದ ಮಕ್ಕಳು ಮಹಿಳೆಯರು, ಸಾರ್ವಜನಿಕರು ಬಸ್‌ಗಾಗಿ ರಸ್ತೆಯಲ್ಲೇ ನಿಂತು ಕಾಯುವ ಪರಿಸ್ಥಿತಿ ಇದೆ.ಇಷ್ಟೆಲ್ಲಾ ಅವ್ಯವಸ್ಥೆಗಳನ್ನು ನೋಡಿದರೆ ನಗರ ಪಾಲಿಕೆಯು ಸಹ ಗಾಢ ನಿದ್ರೆಯಲ್ಲಿರುವಂತೆ ಕಾಣುತ್ತದೆ. ಮೈಸೂರು ನಗರ ಈಗಾಗಲೇ ಸ್ವಚ್ಛ ನಗರವೆಂಬ ಪ್ರಶಸ್ತಿ ಪಡೆದು ದೇಶದ ಗಮನ ಸೆಳೆದಿದೆ ಇದರೊಂದಿಗೆ ಮಧ್ಯಪ್ರದೇಶದ ಇಂದೂರ್ ನಗರವು ಭಿಕ್ಷುಕ ಮುಕ್ತ ನಗರವೆಂದು ಗುರ್ತಿಸಿಕೊಂಡಿದೆ. ಅದರಂತೆ ಮೈಸೂರು ಮಹಾನಗರ ಪಾಲಿಕೆಯು ಭಿಕ್ಷುಕ ಮುಕ್ತ ನಗರವೆಂದು ಘೋಷಿಸುವ ದಿಕ್ಕಿನಲ್ಲಿ ಪ್ರಯತ್ನ ಪಡಲೆಂದು ಒತ್ತಾಯಿಸುತ್ತೇನೆ. ಆದರೆ ಇದನೆಲ್ಲ ಗಮನ ಹರಿಸಲು ಜನಪ್ರತಿನಿಧಿಗಳೇ ಬರಬೇಕೆ?, ಎಂಬ ಅನುಮಾನ ಮೂಡುತ್ತದೆ. ಅಷ್ಟಲ್ಲದೆ 100 ಅಡಿ ರಸ್ತೆಯ ಎರಡೂ ಬದಿಗಳಲ್ಲಿ ಅತಿ ಹೆಚ್ಚು ಗ್ಯಾರೇಜ್ ಹಾಗೂ ಆಟೋ ಪಾರ್ಟ್ಸ್ ಅಂಗಡಿಗಳಿದ್ದು ಫುಟ್ ಪಾತ್‌ಗಳನ್ನೆಲ್ಲ ಸಂಪೂರ್ಣವಾಗಿ ಆಕ್ರಮಿಸಿಕೊಂಡಿವೆ. ಒಬ್ಬರು ನಡೆದಾಡುವಷ್ಟು ಜಾಗ ಕೂಡ ಬಿಟ್ಟಿಲ್ಲ ಈಗಾಗಿ ಸಾರ್ವಜನಿಕರು ರಸ್ತೆಗಿಳಿದು ನಡೆಯಬೇಕಾದ ಅನಿವಾರ್ಯತೆಯುಂಟಾಗಿದೆ. ನೂರಾರು KSRTC ಬಸ್‌ಗಳೊಂದಿಗೆ, ಖಾಸಗಿ ವಾಹನಗಳ ಸಂಚಾರ ಹೆಚ್ಚು ಇರುತ್ತೆ ಅಷ್ಟೇ ವೇಗವಾಗಿ ಸಂಚರಿಸುತ್ತವೆ. ಅಪಘಾತ ಸಂಭವಿಸುವ ಮುನ್ನವೆ ಎಚ್ಚೆತ್ತು ಕೊಳ್ಳುವುದು ಒಳ್ಳೆಯದು. ಮಾನ್ಯ ಮಹಾನಗರ ಪಾಲಿಕೆಯ ಆಯುಕ್ತರು ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ವಾರಕ್ಕೆ ಒಮ್ಮೆಯಾದರೂ ನಗರ ಪ್ರದಕ್ಷಿಣೆ ಮಾಡಿ ಇಂತಹ ಹತ್ತು ಹಲವು ಸಮಸ್ಯೆಗಳನ್ನು ಖುದ್ದಾಗಿ ವೀಕ್ಷಿಸಿ ಕ್ರಮ ವಹಿಸಬೇಕಿದೆ. ಸದ್ಯದಲ್ಲೇ ದಸರಾ ಸಮೀಪಿಸುತ್ತಿದೆ. ಲಕ್ಷಾಂತರ ಜನ ಆಗಮಿಸುವ ಇಂತಹ ಸಂದರ್ಭದಲ್ಲಿ ತಕ್ಷಣ ಗಮನ ಹರಿಸಿ ಸೂಕ್ತ ಕ್ರಮ ವಹಿಸುವ ಅನಿವಾರ್ಯತೆ ಬಹು ಮುಖ್ಯವಾಗಿದೆ. ಸಮಸ್ಯೆ ದೊಡ್ಡದಾಗುವ ಮುನ್ನ ಎಚ್ಚೆತ್ತುಕೊಳ್ಳಬೇಕಿದೆ.

–ಎನ್.ಕುಮಾರಸ್ವಾಮಿ, ಚಾಮರಾಜ ಮೊಹಲ್ಲಾ, ಮೈಸೂರು.

ಡಿಜಿಟಲ್ ಅರೆಸ್ಟ್ ವಂಚನೆ ತಡೆಯಿರಿ

ಮಾನ್ಯರೆ,

ಇಂದಿನ ಡಿಜಿಟಲ್ ಯುಗದಲ್ಲಿ ಜನರು ಬ್ಯಾಂಕ್ ವಹಿವಾಟು, ಬಿಲ್ ಪಾವತಿ, ಖರೀದಿ ಎಲ್ಲವನ್ನೂ ಆನ್‌ಲೈನ್ ಮೂಲಕ ಮಾಡುತ್ತಿದ್ದಾರೆ. ಆದರೆ ಇದರ ಜೊತೆಗೆ ಡಿಜಿಟಲ್ ವಂಚನೆಗಳು ಹೆಚ್ಚುತ್ತಿವೆ.

ವಂಚಕರು ಪೊಲೀಸ್, ಸಿಬಿಐ ಅಧಿಕಾರಿ ಅಥವಾ ಬ್ಯಾಂಕ್ ಮ್ಯಾನೇಜರ್ ಎಂದು ನಟಿಸುತ್ತಾರೆ. ಅವರು ಕರೆ ಮಾಡಿ ನಿಮ್ಮ ಹೆಸರು ಅಕ್ರಮ ಹಣ ವರ್ಗಾವಣೆ ಪ್ರಕರಣದಲ್ಲಿ ಬಂದಿದೆ ಎಂದು ಹೆದರಿಸಿ, ತನಿಖೆಗೆ ಸಹಕರಿಸಬೇಕೆಂದು ಹೇಳುತ್ತಾರೆ. ಕೆಲವೊಮ್ಮೆ ವೀಡಿಯೋ ಕಾಲ್ ಮೂಲಕ ನ್ಯಾಯಾಧೀಶರ ಮುಂದೆ ವಿಚಾರಣೆ ನಡೆಸುತ್ತಿರುವಂತೆ ತೋರಿಸಿ ಹಣ ವರ್ಗಾಯಿಸಲು ಒತ್ತಾಯಿಸುತ್ತಾರೆ. ಹೀಗೆ ಲಕ್ಷಾಂತರ ರೂಪಾಯಿ ವಂಚಿಸುತ್ತಾರೆ.ಇತ್ತೀಚೆಗೆ ಬೆಂಗಳೂರಿನಲ್ಲಿ ಹಾಗೂ ಮಂಗಳೂರಿನಲ್ಲಿ ಇಂತಹ 'ಡಿಜಿಟಲ್ ಅರೆಸ್ಟ್' ಪ್ರಕರಣಗಳು ಬೆಳಕಿಗೆ ಬಂದಿವೆ. ಶ್ರೀಸಾಮಾನ್ಯರಿಗೆ ಭಯ ಹುಟ್ಟಿಸಿ ಹಣ ಕಸಿದುಕೊಳ್ಳುವುದು ಮುಖ್ಯ ತಂತ್ರವಾಗಿದೆ. ಆದರಿಂದ ಸರ್ಕಾರ ಸೈಬರ್ ವಂಚನೆಗೆ ಶಾಶ್ವತ ಪರಿಹಾರ ರೂಪಿಸಬೇಕು ಮತ್ತು ಹವ್ಯಾಹತವಾಗಿ ಜನಸಾಮಾನ್ಯರಿಗೆ ಅಪರಿಚಿತ ಕರೆಗಳ ಬಗ್ಗೆ, OTP, ಪಿನ್, ಬ್ಯಾಂಕ್ ಸಂದೇಹಾಸ್ಪದ ಲಿಂಕ್‌ಗಳನ್ನು ಕ್ಲಿಕ್ ಮಾಡುವುದು ಇತ್ಯಾದಿಗಳ ಬಗ್ಗೆ ಜಾಗೃತಿ ಮೂಡಿಸಬೇಕು.

–ಡಾ. ಎಚ್.ಕೆ.ವಿಜಯಕುಮಾರ್, ಮೈಸೂರು.

ಮೂಲ ಜಾನಪದ ಉಳಿಸಿಕೊಳ್ಳಬೇಕು

ಮಾನ್ಯರೆ,

ಮೈಸೂರಿನ ಕಿರುರಂಗಮಂದಿರದಲ್ಲಿ ಗೌತಮ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಸೇವಾ ಟ್ರಸ್ಟ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಆಯೋಜಿಸಿದ್ದ, ಉಚಿತ ರಂಗಭೂಮಿ ಮತ್ತು ಜಾನಪದ ಕಲಾಪ್ರಕಾರಗಳ ಉಚಿತ ತರಬೇತಿ ಶಿಬಿರದ ಸಮಾರೋಪ ಸಮಾರಂಭದಲ್ಲಿ ಪಾಲ್ಗೊಂಡು ಮಾತನಾಡಿದ ಜಾನಪದ ಜೋಗಿ, ವಿದ್ವಾಂಸ ಡಾ ಪಿ ಕೆ ರಾಜಶೇಖರ ಅವರು ಮೂಲ ಜಾನಪದ ಉಳಿಸಿಕೊಳ್ಳುವುದೇ ಸವಾಲಾಗಿದೆ ಎಂದು ಹೇಳಿರುವುದು ತುಂಬಾ ಆತಂಕದ ಸಂಗತಿ. ಈಗಲೂ ಹಳ್ಳಿಗರು ತಮ್ಮ ಚಟುವಟಿಕೆಗಳನ್ನು ಜಾನಪದ ಹಾಡುಗಳಿಂದಲೇ ಆರಂಭಿಸುತ್ತಾ ಬೆಳಗಾಗಿ ನಾನೆದ್ದು ಯಾರ್ಯಾರ ನೆನೆಯಲಿ, ಎಳ್ಳು ಜೀರಿಗೆ ಬೆಳೆಯೊಳ, ಭೂಮಿತಾಯಿ ಎದ್ದೊಂದು ಗಳಿಗೆ ನೆನೆದೇನ, ಇಂತಹ ತ್ರಿಪದಿಗಳು ಪ್ರಪಂಚದ ಯಾವ ಸಾಹಿತ್ಯದಲ್ಲೂ ನೋಡಲು ಸಿಗುವುದಿಲ್ಲ ಎಂದು ಹೇಳಿರುವುದು ತುಂಬಾ ಶ್ಲಾಘನೀಯ. ಜಾನಪದವನ್ನು ನಾಗರಿಕ ಜಗತ್ತು ಪ್ರವೇಶಿಸಿ ನಕಲಿಯನ್ನಾಗಿಸುವ ಮೊದಲು ಮೂಲ ಜಾನಪದವನ್ನು ಉಳಿಸಿಕೊಳ್ಳಬೇಕು. ವೃತ್ತಿ ಗಾಯಕರ ದಾಟಿಯಿಂದ, ಜಾನಪದ ಶೈಲಿಯು ಮೂಲ ಪದಕಟ್ಟುವಿಕೆಯನ್ನು ಕಳೆದುಕೊಂಡಿದೆ. ಯುವಕರು ಮೂಲ ಮಟ್ಟುವಿನಲ್ಲಿ ಹಾಡುವ ಸಂಸ್ಕೃತಿಯನ್ನು ಬೆಳೆಸಿಕೊಂಡು ಜಾನಪದದ ಮೂಲ ಮಟ್ಟುಗಳನ್ನು ಉಳಿಸಿಕೊಂಡು ಜಾನಪದವನ್ನು ಭವಿಷ್ಯದತ್ತ ಕೊಂಡೊಯ್ಯುವ ಕೆಲಸವಾಗಬೇಕಿದೆ ಎಂದು ಹೇಳಿರುವುದು ಮೆಚ್ಚುವಂತದ್ದು.

–ಬೆಸಗರಹಳ್ಳಿ ರವಿ ಪ್ರಸಾದ್, ಮೈಸೂರು



ಡಾ.ರಮಾ ವಿ. ಬೆಣ್ಣೂರ್
ಸಂಗೀತ ವಿಮರ್ಶಕರು
ಮೊ: 99452 82346

ನಾದಲಹರಿ

ಒಳಗಣ್ಣೆಂಬ ದಿವ್ಯಜ್ಯೋತಿ ಬಾಳು ಬೆಳಗಬಹುದು!

> ವಿದ್ಯಾರ್ಥಿದೆಸೆ ಎಂಬ ಸಮಯದಲ್ಲಿ ಓದಿನ ಕಡೆಗೆ ಮಾತ್ರ ಲಕ್ಷ್ಯ ಇಟ್ಟಲ್ಲಿ, ಗುರಿ ತಲುಪುವುದು ಅಸಾಧ್ಯ ಖಂಡಿತಾ ಅಲ್ಲ. ಆದರೆ ಅವರ ಮನಸ್ಸನ್ನು ಬೇರೆಡೆಗೆ ಸೆಳೆಯಲು ಈಗ ಇರುವ ಅಸಂಖ್ಯಾತ ಪ್ರಲೋಭನೆಯ ವಿಷಯಗಳನ್ನು, ವಸ್ತುಗಳನ್ನೂ ಮೀರಿ ಏಕಾಗ್ರತೆಯನ್ನು ಬೆಳೆಸಿಕೊಳ್ಳುವುದು, ಓದಿನಲ್ಲಿ ಆಸಕ್ತಿ ಉಳಿಸಿಕೊಳ್ಳುವುದು ನಿಜಕ್ಕೂ ಒಂದು ದೊಡ್ಡ ಸವಾಲೇ ಸರಿ.

ಮಂಡ್ಯ ಜಿಲ್ಲೆಯ ಮಳವಳ್ಳಿ ತಾಲೂಕಿಗೆ ಸೇರಿದ ಒಂದು ಚಿಕ್ಕ ಹಳ್ಳಿ ಅದು. ವ್ಯವಸಾಯವನ್ನೇ ನಂಬಿಕೊಂಡಿರುವ ದಂಪತಿಗೆ ಎರಡು ಹೆಣ್ಣು ಮಕ್ಕಳಾದುವು. ಮೂರನೆಯದೂ ಹೆಣ್ಣಾಯಿತು. ಹುಟ್ಟಿದ ಕೆಲವೇ ದಿನಗಳಲ್ಲಿ ಅದಕ್ಕೆ ದೃಷ್ಟಿ ಮಾಂದ್ಯತೆ ಇರುವುದನ್ನು ಪೋಷಕರು ಗುರುತಿಸಿದರು. ಆಗ ಅವರ ಊರಿನಲ್ಲಿಯೇ ಕ್ಯಾಂಪ್ ನಡೆಸುತ್ತಿದ್ದ ಪ್ರಖ್ಯಾತ ನೇತ್ರ ತಜ್ಞ ಡಾ.ಮೋದಿ ಅವರ ಬಳಿ ಧಾವಿಸಿದರು. ಎಳೆ ಮಗುವಿನ ಮುಚ್ಚಿದ ಕಣ್ಣ ರೆಪ್ಪೆಯನ್ನು ಬಿಡಿಸಿ ನೋಡಿದ ಅವರು ಇದಕ್ಕೆ ತಾಯ ಗರ್ಭದಲ್ಲಿ ಆಗಬೇಕಾದ ಕಣ್ಣಿನ ನರಗಳ ಬೆಳವಣಿಗೆ ಸರಿಯಾಗಿ ಆಗಿಲ್ಲದೇ ಇರುವುದರಿಂದ ಇದನ್ನು ಸರಿಪಡಿಸಲು ಸಾಧ್ಯವೇ ಇಲ್ಲ ಎಂದು ಹೇಳಿದರು. ಕಹಿ ಸತ್ಯವನ್ನು ನುಂಗಲೇಬೇಕಾದ ಪರಿಸ್ಥಿತಿಯನ್ನು ಒಪ್ಪಿಕೊಂಡ ದಂಪತಿಗಳು ಮಗುವನ್ನು ಅತ್ಯಂತ ಅಕ್ಕರೆಯಿಂದ ಜೋಪಾನವಾಗಿ ಬೆಳೆಸ ತೊಡಗಿದರು. ಅವರಿಗೆ ಆಕೆಯ ನಂತರ ಎರಡು ಗಂಡು ಮಕ್ಕಳು ಆದುವು. ಮನೆ ಮಂದಿಯ ಅಕ್ಕರೆಯ ಅಕ್ಕ–ತಂಗಿ ಆದಳು ಬಾಲೆ.

ಆ ದಂಪತಿ, ಓದಿದವರಲ್ಲದಿದ್ದರೂ ತಮ್ಮ ಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡಬೇಕೆಂಬ ಅಭಿಲಾಷೆ ಇದ್ದವರು. ತಮ್ಮ ಮೂರನೆಯ ಮಗಳನ್ನೂ ಶಾಲೆಗೆ ಸೇರಿಸಲು ಮುಂದಾದಾಗ ಶಾಲೆಯು ಅವಳನ್ನು ಸೇರಿಸಿಕೊಳ್ಳಲು ನಿರಾಕರಿಸಿದುದರಿಂದ ಅವಳನ್ನು ಮನೆಯಲ್ಲಿಯೇ ಇರಿಸಿಕೊಂಡರು. ಅಂಥ ಮಕ್ಕಳ ಶಾಲೆಯು ಅವರಿದ್ದ ಹಳ್ಳಿಗೆ ಸಮೀಪವಾಗಿರಲಿಲ್ಲ. ಅಕ್ಕಂದಿರು ಶಾಲೆಗೆ ಹೋಗುವುದು, ಅವರು ಓದುವುದು ಇವೆಲ್ಲವನ್ನೂ ಗಮನಿಸುತ್ತಿದ್ದ ಬಾಲೆಗೆ ತಾನೂ ಓದಬೇಕು ಎಂಬ ಅದಮ್ಯ ಆಸೆ ಮನದಲ್ಲಿ ಮೊಳೆಯತೊಡಗಿತು.

ಅಕ್ಕಂದಿರು, ತಮ್ಮಂದಿರು ಶಾಲೆಗೆ ಹೋದಾಗ, ಅಪ್ಪ ಅಮ್ಮನೂ ಗದ್ದೆ ಕೆಲಸಕ್ಕೆ ಹೋಗುತ್ತಿದ್ದರು. ಮನೆಯಲ್ಲಿ ಇವಳೊಬ್ಬಳೇ. ಆಗ ಇವಳ ಏಕೈಕ ಸಂಗಾತಿ ಎಂದರೆ ರೇಡಿಯೋ. ಅದರಲ್ಲಿ ಪ್ರಸಾರವಾಗುತ್ತಿದ್ದ ಪ್ರತಿಯೊಂದು ಕಾರ್ಯಕ್ರಮವನ್ನೂ ಆಸಕ್ತಿಯಿಂದ ಕೇಳಿ, ವಿಷಯ ಗ್ರಹಿಸುವ ಅಭ್ಯಾಸ ಅವಳಿಗೆ ಆಯಿತು. ತಮ್ಮ ಪಠ್ಯಪುಸ್ತಕಗಳನ್ನು ತಂಗಿಗೂ ಓದಿ ಹೇಳುವ ಅಭ್ಯಾಸ ಅಕ್ಕಂದಿರಿಗಾಯಿತು. ಅವಳ ಓದುವ ಹಂಬಲಕ್ಕೆ ಇದು ನೀರೆರೆಯಿತು.

ಒಮ್ಮೆ ರೇಡಿಯೋದಲ್ಲಿ ಯಾವುದೋ ಪ್ರಶ್ನೋತ್ತರ ಕಾರ್ಯಕ್ರಮವನ್ನು ಆಲಿಸುತ್ತಿದ್ದಾಗ ಒಬ್ಬ ಕೇಳುಗರು ಕೇಳಿದ ಪ್ರಶ್ನೆ ಇವಳಿಗೆ ದಾರಿದೀಪದಂತಾಯಿತು. ಶಾಲೆಗೆ ಹೋಗದೆ, ಮನೆಯಲ್ಲೇ ಕಲಿತು ಪರೀಕ್ಷೆ ಬರೆಯಬಹುದೆಂಬ ಮಾಹಿತಿಯಿಂದ ಹೊಸ ಲೋಕದ ಕದ ತೆರೆದಂತಾಯಿತು ಅವಳಿಗೆ. ಕೂಡಲೇ ಆಕೆ ಆ ನಿಟ್ಟಿನಲ್ಲಿ ಮುಂದುವರೆದು, ಹತ್ತನೆಯ ತರಗತಿಗೆ ನೋಂದಣಿ ಮಾಡಿಸಿಯೇಬಿಟ್ಟಳು.

ಆ ಸಮಯದಲ್ಲಿ ಅವಳ ಸಹಾಯಕ್ಕೆ ಬಂದುದು ಮಿತ್ರಜ್ಯೋತಿ ಎಂಬ ಸಂಸ್ಥೆ. ಈ ಸಂಸ್ಥೆಯವರು ಕೇವಲ ಹದಿನೈದು ರೂಪಾಯಿಗೆ ಅಂಥ ವಿದ್ಯಾರ್ಥಿಗಳಿಗೆ ಬೇಕಾದ ಪಠ್ಯದ ಕ್ಯಾಸೆಟನ್ನು ಕೊಡುತ್ತಿದ್ದರು. ಅದನ್ನು ಕೇಳಿ, ಇವರು ಪಾಠಗಳನ್ನು ಅರ್ಥೈಸಿಕೊಳ್ಳಬಹುದಿತ್ತು. ಜೊತೆಗೆ ಅಕ್ಕಂದಿರ ಮತ್ತು ತಮ್ಮಂದಿರ ಸಹಾಯಹಸ್ತ ಸದಾ ಇರುತ್ತಿತ್ತು. ಇವಳು ಹತ್ತನೆಯ ತರಗತಿ ಪಾಸಾಗುತ್ತಾಳಾ, ಖಂಡಿತಾ ಇಲ್ಲ ಎಂದು ಸಂಬಂಧಿಗಳು ಭವಿಷ್ಯವಾಣಿ ನುಡಿದಾಗ ಆಕೆಯ ಕೆಚ್ಚು ಇನ್ನೂ ಹೆಚ್ಚಾಯಿತು. ಪರೀಕ್ಷೆಯ ದಿನ ಒಬ್ಬ ಒಂಬತ್ತನೆಯ ತರಗತಿಯ ಹುಡುಗನನ್ನು ಉತ್ತರ ಬರೆಯಲು ಕರೆದುಕೊಂಡು ಅವಳು ಪರೀಕ್ಷೆಗೆ ಹೋಗಿಯೇಬಿಟ್ಟಳು.

ಮೊದಲ ದರ್ಜೆಯಲ್ಲಿ ಪಾಸಾಗಿದ್ದ ಅವಳಿಗೆ ಇನ್ನು ತನ್ನ ಗುರಿ ಏನೆಂಬುದು ಸ್ಪಷ್ಟವಾಗಿತ್ತು. ಮೊದಮೊದಲು ಅವಳನ್ನು ಹೊರಗೆ ಕಳುಹಿಸಲು ಹೆದರುತ್ತಿದ್ದ ಹೆತ್ತವರಿಗೆ ಈಗ ಸ್ವಲ್ಪ ಧೈರ್ಯ ಬರಲಾರಂಭಿಸಿತ್ತು. ಪಿಯುಸಿ ಓದಲು ಮಂಡ್ಯದ ಕಾಲೇಜಿಗೆ ಸೇರಿದಾಗ ಹಾಸ್ಟೆಲಿನಲ್ಲಿದ್ದ ಹಲವು ಗೆಳತಿಯರು ಇವಳ ಅಗತ್ಯಗಳಿಗೆ ನೆರವಾದರು. ನಾವು ಎಲ್ಲರನ್ನೂ ನಮ್ಮವರು ಎಂದು ಭಾವಿಸಿದರೆ, ಅವರೂ ನಮಗೆ ಒಳ್ಳೆಯದನ್ನೇ ಮಾಡುತ್ತಾರೆ ಎಂಬ ಅವಳ ನಂಬಿಕೆ ನಿಜವಾಗಿತ್ತು. ಮೈಸೂರಿನ ಮಹಾರಾಣಿ ಕಾಲೇಜಿನಲ್ಲಿ ತನ್ನ ಓದನ್ನು ಮುಂದುವರೆಸಿದ ಅವಳು ಕನ್ನಡದಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದಳು.

ಬಾಲ್ಯದಲ್ಲಿ ಅವಳನ್ನು, ತಮ್ಮ ಹಳ್ಳಿಯಲ್ಲಿಯೇ ಇದ್ದ ಒಬ್ಬ ಸಂಗೀತ ಗುರುಗಳ ಬಳಿ ಹಾಡುಗಾರಿಕೆ ಕಲಿಯಲು ಸೇರಿಸಿದ್ದರು. ಆಗಲೇ ಅವಳು ಜೂನಿಯರ್ ಪರೀಕ್ಷೆಯನ್ನೂ ಮಾಡಿಕೊಂಡಿದ್ದಳು. ಈಗ ಮಳವಳ್ಳಿಯಲ್ಲಿಯೇ ಒಂದು ಶಾಲೆಯಲ್ಲಿ ಸಂಗೀತ ಶಿಕ್ಷಕಿಯಾಗಿ ಕೆಲಸ ಮಾಡತೊಡಗಿದಳು. ಅವಳ ಸುಪ್ತ ಮನಸಿನಲ್ಲಿ ಓದನ್ನು ಮುಂದುವರೆಸುವ ಹಂಬಲ ಇದ್ದೇ ಇತ್ತು. ಮುಕ್ತ ವಿಶ್ವವಿದ್ಯಾನಿಲಯದಿಂದ ಮತ್ತೊಂದು ಸ್ನಾತಕೋತ್ತರ ಪದವಿಯನ್ನು ಇತಿಹಾಸದಲ್ಲಿ ಪಡೆದಳು.

ಅವಳಿಗೆ ತಾನು ಅಸಿಸ್ಟಂಟ್ ಪ್ರೊಫೆಸರ್ ಆಗಬೇಕೆಂಬ ಬಯಕೆ. ಅದಕ್ಕಾಗಿ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತಯಾರಿ ಮಾಡಲು ಆರಂಭಿಸಿದಳು. ಓದಿಗಾಗಿ ನೌಕರಿ ಬಿಟ್ಟಳು. ಜೊತೆ ಜೊತೆಗೆ 2014ರಲ್ಲಿ ಪಿಎಚ್.ಡಿ ಅಧ್ಯಯನವನ್ನೂ ಆರಂಭಿಸಿದಳು. ಸುಕನ್ಯ ಮಾರುತಿ, ಎಚ್.ಪುಷ್ಪ, ಸವಿತಾ ನಾಗಭೂಷಣ ಇವರ ಕಾವ್ಯಗಳಲ್ಲಿ ಬಂಡಾಯ ಮತ್ತು ಮಹಿಳಾ ಧೋರಣೆ ಎಂಬ ಆಕೆಯ ಮಹಾಪ್ರಬಂಧಕ್ಕೆ 2019ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದಿಂದ ಪಿ.ಎಚ್ ಡಿ ಪ್ರದಾನವಾಯಿತು. ಜೊತೆಗೆ ಕೆ.ಎ.ಎಸ್. ಪರೀಕ್ಷೆಯನ್ನೂ ಬರೆದ ಅವಳು ಇದೀಗ ಮೈಸೂರು ಸಂಸ್ಥಾನದ ರಂಗಭೂಮಿ–ಒಂದು ಐತಿಹಾಸಿಕ ಅಧ್ಯಯನ ಎಂಬ ವಿಷಯದಲ್ಲಿ ಮತ್ತೊಂದು ಪಿಎಚ್.ಡಿ ಪಡೆಯಲು ತಯಾರಿ ಮಾಡಿಕೊಳ್ಳುತ್ತಿದ್ದಾಳೆ. ಜೊತೆಗೆ ಸ್ಪರ್ಧಾತ್ಮಕ ಪರೀಕ್ಷೆಗೂ ತಯಾರಿ ನಡೆಸಿದ್ದಾಳೆ. ಒಂದಲ್ಲ ಒಂದು ದಿನ ತಾನು ಅಸಿಸ್ಟೆಂಟ್ ಪ್ರೊಫೆಸರ್ ಆಗಿಯೇ ಆಗುತ್ತೇನೆ ಎಂಬುದು ಆಕೆಯ ದೃಢ ನಂಬಿಕೆ.

ತನ್ನ ತಂದೆ ತಾಯಿ, ಅಕ್ಕಂದಿರು ಮತ್ತು ತಮ್ಮಂದಿರ ನೆರವನ್ನು ಅವಳು ಕೃತಜ್ಞತೆಯಿಂದ ನೆನೆಯುತ್ತಾಳೆ. ಅಕ್ಕಂದಿರಿಗೆ ಮದುವೆ ಆಗಿದೆ. ಒಬ್ಬ ತಮ್ಮನದೂ ವಿವಾಹವಾಗಿ ಅವರೆಲ್ಲಾ ಸರಕಾರಿ ನೌಕರಿಯಲ್ಲಿ ಇದ್ದಾರೆ. ಹೆತ್ತವರಿಗೆ ಸಹಜವಾಗಿಯೇ ಇವಳ ವಿವಾಹದ ಬಗ್ಗೆ ಚಿಂತೆ ಇದ್ದೇ ಇದೆ. ಆದರೆ ಇವಳ ದೌರ್ಬಲ್ಯದ ದುರುಪಯೋಗ ಪಡೆವವರನ್ನು ಖಡಾಖಂಡಿತವಾಗಿ ನಿರಾಕರಿಸಿದ್ದಾಳೆ. ಅವರು ಅವಳ ದೌರ್ಬಲ್ಯ ಎಂದು ಭಾವಿಸುವ ವಸ್ತುವೇ ಆಕೆಯ ಶಕ್ತಿಯ ಸೆಲೆ ಎಂಬುದನ್ನು ಎಷ್ಟು ಮಂದಿ ಅರಿತಾರು. ತನ್ನ ದೈಹಿಕ ನ್ಯೂನತೆಯ ಬಗ್ಗೆ ಆಕೆಗೆ ಕಿಂಚಿತ್ತೂ ಚಿಂತೆಯಾಗಲೀ ಕಳವಳವಾಗಲೀ ಇಲ್ಲ. ಅವಳು ಒಬ್ಬ ಧೈರ್ಯವಂತ ಹೆಣ್ಣು. ಕೀಳರಿಮೆ ಎಂಬುದು ಅವಳ ಬಳಿಯೂ ಸುಳಿಯುವುದಿಲ್ಲ. ಅವಳನ್ನು ಅರ್ಥ ಮಾಡಿಕೊಂಡು, ಅವಳಿಗೆ ಸದಾ ಸಹಾಯ ಹಸ್ತ ಚಾಚಲು ತಯಾರಾಗಿರುವ ಗೆಳತಿಯರ ದೊಡ್ಡ ಬಳಗವೇ ಆಕೆಯ ಬೆಂಬಲಕ್ಕಿದೆ. ಚೈತ್ರಾ ಅವಳ ಆತ್ಮೀಯ ಗೆಳತಿಯರಲ್ಲಿ ಒಬ್ಬಳು. ಬಡ ಕುಟುಂದಿಂದ ಬಂದ ಅವಳೂ ಕಷ್ಟಪಟ್ಟು ಓದಿರುವ ಹುಡುಗಿ. ಅವಳೂ ಸಹ ಸ್ಪರ್ಧಾತ್ಮಕ ಪರೀಕ್ಷೆಗೆ ತಯಾರಿ ನಡೆಸುತ್ತಿದ್ದಾಳೆ. ಇಂತಹ ಹೆಣ್ಣು ಮಕ್ಕಳು ನಮ್ಮ ಯುವಕ–ಯುವತಿಯರಿಗೆ ದೊಡ್ಡ ಸ್ಫೂರ್ತಿ ಆಗುತ್ತಾರೆ.

ಎರಡೂ ಕಣ್ಣುಗಳಿದ್ದು, ಮನೆಯಲ್ಲಿ ಎಲ್ಲಾ ಅನುಕೂಲಗಳಿದ್ದು, ಪೋಷಕರ ನೆರವೂ ಇರುವಾಗ ಆಸಕ್ತಿಯಿಂದ ಓದುವವರು ಅಥವಾ ದೇವರು ಕೊಟ್ಟಿರುವ ಅಂತಹ ಅವಕಾಶವನ್ನು ಉಪಯೋಗಿಸಿಕೊಳ್ಳುವವರು ಎಷ್ಟು ಮಂದಿ? ವಿದ್ಯಾರ್ಥಿದೆಸೆ ಎಂಬ ಸಮಯದಲ್ಲಿ ಓದಿನ ಕಡೆಗೆ ಮಾತ್ರ ಲಕ್ಷ್ಯ ಇಟ್ಟಲ್ಲಿ, ಗುರಿ ತಲುಪುವುದು ಅಸಾಧ್ಯ ಖಂಡಿತಾ ಅಲ್ಲ. ಆದರೆ ಅವರ ಮನಸ್ಸನ್ನು ಬೇರೆಡೆಗೆ ಸೆಳೆಯಲು ಈಗ ಇರುವ ಅಸಂಖ್ಯಾತ ಪ್ರಲೋಭನೆಯ ವಿಷಯಗಳನ್ನು, ವಸ್ತುಗಳನ್ನೂ ಮೀರಿ ಏಕಾಗ್ರತೆಯನ್ನು ಬೆಳೆಸಿಕೊಳ್ಳುವುದು, ಓದಿನಲ್ಲಿ ಆಸಕ್ತಿ ಉಳಿಸಿಕೊಳ್ಳುವುದು ನಿಜಕ್ಕೂ ಒಂದು ದೊಡ್ಡ ಸವಾಲೇ ಸರಿ.

ಬೆಂಗಳೂರಲ್ಲಿ ಕಂಡ ಕಂಡಲ್ಲಿ ಕಸ ಎಸೆದರೆ 2000 ದಂಡ!

ಬೆಂಗಳೂರು, ಸೆ.13– ಗ್ರೇಟರ್ ಬೆಂಗಳೂರು ಪ್ರಾಧಿಕಾರ(GBA) ನಗರದಲ್ಲಿ ಕಂಡ ಕಂಡಲ್ಲಿ ಕಸ ಎಸೆಯುವವರಿಗೆ ಭಾರಿ ಪ್ರಮಾಣದ ದಂಡ ವಿಧಿಸಲು ನಿರ್ಧರಿಸಿದ್ದು, ಸಾರ್ವಜನಿಕರು ರಸ್ತೆಬದಿ ಕಸ ಸುರಿಯುವ ಮುನ್ನ ಮತ್ತು ಏಕ–ಬಳಕೆ ಪ್ಲಾಸ್ಟಿಕ್ ನಿಷೇಧವನ್ನು ಉಲ್ಲಂಘಿಸುವ ಮೊದಲು ಒಮ್ಮೆ ಯೋಚಿಸಿ.

ಬೆಂಗಳೂರು ಘನತ್ಯಾಜ್ಯ ನಿರ್ವಹಣಾ ಲಿಮಿಟೆಡ್(BSWML) ಪದೇಪದೆ ಕಂಡ ಕಂಡಲ್ಲಿ ಕಸ ಎಸೆಯುವ ಪುನರಾವರ್ತಿತ ಅಪರಾಧಿಗಳಿಗೆ 2,000 ರೂ. ದಂಡ ವಿಧಿಸಲು ತೀರ್ಮಾನಿಸಿದೆ.

ಇನ್ನೂ ಏಕ–ಬಳಕೆಯ ಪ್ಲಾಸ್ಟಿಕ್ ವಿರುದ್ಧದ ಅಭಿಯಾನದ ಸಮಯದಲ್ಲಿ BSWML ಈಗಾಗಲೇ ತನ್ನ ಸಿಬ್ಬಂದಿಗೆ ಕನಿಷ್ಠ 2,000 ರೂ. ದಂಡ ವಿಧಿಸಲು ಅಧಿಕಾರ ನೀಡಿದೆ. ಮನೆ ಮುಂದೆ ಕಸದ ವಾಹನ ಬಂದರೂ ಕಸ ಹಾಕದೆ ರಸ್ತೆಬದಿಗಳಲ್ಲಿ ಎಲ್ಲೆಂದರಲ್ಲಿ ಕಸ ಎಸೆಯುವವರಿಗೆ ಬಿಸಿ ಮುಟ್ಟಿಸಬೇಕು ಎಂಬ ಉದ್ದೇಶದಿಂದ ಇಂತಹ ಕಠಿಣ ತೀರ್ಮಾನ ಕೈಗೊಳ್ಳಲು ತೀರ್ಮಾನಿಸಲಾಗಿದೆ ಎಂದು BSWML ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಕರೀಗೌಡ ತಿಳಿಸಿದ್ದಾರೆ.



ಪತ್ರಿಕಾಗೋಷ್ಠಿ ಉದ್ದೇಶಿಸಿ ಮಾತನಾಡಿದ ಕರೀಗೌಡ, ಎಲ್ಲೆಂದರಲ್ಲಿ ಕಸ ಎಸೆಯುವವರಿಗೆ ಮೊದಲ ಬಾರಿಗೆ 500 ರೂ. ದಂಡ ವಿಧಿಸಲಾಗುವುದು ಮತ್ತೆ ಅವರು ಇಂತಹದ್ದೇ ಧೋರಣೆ ಮುಂದುವರೆಸಿದರೆ 2000 ರೂ.ಗಳ ದಂಡ ವಿಧಿಸಲಾಗುವುದು ಎಂದು ಅವರು ಎಚ್ಚರಿಸಿದ್ದಾರೆ.

ನಗರದಲ್ಲಿ ಪ್ಲಾಸ್ಟಿಕ್ ಬಳಕೆಯನ್ನು ತಡೆಯಲು ಬಿಎಸ್‌ಡಬ್ಲ್ಯುಎಂಎಲ್‌ನ ಸಹಾಯಕ ಪ್ರಧಾನ ವ್ಯವಸ್ಥಾಪಕರ ನೇತೃತ್ವದಲ್ಲಿ ನಾವು 27 ವಿಶೇಷ ಜಾರಿ ತಂಡಗಳನ್ನು ರಚಿಸಿದ್ದೇವೆ ಮತ್ತು ಪ್ರತೀ ವಾರ ಐದು ವಾರ್ಡ್‌ಗಳಲ್ಲಿ ತಪಾಸಣೆ ನಡೆಸಲು ಸೂಚನೆ ನೀಡಿದ್ದೇವೆ ಎಂದು ಹೇಳಿದರು. ಕೇಂದ್ರ ಕಚೇರಿಯಿಂದ ಕಾರ್ಯನಿರ್ವಹಿಸುವ ಈ ತಂಡಗಳು ಸೆಪ್ಟೆಂಬರ್ 8 ರಿಂದ ವಾರದಲ್ಲಿ ಐದು ದಿನ ಪ್ಲಾಸ್ಟಿಕ್ ತಯಾರಕರು ಮತ್ತು ಸಗಟು ವ್ಯಾಪಾರಿಗಳು ಸೇರಿದಂತೆ ಹಲವು ಸ್ಥಳಗಳಲ್ಲಿ ದಾಳಿ ನಡೆಸುತ್ತಿವೆ ಎಂದರು.

ಹೆಚ್ಚುವರಿಯಾಗಿ, ವಾರ್ಡ್ ಮಟ್ಟದಲ್ಲಿ ವಾರ್ಡ್ ಮಾರ್ಷಲ್‌ಗಳು ಮತ್ತು ಕಿರಿಯ ಆರೋಗ್ಯ ನಿರೀಕ್ಷಕರು ಪ್ರತಿದಿನ ಪ್ಲಾಸ್ಟಿಕ್ ದಾಳಿ ನಡೆಸಿ ಪ್ರತಿ ಪ್ರಕರಣಕ್ಕೂ ಕನಿಷ್ಠ 2,000 ರೂ. ದಂಡ ವಿಧಿಸಲು ನಿರ್ದೇಶಿಸಲಾಗಿದೆ ಎಂದು ಹೇಳಿದರು.

ಎತ್ತರದ ಕಟ್ಟಡಗಳಿಗೆ ನಿರಾಕ್ಷೇಪಣಾ ಪತ್ರ ವಿತರಣೆಗೆ ಮತ್ತೆ ಪ್ರಾದೇಶಿಕ ಅಗ್ನಿಶಾಮಕ ಅಧಿಕಾರಿಗೆ ಅಧಿಕಾರ

ಮೈಸೂರು, ಸೆ.13(ಎಸ್‌ಪಿಎನ್)– ಎತ್ತರದ ಕಟ್ಟಡ ನಿರ್ಮಾಣ ಮಾಡಲು ಉದ್ದೇಶಿಸುವ ಯಾವುದೇ ವ್ಯಕ್ತಿಯು ಕರ್ನಾಟಕ ರಾಜ್ಯ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆಯಿಂದ 'ನಿರಾಕ್ಷೇಪಣಾ ಪತ್ರ'ಗಳನ್ನು ವಿತರಿಸುವ ಅಧಿಕಾರವನ್ನು ಪ್ರಾದೇಶಿಕ ಅಗ್ನಿಶಾಮಕ ಅಧಿಕಾರಿಗೆ ಮರುಸ್ಥಾಪಿಸಿ ಒಳಾಡಳಿತ ಇಲಾಖೆ (ಪೊಲೀಸ್ ಸಹಾಯಕ ಸೇವೆಗಳು, ಸಮನ್ವಯ) ಉಪ ಕಾರ್ಯದರ್ಶಿ ಜಿ.ಮಂಜುಳಾ ಆದೇಶಿಸಿದ್ದಾರೆ.

ಕರ್ನಾಟಕ ರಾಜ್ಯ ಅಗ್ನಿಶಾಮಕ ದಳ ಅಧಿನಿಯಮ, 1964ರ ಕಲಂ 13ಕ್ಕೆ ತಿದ್ದುಪಡಿ ತಂದಿದ್ದು, ಎತ್ತರದ ಕಟ್ಟಡವನ್ನು ನಿರ್ಮಿಸಲು ಉದ್ದೇಶಿಸುವ ಯಾವುದೇ ವ್ಯಕ್ತಿಯು ರಾಜ್ಯ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆಯಿಂದ ನಿರಾಕ್ಷೇಪಣಾ ಪತ್ರ ಪಡೆಯುವುದು ಕಡ್ಡಾಯ. ಎತ್ತರದ ಕಟ್ಟಡ ಎಂದರೆ ರಾಷ್ಟ್ರೀಯ ಕಟ್ಟಡ ಸಂಹಿತೆ–2016ರ ಅಧಿನಿಯಮದಂತೆ '21 ಮೀಟರ್ ಅಥವಾ ಅದಕ್ಕಿಂತ ಹೆಚ್ಚಿನ ಎತ್ತರ ಕಟ್ಟಡ' ಎಂದು ವ್ಯಾಖ್ಯಾನಿಸಿದೆ. ರಾಜ್ಯ ಅಗ್ನಿ ಶಾಮಕ ಮತ್ತು ತುರ್ತು ಸೇವೆಗಳ ಇಲಾಖೆಯು 20 ಮೀಟರ್‌ಗಿಂತ ಕಡಿಮೆ ಎತ್ತರದ ವಸತಿ/ಶೈಕ್ಷಣಿಕ/ವಾಣಿಜ್ಯ/ಕೈಗಾರಿಕೆ/ ಆಸ್ಪತ್ರೆ ಮತ್ತು ಗೋದಾಮು ಕಟ್ಟಡಗಳಿಗೆ (15 ಮೀಟರ್‌ಗಿಂತ ಕಡಿಮೆ ಎತ್ತರದ ಶೈಕ್ಷಣಿಕ ಕಟ್ಟಡಗಳನ್ನು ಹೊರತುಪಡಿಸಿ) ಸಾರ್ವಜನಿಕರಿಗೆ ಅನಕೂಲವಾಗುವ ರೀತಿಯಲ್ಲಿ ಸಲಹಾ/ ಸಮಾಪನ ಪತ್ರಕ್ಕೆ ತಪಾಸಣೆ ನಡೆಸಿ ಆ ವರದಿಯನ್ನು ನಿಗದಿತ ನಮೂನೆಯಲ್ಲಿ ಸಂಬಂಧಪಟ್ಟ ಪ್ರಾದೇಶಿಕ ಅಗ್ನಿಶಾಮಕ ಅಧಿಕಾರಿಗೆ ಸಲ್ಲಿಸುವ ಅಧಿಕಾರ ಪ್ರತ್ಯಾಯೋಜಿಸಲಾಗಿದೆ. ಪ್ರಾದೇಶಿಕ ಅಗ್ನಿಶಾಮಕ ಅಧಿಕಾರಿಯು ತಮ್ಮ ಕೆಳ ಹಂತದ ಅಧಿಕಾರಿಗಳಿಂದ ಸಲ್ಲಿಕೆಯಾಗುವ ವರದಿ ಪರಿಶೀಲಿಸಿ ಕಟ್ಟಡ ಮಾಲೀಕರಿಂದ ನಿಗದಿತ ಶುಲ್ಕವನ್ನು ಭರಿಸಿಕೊಂಡು ಸಲಹಾ/ ಸಮಾಪನ ಪತ್ರ ವಿತರಿಸುವ ಅಧಿಕಾರ ನೀಡಿ ಆದೇಶಿಸಿದ್ದಾರೆ.

ಸಂಘರ್ಷಪೀಡಿತ ಮಣಿಪುರಕ್ಕೆ ಪ್ರಧಾನಿ ಮೋದಿ ಭೇಟಿ; 'ಶಾಂತಿ ಮಾರ್ಗ' ಆರಿಸಿಕೊಳ್ಳುವಂತೆ ಮನವಿ

ಇಂಫಾಲ್, ಸೆ.13–2023ರಲ್ಲಿ ಜನಾಂಗೀಯ ಹಿಂಸಾಚಾರ ಭುಗಿಲೆದ್ದ ನಂತರ ಪ್ರಧಾನಿ ನರೇಂದ್ರ ಮೋದಿ ಶನಿವಾರ ಮೊದಲ ಬಾರಿಗೆ ಮಣಿಪುರಕ್ಕೆ ಭೇಟಿ ನೀಡಿದ್ದು, ಸಂಘರ್ಷದಲ್ಲಿ ಭಾಗಿಯಾಗಿರುವ ಎಲ್ಲಾ ಸಂಘಟನೆಗಳು 'ಶಾಂತಿಯ ಮಾರ್ಗ ಆರಿಸಿಕೊಳ್ಳಬೇಕು' ಎಂದು ಮನವಿ ಮಾಡಿದ್ದಾರೆ.

ಎರಡು ವರ್ಷಗಳಿಗೂ ಹೆಚ್ಚು ಕಾಲ ಹಿಂಸಾಚಾರದಿಂದ ತತ್ತರಿಸಿದ ರಾಜ್ಯಕ್ಕೆ ಭೇಟಿ ನೀಡದ ಪ್ರಧಾನಿ ಮೋದಿ ವಿರುದ್ಧ ಪ್ರತಿಪಕ್ಷಗಳು ತೀವ್ರ ವಾಗ್ದಾಳಿ ನಡೆಸಿದ್ದವು. ಕೊನೆಗೂ ಎರಡು ವರ್ಷಗಳ ನಂತರ ಇಂದು ಮಣಿಪುರಕ್ಕೆ ಭೇಟಿ ನೀಡಿದ ಪ್ರಧಾನಿ, ಈ ಪ್ರದೇಶದಲ್ಲಿ ಶಾಂತಿ ಪುನಃಸ್ಥಾಪಿಸಲು ತಮ್ಮ ಸರ್ಕಾರ 'ಸಾಧ್ಯವಿರುವ ಎಲ್ಲ ಪ್ರಯತ್ನಗಳನ್ನು' ಮಾಡುತ್ತದೆ ಎಂದು ಭರವಸೆ ನೀಡಿದರು.

ಕುಕಿ ಸಮುದಾಯದ ಭದ್ರಕೋಟೆ ಚುರಚಂದ್‌ಪುರದಲ್ಲಿ ರ‍್ಯಾಲಿಯನ್ನು ಉದ್ದೇಶಿಸಿ ಮಾತನಾಡಿದ ಮೋದಿ, 'ಶಾಂತಿಯ ಹಾದಿಯಲ್ಲಿ ಮುಂದುವರಿಯಬೇಕು ಎಂದು ನಾನು ಎಲ್ಲಾ ಸಂಘಟನೆಗಳಿಗೆ ಮನವಿ ಮಾಡುತ್ತೇನೆ. ಇಂದು, ನಾನು ನಿಮ್ಮೊಂದಿಗಿದ್ದೇನೆ, ಭಾರತ ಸರ್ಕಾರ ಮಣಿಪುರದ ಜನರೊಂದಿಗೆ ಇದೆ ಎಂದು ನಾನು ನಿಮಗೆ ಭರವಸೆ ನೀಡುತ್ತೇನೆ' ಎಂದರು





ಮಣಿಪುರದ ಚುರಚಂದ್‌ಪುರದಲ್ಲಿ ನಡೆದ ರ‍್ಯಾಲಿಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರನ್ನು ಸನ್ಮಾನಿಸಿ, ಸ್ವಾಗತಿಸಲಾಯಿತು.

ಇತ್ತೀಚೆಗೆ ಬೆಟ್ಟಗಳು ಮತ್ತು ಕಣಿವೆಗಳಲ್ಲಿ, ವಿವಿಧ ಗುಂಪುಗಳೊಂದಿಗೆ ಒಪ್ಪಂದ ಮಾತುಕತೆಗಳು ನಡೆದಿವೆ ಎಂದು ನಾವು ತೃಪ್ತರಾಗಿದ್ದೇವೆ. ಇವು ಭಾರತ ಸರ್ಕಾರದ ಪ್ರಯತ್ನದ ಭಾಗವಾಗಿದ್ದು, ಸಂವಾದ, ಗೌರವ ಮತ್ತು ಪರಸ್ಪರ ತಿಳುವಳಿಕೆಗೆ ಪ್ರಾಮುಖ್ಯತೆ ನೀಡುತ್ತಾ ಶಾಂತಿಯನ್ನು ಸ್ಥಾಪಿಸುವ ಕೆಲಸ ಮಾಡುತ್ತೇವೆ ಎಂದರು.

ಮಣಿಪುರದಲ್ಲಿ ಜೀವನವನ್ನು ಮರಳಿ ಹಳಿಗೆ ತರಲು ಕೇಂದ್ರ ಸರ್ಕಾರ ಸಾಧ್ಯವಿರುವ ಎಲ್ಲ ಪ್ರಯತ್ನಗಳನ್ನು ಮಾಡುತ್ತಿದೆ. ಮನೆಗಳನ್ನು ಕಳೆದುಕೊಂಡ ಕುಟುಂಬಗಳಿಗೆ, ನಮ್ಮ ಸರ್ಕಾರವು 7,000 ಹೊಸ ಮನೆಗಳನ್ನು ನಿರ್ಮಿಸಲು ಸಹಾಯ ಮಾಡುತ್ತಿದೆ ಎಂದು ಹೇಳಿದರು.

ಮಣಿಪುರದ ಎಲ್ಲಾ ಜನಾಂಗೀಯ ಸಂಘಟನೆಗಳು ಪರಸ್ಪರ ದ್ವೇಷ ಭಾವನೆ ತೊರೆದು, ರಾಜ್ಯದ ಸರ್ವಾಂಗೀಣ ಅಭಿವೃದ್ಧಿಗಾಗಿ ಒಟ್ಟಾಗಬೇಕು. ಪರಸ್ಪರ ಗೌರವ ಮತ್ತು ನಂಬಿಕೆಯ ಆಧಾರದ ಮೇಲೆ ಹೊಸ ಭವಿಷ್ಯ ಕಟ್ಟುವಲ್ಲಿ ಎಲ್ಲರೂ ಶ್ರಮಿಸಬೇಕು ಎಂದು ಪಧಾನಿ ಮೋದಿ ಕರೆ ನೀಡಿದರು.

ಸಂತ್ರಸ್ತರ ಭೇಟಿಯಾಗಿ ಧೈರ್ಯ ತುಂಬಿದ ಮೋದಿ: ಮಣಿಪುರದಲ್ಲಿ ಮೇ 2023ರಿಂದ, ಜನಾಂಗೀಯ ಹಿಂಸಾಚಾರ 260ಕ್ಕೂ ಹೆಚ್ಚು ಜನರನ್ನು ಬಲಿ ತೆಗೆದುಕೊಂಡಿದೆ. ಈ ಹಿನ್ನೆಲೆಯಲ್ಲಿ ಇಂದು ಚುರಚಂದ್‌ಪುರದ ಶಾಂತಿ ಮೈದಾನದಲ್ಲಿ ತಮ್ಮ ನಿಗದಿತ ಭಾಷಣಕ್ಕೂ ಮುನ್ನ, ಪ್ರಧಾನಿ ಮೋದಿ ಸಂತ್ರಸ್ತರ ಮಕ್ಕಳೊಂದಿಗೆ ಸಂವಾದ ನಡೆಸಿದರು. ಈ ವೇಳೆ ಮಕ್ಕಳಿಂದ ಹೂಗುಚ್ಛ ಮತ್ತು ವರ್ಣಚಿತ್ರವನ್ನು ಸ್ವೀಕರಿಸಿದರು.

ಮಕ್ಕಳಿಗೆ ಧೈರ್ಯ ತುಂಬಿದ ಪ್ರಧಾನಿ ಮೋದಿ, ಮಣಿಪುರವನ್ನು ಧೈರ್ಯ ಮತ್ತು ದೃಢಸಂಕಲ್ಪದ ಭೂಮಿ ಎಂದು ಕರೆದರು. ಈಶಾನ್ಯ ರಾಜ್ಯದ ಚೈತನ್ಯವು ಭಾರತದ ಮಹಾನ್ ಶಕ್ತಿಯನ್ನು ಪ್ರತಿಬಿಂಬಿಸುತ್ತದೆ ಎಂದು ಹೇಳಿದರು.

ನಿಯಮಿತ ಎಸ್‌ಐಆರ್: ಸುಪ್ರೀಂಕೋರ್ಟ್‌ಗೆ ಪ್ರಮಾಣ ಪತ್ರ ಸಲ್ಲಿಸಿದ ಚು. ಆಯೋಗ

ನವದೆಹಲಿ: ದೇಶದಾದ್ಯಂತ ನಿಯಮಿತ ಅಂತರದಲ್ಲಿ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ನಡೆಸುವುದಕ್ಕೆ ಸಂಬಂಧಿಸಿದಂತೆ ನೀಡುವ ಯಾವುದೇ ನಿರ್ದೇಶನವು ಚುನಾವಣಾ ಆಯೋಗಕ್ಕಿರುವ ವಿಶೇಷ ಅಧಿಕಾರ ವ್ಯಾಪ್ತಿಯನ್ನು ಅತಿಕ್ರಮಿಸಿದಂತೆ ಎಂದು ಆಯೋಗವು ಸುಪ್ರೀಂಕೋರ್ಟ್‌ಗೆ ತಿಳಿಸಿದೆ.

ಈ ಸಂಬಂಧ ಸುಪ್ರೀಂಕೋರ್ಟ್‌ಗೆ ಪ್ರಮಾಣ ಪತ್ರ ಸಲ್ಲಿಸಿರುವ ಆಯೋಗವು, ಮತದಾರರ ಪಟ್ಟಿಗಳನ್ನು ತಯಾರಿಸುವ ಮತ್ತು ಪರಿಷ್ಕರಿಸುವ ಮೇಲ್ವಿಚಾರಣೆಯು ಚುನಾವಣಾ ಆಯೋಗದ ಕೆಲಸವಾಗಿದೆ. ಅದು ಆಯೋಗದ ಸಾಂವಿಧಾನಿಕ ಮತ್ತು ಶಾಸನಬದ್ಧ ಅಧಿಕಾರವೂ ಆಗಿದೆ ಎಂದು ಉಲ್ಲೇಖಿಸಿದೆ. ದೇಶದಾದ್ಯಂತ, ಚುನಾವಣೆಗಳಿಗೆ ಮುನ್ನ ನಿಯಮಿತವಾಗಿ ಮತದಾರರ ಪಟ್ಟಿಯ ಎಸ್‌ಐಆರ್ ನಡೆಸುವಂತೆ ಚುನಾವಣಾ ಆಯೋಗಕ್ಕೆ ನಿರ್ದೇಶನ ನೀಡುವಂತೆ ಕೋರಿ ವಕೀಲ ಅಶ್ವಿನಿ ಕುಮಾರ್ ಉಪಾಧ್ಯಾಯ ಅವರು ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿದ್ದಾರೆ.

ಇದು ಸಾಧ್ಯವಾದರೆ, ದೇಶದ ಪ್ರಜೆಗಳು ಮಾತ್ರ ದೇಶದ ರಾಜಕೀಯ ಮತ್ತು ನೀತಿಯನ್ನು ನಿರ್ಧರಿಸುತ್ತಾರೆ ಎಂಬುದನ್ನು ಖಚಿತಪಡಿಸಿಕೊಳ್ಳಬಹುದು ಎಂದು ಅರ್ಜಿಯಲ್ಲಿ ತಿಳಿಸಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರು ಮಿತ್ರ ಭಾನುವಾರ 14 ಸೆಪ್ಟೆಂಬರ್ 2025

ನಮ್ಮ ಕ್ಲಿನಿಕ್‌ಗಳಿಗೆ ಔಷಧಿ ಖರೀದಿಗೆ ಅನುದಾನ ಬಿಡುಗಡೆ

ಮೈಸೂರು, ಸೆ.13(ಎಸ್‌ಪಿಎನ್)–ಕೇಂದ್ರ ಸರ್ಕಾರದ ಪಿಎಂ–ಎಬಿಎಚ್‌ಐಎಂ ಮಾರ್ಗ ಸೂಚಿಯನ್ವಯ 817 ನಗರ ಆರೋಗ್ಯ ಮತ್ತು ಕ್ಷೇಮ ಕೇಂದ್ರಗಳಾದ 'ನಮ್ಮ ಕ್ಲಿನಿಕ್'ಗಳಿಗೆ ವಿವಿಧ ಔಷಧಿಗಳನ್ನು ಖರೀದಿಸಲು 7843.20 ಲಕ್ಷ ಅನುದಾನ ಬಿಡುಗಡೆಗೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ(ಕುಟುಂಬ ಇಲಾಖೆ)ಯ ಅಧೀನ ಕಾರ್ಯದರ್ಶಿ ಪವಿತ್ರ ಅನುಮೋದನೆ ನೀಡಿದ್ದಾರೆ. 2025–25ನೇ ಸಾಲಿನಲ್ಲಿ ಲಭ್ಯ ವಿರುವ ಅನುದಾನದಲ್ಲಿ 7843.20 ಲಕ್ಷ ರೂ.ಗಳನ್ನು ಬಳಸಿ ಕರ್ನಾಟಕ ಸಂಗ್ರಹಣೆಯಲ್ಲಿ ಪಾರ ದರ್ಶಕತೆ ಕಾಯ್ದೆ 1999ರನ್ವಯ ಕರ್ನಾಟಕ ರಾಜ್ಯ ವೈದ್ಯಕೀಯ ಸರಬರಾಜು ನಿಗಮ ನಿಯಮಿತ (ಕೆಎಸ್‌ಎಂಎಸ್‌ಸಿಎಲ್) ಮೂಲಕ ಖರೀದಿಸಿ ಸರಬರಾಜು ಮಾಡಲು ಆಡಳಿತಾತ್ಮಕ ಅನುಮೋದನೆ ನೀಡಿದೆ. ಈ ಆದೇಶವನ್ನು ಆರ್ಥಿಕ ಇಲಾಖೆಯು 19.8.2025ರಂದು ಟಿಪ್ಪಣಿ ನೀಡಿರುವ ಸಹಮತಿ ಮೇರೆಗೆ ಹಾಗೂ 4.9.2025 ರಂದು ನಡೆದ ರಾಜ್ಯ ಸಚಿವ ಸಂಪುಟದ ಸೂಚನೆ ಮೇರೆಗೆ ಈ ಆದೇಶ ಹೊರಡಿಸಿದ್ದಾರೆ.

ಜಾತಿ ಗಣತಿ ವೇಳೆ ಮತಾಂತರಗೊಂಡವರು ಅನುಸರಣೆ ಮಾಡುತ್ತಿರುವ ಜಾತಿಯ ಪರಿಗಣನೆ

● ಸಿದ್ದರಾಮಯ್ಯ ಸ್ಪಷ್ಟನೆ ● ಹಿಂದೂ ಧರ್ಮದಲ್ಲಿ ಸಮಾನ ಅವಕಾಶವಿದ್ದರೆ ಅವರೇಕೆ ಮತಾಂತರಗೊಳ್ಳುತ್ತಿದ್ದರು!

ಬೆಂಗಳೂರು, ಸೆ.13(ಕೆಎಂಶಿ)–ಸರ್ಕಾರ ನಡೆಸುತ್ತಿರುವ ಸಾಮಾಜಿಕ, ಶೈಕ್ಷಣಿಕ, ಆರ್ಥಿಕ ಸ್ಥಿತಿಗತಿ ಒಳಗೊಂಡ ಜಾತಿಗಣತಿ ಸಮೀಕ್ಷೆ ವೇಳೆ ಮತಾಂತರಗೊಂಡವರು ಅನುಸರಿಸುತ್ತಿರುವ ಸದ್ಯದ ಜಾತಿಯನ್ನೇ ಪರಿಗಣಿಸಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸಮಾಜದಲ್ಲಿನ ಅವ್ಯವಸ್ಥೆ ಪರಿಣಾಮವಾಗಿ ಮತಾಂತರಗೊಳ್ಳುತ್ತಾರೆ. ಹಿಂದೂ ಸಮಾಜದಲ್ಲಿ ಸಮಾನತೆ, ಸಮಾನ ಅವಕಾಶಗಳಿದ್ದರೆ, ಏಕೆ ಮತಾಂತರಗೊಳ್ಳುತ್ತಿದ್ದರು ಎಂದು ಪ್ರಶ್ನಿಸಿದರು.

ಅಸ್ಪೃಶ್ಯತೆ ಏಕೆ ಬಂತು, ಅದನ್ನು ನಾವು ಹುಟ್ಟುಹಾಕಿದ್ದೇವೆಯೇ, ಅಸಮಾನತೆ ಹಿಂದೂ, ಮುಸ್ಲಿಂ, ಕ್ರಿಶ್ಚಿಯನ್ ಧರ್ಮದಲ್ಲಿ ಇದ್ದರೂ ಮತಾಂತರವಾಗಿದ್ದಾರೆ. ಅದು ಅವರ ಹಕ್ಕು ಎಂದು ಹೇಳಿದರು.

ಧರ್ಮಸ್ಥಳ ಪ್ರಕರಣದಲ್ಲಿ ಎಸ್‌ಐಟಿ ತನಿಖೆ ವಿಳಂಬವಾಗುತ್ತಿಲ್ಲ. ಸರ್ಕಾರ ಇದರಲ್ಲಿ ಹಸ್ತಕ್ಷೇಪ ಮಾಡುವುದಿಲ್ಲ. ಹಾಗೆಂದು ಅನಗತ್ಯ ವಿಳಂಬ ಮಾಡುವಂತಿಲ್ಲ. ತಮಗೆ ತಿಳಿದಂತೆ ವಿಳಂಬವಾಗುತ್ತಿಲ್ಲ. ದಸರಾ ಉದ್ಘಾಟಕರ ವಿಷಯ ನ್ಯಾಯಾಲಯದ ಮುಂದಿದ್ದು ಅಲ್ಲೇ ಇತ್ಯರ್ಥವಾಗಲಿ. ದಸರಾ ಒಂದು ಧರ್ಮಕ್ಕೆ ಸೇರಿದ ಕಾರ್ಯಕ್ರಮವಲ್ಲ. ಸಾಂಸ್ಕೃತಿಕವಾಗಿ ಎಲ್ಲ ಧರ್ಮದ ಜನರು ಇದರಲ್ಲಿ ಭಾಗವಹಿಸುತ್ತಾರೆ. ದಸರಾ ನಾಡಹಬ್ಬವಾಗಿದ್ದು, ಒಂದು ಧರ್ಮದವರು ಮಾತ್ರ ಭಾಗವಹಿಸಬೇಕು ಎಂದೇನೂ ನಿಯಮ ಇಲ್ಲ. ಸಾರ್ವತ್ರಿಕ ಹಬ್ಬದಲ್ಲಿ ಎಲ್ಲ ಜಾತಿ ಮತ್ತು ಧರ್ಮದವರು ಭಾಗವಹಿಸಬಹುದು.

ಸಾಹಿತಿ ಬಾನು ಮುಷ್ತಾಕ್‌ರಿಂದ ದಸರಾ ಉದ್ಘಾಟಿಸುವ ಸರ್ಕಾರದ ನಿರ್ಧಾರ ಅಚಲ

● ಹಿಂದೂ ಧರ್ಮೀಯರನ್ನು ಟಾರ್ಗೆಟ್ ಮಾಡಿಲ್ಲ
● ಪ್ರತಾಪ್ ಸಿಂಹ ವಿರುದ್ಧ ಪೊಲೀಸರ ಕ್ರಮ
● ತಲೆಬರುಡೆ ಕುರಿತ ಎಸ್‌ಐಟಿ ತನಿಖೆಯಲ್ಲಿ ವಿಳಂಬವಿಲ್ಲ
● ಹಾಸನ ಅವಘಡದಲ್ಲಿ ಮೃತಪಟ್ಟವರಿಗೆ 10 ಲಕ್ಷ ನೀಡಲಾಗದು

ಮೈಸೂರು,ಸೆ.13(ಬಿಎಲ್‌ಯು)– ವಿಶ್ವ ವಿಖ್ಯಾತ ಮೈಸೂರು ದಸರಾ ಯಾವುದೇ ಜಾತಿ ಅಥವಾ ಧರ್ಮಕ್ಕೆ ಸೇರಿದ ಹಬ್ಬ ವಲ್ಲ. ಮುಸ್ಲಿಂ, ಕ್ರಿಶ್ಚಿಯನ್ ಸೇರಿ ಎಲ್ಲಾ ಧರ್ಮೀಯರು ಈ ಹಬ್ಬದಲ್ಲಿ ಭಾಗಿಯಾಗುತ್ತಾರೆ. ಈ ಹಿನ್ನೆಲೆಯಲ್ಲಿ ದಸರಾವನ್ನು ರಾಜಕೀಯವಾಗಿ ನೋಡಬಾರದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ, ಬಿಜೆಪಿ ನಾಯಕರಿಗೆ ತಿರುಗೇಟು ನೀಡಿದರು.

ಮೈಸೂರು ವಿಮಾನ ನಿಲ್ದಾಣದಲ್ಲಿ ಇಂದು ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಬಾನು ಮುಷ್ತಾಕ್‌ರಿಂದ ದಸರಾ ಉದ್ಘಾಟನೆ ಪ್ರಶ್ನಿಸಿ ಕೆಲವರು ಕಾನೂನು ಸಮರ ಆರಂಭಿಸಿರುವುದಕ್ಕೆ ಪ್ರತಿಕ್ರಿಯಿಸಿ, ವಿರೋಧ ಮಾಡಿದವರನ್ನೇ ಕೇಳಿ ಎಂದು ಸಲಹೆ ನೀಡಿದರು.

ದಸರಾ ಸಾಂಸ್ಕೃತಿಕ ಉತ್ಸವ. ವಾಸ್ತವತೆ ಹೀಗಿದ್ದರೂ ವಿರೋಧ ಮಾಡುತ್ತಿದ್ದಾರೆ ಎಂದು ಬಿಜೆಪಿ ವಿರುದ್ಧ ಕಿಡಿಕಾರಿದ ಸಿದ್ದರಾಮಯ್ಯ, ಬಾನು ಮುಷ್ತಾಕ್‌ರಿಂದ ದಸರಾ ಉದ್ಘಾಟಿಸುವ ಸರ್ಕಾರದ ಕ್ರಮವನ್ನು ಸಮರ್ಥಿಸಿಕೊಂಡರು.


ಸಿದ್ದರಾಮಯ್ಯ

ಬಿಜೆಪಿ ನಾಯಕರ ಮೇಲೆ ಎಫ್‌ಐಆರ್ ದಾಖಲು ಮಾಡಿರುವ ಹಿನ್ನೆಲೆಯಲ್ಲಿ ಹಿಂದೂ ಧರ್ಮೀಯರನ್ನು ಟಾರ್ಗೆಟ್ ಮಾಡಲಾಗಿದೆ ಎಂಬ ಆರೋಪಕ್ಕೆ, ನಾನು ಕೂಡ ಹಿಂದೂ, ನನ್ನ ಹೆಸರಿನಲ್ಲಿ ಈಶ್ವರ ಮತ್ತು ರಾಮ ಇಬ್ಬರೂ ಇದ್ದಾರೆ. ಇದನ್ನು ಅರಿಯದೆ ಬಿಜೆಪಿ ನಾಯಕರು ಪ್ರಚೋದನಾಕಾರಿ ಭಾಷಣ ಮಾಡುತ್ತಿದ್ದಾರೆ. ಹಾಗಾಗಿ ಪೊಲೀಸರು ಕ್ರಮ ಕೈಗೊಂಡಿದ್ದಾರೆ ಎಂದು ಸಿದ್ದರಾಮಯ್ಯ ಸ್ಪಷ್ಟಪಡಿಸಿದರು.

ಪ್ರತಾಪ್ ಸಿಂಹ ವಿರುದ್ಧ ಪೊಲೀಸರ ಕ್ರಮ: ಮಾಜಿ ಸಂಸದ ಪ್ರತಾಪ್ ಸಿಂಹ ಅವರನ್ನು ಗಡಿಪಾರು ಮಾಡುವಂತೆ ಕೆಲವು ಸಂಘಟನೆಗಳು ಒತ್ತಾಯ ಮಾಡುತ್ತಿರುವ ಬಗ್ಗೆ ಪ್ರತಿಕ್ರಿಯೆ ನೀಡಿದ ಸಿದ್ದರಾಮಯ್ಯ ಅವರು, ಪೊಲೀಸರು ಈ ಬಗ್ಗೆ ಕ್ರಮ ಕೈಗೊಳ್ಳುತ್ತಾರೆ. ನಾನೇನು ಸೂಚನೆ ಕೊಡುವುದಿಲ್ಲ ಎಂದು ಸ್ಪಷ್ಟನೆ ನೀಡಿದರು.

ಯಾರ ಮೇಲೂ ಎಫ್‌ಐಆರ್ ದಾಖಲಿಸಿ ಎಂದು ನಾನು ಪೊಲೀಸರಿಗೆ ಹೇಳಿಲ್ಲ. ಪೊಲೀಸರು ಕಾನೂನು ಪ್ರಕಾರ ಕ್ರಮ ಕೈಗೊಂಡಿದ್ದು, ಸಮರ್ಥವಾಗಿ ಕೆಲಸ ಮಾಡುತ್ತಿದ್ದಾರೆ ಎಂದು ತಿಳಿಸಿದರು.

ಧರ್ಮಸ್ಥಳ ಬುರುಡೆ ಪ್ರಕರಣದ ಬಗ್ಗೆ ಅನಗತ್ಯ ವಿಳಂಬವಾಗುತ್ತಿದೆ ಎಂಬ ಆರೋಪವನ್ನು ನಿರಾಕರಿಸಿದ ಸಿದ್ದರಾಮಯ್ಯ ಅವರು, ಎಸ್‌ಐಟಿ ತನಿಖೆ ವಿಳಂಬವಾಗುತ್ತಿದೆ ಎಂಬ ಆಪಾದನೆಯನ್ನು ನಾನು ಒಪ್ಪಿಕೊಳ್ಳುವುದಿಲ್ಲ. ಎಸ್‌ಐಟಿಯವರು ಸಮರ್ಥವಾಗಿ ತಮ್ಮ ಕರ್ತವ್ಯ ನಿರ್ವಹಣೆ ಮಾಡುತ್ತಿದ್ದು, ಸರ್ಕಾರ ಹಸ್ತಕ್ಷೇಪ ಮಾಡುವುದಿಲ್ಲ ಎಂದರು.

ಹಾಸನದ ದುರಂತ ಪ್ರಕರಣದಲ್ಲಿ ಮೃತಪಟ್ಟವರ ಕುಟುಂಬಗಳಿಗೆ ರಾಜ್ಯ ಸರ್ಕಾರ 5 ಲಕ್ಷ ರೂ. ಪರಿಹಾರ ನೀಡಿದೆ. ಬಿಜೆಪಿ ನಾಯಕರು ಹೇಳಿದಂತೆ ಹತ್ತು ಲಕ್ಷ ಪರಿಹಾರ ನೀಡಲು ಸಾಧ್ಯವಿಲ್ಲ. ಪರಿಹಾರ ಸಾವಿಗೆ ಸಮವಲ್ಲ. ಇದನ್ನು ಬಿಜೆಪಿ ನಾಯಕರು ಅರಿಯಬೇಕು ಎಂದು ಸಲಹೆ ನೀಡಿದರು.

ವಾಹನ ಚಾಲಕರ ತಪ್ಪಿನಿಂದ ಅಪಘಾತಗಳು ಸಂಭವಿಸುತ್ತವೆ. ಇದಕ್ಕೆ ಸರ್ಕಾರ ಕಾರಣವಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸ್ಪಷ್ಟಪಡಿಸಿದರು.

ಡಾ.ವಿಷ್ಣುಗೆ ಕರ್ನಾಟಕ ರತ್ನ ಪ್ರಶಸ್ತಿ; ಮುಖ್ಯಮಂತ್ರಿ, ಸರ್ಕಾರಕ್ಕೆ ಅಭಿನಂದನೆ

ಮೈಸೂರು, ಸೆ.13(ಜಿಎ)–ನಟ ಡಾ.ವಿಷ್ಣುವರ್ಧನ್ ಅವರಿಗೆ ರಾಜ್ಯ ಸರ್ಕಾರ ಕರ್ನಾಟಕ ರತ್ನ ಘೋಷಣೆ ಮಾಡಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ರಾಜ್ಯ ಸರ್ಕಾರಕ್ಕೆ ಡಾ.ವಿಷ್ಣು ಸೇನಾ ಸಮಿತಿಯ ಮೈಸೂರು ಘಟಕ ಅಭಿನಂದನೆ ಸಲ್ಲಿಸಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಸಮಿತಿ ಪ್ರಧಾನ ಕಾರ್ಯದರ್ಶಿ ಎಂ.ಶಿವಕುಮಾರ್ ಮಾತನಾಡಿ, ನಟ ಡಾ.ವಿಷ್ಣುವರ್ಧನ್ ಅವರಿಗೆ ಕರ್ನಾಟಕ ರತ್ನ ನೀಡುವಂತೆ 15 ವರ್ಷಗಳಿಂದ ಅಭಿಮಾನಿಗಳು ಸಾಕಷ್ಟು ಹೋರಾಟ ಮಾಡಿಕೊಂಡು ಬಂದಿದ್ದಾರೆ. ಆದರೆ, ಡಾ.ವಿಷ್ಣುವರ್ಧನ್ ಅವರ 75ನೇ ವರ್ಷದ ಹುಟ್ಟುಹಬ್ಬದ ಅಮೃತ ಮಹೋತ್ಸವದ ಸಂದರ್ಭದಲ್ಲಿ ಪ್ರಶಸ್ತಿ ಘೋಷಣೆ ಮಾಡಿರುವುದು ಅಭಿಮಾನಿಗಳಿಗೆ ಸಂತಸವನ್ನುಂಟು ಮಾಡಿದೆ. ಈ ಹಿನ್ನೆಲೆಯಲ್ಲಿ ಕರ್ನಾಟಕ ರತ್ನ ಘೋಷಣೆ ಮಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮುಂದಿನ ಬಾರಿ ಮೈಸೂರಿಗೆ ಭೇಟಿ ನೀಡಿದ ಸಂದರ್ಭದಲ್ಲಿ ಗೌರವ ಸಮರ್ಪಿಸಲಾಗುತ್ತದೆ ಎಂದರು.

ಚಿತ್ರರಂಗದಿಂದ ಸಾಕಷ್ಟು ನಟರು ಡಾ.ವಿಷ್ಣುವರ್ಧನ್ ಅವರ ಹೆಸರು ಬಳಸಿಕೊಂಡು ಚಿತ್ರ ಮಾಡಿದ್ದಾರೆ. ಆದರೆ, ಹೋರಾಟಕ್ಕೆ ಮಾತ್ರ ಬಂದಿಲ್ಲ. ಚಿತ್ರ ನಿರ್ದೇಶಕರಾದ ಎಸ್.ನಾರಾಯಣ್, ರಾಜೇಂದ್ರ ಸಿಂಗ್ ಬಾಬು ಹಾಗೂ ನಟಿಯರಾದ ಜಯಮಾಲ, ತಾರಾ, ಶೃತಿ, ಮಾಳವಿಕ ಅವಿನಾಶ್ ಇತ್ತೀಚೆಗೆ ಕರ್ನಾಟಕ ರತ್ನ ನೀಡುವಂತೆ ಮುಖ್ಯಮಂತ್ರಿಗಳು, ಉಪ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಿದರು. ಅವರಿಗೆ ಸಮಿತಿಯ ಮೈಸೂರು ಘಟಕದಿಂದ ಅಭಿನಂದನೆ ಸಲ್ಲಿಸುತ್ತೇವೆ ಎಂದರು. ಗೋಷ್ಠಿಯಲ್ಲಿ ಅಧ್ಯಕ್ಷ ಲೋಹಿತ್‌ಗೌಡ, ಬಿ.ಕುಮಾರ್ ಮತ್ತಿತರರು ಉಪಸ್ಥಿತರಿದ್ದರು.

ಮೈಸೂರು ವಕೀಲರಿಂದ ಧರ್ಮಸ್ಥಳ ಯಾತ್ರೆ...



ಮೈಸೂರು ನ್ಯಾಯಾಲಯದ ಮುಂಭಾಗದಿಂದ ಮೈಸೂರು ವಕೀಲರು ಎರಡು ಬಸ್ಸು ಹಾಗೂ ಕಾರುಗಳ ಮೂಲಕ ಹೊರಟ ಧರ್ಮಸ್ಥಳ ಯಾತ್ರೆಗೆ ಮೈಸೂರು ವಕೀಲರ ಅಧ್ಯಕ್ಷ ಎಸ್.ಲೋಕೇಶ್, ಲಾಗೈಡ್ ಕನ್ನಡ ಕಾನೂನು ಮಾಸಪತ್ರಿಕೆ ಗೌರವ ಸಂಪಾದಕರೂ ಆದ ಹಿರಿಯ ವಕೀಲರಾದ ಎಚ್.ಎನ್.ವೆಂಕಟೇಶ್ ಚಾಲನೆ ನೀಡಿದರು. ಹಿರಿಯ ವಕೀಲರಾದ ಹರೀಶ್‌ಕುಮಾರ್ ಹೆಗ್ಡೆ, ಕಾರ್ಯದರ್ಶಿ ಸುಧೀರ್, ವಕೀಲರಾದ ನಾರಾಯಣಸ್ವಾಮಿ, ಶ್ರೀನಿವಾಸ್, ಲೋಕೇಶ್ ಇನ್ನಿತರರು ಉಪಸ್ಥಿತರಿದ್ದರು.

ದಸರಾ ಕುಸ್ತಿ ಪಂದ್ಯಾವಳಿಯಲ್ಲಿ ನಕಲಿ ಜನ್ಮದಿನಾಂಕದ ಆತಂಕ

ತಂತ್ರಜ್ಞಾನದ ಮೂಲಕ ವಯೋಮಿತಿ ಪರಿಶೀಲನೆಗೆ ಆಗ್ರಹ

ಮೈಸೂರು, ಸೆ.13(ಜಿಎ)–ದಸರಾ ಕುಸ್ತಿ ಪಂದ್ಯಾವಳಿಯಲ್ಲಿ ನಕಲಿ ಜನ್ಮ ದಿನಾಂಕ ನೀಡಿ ಕುಸ್ತಿಯಲ್ಲಿ ಪಾಲ್ಗೊಳ್ಳುವ ಸಾಧ್ಯತೆ ಇರುವುದರಿಂದ ಈ ಬಾರಿ ಕುಸ್ತಿ ಪಂದ್ಯಾವಳಿಯಲ್ಲಿ ಭಾಗವಹಿಸುವ 15 ಮತ್ತು 17 ವರ್ಷದ ಮಕ್ಕಳಿಗೆ ಕಡ್ಡಾಯವಾಗಿ ತಂತ್ರಜ್ಞಾನದ ಮೂಲಕ ವಯೋಮಿತಿ ಪರಿಶೀಲನೆ ಮಾಡುವಂತೆ ಕರ್ನಾಟಕ ರಕ್ಷಣಾ ವೇದಿಕೆಯ ಜಿಲ್ಲಾಧ್ಯಕ್ಷ ಪ್ರವೀಣ್ ಕುಮಾರ್ ಆಗ್ರಹಿಸಿದ್ದಾರೆ.


ಕುಸ್ತಿ ಪಂದ್ಯಾವಳಿಯಲ್ಲಿ ಭಾಗವಹಿಸಿ ವಿಜೇತರಾಗುವ 15, 17 ವರ್ಷದ ಮಕ್ಕಳಿಗೆ ಬಾಲಕುಮಾರ, ಬಾಲಕೇಸರಿ, ಬಾಲ ಕಿಶೋರ, ಬಾಲ ಕಂಠೀರವ ಬಿರುದುಗಳನ್ನು ನೀಡುವುದು ವಾಡಿಕೆ. ಆದರೆ, ಈ ಬಾರಿ ಕುಸ್ತಿ ಪಟುಗಳು ನೈಜವಾದ ವಯೋಮಿತಿ ನೀಡದೇ ನಕಲು ಜನ್ಮ ದಿನಾಂಕವನ್ನು ಬರೆಸಿರುವುದು ಕಂಡು ಬಂದಿದ್ದು, ಈಗಾಗಲೇ ಯುವ ಸಬಲೀಕರಣ ಆಯುಕ್ತ ಚೇತನ್ ಅವರು ಸುತ್ತೋಲೆ ಹೊರಡಿಸಿ ತನಿಖೆ ನಡೆಸಲು ಆದೇಶಿಸಿ, ಸಹಾಯಕ ನಿರ್ದೇಶಕ ಗುರುಪಾದ ಡೊಂಗಣ್ಣ ಅವರಿಗೆ ಜವಾಬ್ದಾರಿ ನೀಡಲಾಗಿದೆ. ಈ ಬಗ್ಗೆ ಸಂಪೂರ್ಣ ಮಾಹಿತಿ ಅವರ ಬಳಿ ಲಭ್ಯವಿದೆ ಎಂದರು.

ಈ ರೀತಿ ನಕಲಿ ಜನ್ಮದಿನಾಂಕ ನೀಡಿರುವ ಎಲ್ಲಾ ತರಬೇತುದಾರರ ಮೇಲೆ ತನಿಖೆ ಮಾಡಬೇಕು. ಅತಿ ಹೆಚ್ಚು ಹಗರಣವಾಗಿರುವ ದಾವಣಗೆರೆ, ಬಾಗಲಕೋಟೆ ಭಾಗದ ಕುಸ್ತಿಪಟುಗಳಿಗೆ ತಂತ್ರಜ್ಞಾನ ಬಳಸಿಕೊಂಡು ವಯೋಮಿತಿ ಪರೀಕ್ಷಿಸಬೇಕು. ಇಲ್ಲವಾದರೆ, ನಿಜವಾದ ಪ್ರತಿಭೆಗಳಿಗೆ ಅವಕಾಶವಿಲ್ಲದಂತೆ ಆಗುತ್ತದೆ. ಈ ಬಗ್ಗೆ ಈಗಾಗಲೇ ಜಿಲ್ಲಾಧಿಕಾರಿ, ಕುಸ್ತಿ ಉಪಸಮಿತಿಗೂ ದೂರು ನೀಡಲಾಗಿದೆ. ಪ್ರಾಮಾಣಿಕವಾಗಿ ಕುಸ್ತಿ ಪಂದ್ಯಾವಳಿಗಳನ್ನು ಆಯೋಜನೆ ಮಾಡಬೇಕು. ಇಲ್ಲವಾದರೆ ಹೋರಾಟ ಮಾಡಬೇಕಾಗುತ್ತದೆ ಎಂದು ಎಚ್ಚರಿಸಿದರು. ಸುದ್ದಿಗೋಷ್ಠಿಯಲ್ಲಿ ಲೋಕೇಶ್‌ಕುಮಾರ್, ಹೇಮಂತ್‌ಗೌಡ, ಇಮ್ರಾನ್ ಇದ್ದರು.

ಲೇಖನ ಸಾಮಗ್ರಿ ವಿತರಣೆ...


ಮೈಸೂರಿನ ರಾಜೀವ್ ಸ್ನೇಹ ಬಳಗ, ಪ್ರತಿಭೆ ವೇದಿಕೆ ವತಿಯಿಂದ ಮೈಸೂರಿನ ಎನ್.ಎಂ.ಕೆ.ಎ ಬಾಲಬೋಧಿನಿ ಕಿರಿಯ ಪ್ರಾಥಮಿಕ ಶಾಲಾ ವಿದ್ಯಾರ್ಥಿಗಳಿಗೆ ಲೇಖನ ಸಾಮಗ್ರಿಗಳನ್ನು ವಿತರಿಸಲಾಯಿತು. ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ. ರಾಜೀವ್, ಪ್ರತಿಭೆ ವೇದಿಕೆ ಅಧ್ಯಕ್ಷ ಎಸ್.ರಾಜರತ್ನಂ, ಗೌರವ ಸಲಹೆಗಾರ ಎಸ್.ರುದ್ರೇಶ್, ಪ್ರಧಾನ ಕಾರ್ಯದರ್ಶಿ ಕೆ.ಇಂದುಮತಿ ರಾಜರತ್ನಂ, ರಾಜೀವ್ ಸ್ನೇಹ ಬಳಗ ಮುಖ್ಯಸ್ಥೆ ಭಾಗ್ಯಶ್ರೀ ಆರ್.ಭಟ್, ಶಾಲೆಯ ಮುಖ್ಯ ಶಿಕ್ಷಕಿ ರತ್ನಮಾಲಾ, ಶಿಕ್ಷಕ ನರಸಿಂಹ, ಸಹ ಶಿಕ್ಷಕಿ ಶ್ರುತಿ, ವಿದ್ಯಾರ್ಥಿಗಳು ಇದ್ದರು.

ಅಭಿನಂದನೆ...



2024–25ನೇ ಸಾಲಿನ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ 592/600 ಅಂಕ ಗಳಿಸಿ, ಇಜಿಬಿಎ ವಾಣಿಜ್ಯ ವಿಭಾಗದಲ್ಲಿ ರಾಜ್ಯಕ್ಕೆ ಪ್ರಥಮ ರ್‍ಯಾಂಕ್ ಪಡೆದ ಮರಿಮಲ್ಲಪ್ಪ ಸಂಜೆ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿ ಸೌರವ್ ಗಜ್ ಅವರನ್ನು ಶಾಸಕ ಟಿ.ಎಸ್.ಶ್ರೀವತ್ಸ ಅಭಿನಂದಿಸಿದರು. ಈತ ಮೈಸೂರು ಜೆಎಸ್‌ಎಸ್ ಮಹಾವಿದ್ಯಾಪೀಠದ ಹಣಕಾಸು ವಿಭಾಗದ ಜಂಟಿ ನಿರ್ದೇಶಕ ವೀರಭದ್ರಸ್ವಾಮಿ ಹಾಗೂ ಗಣಿತ ಶಿಕ್ಷಕಿ ಶ್ರೀಮತಿ ನೀತು ಎಸ್.ರಾಜ್ ದಂಪತಿ ಪುತ್ರ.

ನಾಳೆಯಿಂದ 'ಇದೇ ಹೊಸ ಹಾಡು' ಸಂಗೀತ ಕಾರ್ಯಕ್ರಮ

ಮೈಸೂರು, ಸೆ.13(ಜಿಎ)–ಡಾ.ರಾಜ್‌ಕುಮಾರ್ ಮ್ಯೂಸಿಕಲ್ ಗ್ರೂಪ್ ವತಿಯಿಂದ ಸೆ.15ರಿಂದ ಮೂರು ದಿನ 'ಇದೇ ಹೊಸ ಹಾಡು' ಸಂಗೀತ ಕಾರ್ಯಕ್ರಮವನ್ನು ನಾದಬ್ರಹ್ಮ ಸಂಗೀತ ಸಭಾಂಗಣದಲ್ಲಿ ಆಯೋಜಿಸಲಾಗಿದೆ.


ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಗ್ರೂಪ್‌ನ ಮುಖ್ಯಸ್ಥ ಮೈಸೂರು ಜಯರಾಂ ಈ ವಿಷಯ ತಿಳಿಸಿ, ಪ್ರತಿದಿನ ಸಂಜೆ 5 ಗಂಟೆಯಿಂದ ರಾತ್ರಿ 9.30ರವರೆಗೆ ಸಂಗೀತ ಕಾರ್ಯಕ್ರಮ ನಡೆಯಲಿದ್ದು, 25ಕ್ಕೂ ಹೆಚ್ಚು ಗಾಯಕರು 3 ದಿನ ಗಾಯನ ಮಾಡಲಿದ್ದಾರೆ. ಸೆ.15ರಂದು ಡಾ.ರಾಜ್‌ಕುಮಾರ್, ಸೆ.16ರಂದು ವಿಷ್ಣುವರ್ಧನ್, ಅಂಬರೀಷ್, ಶ್ರೀನಾಥ್, ಅನಂತ್‌ನಾಗ್, ಶಂಕರ್ ನಾಗ್ ಅವರ ಚಿತ್ರಗೀತೆಗಳನ್ನು ಪ್ರಸ್ತುತಪಡಿಸಲಿದ್ದಾರೆ. ಸೆ.17ರಂದು ಡಾ.ಪಿ.ಬಿ.ಶ್ರೀನಿವಾಸ್ ಅವರ ವಿಶೇಷ ಗೀತೆಗಳನ್ನು ಹಾಡಲಿದ್ದಾರೆ ಎಂದರು. ಶ್ರೀ ಇಳೈ ಆಳ್ವಾರ್ ಸ್ವಾಮೀಜಿ ದಿವ್ಯ ಸಾನ್ನಿಧ್ಯ ವಹಿಸಲಿದ್ದಾರೆ. ಕಾರ್ಯಕ್ರಮದಲ್ಲಿ ಕಲಾಪೋಷಕರು ಭಾಗವಹಿಸಲಿದ್ದಾರೆ. ನಿರೂಪಣೆಯನ್ನು ಎಡೆಯೂರು ಸಮೀಉಲ್ಲಾ ಮತ್ತು ಸುಧೀಂದ್ರಮೂರ್ತಿ ನಿರ್ವಹಿಸಲಿದ್ದಾರೆ ಎಂದರು. ಗೋಷ್ಠಿಯಲ್ಲಿ ವೈ.ಆರ್.ನಾಗೇಂದ್ರ, ಸುರೇಶ್, ಲತಾ ಬಾಲಕೃಷ್ಣ ಇದ್ದರು.

ನಾಳೆ ಮೈಸೂರಲ್ಲಿ ಬ್ರಹ್ಮಶ್ರೀ ನಾರಾಯಣ ಗುರುಗಳ ಜಯಂತಿ

ಮೈಸೂರು, ಸೆ.13(ಜಿಎ)–ಮೈಸೂರು ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ಆರ್ಯ ಈಡಿಗರ ಸಂಘದ ವತಿಯಿಂದ ಸೆ.15ರಂದು ಬ್ರಹ್ಮಶ್ರೀ ನಾರಾಯಣ ಗುರುಗಳ 171ನೇ ಜಯಂತಿ ಆಚರಣೆ ಮತ್ತು ಪ್ರತಿಭಾ ಪುರಸ್ಕಾರ ಕಾರ್ಯಕ್ರಮವನ್ನು ಕಲಾಮಂದಿರದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಅಧ್ಯಕ್ಷ ಎಂ.ಕೆ.ಪೋತರಾಜ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಬೆಳಗ್ಗೆ 8 ಗಂಟೆಗೆ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಮುಂಭಾಗದಿಂದ ಬೆಳ್ಳಿ ರಥದಲ್ಲಿ ಬ್ರಹ್ಮಶ್ರೀ ನಾರಾಯಣ ಗುರುಗಳ ಭಾವಚಿತ್ರ ಇರಿಸಿ, ವಿವಿಧ ಕಲಾತಂಡಗಳೊಂದಿಗೆ ಅದ್ಧೂರಿ ಮೆರವಣಿಗೆ ಜೊತೆಗೆ ಕಲಾಮಂದಿರ ತಲುಪಲಿದೆ. ನಂತರ ಕಲಾಮಂದಿರದಲ್ಲಿ 11 ಗಂಟೆಗೆ ನಡೆಯುವ ವೇದಿಕೆ ಕಾರ್ಯಕ್ರಮದಲ್ಲಿ ಆರ್ಯ ಈಡಿಗ ಮಹಾ ಸಂಸ್ಥಾನದ ಪೀಠಾಧ್ಯಕ್ಷ ವಿಖ್ಯಾತಾನಂದ ಸ್ವಾಮೀಜಿ, ನಾರಾಯಣ ಗುರು ಮಹಾ ಸಂಸ್ಥಾನದ ರೇಣುಕಾನಂದ ಸ್ವಾಮೀಜಿ ಸಾನ್ನಿಧ್ಯ ವಹಿಸುವರು.

ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಕಾರ್ಯಕ್ರಮ ಉದ್ಘಾಟಿಸುವರು. ಸಚಿವ ಕೆ.ವೆಂಕಟೇಶ್, ಅರಣ್ಯ ವಸತಿ ಮತ್ತು ವಿಹಾರಧಾಮಗಳ ನಿಗಮದ ಅಧ್ಯಕ್ಷ ಸಿ.ಅನಿಲ್‌ಕುಮಾರ್, ಸೆಸ್ಕ್ ಅಧ್ಯಕ್ಷ ಎ.ಬಿ.ರಮೇಶ್ ಬಂಡಿಸಿದ್ದೇಗೌಡ, ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಡಾ.ಮಾನಸ, ರಾಜ್ಯ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷೆ ಡಾ.ಪುಷ್ಪ ಅಮರ್‌ನಾಥ್, ಮುಖ್ಯ ಅತಿಥಿಗಳಾಗಿ ಸಂಸದ ಯದುವೀರ ಒಡೆಯರ್, ಸುನೀಲ್ ಬೋಸ್ ಆಗಮಿಸುವರು. ಶಾಸಕ ಹರೀಶ್‌ಗೌಡ ಅಧ್ಯಕ್ಷತೆ ವಹಿಸುವರು ಎಂದು ತಿಳಿಸಿದರು.



ಅತಿಥಿಗಳಾಗಿ ಶಾಸಕ ತನ್ವೀರ್ ಸೇಠ್, ಜಿ.ಟಿ.ದೇವೇಗೌಡ, ಡಿ.ರವಿಶಂಕರ್, ಜಿ.ಡಿ.ಹರೀಶ್‌ಗೌಡ, ದರ್ಶನ್ ಧ್ರುವನಾರಾಯಣ, ಟಿ.ಎಸ್.ಶ್ರೀವತ್ಸ, ವಿಧಾನ ಪರಿಷತ್ ಸದಸ್ಯರಾದ ಹೆಚ್.ವಿಶ್ವನಾಥ್, ಸಿ.ಎನ್.ಮಂಜೇಗೌಡ, ಡಾ.ಡಿ.ತಿಮ್ಮಯ್ಯ, ಡಾ.ಎಸ್.ಯತೀಂದ್ರ, ಕೆ.ವಿವೇಕಾನಂದ, ವಸ್ತು ಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್ ಖಾನ್, ಕಾಡಾ ಅಧ್ಯಕ್ಷ ಮರಿಸ್ವಾಮಿ ಆಗಮಿಸುವರು.

ಬ್ರಹ್ಮಶ್ರೀ ನಾರಾಯಣಗುರು ಮಿಷನ್ ಚಾರಿಟಬಲ್ ಟ್ರಸ್ಟ್‌ನ ಕಾರ್ಯದರ್ಶಿ ಕೆ.ಜೆ.ಮನೋಜ್ ಕುಮಾರ್ ಮುಖ್ಯ ಭಾಷಣ ಮಾಡುವರು ಎಂದರು.

ಕಾರ್ಯಕ್ರಮದಲ್ಲಿ 2024–25ರ ಸಾಲಿನ ಎಸ್‌ಎಸ್‌ಎಲ್‌ಸಿ, ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಶೇ.80ರಷ್ಟು ಅಂಕಗಳೊಂದಿಗೆ ಉತ್ತೀರ್ಣರಾಗಿರುವ ಸಮುದಾಯದ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲಾಗುವುದು ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಉಪಾಧ್ಯಕ್ಷರಾದ ಟಿ.ಶಿವಣ್ಣ, ರಾಜಶೇಖರ ಕದಂಬ, ಗಿರೀಶ್ ಇದ್ದರು.

ಅಭಿನಂದನೆ...



ವಲಯ 1ರ 17 ವರ್ಷದೊಳಗಿನ ವಾಲಿಬಾಲ್ ಮತ್ತು ಥ್ರೋಬಾಲ್ ಪಂದ್ಯದಲ್ಲಿ ವಿಜೇತರಾದ ಮೈಸೂರು ಸರಸ್ವತಿಪುರಂನ ರೋಟರಿ ವೆಸ್ಟ್ ಶಾಲೆ ವಿದ್ಯಾರ್ಥಿನಿಯರನ್ನು ಅಭಿನಂದಿಸಲಾಯಿತು. ಈ ವೇಳೆ ಪ್ರಾಂಶುಪಾಲರಾದ ಪೂರ್ಣಿಮಾ, ಉಪ ಪ್ರಾಂಶುಪಾಲರಾದ ಸುಷ್ಮಾ, ದೈಹಿಕ ಶಿಕ್ಷಣ ಶಿಕ್ಷಕ ನಾಗರಾಜ್ ಉಪಸ್ಥಿತರಿದ್ದರು.

ಇಂದು ಪಾರಂಪರಿಕ ಮರಗಳ ಗಣತಿ ಕುರಿತು ಸಂವಾದ

ಮೈಸೂರು, ಸೆ.13(ಎಸ್‌ಪಿಎನ್)– ಮೈಸೂರು ನಗರದಲ್ಲಿ 'ಪಾರಂಪರಿಕ ಮರಗಳ ಗಣತಿ' ನಡೆಸಲು ತೀರ್ಮಾನಿಸಿರುವ ಡಾ.ಸ್ಮಿತಾ ಹೆಗ್ಡೆ, ಸಂಜಯ್ ದತ್ತಾತ್ರಿ ಅವರೊಂದಿಗೆ ಸೆ.14ರಂದು ಸಂಜೆ 4 ಗಂಟೆಗೆ ಯಾದವಗಿರಿ ವಿವೇಕಾನಂದ ರಸ್ತೆಯ ಮೈಸೂರು ಗ್ರಾಹಕ ಪರಿಷತ್ ಕಚೇರಿಯಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಮೈಗ್ರಾಪ ಕಚೇರಿ ಪ್ರಕಟಣೆಯಲ್ಲಿ ತಿಳಿಸಿದೆ. ಮಾಹಿತಿಗೆ 0821–2515150 ಅನ್ನು ಸಂಪರ್ಕಿಸಿ.

ಡಾ.ರಾಜ್‌ಕುಮಾರ್ ವೃತ್ತ ನಾಮಶೇಷ ಹುನ್ನಾರ

ಮೈಸೂರು ನಗರಪಾಲಿಕೆ ಆಯುಕ್ತರಿಗೆ ಬಿಜೆಪಿ ಮುಖಂಡ ರಘು ಕೌಟಿಲ್ಯ ಪತ್ರ

ಮೈಸೂರು, ಸೆ.13–ಮೈಸೂರಿನ ಡಾ.ರಾಜ್‌ಕುಮಾರ್ ವೃತ್ತದಲ್ಲಿದ್ದ "ಡಾ.ರಾಜ್‌ಕುಮಾರ್ ವೃತ್ತ" ನಾಮ ಫಲಕವನ್ನು ಉದ್ದೇಶಪೂರ್ವಕವಾಗಿ ಕಿತ್ತೊಗೆದು, ಸದರಿ ಸ್ಥಳದಲ್ಲಿ ಪ್ರಯಾಣಿಕರ ತಂಗುದಾಣವನ್ನು ನಿರ್ಮಿಸಲಾಗುತ್ತಿದೆ ಎಂದು ಬಿಜೆಪಿ ಹಿಂದುಳಿದ ವರ್ಗಗಳ ಮೋರ್ಚಾ ರಾಜ್ಯಾಧ್ಯಕ್ಷ ರಘು ಕೌಟಿಲ್ಯ ಅವರು ನಗರಪಾಲಿಕೆ ಆಯುಕ್ತರಿಗೆ ಪತ್ರ ಬರೆದಿದ್ದು, ಈ ವೃತ್ತಕ್ಕೆ ಬೇರೊಬ್ಬರ ಹೆಸರು ನಾಮಕರಣ ಮಾಡುವ ಹುನ್ನಾರವೂ ನಡೆಯುತ್ತಿದೆ ಎಂದು ಆರೋಪಿಸಿದ್ದಾರೆ.

ಈ ಹಿಂದೆ 'ಫೌಂಟೇನ್ ಸರ್ಕಲ್' ಎಂದು ಹೇಳಲಾಗುತ್ತಿದ್ದ, ಬೆಂಗಳೂರು ರಸ್ತೆಯ ಮೂಲಕ ಹಾದು ಬರುವಾಗ ಎದುರಾಗುವ 5 ರಸ್ತೆಗಳನ್ನು ಕೂಡುವ ಬೃಹತ್ ವೃತ್ತಕ್ಕೆ ಮಹಾನಗರ ಪಾಲಿಕೆ ದಾದಾ ಸಾಹೇಬ್ ಫಾಲ್ಕೆ ಪ್ರಶಸ್ತಿ ವಿಜೇತ ಪದ್ಮಭೂಷಣ ಡಾ.ರಾಜ್‌ಕುಮಾರ್ ಅವರ ಹೆಸರನ್ನಿಡುವ ನಿರ್ಣಯ ಕೈಗೊಂಡಿತ್ತು. ಈ ಸಂಬಂಧವಾಗಿ ವೃತ್ತದ ಒಂದು ಭಾಗದಲ್ಲಿ ನಾಮ ಫಲಕದಲ್ಲಿ ಡಾ.ರಾಜ್ ಕುಮಾರ್ ವೃತ್ತ ಎಂದು ನಾಮಫಲಕವನ್ನು ಅಳವಡಿಸಲಾಗಿತ್ತು. ಆದರೆ ಪ್ರಾರಂಭಿಕ ಹಂತದಿಂದಲೂ ಡಾ. ರಾಜ್ ಕುಮಾರ್ ವೃತ್ತ ಎಂದು ಸಾರ್ವಜನಿಕರ ಗಮನ ಸೆಳೆಯುವ ಹಾಗೂ ಗುರುತಿಸುವಂತಹ ಯಾವ ಪ್ರಯತ್ನವನ್ನೂ ಮೈಸೂರು ನಗರಪಾಲಿಕೆ ಕಡೆಯಿಂದ ನಡೆಯಲಿಲ್ಲ. ನೆಪಮಾತ್ರಕ್ಕೆ ವೃತ್ತದ ಮೂಲೆಯೊಂದರಲ್ಲಿ ಗಮನ ಸೆಳೆಯದ ರೀತಿಯಲ್ಲಿ ನಾಮಫಲಕ ಅಳವಡಿಸಲಾಗಿತ್ತು ಎಂದು ಅವರು ಪತ್ರದಲ್ಲಿ ತಿಳಿಸಿದ್ದಾರೆ.


ರಘು ಕೌಟಿಲ್ಯ

ಆದರೆ ರಾಜ್‌ಕುಮಾರ್ ಹೆಸರಿನ ವೃತ್ತದ ಅಸ್ತಿತ್ವ ಸ್ಥಿರೀಕರಿಸಲು ಸಂಚಾರಿ ವಿಭಾಗದ ಸಹಾಯಕ ಪೋಲೀಸ್ ಆಯುಕ್ತರಾಗಿದ್ದ ಸಂದೇಶ್ ಅವರ ಅವಧಿಯಲ್ಲಿ ಪೊಲೀಸ್ ಇಲಾಖೆ "ಡಾ.ರಾಜ್‌ಕುಮಾರ್ ವೃತ್ತ" ಎಂದು ಬಳಸುತ್ತಿತ್ತು ಎಂದಿದ್ದಾರೆ.

ಮೈಸೂರು ನಗರಪಾಲಿಕೆ ಯಾರನ್ನೋ ಓಲೈಸುವ ಸಲುವಾಗಿ ಡಾ.ರಾಜ್ ಕುಮಾರ್ ಅವರ ಹೆಸರನ್ನು ಇಲ್ಲವಾಗಿಸಿ, ಆ ವೃತ್ತಕ್ಕೆ ಬೇರೊಬ್ಬರ ಹೆಸರನ್ನು ನಾಮಕರಣ ಮಾಡುವ ಹುನ್ನಾರ ನಡೆದಿದೆ ಎಂದು ತಿಳಿದುಬಂದಿದೆ. ಈ ನಿಟ್ಟಿನಲ್ಲಿ ಕೂಡಲೇ ತಾವು ವೃತ್ತವನ್ನು ಸೇರುವ ರಸ್ತೆಗಳ ಮೂಲಕ ಬರುವ ಜನರಿಗೆ ಗಮನ ಸೆಳೆಯುವಂತೆ ಡಾ.ರಾಜ್‌ಕುಮಾರ್ ವೃತ್ತ ಎಂದು ಫಲಕ ಅಳವಡಿಸಬೇಕು. ಇಲ್ಲದಿದ್ದರೆ ಮುಂದಾಗುವ ಪರಿಣಾಮಗಳನ್ನು ನಗರಪಾಲಿಕೆ ಎದುರಿಸಬೇಕಾದೀತೆಂದು ರಘು ಕೌಟಿಲ್ಯ ಎಚ್ಚರಿಸಿದ್ದಾರೆ.

ದೇಶ - ವಿದೇಶ

ಟಿವಿ ರಿಮೋಟ್‌ಗಾಗಿ ಹೆತ್ತ ತಾಯಿಯನ್ನೇ ಕೊಂದ ಭಾರತ ಮೂಲದವನಿಗೆ ಜೀವಾವಧಿ ಶಿಕ್ಷೆ



ಲಂಡನ್: ತಾಯಿಯನ್ನು ಹತ್ಯೆ ಮಾಡಿದ್ದ ಆರೋಪದ ಮೇಲೆ ಭಾರತ ಮೂಲದ ವ್ಯಕ್ತಿಗೆ ಬ್ರಿಟನ್ ನ್ಯಾಯಾಲಯವು ಶನಿವಾರ ಜೀವಾವಧಿ ಶಿಕ್ಷೆ ವಿಧಿಸಿದೆ.

2024ರ ಸೆಪ್ಟೆಂಬರ್‌ನಲ್ಲಿ ಟಿವಿ ರಿಮೋಟ್‌ಗಾಗಿ ತಾಯಿ ಮತ್ತು ಮಗನ ನಡುವೆ ನಡೆದ ಜಗಳವು ಕೊಲೆಯಲ್ಲಿ ಅಂತ್ಯವಾಗಿತ್ತು. ಭಾರತ ಮೂಲದ ಸುರ್ಜಿತ್ ಸಿಂಗ್(39) ಎನ್ನುವ ವ್ಯಕ್ತಿಯು, ತನ್ನ ತಾಯಿ ಮೊಹಿಂದರ್ ಕೌರ್(76) ಅವರನ್ನು ಬರ್ಮಿಂಗ್ಹ್ಯಾಮ್‌ನಲ್ಲಿರುವ ಮನೆಯಲ್ಲಿ ಹತ್ಯೆ ಮಾಡಿದ್ದ. ಘಟನೆಯ ನಂತರ ಆರೋಪಿಯನ್ನು ಬರ್ಮಿಂಗ್ಹ್ಯಾಮ್ ಪೊಲೀಸರು ಬಂಧಿಸಿದ್ದರು. ತನಿಖೆಯ ವೇಳೆ ಸುರ್ಜಿತ್ ಸಿಂಗ್ ಅವರ ರಕ್ತದಲ್ಲಿ ಆಲ್ಕೋಹಾಲ್ ಅಂಶ ಕಂಡುಬಂದಿತ್ತು. ಆರೋಪಿಗೆ ಬ್ರಿಟನ್ ನ್ಯಾಯಾಲಯವು ಜೀವಾವಧಿ ಶಿಕ್ಷೆ ಘೋಷಿಸಿದ್ದು, ಕನಿಷ್ಠ 15 ವರ್ಷಗಳ ಸೆರೆವಾಸ ಅನುಭವಿಸಬೇಕಿದೆ.

ಹಾರುವ ಮುನ್ನವೇ ಹಾಟ್ ಏರ್‌ಬಲೂನ್‌ನಲ್ಲಿ ಬೆಂಕಿ: ಮಧ್ಯಪ್ರದೇಶ ಸಿಎಂ ಅಚ್ಚರಿ ಪಾರು

ಭೋಪಾಲ್: ಮಧ್ಯಪ್ರದೇಶದ ಸಿಎಂ ಮೋಹನ್ ಯಾದವ್, ಹಾರಾಟ ನಡೆಸಲು ಸಿದ್ಧತೆ ನಡೆಸಿದ್ದ ಹಾಟ್ ಏರ್ ಬಲೂನ್‌ನ ಎಂಜಿನ್‌ನಲ್ಲಿ ಬೆಂಕಿ ಕಾಣಿಸಿಕೊಂಡ ಘಟನೆ ಮಂದಸೋರ್‌ನಲ್ಲಿ ನಡೆದಿದ್ದು, ಮೋಹನ್ ಯಾದವ್ ಅವರು ಅಪಾಯದಿಂದ ಪಾರಾಗಿದ್ದಾರೆ. ಶನಿವಾರ ಬೆಳಗ್ಗೆ ಮಂದಸೋರ್‌ನ ಗಾಂಧಿ ಸಾಗರ್ ಅರಣ್ಯ ಪ್ರದೇಶದಲ್ಲಿ ಮೋಹನ್ ಯಾದವ್ ಹಾಟ್ ಏರ್ ಬಲೂನ್‌ನಲ್ಲಿ ಹಾರಾಟ ನಡೆಸಲು ಸಿದ್ಧತೆ ನಡೆಸಿದ್ದರು. ಅಷ್ಟರಲ್ಲೇ ಎಂಜಿನ್‌ನ ಭಾಗದಲ್ಲಿ ಬೆಂಕಿ ಹೊತ್ತಿಕೊಂಡಿದೆ. ಕೂಡಲೇ ಭದ್ರತಾ ಸಿಬ್ಬಂದಿ ಅವರನ್ನು ಕೆಳಗಿಳಿಸಿ, ಸುರಕ್ಷಿತ ಸ್ಥಳಕ್ಕೆ ಕರೆದೊಯ್ದಿದ್ದಾರೆ. ಹಾಟ್ ಏರ್ ಬಲೂನ್ ಹಾರಾಟದಲ್ಲಿದ್ದಾಗ ಬೆಂಕಿ ಹೊತ್ತಿಕೊಂಡಿದ್ದರೆ ಭಾರೀ ಅನಾಹುತ ಸಂಭವಿಸುತ್ತಿತ್ತು. ಅದೃಷ್ಟವಶಾತ್ ನೆಲದಲ್ಲಿದ್ದಾಗ ಈ ಅವಘಡ ಸಂಭವಿಸಿದ್ದರಿಂದ ಭಾರೀ ಅನಾಹುತವೊಂದು ತಪ್ಪಿದಂತಾಗಿದೆ. ಈ ಘಟನೆಯ ವೀಡಿಯೋ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದೆ.



ಬ್ರಿಟನ್‌ನಲ್ಲಿ ಸಿಖ್ ಮಹಿಳೆ ಮೇಲೆ ಗ್ಯಾಂಗ್ ರೇಪ್

ಲಂಡನ್: ಯುಕೆಯಲ್ಲಿ ಇಬ್ಬರು ಪುರುಷರ ಗ್ಯಾಂಗ್ ಭಾರತ ಮೂಲದ ಸಿಖ್ ಮಹಿಳೆ ಮೇಲೆ ಸಾಮೂಹಿಕ ಅತ್ಯಾಚಾರ ಮಾಡಿದ್ದು, ಆಕೆಯನ್ನು 'ಮೊದಲು ನಿನ್ನ ದೇಶಕ್ಕೆ ತೊಲಗು' ಎಂದು ಮೂದಲಿಸಿದ್ದಾರೆ.

ಬ್ರಿಟನ್‌ನ ಓಲ್ಡ್‌ಬರಿ ಪಟ್ಟಣದಲ್ಲಿ ಇಪ್ಪತ್ತರ ಹರೆಯದ ಸಿಖ್ ಮಹಿಳೆ ಮೇಲೆ ಇಬ್ಬರು ಪುರುಷರು ಅತ್ಯಾಚಾರ ಎಸಗಿ ಜನಾಂಗೀಯ ಟೀಕೆ ಮಾಡಿದ್ದಾರೆ. ಪೊಲೀಸ್ ಮೂಲಗಳ ಪ್ರಕಾರ ಕಳೆದ ಮಂಗಳವಾರ ಬೆಳಗ್ಗೆ 8:30ರ ಸುಮಾರಿಗೆ ಓಲ್ಡ್‌ಬರಿಯ ಟೇಮ್ ರಸ್ತೆಯ ಬಳಿ ಈ ಘಟನೆ ಸಂಭವಿಸಿದೆ ಎಂದು ಹೇಳಲಾಗಿದೆ. ವಿಚಾರ ತಿಳಿದ ಕೂಡಲೇ ಸ್ಥಳಕ್ಕೆ ದೌಡಾಯಿಸಿದ ಪೊಲೀಸರು ಸ್ಥಳ ಮಹಜರು ಮಾಡಿದ್ದು, ಸಿಸಿಟಿವಿ ಮತ್ತು ವಿಧಿವಿಜ್ಞಾನ ವಿಚಾರಣೆಗಳು ನಡೆಯುತ್ತಿವೆ ಎಂದು ಹೇಳಿದ್ದಾರೆ.

ಪೊಲೀಸರು ಇದನ್ನು ಜನಾಂಗೀಯವಾಗಿ ಉಲ್ಬಣಗೊಂಡ ದಾಳಿ ಎಂದು ಪರಿಗಣಿಸುತ್ತಿದ್ದಾರೆ ಮತ್ತು ದಾಳಿಕೋರರನ್ನು ಪತ್ತೆಹಚ್ಚಲು ಸಹಾಯಕ್ಕಾಗಿ ಸ್ಥಳೀಯರನ್ನು ಒತ್ತಾಯಿಸಿದ್ದಾರೆ. ಶಂಕಿತರನ್ನು 'ಬಿಳಿ ಪುರುಷರು' ಎಂದು ಗುರುತಿಸಲಾಗಿದ್ದು, ಒಬ್ಬರು ತಲೆ ಬೋಳಿಸಿಕೊಂಡ ಮತ್ತು ಗಾಢ ಬಣ್ಣದ ಸ್ವೆಟ್‌ಶರ್ಟ್ ಧರಿಸಿದ್ದರೆ, ಇನ್ನೊಬ್ಬ ಶಂಕಿತ ಬೂದು ಬಣ್ಣದ ಟಾಪ್ ಧರಿಸಿದ್ದರು ಎಂದು ವರದಿಯಾಗಿದೆ.

ಮಿಜೋರಾಂನ ಮೊದಲ ರಾಜಧಾನಿ ಎಕ್ಸ್‌ಪ್ರೆಸ್‌ಗೆ ಮೋದಿ ಹಸಿರು ನಿಶಾನೆ

ಐಜ್ವಾಲ್: ಪ್ರಧಾನಿ ನರೇಂದ್ರ ಮೋದಿ ಮಿಜೋರಾಂನ ಮೊದಲ ರೈಲು ಮಾರ್ಗವನ್ನು ಉದ್ಘಾಟಿಸಿದರು. ಐಜ್ವಾಲ್ ಅನ್ನು ದೆಹಲಿಯೊಂದಿಗೆ ಸಂಪರ್ಕಿಸುವ ರಾಜ್ಯದ ಮೊದಲ ರಾಜಧಾನಿ ಎಕ್ಸ್‌ಪ್ರೆಸ್ ರೈಲಿಗೆ ಹಸಿರು ನಿಶಾನೆ ತೋರಿದರು.



ಭಾರತೀಯ ರೈಲ್ವೆ ಇತಿಹಾಸದಲ್ಲಿ ಅತ್ಯಂತ ಸವಾಲಿನ ಮಾರ್ಗಗಳಲ್ಲಿ ಒಂದೆಂದು ಪರಿಗಣಿಸಲಾದ 8,070 ಕೋಟಿ ರೂ.ವೆಚ್ಚದ ಬೈರಾಬಿ–ಸೈರಾಂಗ್ ರೈಲು ಮಾರ್ಗವನ್ನು 2008–09ರಲ್ಲಿ ಮಂಜೂರು ಮಾಡಿ 2015ರಲ್ಲಿ ನಿರ್ಮಾಣ ಪ್ರಾರಂಭವಾಯಿತು. ಈ ಮಾರ್ಗದಲ್ಲಿ 45 ಸುರಂಗಗಳು, 55 ಪ್ರಮುಖ ಸೇತುವೆಗಳು ಮತ್ತು 87 ಸಣ್ಣ ಸೇತುವೆಗಳು ಸೇರಿವೆ. ಸೈರಾಂಗ್ ಬಳಿಯಿರುವ ಸೇತುವೆ ಸಂಖ್ಯೆ 144, ಕುತುಬ್ ಮಿನಾರ್‌ಗಿಂತ 114 ಮೀಟರ್ ಎತ್ತರವಾಗಿದೆ. ಇದು ದೇಶದ ಅತಿ ಎತ್ತರದ ಪಿಯರ್ ರೈಲ್ವೆ ಸೇತುವೆಯಾಗಿದೆ ಎಂದು ಈಶಾನ್ಯ ಗಡಿನಾಡು ರೈಲ್ವೆಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಈ ಮಾರ್ಗವು ಬೈರಾಬಿ ಹೊರತುಪಡಿಸಿ ಐದು ರಸ್ತೆ ಮೇಲ್ಸೇತುವೆಗಳು ಮತ್ತು 6 ಅಂಡರ್‌ಪಾಸ್‌ಗಳನ್ನು ಒಳಗೊಂಡಿದೆ, ಇದು 4 ಪ್ರಮುಖ ನಿಲ್ದಾಣಗಳನ್ನು ಒಳಗೊಂಡಿದೆ–ಹೊರ್ಟೋಕಿ, ಕಾನ್‌ಪುಯಿ, ಮುವಾಲ್ಖಾಂಗ್ ಮತ್ತು ಸೈರಾಂಗ್ ಆಗಿವೆ.

ಪಾಕಿಸ್ತಾನದಲ್ಲಿ ಎನ್‌ಕೌಂಟರ್‌ಗೆ 35 ಉಗ್ರರು ಬಲಿ; 12 ಸೈನಿಕರು ಹುತಾತ್ಮ

ಖೈಬರ್ ಪಖ್ತುಂಖ್ವಾ: ಪಾಕಿಸ್ತಾನದ ವಾಯುವ್ಯ ಖೈಬರ್ ಪಖ್ತುಂಖ್ವಾ ಪ್ರಾಂತ್ಯದಲ್ಲಿ ನಡೆದ ಎರಡು ಪ್ರತ್ಯೇಕ ಕಾರ್ಯಾಚರಣೆಗಳಲ್ಲಿ ನಿಷೇಧಿತ ತೆಹ್ರೀಕ್–ಇ–ತಾಲಿಬಾನ್ ಪಾಕಿಸ್ತಾನ್(ಟಿಟಿಪಿ)ಗೆ ಸೇರಿದ 35 ಭಯೋತ್ಪಾದಕರು ಸಾವನ್ನಪ್ಪಿದ್ದಾರೆ. 12 ಸೈನಿಕರು ಹುತಾತ್ಮರಾಗಿದ್ದಾರೆ. ಈ ಕಾರ್ಯಾಚರಣೆಗಳನ್ನು ಕಳೆದ ನಾಲ್ಕು ದಿನದಿಂದ ನಡೆಸಲಾಗಿದೆ ಎಂದು ಮಿಲಿಟರಿಯ ಮಾಧ್ಯಮ ವಿಭಾಗವಾದ ಇಂಟರ್–ಸರ್ವೀಸಸ್ ಪಬ್ಲಿಕ್ ರಿಲೇಶನ್ಸ್ (ಐಎಸ್‌ಪಿಆರ್) ತಿಳಿಸಿದೆ. ಬಜೌರ್ ಜಿಲ್ಲೆಯಲ್ಲಿ ಭದ್ರತಾ ಪಡೆಗಳು ಗುಪ್ತಚರ ಮಾಹಿತಿ ಆಧಾರಿತ ಕಾರ್ಯಾಚರಣೆ ನಡೆಸಿದ್ದು, ತೀವ್ರ ಗುಂಡಿನ ಚಕಮಕಿಯಲ್ಲಿ, ಟಿಟಿಪಿಗೆ ಸೇರಿದ 22 ಭಯೋತ್ಪಾದಕರು ಸಾವನ್ನಪ್ಪಿದ್ದಾರೆ ಎಂದು ಅದು ಹೇಳಿದೆ. ದಕ್ಷಿಣ ವಜೀರಿಸ್ತಾನ್ ಜಿಲ್ಲೆಯಲ್ಲಿ ನಡೆದ ಮತ್ತೊಂದು ಎನ್‌ಕೌಂಟರ್‌ನಲ್ಲಿ, 13 ಟಿಟಿಪಿ ಭಯೋತ್ಪಾದಕರನ್ನು ತಟಸ್ಥಗೊಳಿಸಲಾಯಿತು ಮತ್ತು ತೀವ್ರ ಗುಂಡಿನ ಚಕಮಕಿಯಲ್ಲಿ 12 ಸೈನಿಕರು ಪ್ರಾಣ ಕಳೆದುಕೊಂಡರು. ಭಯೋತ್ಪಾದಕರಿಂದ ಶಸ್ತ್ರಾಸ್ತ್ರಗಳು, ಮದ್ದುಗುಂಡುಗಳನ್ನು ವಶಪಡಿಸಿ ಕೊಳ್ಳಲಾಗಿದೆ. ಈ ಭಯೋತ್ಪಾದಕ ಕೃತ್ಯಗಳಲ್ಲಿ ಅಫ್ಘಾನ್ ಪ್ರಜೆಗಳು ಭಾಗಿಯಾಗಿದ್ದಾರೆ ಎಂದು ಐಎಸ್‌ಪಿಆರ್ ಹೇಳಿಕೊಂಡಿದೆ.



ಮೈಸೂರು ಮಿತ್ರ

600 ಕೋಟಿ ರೂ. ವೆಚ್ಚದ ಚತುಷ್ಪಥ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಅನುಮೋದನೆ

ಕೆ.ಆರ್.ಪೇಟೆ, ಸೆ.13– ಜಿಲ್ಲೆಯಲ್ಲಿಯೇ ಅತ್ಯಂತ ದೊಡ್ಡಮಟ್ಟದ ಯೋಜನೆಯಾಗಿರುವ ಪಾಂಡವಪುರ ರೈಲ್ವೆ ಸ್ಟೇಷನ್‌ನಿಂದ ಕೆ.ಆರ್.ಪೇಟೆ ಮಾರ್ಗವಾಗಿ ಚನ್ನರಾಯಪಟ್ಟಣದವರೆಗೆ 600ಕೋಟಿ ರೂ ವೆಚ್ಚದಲ್ಲಿ ಚತುಷ್ಪಥ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಮುಖ್ಯಮಂತ್ರಿಗಳು ಅನುಮೋದನೆ ನೀಡಿದ್ದಾರೆ. ಎಂದು ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಪ್ರಕಟಿಸಿದ್ದಾರೆ.

ತಾಲೂಕಿನ ಶೀಳನೆರೆ ಗ್ರಾಮದಲ್ಲಿ ಅಂದಾಜು 53ಲಕ್ಷ ರೂ.ಗಳ ವೆಚ್ಚದಲ್ಲಿ ನಿರ್ಮಿಸಿರುವ ಡಿಸಿಸಿ ಬ್ಯಾಂಕಿನ ನೂತನ ಕಟ್ಟಡ ಉದ್ಘಾಟಿಸಿ ಜಿಲ್ಲೆಯ ಸಮಗ್ರ ಅಭಿವೃದ್ಧಿಗೆ ನಮ್ಮ ಸರ್ಕಾರವು ಪ್ರಾಮಾಣಿಕವಾಗಿ ಸ್ಪಂದಿಸುತ್ತಿದೆ. ವಿರೋಧ ಪಕ್ಷದ ಶಾಸಕರಿಗೂ ತಲಾ 25ಕೋಟಿ ಅನುದಾನವನ್ನು ನೀಡಿದ್ದು, ಯಾರನ್ನು ಕಡೆಗಣಿಸುವ ಪ್ರಶ್ನೆಯೇ ಇಲ್ಲ ಎಂದರು. ಜಿಲ್ಲೆಯ ಅಭಿವೃದ್ಧಿ ವಿಚಾರದಲ್ಲಿ ನಾವು ರಾಜಕೀಯ ಮಾಡುವುದಿಲ್ಲ. ಪಾಂಡವಪುರದಿಂದ ಚನ್ನರಾಯಪಟ್ಟಣದ 600 ಕೋಟಿ ರೂಪಾಯಿಗಳ ವೆಚ್ಚದ ರಸ್ತೆಅಭಿವೃದ್ಧಿಗೆ ಕಾಮಗಾರಿಯಿಂದ ಮಂಡ್ಯ, ಹಾಸನ ಜಿಲ್ಲೆಗಳು ಸೇರಿದಂತೆ ವಿವಿಧ ಜಿಲ್ಲೆಗಳ ಪ್ರಯಾಣಿಕರಿಗೆ ಹೆಚ್ಚು ಅನುಕೂಲವಾಗಲಿದೆ ರಾಜಕೀಯ ಮಾಡಿದ್ದರೆ ಇದೇ ಅನುದಾನವನ್ನು ನಾಗಮಂಗಲ ತಾಲೂಕಿಗೆ ಹಾಕಿಸಿ ಕೊಳ್ಳಬಹುದಿತ್ತು. ನಮ್ಮ ಸರ್ಕಾರವು ಅಭಿವೃದ್ಧಿಯಲ್ಲಿ ರಾಜಕೀಯ ಮಾಡುತ್ತಿಲ್ಲ ಎಂಬುದಕ್ಕೆ ಇದೇ ತಾಜಾ ಉದಾಹರಣೆ ಎಂದರು

ಡಿಸಿಸಿ ಬ್ಯಾಂಕ್ ಮೂಲಕ ಜಿಲ್ಲೆಯ ಮಹಿಳಾ ಸಂಘಗಳಿಗೆ 200ಕೋಟಿ ಸಾಲ ವನ್ನು ಬಡ್ಡಿ ರಹಿತ ಸಾಲವನ್ನು ನೀಡಲಾಗಿದೆ. ಇದಕ್ಕೆ ತಗಲುವ ಬಡ್ಡಿಯನ್ನು ನಬಾರ್ಡ್ ಬ್ಯಾಂಕಿಗೆ ಸರ್ಕಾರವು ನೀಡುತ್ತಿದೆ ಹಾಗಾಗಿ ಮಹಿಳಾ ಸಂಘಗಳು ಇದರ ಸದುಪಯೋಗ ಪಡೆದುಕೊಂಡು ಗುಡಿ ಕೈಗಾರಿಕೆಗಳನ್ನು ಆರಂಭಿಸಿ ಅಭಿವೃದ್ಧಿ ಸಾಧಿಸಬೇಕು ಎಂದು ಸಚಿವರು ಸಲಹೆ ನೀಡಿದರು.

ಶಾಸಕ ಹೆಚ್.ಟಿ.ಮಂಜು ಬ್ಯಾಂಕಿಂಗ್ ಕೌಂಟರ್ ಉದ್ಘಾಟನೆ ಮಾಡಿದರು. ಡಿಸಿಸಿ ಬ್ಯಾಂಕಿನ ಅಧ್ಯಕ್ಷ ಕೆ.ಸಿ.ಜೋಗಿಗೌಡ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ರಾಜ್ಯ ಸಹಕಾರ ಮಹಾಮಂಡಲದ ಪ್ರಾದೇಶಿಕ ನಿರ್ದೇಶಕ ಎಸ್.ಎಲ್.ಮೋಹನ್ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಕಾರ್ಯಕ್ರಮದಲ್ಲಿ ಮೈಷುಗರ್ ಅಧ್ಯಕ್ಷ ಸಿ.ಡಿ.ಗಂಗಾಧರ, ಮಾಜಿ ಶಾಸಕರಾದ ಕೆ.ಬಿ.ಚಂದ್ರಶೇಖರ್, ಬಿ.ಪ್ರಕಾಶ್, ಟಿಎಪಿಸಿಎಂಎಸ್ ಅಧ್ಯಕ್ಷ ಬಿ.ಎಲ್.ದೇವರಾಜು, ಜಿ. ಪಂ. ಮಾಜಿ ಉಪಾಧ್ಯಕ್ಷ ಎಸ್.ಅಂಬರೀಶ್, ಡಿಸಿಸಿ ಬ್ಯಾಂಕ್ ಉಪಾಧ್ಯಕ್ಷ ಅಶೋಕ್, ಜಿಲ್ಲಾ ಬ್ಯಾಂಕ್ ನಿರ್ದೇಶಕರಾದ ಕಂಬದಹಳ್ಳಿ ಪುಟ್ಟಸ್ವಾಮಿ, ಹೆಚ್.ಅಶೋಕ್, ಶೀಳನೆರೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಶೀಳನೆರೆ ಅಂಬರೀಶ್, ಟಿಎಪಿಸಿಎಂಎಸ್ ನಿರ್ದೇಶಕ ಮೋಹನ್, ಬಲದೇವ್, ತಾಲೂಕು ಗ್ಯಾರಂಟಿ ಯೋಜನೆಗಳ ಅಧ್ಯಕ್ಷ ಎ.ಬಿ. ಕುಮಾರ್, ಗ್ರಾ.ಪಂ. ಅಧ್ಯಕ್ಷ ಯುವ ರಾಜ್, ಕಸಬಾ ಸೊಸೈಟಿ ಅಧ್ಯಕ್ಷ ಕೆ.ಪುರುಷೋತ್ತಮ್, ಪುರಸಭೆ ಅಧ್ಯಕ್ಷೆ ಪಂಕಜ ಪ್ರಕಾಶ್, ಪುರಸಭಾ ಸದಸ್ಯ ಡಿ.ಪ್ರೇಮಕುಮಾರ್, ರಾಜಯ್ಯ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಟಿ.ಎನ್. ದಿವಾಕರ್, ಡಿಸಿಸಿ ಬ್ಯಾಂಕ್ ಸಿಇಓ ವನಜಾಕ್ಷಿ, ಸಚಿವರ ಆಪ್ತ ಸಹಾಯಕ ಚೇತನಾ ಮಹೇಶ್ ಉಪಸ್ಥಿತರಿದ್ದರು.



ತಾಲೂಕಿನ ಶೀಳನೆರೆ ಗ್ರಾಮದಲ್ಲಿ ನಿರ್ಮಿಸಿರುವ ಡಿಸಿಸಿ ಬ್ಯಾಂಕಿನ ನೂತನ ಕಟ್ಟಡದ ಉದ್ಘಾಟನೆಯನ್ನು ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ನೆರವೇರಿಸಿದರು.

ಆಕಸ್ಮಿಕ ಬೆಂಕಿಗೆ 20 ಮೇಕೆಗಳು ಆಹುತಿ

ಮದ್ದೂರು, ಸೆ.13– ಮೇಕೆ ಸಾಕಾಣಿಕಾ ಮನೆ ಆಕಸ್ಮಿಕ ಬೆಂಕಿಗಾಹುತಿಯಾಗಿ 20 ಮೇಕೆಗಳು ಸಾವನ್ನಪ್ಪಿರುವ ಘಟನೆ ತಾಲೂಕಿನ ಬೂದುಗುಪ್ಪೆ ಗ್ರಾಮದಲ್ಲಿ ಸಂಭವಿಸಿದೆ.

ರಾತ್ರಿ ಸುಮಾರು 1 ಗಂಟೆ ಸುಮಾರಿಗೆ ಗ್ರಾಮದ ಗಿರೀಶ್ ಎಂಬವರಿಗೆ ಸೇರಿದ ಮೇಕೆ ಸಾಕಾಣಿಕಾ ಮನೆಗೆ ಆಕಸ್ಮಿಕ ಬೆಂಕಿ ತಗುಲಿದ ಸ್ವಲ್ಪ ಹೊತ್ತಿಗೆ ಪಕ್ಕದ ಮನೆಯಲ್ಲೇ ವಾಸವಿದ್ದ ಗಿರೀಶ್ ಎಂಬುವರು ಮೇಕೆ ಸಾಕಾಣಿಕಾ ಮನೆಯು ಬೆಂಕಿಯಿಂದ ಹೊತ್ತಿ ಉರಿಯುತ್ತಿರುವುದನ್ನು ಗಮನಿಸಿ ಪಟ್ಟಣದ ಅಗ್ನಿ ಶಾಮಕ ಠಾಣೆಗೆ ಕರೆ ಮಾಡಿದ್ದಾರೆ. ಸ್ವಲ್ಪ ಹೊತ್ತಿನಲ್ಲೇ ಅಗ್ನಿ ಶಾಮಕ ವಾಹನ ಆಗಮಿಸಿ ಸಿಬ್ಬಂದಿಗಳು ಬೆಂಕಿ ನಂದಿಸುವ ಕಾರ್ಯ ಮಾಡಿದ್ದಾರಾದರೂ ಅಷ್ಟರಲ್ಲಿ ಅಲ್ಲಿದ್ದ 20 ಮೇಕೆಗಳು, ಟಿಲ್ಲರ್ ಸೇರಿದಂತೆ ಹಲವು ಕೃಷಿ ಯಂತ್ರೋಪಕರಣಗಳು ಬೆಂಕಿಗಾಹುತಿಯಾಗಿದ್ದು ಸಾಕಾಣಿಕಾ ಮನೆಯೂ ಬಹುತೇಕ ಸುಟ್ಟುಹೋಗಿದ್ದು 20 ಲಕ್ಷ ರೂ ನಷ್ಟ ಸಂಭವಿಸಿದೆ.

ಪಟ್ಟಣದ ಪಶು ಸಹಾಯಕ ನಿರ್ದೇಶಕ ಡಾ.ಗೋವಿಂದ್ ಸಾವನ್ನಪ್ಪಿದ ಮೇಕೆಗಳ ಮರಣೋತ್ತರ ಪರೀಕ್ಷೆ ನಡೆಸಿದರು, ಪಿಡಿಓ ಬಸವರಾಜು, ಗ್ರಾಮ ಲೆಕ್ಕಾಧಿಕಾರಿ ಆಂಜನಪ್ಪ ಜೊತೆಗಿದ್ದರು.

ಮದ್ದೂರಲ್ಲಿ ಮತ್ತೊಮ್ಮೆ ಆತಂಕ ಪರಿಸ್ಥಿತಿ; ಪೊಲೀಸರ ಮನವೊಲಿಕೆ

ಪರ್ಯಾಯ ಮಾರ್ಗದಲ್ಲಿ ಸಾಗಿದ ಮೆರವಣಿಗೆ

ಮದ್ದೂರು: ಕಳೆದ ಸೋಮವಾರ ಗಣೇಶ ಮೂರ್ತಿ ಮೆರವಣಿಗೆ ಮೇಲೆ ಕಲ್ಲು ತೂರಾಟದಿಂದ ಉಂಟಾದ ಉದ್ವಿಗ್ನ ಪರಿಸ್ಥಿತಿಯಿಂದ ಮೂರು ದಿನಗಳ ಕಾಲ ನಿಷೇಧಾಜ್ಞೆ ವಿಧಿಸಲಾಗಿದ್ದ ಮದ್ದೂರಿನಲ್ಲಿ ಇಂದು ಮತ್ತೆ ಕೆಲ ಕಾಲ ಬಿಗುವಿನ ವಾತಾವರಣ ನಿರ್ಮಾಣವಾಯಿತು. ಇಂದು ಯುವಕರ ಗುಂಪೊಂದು ಮತ್ತೆ ಮಸೀದಿ ಮುಂದೆಯೇ ಗಣೇಶ ಮೂರ್ತಿ ಮೆರವಣಿಗೆ ಸಾಗಲು ಪಟ್ಟು ಹಿಡಿದಿದ್ದರಿಂದ ಪರಿಸ್ಥಿತಿ ವಿಕೋಪಕ್ಕೆ ಹೋಗುವ ಹಂತದಲ್ಲಿತ್ತು. ಆದರೆ ಪೊಲೀಸರು ಅವರ ಮನವೊಲಿಸಿ, ಪರಿಸ್ಥಿತಿ ಹತೋಟಿಗೆ ತರುವಲ್ಲಿ ಯಶಸ್ವಿಯಾಗಿದ್ದಾರೆ.

ಪಟ್ಟಣದ ಚನ್ನೇಗೌಡ ಬಡಾವಣೆಯ ಯುವಕರ ಗುಂಪೊಂದು ಶನಿವಾರ ಗಣೇಶ ವಿಸರ್ಜನೆಯನ್ನು ಹಮ್ಮಿಕೊಂಡಿತ್ತು. ಸಂಜೆ ಬಡಾವಣೆಯಿಂದ ಹೊರಟ ಮೆರವಣಿಗೆ ವಿವಾದಿತ ರಾಮ್ ರಹೀಮ್ ನಗರದ ಮಸೀದಿ ಸಮೀಪಕ್ಕೆ ಬಂದಾಗ ಪೊಲೀಸರು ಮಸೀದಿ ಮುಂದೆ ಹೋಗದಂತೆ ತಡೆದು, ಆಗ ಮೆರವಣಿಗೆಯಲ್ಲಿದ್ದ ಯುವಕರ ಗುಂಪು ಇದೇ ಮಾರ್ಗವಾಗಿ ನಾವು ಹೋಗಬೇಕು, ಬೇರೆ ಮಾರ್ಗದಲ್ಲಿ ಹೋಗಲು ತಯಾರಿಲ್ಲ ಎಂದು ಪಟ್ಟು ಹಿಡಿದರು. ಈ ಸಂದರ್ಭದಲ್ಲಿ ಪೊಲೀಸರು ಮತ್ತು ಯುವಕರ ನಡುವೆ ಕೆಲ ಹೊತ್ತು ಮಾತಿನ ಚಕಮಕಿಯೂ ನಡೆಯಿತು.



ಇದರಿಂದ ಸ್ಥಳದಲ್ಲಿ ಪ್ರಕ್ಷುಬ್ಧ ಸ್ಥಿತಿಯೂ ನಿರ್ಮಾಣವಾಗಿ, ಆತಂಕ ಮನೆ ಮಾಡಿತು. ಪ್ರಚೋದನೆ ಮುಂದೆ ಯುವಕರ ರೀತಿಯ ಗಲಭೆಗೆ ಎಡೆಮಾಡಿಕೊಡಬಾರದೆಂದು ಜಿಲ್ಲಾ ಉಸ್ತುವಾರಿ ಸಚಿವರು, ಹಾಗೂ ಪೊಲೀಸ್ ಹಿರಿಯ ಅಧಿಕಾರಿಗಳ ಆದೇಶದ ಹಿನ್ನೆಲೆಯಲ್ಲಿ ಪಟ್ಟಣದೆಲ್ಲೆಡೆ ಪೊಲೀಸರು ಎಚ್ಚರಿಕೆ ಕ್ರಮ ಕೈಗೊಂಡಿದ್ದರು. ಕೆಲ ಹೊತ್ತಿನ ನಂತರ ಪೊಲೀಸರು ಪರಿಸ್ಥಿತಿಯನ್ನು ಯುವಕರಿಗೆ ಮನದಟ್ಟು ಮಾಡಿಕೊಟ್ಟು, ಮಸೀದಿ ಮುಂಭಾಗದಲ್ಲಿ ಮೆರವಣಿಗೆ ಕೊಂಡೊಯ್ಯದಂತೆ ಮನವೊಲಿಸುವಲ್ಲಿ ಯಶಸ್ವಿಯಾದರು. ನಂತರ ಯುವಕರು ಪೊಲೀಸರ ಸಲಹೆಯಂತೆ ಮತ್ತೊಂದು ರಸ್ತೆಯಲ್ಲಿ ಗಣೇಶನ ಮೂರ್ತಿ ಕೊಂಡೊಯ್ದಿದ್ದರಿಂದ ಯಾವುದೇ ಅಹಿತಕರ ಘಟನೆಗಳಿಗೆ ಆಸ್ಪದವಾಗಲಿಲ್ಲ

ದಸರಾಗೆ ಸ್ಥಳೀಯ ಸಂಘಸಂಸ್ಥೆಗಳ ಕಡೆಗಣನೆ

ಶ್ರೀರಂಗಪಟ್ಟಣ, ಸೆ.13–ಶ್ರೀರಂಗಪಟ್ಟಣ ದಸರಾ ಆಚರಣೆ ಸಂಘ ಸಂಸ್ಥೆಗಳನ್ನು ನಿರ್ಲಕ್ಷಿಸಿ ಕೇವಲ ಜಿಲ್ಲಾಡಳಿತವೇ ಮಾಡಲು ಮುಂದಾಗಿದ್ದು, ಅಧಿಕಾರಿಗಳ ದಸರಾ ಎಂದು ಬಿಂಬಿಸಲು ಸರ್ಕಾರ ಯತ್ನಿಸುತ್ತಿದೆ ಎಂದು ಕ.ಸಾ.ಪ ತಾಲೂಕು ಅಧ್ಯಕ್ಷ ಸಿದ್ದಲಿಂಗು ಆರೋಪಿಸಿದ್ದಾರೆ.

ಪಟ್ಟಣದ ಪ್ರಥಮ ಪ್ರಜೆಯಾಗಿರುವ ಪುರಸಭಾಧ್ಯಕ್ಷರನ್ನೇ ದಸರೆ ಆಚರಣೆಯ ಯಾವುದೇ ಸಮಿತಿಗೆ ಸೇರಿಸಿಕೊಂಡಿಲ್ಲ. ಪುರಸಭೆ ಸದಸ್ಯರು ಸ್ಥಳೀಯ ಗ್ರಾಪಂ ಸದಸ್ಯರು, ಸೇರಿದಂತೆ ಸುಮಾರು 20ಕ್ಕೂ ಹೆಚ್ಚು ಸಂಘಟನೆಗಳು ಹಾಗೂ ಹಿರಿಯರಿಗೆ ಯಾವುದೇ ಸ್ಥಾನಮಾನ ನೀಡದೆ ಕಡೆಗಾಣಿಸಿದ್ದಾರೆ. ಆದರೆ ಕಾಂಗ್ರೆಸ್ ಜಿಲ್ಲಾಧ್ಯಕ್ಷ ಸಿ.ಡಿ ಗಂಗಾಧರ ಅವರನ್ನು ಮಾತ್ರ ಸದಸ್ಯರನ್ನಾಗಿ ಆಯ್ಕೆ ಮಾಡಿಕೊಳ್ಳುವ ಮೂಲಕ ದಸರಾ ಆಚರಣೆಯನ್ನು ಕಾಂಗ್ರೆಸ್ ಕಾರ್ಯಕ್ರಮವನ್ನಾಗಿ ಮಾಡಲು ಹೊರಟಿದೆ ಎಂದರು.

ಕರವೇ ತಾಲೂಕು ಅಧ್ಯಕ್ಷ ಚಂದಗಾಲು ಶಂಕರ್ ಮಾತನಾಡಿ, ಸೆ.6 ರಂದು ಕರೆದಿದ್ದ ಪೂರ್ವಭಾವಿ ಸಭೆಗೆ ಶಾಸಕರು, ಜಿಲ್ಲಾಧಿಕಾರಿಗಳು ಬಾರದಿದ್ದರಿಂದ ಅಂದಿನ ಸಭೆಯನ್ನು ಮುಂದೂಡಲಾಗಿತ್ತು. ಆನಂತರ ಶಾಸಕರು ಮತ್ತು ಜಿಲ್ಲಾಡಳಿತ ಮತ್ತೆ ಸಭೆಯನ್ನು ಕರೆಯದೆ ತಮಗೆ ತಾವೇ ಸಮಿತಿ ಸಮಿತಿ ರಚನೆ ಮಾಡಿಕೊಂಡು, ಲೋಗೊ ಬಿಡುಗಡೆ ಮಾಡಿ, ಉದ್ಘಾಟಕರನ್ನು ಸಹ ತಾವೇ ಆಯ್ಕೆ ಮಾಡಿಕೊಂಡಿದ್ದಾರೆ ಎಂದು ದೂರಿದರು. ಒಂದೆರಡು ದಿನಗಳಲ್ಲಿ ಸಂಘಟನೆಗಳು ಹಾಗೂ ಸಾರ್ವಜನಿಕರನ್ನು ವಿಶ್ವಾಸಕ್ಕೆ ತೆಗೆದುಕೊಂಡು ದಸರಾ ಆಚರಣೆಗೆ ಮುಂದಾಗದಿದ್ದರೆ ತಾಲೂಕು ಕಚೇರಿ ಮುಂದೆ ಉಗ್ರ ಹೋರಾಟ ನಡೆಸುವುದಾಗಿ ಎಚ್ಚರಿಸಿದರು.

ಅಖಿಲ ಕರ್ನಾಟಕ ಒಕ್ಕಲಿಗರ ಸಂಘ, ಗೌಡಹಳ್ಳಿ ದೇವರಾಜು, ಕರವೇ ಜಿಲ್ಲಾ ಕಾರ್ಯದರ್ಶಿ ಸ್ವಾಮೀಗೌಡ, ರೈತಸಂಘ ಮುಖಂಡ ರಮೇಶ, ಕೆಂಪೇ ಗೌಡ ಯುವ ಶಕ್ತಿ ವೇದಿಕೆ ತಾಲೂಕು ಅಧ್ಯಕ್ಷ ಮಹೇಶ್ ಮಾತನಾಡಿದರು. ರಾಜಶೇಖರ್, ಇಂದ್ರಕುಮಾರ್, ಪುರುಷೋತ್ತಮ್, ಕೃಷ್ಣಪ್ಪ, ಕೆ.ಶೆಟ್ಟಹಳ್ಳಿ ಸುರೇಶ್ ಸೇರಿದಂತೆ ಇತರರು ಇದ್ದರು.

ಗುಣಮಟ್ಟದ ಹಾಲು ಪೂರೈಕೆಯಿಂದ ಅಭಿವೃದ್ಧಿ ಸಾಧ್ಯ

ಭಾರತೀನಗರ: ಗುಣಮಟ್ಟದ ಹಾಲು ಪೂರೈಕೆ ಮಾಡುವುದರಿಂದ ಸಂಘದ ಅಭಿವೃದ್ಧಿ ಸಾಧ್ಯವಾಗಲಿದೆ ಎಂದು ಹುಣ್ಣನದೊಡ್ಡಿ ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘದ ಅಧ್ಯಕ್ಷೆ ಸಿ.ಕೆ.ಸುನಂದ ದೊಡ್ಡಯ್ಯ ಅಭಿಪ್ರಾಯಪಟ್ಟಿದ್ದಾರೆ

ಸಮೀಪದ ಹುಣ್ಣನದೊಡ್ಡಿ ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘದ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯಲ್ಲಿ ಮಾತನಾಡಿ, ಮನ್‌ಮುಲ್ ಸಿಗುವ ಸೌಲಭ್ಯಗಳನ್ನು ಹೈನುಗಾರಿಕೆ ಮಾಡುವ ರೈತರು ಸದುಪಯೋಗಪಡಿಸಿಕೊಳ್ಳಬೇಕು. ಗುಣಮಟ್ಟದ ಹಾಲು ಪೂರೈಕೆಯಿಂದ ಹೆಚ್ಚಿನ ಲಾಭಾಂಶ ಕಾಣುವುದರ ಜೊತೆಗೆ ಸಂಘದ ಅಭಿವೃದ್ಧಿಯೂ ಆಗಲಿದೆ ಪ್ರಸ್ತುತ ಹೈನುಗಾರಿಕೆಯನ್ನು ಮಹಿಳೆಯರು ಹೆಚ್ಚು ಅವಲಂಬಿಸಿರುವುದರಿಂದ ಸರ್ಕಾರ ಮತ್ತಷ್ಟು ಉತ್ತೇಜನ ನೀಡಬೇಕು ಎಂದರು.

ಸಿಇಓ ಸಹನ ವಾರ್ಷಿಕ ವರದಿ ಮಂಡಿಸಿದರು. ಉಪಾಧ್ಯಕ್ಷೆ ಜಯಮ್ಮ ಸಿದ್ದಪ್ಪ, ನಿರ್ದೇಶಕರಾದ ರತ್ನ, ಶಾಂತಮ್ಮ, ಪುಟ್ಟಸಿದ್ದಮ್ಮ, ಪ್ರೇಮಸಿದ್ದಯ್ಯ, ನಂದಿನಿ ವಿನೋದ್‌ರಾಜ್, ಶಿವಮ್ಮ, ಚಿಕ್ಕತಾಯಮ್ಮ ಸೇರಿದಂತೆ ಹಲವರಿದ್ದರು.

ಸ್ವಾವಲಂಬಿ ಬದುಕು ಕಟ್ಟಿಕೊಳ್ಳಲು ಸ್ವರಾಜ್ ಉತ್ಸವ

ಪಾಂಡವಪುರ, ಸೆ.13–ಸ್ಥಳೀಯವಾಗಿ ಸಿಗುವ ಸಂಪನ್ಮೂಲಗಳನ್ನು ಬಳಸಿಕೊಂಡು ಸ್ವಾವಲಂಬಿ ಬದುಕು ಕಟ್ಟಿಕೊಳ್ಳುವ ಬಗ್ಗೆ ಮಾಹಿತಿ ನೀಡುವ ಉದ್ದೇಶದಿಂದ ಸ್ವರಾಜ್ ಉತ್ಸವವನ್ನು ಆಯೋಜಿಸಿದ್ದಾಗಿ ಶಾಸಕ ದರ್ಶನ್‌ಪುಟ್ಟಣ್ಣಯ್ಯ ಹೇಳಿದ್ದಾರೆ.

ಪಟ್ಟಣದ ಪಾಂಡವ ಕ್ರೀಡಾಂಗಣದಲ್ಲಿ ಕೆ.ಎಸ್.ಪುಟ್ಟಣ್ಣಯ್ಯ ಫೌಂಡೇಷನ್ ಹಾಗೂ ರೈತಸಂಘದ ಸಹಯೋಗದಲ್ಲಿ ನಡೆದ ಸ್ವರಾಜ್ ಉತ್ಸವ ಕಾರ್ಯಕ್ರಮದ ನೇತೃತ್ವ ವಹಿಸಿದ್ದ ಅವರು ಶಾಸಕನಾಗಿ ಗ್ರಾಮಗಳಿಗೆ ಹೋದಂತಹ ಸಂದರ್ಭದಲ್ಲಿ ಜನರಿಂದ ಬೇರೆಬೇರೆ ರೀತಿಯ ಸಮಸ್ಯೆಗಳು ಕೇಳಿ ಬಂದವು, ಈ ಎಲ್ಲಾ ಸಮಸ್ಯೆಗಳಿಗೆ ಸೂಕ್ತ ಪರಿಹಾರ ಕಂಡುಕೊಳ್ಳುವ ಸಂಬಂಧ ಹಲವಾರು ಸಂಘ–ಸಂಸ್ಥೆಗಳೊಂದಿಗೆ ಚರ್ಚಿಸಿ ಜನತೆ ಸ್ವಾವಲಂಬಿ ಬದುಕು ಕಟ್ಟಿಕೊಳ್ಳುವುದೊಂದೇ ಪರಿಹಾರ ಎಂದು ಸ್ವರಾಜ್ ಉತ್ಸವ ಕಾರ್ಯಕ್ರಮ ಹಮ್ಮಿಕೊಂಡಿದ್ದೇವೆ ಎಂದರು.

ಗಾಂಧಿಜೀ ಅವರ ಪರಿಕಲ್ಪನೆಯಂತೆ ಗ್ರಾಮಸ್ವರಾಜ್ಯವು ಹಳ್ಳಿಗಳಿಗರಿಗೆ ಸ್ವಾವಲಂಬಿ ಬದುಕು ಕಟ್ಟಿಕೊಡುವುದು, ನಮ್ಮಲ್ಲಿ ಇರುವ ಸ್ಥಳೀಯ ಸಂಪನ್ಮೂಲ ಬಳಕೆ ಮಾಡಿಕೊಂಡು ಸಣ್ಣ ಕೈಗಾರಿಕೆಗಳ ಉಪಉತ್ಪನ್ನಗಳನ್ನು ತಯಾರಿಸಬೇಕು, ದೇಶದಲ್ಲಿ ಶೇ. 15ರಷ್ಟು ಐಟಿಬಿಟಿ ಕಂಪನಿಗಳು ಕೆಲಸ ಮಾಡಿದರೆ, ಶೇ.55ರಿಂದ 60ರಷ್ಟು ಸಣ್ಣ ಕೈಗಾರಿಕೆಗಳು ಕೆಲಸ ಮಾಡುತ್ತಿವೆ. ಗ್ರಾಮ ಸ್ವರಾಜ್ ಉತ್ಸವವು ನಮ್ಮ ಕಲ್ಪನೆಯನ್ನು ಜನರಿಗೆ ತಿಳಿಸುವುದಾಗಿದೆ. ಜನತೆ ಬೇರೆಯವರ ಮೇಲೆ ಅವಲಂಬಿತವಾಗಿ ಬದುಕು ಕಟ್ಟಿಕೊಳ್ಳುವ ಬದಲು ಸ್ವಾವಲಂಬಿ ಬದುಕು ಕಟ್ಟಿಕೊಳ್ಳುವ ಕೆಲಸ ಮಾಡಬೇಕು, ಪ್ರಾಯೋಗಿಕವಾಗಿ ನಡೆದಿರುವ ಈ ಕಾರ್ಯಕ್ರಮ ಯಶಸ್ಸು ಕಂಡರೆ ರೈತಸಂಘದ ಮೂಲಕ ಇಡೀ ರಾಜ್ಯದಲ್ಲಿ ವಿಸ್ತರಣೆ ಮಾಡಲಾಗುವುದು ಎಂದು ಭರವಸೆ ನೀಡಿದರು.

ಸ್ವರಾಜ್ ಉತ್ಸವದಲ್ಲಿ ಕೃಷಿ, ಶಿಕ್ಷಣ, ಆರೋಗ್ಯ, ಉದ್ಯೋಗ, ಮಹಿಳಾ ಸಬಲೀಕರಣ, ಯುವಶಕ್ತಿ, ತಂತ್ರಜ್ಞಾನ, ಆಡಳಿತ, ಪರಿಸರ, ಉದ್ಯಮ ಶೀಲತೆ, ಕೈಗಾರಿಕೆ, ಸಾವಯುವ ಕೃಷಿ ಸೇರಿದಂತೆ ಇನ್ನಿತರೆ ವಿಷಯಗಳ ಬಗ್ಗೆ ಜನತೆಗೆ ಮಾಹಿತಿ ನೀಡಿದರು. ಅಧಿಕಾರಿಗಳು ಉತ್ಸವದಲ್ಲಿ ಭಾಗವಹಿಸಿದ್ದ ಸಂಘ–ಸಂಸ್ಥೆಗಳೊಂದಿಗೆ ಚರ್ಚಿಸಿ ಮಾಹಿತಿ ವಿನಿಮಯ ಮಾಡಿಕೊಂಡರು.

ಸಾವಯುವ ಕೃಷಿ, ಗೊಬ್ಬರ ಬಳಿಕೆ, ಕೈಗಾರಿಕೆ, ಶಿಕ್ಷಣದಲ್ಲಿ ಬದಲಾವಣೆ, ಆಡಳಿತ ವ್ಯವಸ್ಥೆ ಬಗ್ಗೆ ಅರಿವು, ತಂತ್ರಜ್ಞಾನ ಬಳಿಕೆ, ಶಿಕ್ಷಣ ವ್ಯವಸ್ಥೆಯಲ್ಲಿ ಪ್ರಸ್ತುತ ಮಕ್ಕಳಿಗೆ ಯಾವ ರೀತಿಯ ಶಿಕ್ಷಣ ನೀಡಬೇಕು, ಭಾಷಾ ಜ್ಞಾನ, ಆರೋಗ್ಯಕರವಾಗಿ ಜೀವನ ನಡೆಸುವುದು ಹೇಗೆ? ಒಂದು ಹಳ್ಳಿಗಳಲ್ಲಿ ವಿವಿಧ ಭಾಗಗಳಿಂದ ಬರುವ ಆದಾಯ, ಬಂದ ಆದಾಯ ಹೊರಗಡೆ ಹೋಗದಂತೆ ವಹಿಸಬೇಕಾದ ಕ್ರಮಗಳು ಹೀಗೆ ಹಲವಾರು ವಿಷಯಗಳು ಬಗ್ಗೆ ಜನ ರಿಗೆ ಮಾಹಿತಿ ನೀಡಲಾಯಿತು. ಕಾಯಕ್ರಮದಲ್ಲಿ ಭಾಗವಹಿಸಿದ್ದ ಮಹಿಳೆಯರು, ಅಂಗನವಾಡಿ ಕಾರ್ಯಕರ್ತೆಯರು, ವಿದ್ಯಾರ್ಥಿಗಳು, ರೈತರಿಗೆ ಊಟದ ವ್ಯವಸ್ಥೆ ಕಲ್ಪಿಸಲಾಗಿತು.

ಜಿಲ್ಲಾಧಿಕಾರಿ ಡಾ.ಕುಮಾರ್, ಸಿಇಓ ನಂದಿನಿ ಹಾಗೂ ರೈತಸಂಘದ ರಾಜ್ಯಾಧ್ಯಕ್ಷ ಬಡಗಲಪುರ ನಾಗೇಂದ್ರ, ತಹಸೀಲ್ದಾರ್ ಬಸವರೆಡ್ಡಪ್ಪರೋಣದ, ಇಓ ವೀಣಾ ಸೇರಿದಂತೆ ಹಲವು ಅಧಿಕಾರಿಗಳು, ಮುಖಂಡರು ಭಾಗವಹಿಸಿದ್ದರು.



ಶಾಸಕ ದರ್ಶನ್‌ಪುಟ್ಟಣ್ಣಯ್ಯ, ಜಿಲ್ಲಾಧಿಕಾರಿ ಡಾ.ಕುಮಾರ್, ಸಿಇಓ ನಂದಿನಿ ಅವರು ಸ್ವರಾಜ್ ಉತ್ಸವದಲ್ಲಿ ಕೆ.ಎಸ್.ಪುಟ್ಟಣ್ಣಯ್ಯನವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿದರು.

ಒಂದನೇ ಪುಟದಿಂದ

ಗಗನಚುಕ್ಕಿ ಜಲಪಾತೋತ್ಸವಕ್ಕೆ ಚಾಲನೆ

ಸಂಗ್ರಹವಾಗಿರುವ ನೀರಿನ ಪ್ರಮಾಣದ ಮೇಲೆ ತಮಿಳ್ನಾಡಿಗೆ ಎಷ್ಟು ನೀರು ಬಿಡಬೇಕು ಎಂಬುದು ನಿರ್ಧಾರವಾಗುತ್ತದೆ ಎಂದರು.

ಮೇಕೆದಾಟು ಅಣೆಕಟ್ಟು ನಿರ್ಮಾಣವಾದರೆ ಮಳೆಗಾಲದಲ್ಲಿ ಹೆಚ್ಚುವರಿಯಾಗಿ ಬರುವ 66 ಟಿಎಂಸಿ ನೀರನ್ನು ಸಂಗ್ರಹಿಸಬಹುದಾಗಿದ್ದು, ಮಳೆ ಕೊರತೆಯಾದ ಸಂದರ್ಭದಲ್ಲಿ ಇಲ್ಲಿ ಸಂಗ್ರಹವಾಗಿರುವ ನೀರನ್ನು ತಮಿಳ್ನಾಡಿಗೆ ಬಿಡಬಹುದಾಗಿದೆ. ಹೀಗಾಗಿ ಈ ಅಣೆಕಟ್ಟು ನಿರ್ಮಾಣದಿಂದ ಉಭಯ ರಾಜ್ಯಗಳಿಗೂ ಅನುಕೂಲವಾಗುತ್ತದೆ. ಆದ್ದರಿಂದ ಕೇಂದ್ರ ಸರ್ಕಾರ ಈ ಯೋಜನೆಗೆ ಅನುಮತಿ ನೀಡಬೇಕು. ತಮಿಳ್ನಾಡು ಸರ್ಕಾರ ವಿರೋಧ ವ್ಯಕ್ತಪಡಿಸುವುದನ್ನು ನಿಲ್ಲಿಸಿ ಸಹಕರಿಸಬೇಕು ಎಂದು ತಾವು ಮನವಿ ಮಾಡಿಕೊಳ್ಳುತ್ತಿರುವುದಾಗಿ ಮುಖ್ಯಮಂತ್ರಿಗಳು ತಿಳಿಸಿದರು.

ರಮಣೀಯ ದೃಶ್ಯ: ಈ ವರ್ಷ ಉತ್ತಮ ಮಳೆಯಾಗಿರುವುದರಿಂದ ರಾಜ್ಯದಲ್ಲಿ ವಿದ್ಯುತ್ ಅಭಾವ ಸೃಷ್ಟಿಯಾಗುವುದಿಲ್ಲ ಎಂದು ಹೇಳಿದ ಅವರು, ಗಗನ ಚುಕ್ಕಿ ಜಲಪಾತವು ನಯನ ಮನೋಹರ ಪ್ರಕೃತಿ ಸೌಂದರ್ಯವನ್ನು ಹೊಂದಿದೆ. ಕಾವೇರಿ ನದಿ ಕವಲೊಡೆದು ಒಂದು ಭಾಗದಲ್ಲಿ 300 ಅಡಿ ಎತ್ತರದಿಂದ ಧುಮ್ಮಿಕ್ಕುವ ರಮಣೀಯ ದೃಶ್ಯ ಪ್ರವಾಸಿಗರ ಮನಸ್ಸನ್ನು ಸೂರೆಗೊಳ್ಳುತ್ತದೆ. ಈ ಜಲಪಾತ ವೀಕ್ಷಿಸಲು ಹೆಚ್ಚಿನ ಪ್ರವಾಸಿಗರು ಬರಬೇಕು. ಈ ಭಾಗದಲ್ಲಿ ಪ್ರವಾಸೋದ್ಯಮ ಅಭಿವೃದ್ಧಿ ಹೊಂದಿ ಆರ್ಥಿಕ ಬೆಳವಣಿಗೆ ಆಗಬೇಕು ಎಂಬ ಉದ್ದೇಶದಿಂದ ಜಲಪಾತೋತ್ಸವವನ್ನು ನಡೆಸಲಾಗುತ್ತಿದೆ ಎಂದ ಅವರು, ಕಳೆದ 3 ವರ್ಷದಲ್ಲಿ ಸರ್ಕಾರದಲ್ಲಿರುವ ಅಂಕಿ–ಅಂಶಗಳಂತೆ 22 ಲಕ್ಷ ಪ್ರವಾಸಿಗರು ಇಲ್ಲಿಗೆ ಆಗಮಿಸಿದ್ದಾರೆ. ಈ ಪ್ರದೇಶವನ್ನು ಮತ್ತಷ್ಟು ಅಭಿವೃದ್ಧಿಪಡಿಸಿ ಪ್ರವಾಸಿಗರನ್ನು ಸೆಳೆಯಲಾಗುವುದು ಎಂದು ಹೇಳಿದರು.



ಮಂಡ್ಯ ಜಿಲ್ಲಾಡಳಿತ, ಪ್ರವಾಸೋದ್ಯಮ ಇಲಾಖೆ ಹಾಗೂ ಕನ್ನಡ–ಸಂಸ್ಕೃತಿ ಇಲಾಖೆ ಸಂಯುಕ್ತಾಶ್ರಯದಲ್ಲಿ ಶಿವನಸಮುದ್ರದ ಬಳಿ ಇರುವ ಗಗನಚುಕ್ಕಿಯಲ್ಲಿ ಶನಿವಾರ ಆಯೋಜಿಸಿದ್ದ ಜಲಪಾತೋತ್ಸವಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಚಾಲನೆ ನೀಡಿದರು.

ಮೈಶುಗರ್ ಮುಚ್ಚಲ್ಲ: ಮಂಡ್ಯ ಕೃಷಿ ಪ್ರಧಾನ ಜಿಲ್ಲೆಯಾಗಿದ್ದು, ಮಂಡ್ಯ ಸಕ್ಕರೆ ಕಾರ್ಖಾನೆ ಮುಚ್ಚಬಾರದು ಎಂಬ ನಿಟ್ಟಿನಲ್ಲಿ ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ನಂತರ 113 ಕೋಟಿ ರೂ.ಗಳನ್ನು ಕೊಡಲಾ ಗಿದೆ. ಈ ಸಕ್ಕರೆ ಕಾರ್ಖಾನೆ ನಷ್ಟದಲ್ಲಿರ ಬಾರದು. ಲಾಭದಾಯಕವಾಗಿ ಕಾರ್ಖಾನೆ ನಡೆಸುವ ನಿಟ್ಟಿನಲ್ಲಿ ಎಲ್ಲಾ ರೀತಿಯ ಯೋಜನೆಗಳನ್ನು ರೂಪಿಸಿಕೊಳ್ಳಬೇಕು ಎಂದು ಸಲಹೆ ನೀಡಿದ ಅವರು, ನಾನು ಮುಖ್ಯಮಂತ್ರಿಯಾಗಿ ಇರುವವರೆಗೂ ಕಾರ್ಖಾನೆಗೆ ಅನುದಾನ ನೀಡಬಹುದು. ಮುಂದಿನ ದಿನಗಳಲ್ಲಿ ಬೇರೆಯವರು ಮುಖ್ಯಮಂತ್ರಿಯಾದಾಗ ಅನುದಾನ ಸಿಗುತ್ತದೆ ಎಂಬ ನಿರೀಕ್ಷೆ ಇಟ್ಟುಕೊಳ್ಳಲು ಸಾಧ್ಯವಿಲ್ಲ. ಹಾಗಾಗಿ ಕಾರ್ಖಾನೆ ಲಾಭದಾಯಕವಾಗಿ ನಡೆಯಲು ಏನೆಲ್ಲಾ ಯೋಜನೆಗಳನ್ನು ರೂಪಿಸಿಕೊಳ್ಳಬೇಕೋ ಅವೆಲ್ಲವನ್ನೂ ಕಾರ್ಯರೂಪಕ್ಕೆ ತರಬೇಕು ಎಂದು ಸಲಹೆ ನೀಡಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಜಿಲ್ಲೆಯ ಅಭಿವೃದ್ಧಿಗೆ ಒತ್ತು ನೀಡುತ್ತಿದ್ದಾರೆ. ನೀರಾವರಿ ಯೋಜನೆಗೆ ಸಾವಿರಾರು ಕೋಟಿ ರೂ.ಗಳನ್ನು ಬಿಡುಗಡೆ ಮಾಡಿದ್ದು, ಮಳವಳ್ಳಿ ಸೇರಿದಂತೆ ಮಂಡ್ಯ ಜಿಲ್ಲೆಗೆ ಸರ್ಕಾರ ಅಪಾರ ಕೊಡುಗೆ ನೀಡುತ್ತಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಹೇಳಿದರು.

ಶಾಸಕ ಪಿ.ಎಂ.ನರೇಂದ್ರಸ್ವಾಮಿ ಮಾತನಾಡಿ, ಮಳವಳ್ಳಿ ತಾಲೂಕಿನಲ್ಲಿ 60 ಕೋಟಿ ವೆಚ್ಚದ ಹನಿ ನೀರಾವರಿ ಯೋಜನೆ, ಗಗನಚುಕ್ಕಿ ಬಳಿ ಮತ್ಸ್ಯಾಲಯ ಹಾಗೂ 300 ಕೋಟಿ ವೆಚ್ಚದ ನೀರಾವರಿ ಯೋಜನೆಗಳಿಗೆ ಸದ್ಯದಲ್ಲೇ ಮುಖ್ಯಮಂತ್ರಿ ಸಿದ್ದರಾಮಯ್ಯ ಚಾಲನೆ ನೀಡಲಿದ್ದಾರೆ ಎಂದರು.

ಶಾಸಕರಾದ ರಮೇಶ್ ಬಂಡಿಸಿದ್ದೇಗೌಡ, ರವಿಕುಮಾರ್ ಗಣಿಗ, ಮಂಜುನಾಥ್, ವಿಧಾನ ಪರಿಷತ್ ಸದಸ್ಯರಾದ ದಿನೇಶ್ ಗೂಳೀಗೌಡ, ಮಧು ಜಿ.ಮಾದೇಗೌಡ, ಸುಧಾಮದಾಸ್, ಮೈಷುಗರ್ ಅಧ್ಯಕ್ಷ ಸಿ.ಡಿ.ಗಂಗಾಧರ್, ಗ್ರಾಪಂ ಅಧ್ಯಕ್ಷೆ ಚಂದ್ರಮ್ಮ, ಗ್ಯಾರಂಟಿ ಯೋಜನೆ ಜಿಲ್ಲಾಧ್ಯಕ್ಷ ಚಿಕ್ಕಲಿಂಗಯ್ಯ, ಜಿಲ್ಲಾಧಿಕಾರಿ ಡಾ.ಕುಮಾರ, ಜಿಪಂ ಸಿಇಓ ಕೆ.ಆರ್. ನಂದಿನಿ, ಅಪರ ಜಿಲ್ಲಾಧಿಕಾರಿ ಬಿ.ಸಿ.ಶಿವಾನಂದಮೂರ್ತಿ, ಜಿಲ್ಲಾ ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ, ಕಾವೇರಿ ನೀರಾವರಿ ನಿಗಮದ ವ್ಯವಸ್ಥಾಪಕ ನಿರ್ದೇಶಕ ಮಹೇಶ್, ಉಪವಿಭಾಗಾಧಿಕಾರಿ ಶಿವಮೂರ್ತಿ, ಮಾಜಿ ಶಾಸಕ ಕೆ.ಜಿ.ಚಂದ್ರಶೇಖರ್ ಇನ್ನಿತರ ಗಣ್ಯರು ಉಪಸ್ಥಿತರಿದ್ದರು.

ಸಾಂಸ್ಕೃತಿಕ ಕಾರ್ಯಕ್ರಮ: ಜಲಪಾತೋತ್ಸವದ ಅಂಗವಾಗಿ ಇಂದು ಬೆಳಗ್ಗೆಯಿಂದ ರಾತ್ರಿವರೆಗೂ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು.

ಕಲಾವಿದರಾದ ಸಾಧ್ವಿನಿ ಕೊಪ್ಪ, ರವಿ ಮರೂರು, ಹನುಮಂತ ಅವರ ಜಾನಪದ ಸಂಗೀತ ಕಾರ್ಯಕ್ರಮ, ಚಿತ್ರರಂಗದ ಕಲಾವಿದರಾದ ಶಿವರಾಜ್ ಕೆ.ಆರ್.ಪೇಟೆ ತಂಡದ ಹಾಸ್ಯ ರಸಸಂಜೆ, ಅರ್ಜುನ್ ಜನ್ಯ ಹಾಗೂ ಮಂಗಲಿಯವರ ಗಾಯನ, ಚಿತ್ರನಟ ಧನಂಜಯ ಹಾಗೂ ನಟಿ ರಾಗಿಣಿ ದ್ವಿವೇದಿ ಅವರ ನೃತ್ಯ ರಂಜಿಸಿತು.

ಹಾಸನ ಕ್ಯಾಂಟರ್ ದುರಂತದಲ್ಲಿ 10 ಬಲಿ

ಸುದ್ದಿಗೋಷ್ಠಿ ನಡೆಸಿದರು. ಆ ಊರಿನ ಮಗ ನಾನು. ಅದಕ್ಕೆ 93ನೇ ವಯಸ್ಸಿನಲ್ಲೂ ಬಂದಿದ್ದೇನೆ. ನಮ್ಮದು ಸಣ್ಣ ರಾಜಕೀಯ ಪಕ್ಷ. ವೈದ್ಯರ ಜೊತೆ ಚರ್ಚೆ ಮಾಡಿದ್ದೇನೆ, ಮೇಜರ್ ಎಲ್ಲಾ ನಾನೇ ಮಾಡ್ತೀವಿ. ಜಾಸ್ತಿ ಗಾಯ ಆದವರಿಗೆ ಪಕ್ಷದಿಂದ 25 ಸಾವಿರ, ಸಣ್ಣಪುಟ್ಟ ಗಾಯ ಆದವರಿಗೆ 20, ಸ್ವಲ್ಪ ಗಾಯ ಆದವರಿಗೆ 15 ಸಾವಿರ ಕೊಡ್ತೀವಿ. ಮೃತರ ಕುಟುಂಬಕ್ಕೆ ಪಕ್ಷದಿಂದ 1 ಲಕ್ಷ ಹಣ ಕೊಡುತ್ತೇವೆ ಎಂದು ತಿಳಿಸಿದರು.

5 ಲಕ್ಷ ಸಾಲಲ್ಲ, ಸರ್ಕಾರ ಹೆಚ್ಚಿನ ಪರಿಹಾರ ನೀಡಬೇಕು. ದುಡಿಯೋ ಮಕ್ಕಳು ಸಾವನ್ನಪ್ಪಿದ್ದಾರೆ. ನಿಮ್ಮ ಹಣ ಬ್ಯಾಂಕಿನಲ್ಲಿಟ್ಟರೂ ಬರುವ ಬಡ್ಡಿಯಲ್ಲಿ ಬದುಕಲು ಆಗಲ್ಲ. ನೆರೆ ರಾಜ್ಯದಲ್ಲಿ ಹೇಗೆ ಪರಿಹಾರ ಕೊಡುತ್ತಿದ್ದಾರೆ ಹಾಗೆಯೇ ಕೊಡಿ. ವಯಸ್ಸಾದವರು ಇದ್ದಾರೆ, ದುಡಿಯೋರು ಸಾವನ್ನಪ್ಪಿದ್ದಾರೆ, ನಾನು ಇದರಲ್ಲಿ ರಾಜಕೀಯ ಮಾಡಲ್ಲ. ಪರಿಹಾರವಾಗಿ 10 ಲಕ್ಷ ನೀಡಬೇಕು. ಕುಟುಂಬದ ಸ್ಥಿತಿ ನೋಡಿ ಪರಿಹಾರ ಹೆಚ್ಚಿಸಬೇಕು ಎಂದು ಮನವಿ ಮಾಡಿದರು.

ನಾನು ಜಾತಿ ತರಲ್ಲ. ಲೋಕಲ್ ಪೊಲೀಸ್ ಸ್ವಲ್ಪ ಕೇರ್ ತೆಗೆದುಕೊಂಡಿದ್ದರೆ ಇದು ಆಗ್ತಿರಲಿಲ್ಲ ಎಂದು ಅಭಿಪ್ರಾಯಪಟ್ಟರು. ಟ್ರಕ್ ದುರಂತದಲ್ಲಿ ಮೃತಪಟ್ಟವರ ಪೈಕಿ 6 ಮಂದಿ ಹೊಳೆನರಸೀಪುರದವರು. ಸುಮಾರು 65 ವರ್ಷಗಳಿಂದ ಹೊಳೆನರಸೀಪುರ ಕ್ಷೇತ್ರದ ಜೊತೆ ದೇವೇಗೌಡರು ರಾಜಕೀಯ ನಂಟು ಹೊಂದಿದ್ದಾರೆ. ಮೊಸಳೆ ಹೊಸಳ್ಳಿ ಹೋಬಳಿಯಲ್ಲಿ ಹೆಚ್ಚು ಕೌಟುಂಬಿಕ ಸಂಬಂಧವನ್ನು ದೊಡ್ಡಗೌಡ ದಂಪತಿ ಹೊಂದಿದ್ದಾರೆ.

ಜನ್ಮದಿನದಂದೇ ಮೃತಪಟ್ಟ ಮಿಥುನ್: ಹಾಸನದ ಮೊಸಳೆ ಹೊಸಳ್ಳಿಯಲ್ಲಿ ಗಣೇಶ ಮೆರವಣಿಗೆ ವೇಳೆ ನಡೆದ ಅಪಘಾತದಲ್ಲಿ ಮೃತಪಟ್ಟ ಎಂಜಿನಿಯರಿಂಗ್ ವಿದ್ಯಾರ್ಥಿ ಎನ್.ಮಿಥುನ್ (21) ಶುಕ್ರವಾರ ಜನ್ಮದಿನ ಆಚರಿಸಿಕೊಂಡಿದ್ದರು.

ಮಿಥುನ್ ಸಾವಿನ ಸುದ್ದಿ ತಿಳಿಯುತ್ತಿದ್ದಂತೆ ಹುಟ್ಟೂರು, ಹೊಸದುರ್ಗ ತಾಲೂಕು ಗವಿರಂಗಾಪುರದಲ್ಲಿ ನೀರವ ಮೌನ ಆವರಿಸಿದೆ. ಕುಟುಂಬಸ್ಥರ ಆಕ್ರಂದನ ಮುಗಿಲು ಮುಟ್ಟಿದೆ. ಒಬ್ಬನೇ ಮಗನನ್ನು ಕಳೆದುಕೊಂಡ ತಂದೆ ವಿಜಯ ನಾಗರಾಜ್ ಗವಿರಂಗನಾಥಸ್ವಾಮಿ ಬೆಟ್ಟದ ದೇವಾಲಯದಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ಬಿಲ್ ಕಲೆಕ್ಟರ್ ಆಗಿ ಕೆಲಸ ಮಾಡುತ್ತಿದ್ದಾರೆ. ತಾಯಿ ಕುಸುಮಾ ಗೃಹಿಣಿ. ಇಬ್ಬರು ಹೆಣ್ಣು ಮಕ್ಕಳಿದ್ದು, ಒಬ್ಬ ಮಗಳು ಎಂಜಿನಿಯರಿಂಗ್ ಮಾಡಿದ್ದು, ವಿವಾಹವಾಗಿದೆ. ಇನ್ನೊಬ್ಬರು ಹಾಸನದಲ್ಲಿ ಫುಡ್ ಟೆಕ್ನಾಲಜಿ ಓದಿದ್ದಾರೆ. ಒಬ್ಬನೇ ಮಗ ಮಿಥುನ್ ಎಂಜಿನಿಯರಿಂಗ್ ಓದುತ್ತಿದ್ದರು.

ಕೋಮುಬಣ್ಣ ನೀಡಿದರೆ ಕಠಿಣ ಕ್ರಮ: ಟ್ರಕ್ ಚಾಲಕ ಮುಸ್ಲಿಂ ಎಂಬ ರೀತಿಯಲ್ಲಿ ಬಿಂಬಿಸುತ್ತ ವಿಪಕ್ಷದವರು ಈ ಘಟನೆಗೆ ಕೋಮು ಬಣ್ಣ ನೀಡುತ್ತಿರುವುದೂ ಕಂಡುಬಂದಿದೆ. ಸಮಾಜದಲ್ಲಿ ಅಶಾಂತಿಗೆ ಕಾರಣವಾಗುವ ಇಂತಹ ದುರ್ವರ್ತನೆಯೂ ಕಾನೂನು ರೀತಿಯ ಅಪರಾಧವಾಗಿದ್ದು, ಅಂಥವರ ವಿರುದ್ಧವೂ ಕಠಿಣ ಕ್ರಮ ತೆಗೆದುಕೊಳ್ಳಲಾಗುವುದು. ಈ ಬಗ್ಗೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಿಗೆ ಸೂಕ್ತ ನಿರ್ದೇಶನ ನೀಡಲಾಗಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣ ಬೈರೇಗೌಡ ಹೇಳಿದರು.

ದುರಂತ ಸ್ಥಳ ಹಾಗೂ ಆಸ್ಪತ್ರೆಗೆ ಭೇಟಿ ನೀಡಿ ಮಾತನಾಡಿದ ಅವರು, ಹಾಸನದ ಮೊಸಳೆ ಹೊಸಹಳ್ಳಿ ಗ್ರಾಮದಲ್ಲಿ ಶುಕ್ರವಾರ ರಾತ್ರಿ ಗಣೇಶ ವಿಸರ್ಜನಾ ಮೆರವಣಿಗೆ ವೇಳೆ ನಡೆದಿರುವ ದುರಂತ ನಿಜಕ್ಕೂ ದುರದೃಷ್ಟಕರ. ಟ್ರಕ್ ಚಾಲಕ ಭುವನೇಶ್ ಎಂಬಾತನ ನಿರ್ಲಕ್ಷ್ಯವೇ ಈ ದುರಂತಕ್ಕೆ ಮುಖ್ಯ ಕಾರಣ. ಈಗಾಗಲೇ ಆತನ ವಿರುದ್ಧ ಗೋರೂರು ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಿಸಿದ್ದು, ಪೊಲೀಸರು ವಶಕ್ಕೆ ಪಡೆದಿದ್ದಾರೆ. ಜನರಿಂದ ತೀವ್ರ ಥಳಿತ ಕ್ಕೊಳಪಟ್ಟವನಿಗೆ ಚಿಕಿತ್ಸೆ ನೀಡಲಾಗುತ್ತಿದ್ದು, ಆತನ ವಿರುದ್ಧ ಎಲ್ಲ ರೀತಿಯ ಕಠಿಣ ಕಾನೂನು ಕ್ರಮ ಜರುಗಿಸಲಾಗುವುದು ಎಂದು ತಿಳಿಸಿದ್ದಾರೆ.

ಈ ಭಾಗದಲ್ಲಿ ರಸ್ತೆಯನ್ನು ವೈಜ್ಞಾನಿಕವಾಗಿ ನಿರ್ಮಿಸಿಲ್ಲ. ಹೀಗಾಗಿ ರಸ್ತೆಯನ್ನು ಮತ್ತಷ್ಟು ವಿಸ್ತರಣೆ ಮಾಡಬೇಕು ಎಂಬ ಕೂಗೂ ಹಿಂದಿನಿಂದಲೂ ಕೇಳಿಬರುತ್ತಿದೆ. ಈ ಬಗ್ಗೆ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರಕ್ಕೆ ಸರ್ಕಾರದ ಪರವಾಗಿ ನಾನು ಹಾಗೂ ಸಂಸದ ಶ್ರೇಯಸ್ ಎಂ. ಪಟೇಲ್ ಪತ್ರ ಬರೆಯುತ್ತೇವೆ. ದುರಂತದಲ್ಲಿ ಮೃತಪಟ್ಟವರ ಕುಟುಂಬಗಳಿಗೆ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರವೂ ಪರಿಹಾರ ನೀಡಬೇಕಿದೆ. ಈ ಬಗ್ಗೆಯೂ ಪತ್ರದಲ್ಲಿ ಒತ್ತಾಯಿಸಲಾಗುವುದು ಎಂದರು. ಸರ್ಕಾರವೂ ಹೆಚ್ಚು ಪರಿಹಾರ ನೀಡಬೇಕು ಎಂದು ಸ್ಥಳೀಯರು ಆಗ್ರಹಿಸಿದ್ದಾರೆ. ಈ ಬಗ್ಗೆ ಸಿಎಂ ಜೊತೆ ಚರ್ಚಿಸುವುದಾಗಿ ಹೇಳಿದರು.

ಮೃತಪಟ್ಟವರ ವಿವರ...

1. ಪ್ರವೀಣ್‌ಕುಮಾರ್, ಅಂತಿಮ ಬಿಇ ವಿದ್ಯಾರ್ಥಿ, ಬಳ್ಳಾರಿ
2. ರಾಜೇಶ (17) ಕೆ.ಬಿ.ಪಾಳ್ಯ, ಹಳೆಕೋಟೆ ಹೋಬಳಿ, ಹೊಳೆನರಸೀಪುರ
3. ಈಶ್ವರ (17) ಡನಾಯಕನಹಳ್ಳಿಕೊಪ್ಪಲು, ಹೊಳೆನರಸೀಪುರ
4. ಗೋಕುಲ (17) ಮುತ್ತಿಗೆಹೀರಳ್ಳಿ, ಹೊಳೆನರಸೀಪುರ
5. ಕುಮಾರ (25) ಕಬ್ಬಿನಹಳ್ಳಿ, ಹಳೇಕೋಟೆ ಹೋಬಳಿ, ಹೊಳೆನರಸೀಪುರ
6. ಪ್ರವೀಣ (25) ಕಬ್ಬಿನಹಳ್ಳಿ, ಹಳೇಕೋಟೆ ಹೋಬಳಿ, ಹೊಳೆನರಸೀಪುರ
7. ಮಿಥುನ್ (23) ಗವಿಗಂಗಾಪುರ, ಹೊಸದುರ್ಗ ತಾ, ಚಿತ್ರದುರ್ಗ ಜಿಲ್ಲೆ.
8. ಸುರೇಶ ಬಿಇ ವಿದ್ಯಾರ್ಥಿ, ಮಣೆನಹಳ್ಳಿ ಮರ್ಲೆ, ಚಿಕ್ಕಮಗಳೂರು ಜಿಲ್ಲೆ
9. ಪ್ರಭಾಕರ್ (55) ಬಂಟರಹಳ್ಳಿ, ಹಾಸನ ತಾಲೂಕು.
10. ಚಂದನ್(26)



ಎಂಎಂ ವನ್ಯಧಾಮ ಹುಲಿ ಸಂರಕ್ಷಿತ ಪ್ರದೇಶ

ರಕ್ಷಿತಾರಣ್ಯವನ್ನು ಒಟ್ಟುಗೂಡಿಸಿ 906 ಚ.ಕಿ.ಮೀ ಅರಣ್ಯವನ್ನು ಮಲೆಮಹದೇಶ್ವರ ವನ್ಯಜೀವಿಧಾಮ ಎಂದು 2013ರಲ್ಲಿ ಘೋಷಿಸಲಾಗಿತ್ತು. ಈ ವನ್ಯಧಾಮವನ್ನು ಹುಲಿ ಸಂರಕ್ಷಿತ ಪ್ರದೇಶವನ್ನಾಗಿ ಘೋಷಿಸಬೇಕು ಎಂದು ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರಕ್ಕೆ ಅರಣ್ಯ ಇಲಾಖೆ 2017–18ರಲ್ಲಿ ಪ್ರಸ್ತಾವ ಕಳುಹಿಸಿತ್ತು. ಈ ಪ್ರಸ್ತಾವಕ್ಕೆ ರಾಜ್ಯ ವನ್ಯಜೀವಿ ಮಂಡಳಿ 2019ರಲ್ಲಿ ಅನುಮೋದನೆ ನೀಡಿತ್ತು.

ವನ್ಯಧಾಮದಲ್ಲಿರುವ ಗ್ರಾಮಗಳು, ವಸತಿ ಪ್ರದೇಶಗಳ ವಿವರಗಳನ್ನು ಸ್ಪಷ್ಟವಾಗಿ ನಮೂದಿಸುವಂತೆ ಸೂಚಿಸಿ ಪ್ರಾಧಿಕಾರವು ಪ್ರಸ್ತಾವ ವಾಪಸ್ ಕಳುಹಿಸಿತ್ತು. ಆ ಬಳಿಕ, ಅರಣ್ಯ ಇಲಾಖೆ ಪರಿಷ್ಕೃತ ಪ್ರಸ್ತಾವ ಸಲ್ಲಿಸಿತ್ತು. ಘೋಷಣೆಗೆ ಸಂಬಂಧಿಸಿದ ಎಲ್ಲಾ ಪ್ರಕ್ರಿಯೆಗಳೂ ಪೂರ್ಣಗೊಂಡಿದ್ದವು. ಹುಲಿಗಳ ಸಾವಿನ ಬಗ್ಗೆ ತನಿಖೆ ನಡೆಸಿದ್ದ ಎನ್‌ಟಿಸಿಎ ವಿಶೇಷ ತನಿಖಾ ತಂಡವು ವನ್ಯಜೀವಿಧಾಮವನ್ನು ಹುಲಿ ಸಂರಕ್ಷಿತ ಪ್ರದೇಶವನ್ನಾಗಿ ಘೋಷಿಸಬೇಕು ಎಂದು ಶಿಫಾರಸು ಮಾಡಿದ್ದು, ಇದೀಗ ಹುಲಿ ಸಂರಕ್ಷಿತ ಪ್ರದೇಶವನ್ನಾಗಿ ಘೋಷಿಸಬೇಕೆಂಬ ಬೇಡಿಕೆ ಮುನ್ನೆಲೆಗೆ ಬಂದಿದೆ.

ಬಹಿಷ್ಕಾರಕ್ಕೆ ಬಿಸಿಸಿಐ ಚಿಂತನೆ

ವರದಿ ಹೇಳಿದೆ. ಪಾಕಿಸ್ತಾನ ವಿರುದ್ಧದ ಪಂದ್ಯದ ಬಗ್ಗೆ ಅನೇಕ ಅಭಿಮಾನಿಗಳು ಅಸಮಾಧಾನ ವ್ಯಕ್ತಪಡಿಸಿದ್ದರಿಂದ ಭಾರತದಲ್ಲಿ ಬಹಿಷ್ಕಾರ ಅಭಿಯಾನದ ನಂತರ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ ಎಂದು ವರದಿಯಾಗಿದೆ. ಭಯೋತ್ಪಾದಕ ದಾಳಿಯ ನಂತರ ಎರಡೂ ರಾಷ್ಟ್ರಗಳ ನಡುವಿನ ರಾಜತಾಂತ್ರಿಕ ಸಂಬಂಧಕ್ಕೆ ಹೊಡೆತ ಬಿದ್ದಿದ್ದು ಕೆಲವು ಅಭಿಮಾನಿಗಳು ಭಾರತ ಪಾಕಿಸ್ತಾನ ವಿರುದ್ಧ ಕ್ರಿಕೆಟ್ ಆಡುವುದರ ಬಗ್ಗೆ ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಈ ವರ್ಷದ ಆರಂಭದಲ್ಲಿ ದುಬೈನಲ್ಲಿ ನಡೆದ ಭಾರತ ಮತ್ತು ಪಾಕಿಸ್ತಾನ ನಡುವಿನ ಚಾಂಪಿಯನ್ಸ್ ಟ್ರೋಫಿ ಪಂದ್ಯದ ಸಮಯದಲ್ಲಿ, ಎಲ್ಲಾ ಉನ್ನತ ಬಿಸಿಸಿಐ ಅಧಿಕಾರಿಗಳು ಮತ್ತು ಹಲವಾರು ರಾಜ್ಯ ಕ್ರಿಕೆಟ್ ಮಂಡಳಿಗಳ ಪ್ರತಿನಿಧಿಗಳು ಸ್ಥಳದಲ್ಲಿ ಹಾಜರಿದ್ದರು. ಆದರೆ, ಈ ಬಾರಿ, ಬಿಸಿಸಿಐ ಅಧಿಕಾರಿಗಳು ಪ್ರತಿಕ್ರಿಯೆಯ ಭಯದಿಂದ ಅಂತಹ ದೃಶ್ಯಗಳನ್ನು ನಿರೀಕ್ಷಿಸಲಾಗುವುದಿಲ್ಲ ಎಂದು ವರದಿಯಾಗಿದೆ.

50 ಸಾವಿರ ಪರಿಹಾರ

ಆದಷ್ಟು ಶೀಘ್ರ ಚೇತರಿಸಿಕೊಳ್ಳಲಿ ಎಂದಿದ್ದಾರೆ.

ಪ್ರಧಾನಮಂತ್ರಿಗಳ ರಾಷ್ಟ್ರೀಯ ಪರಿಹಾರ ನಿಧಿಯಿಂದ ಮೃತರ ಕುಟುಂಬಕ್ಕೆ ತಲಾ 2 ಲಕ್ಷ ರೂ. ಹಾಗೂ ಗಾಯಾಳುಗಳಿಗೆ ತಲಾ 50 ಸಾವಿರ ರೂ. ಪರಿಹಾರ ಘೋಷಿಸಿದ್ದಾರೆ. ಸಿಎಂ ಸಿದ್ದರಾಮಯ್ಯ ಮೃತರ ಕುಟುಂಬಕ್ಕೆ ಸಾಂತ್ವನ ಹೇಳಿದ್ದು, ಮೃತರ ಕುಟುಂಬಗಳಿಗೆ ತಲಾ 5 ಲಕ್ಷ ರೂ. ಪರಿಹಾರ ಘೋಷಿಸಿದ್ದಾರೆ. ಗಾಯಾಳುಗಳ ಚಿಕಿತ್ಸೆಗೆ ಸೂಕ್ತವಾಗಿ ಸ್ಪಂದಿಸುವಂತೆ ಸೂಚಿಸಿದ್ದು, ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣಬೈರೇಗೌಡ ಈ ಬಗ್ಗೆ ನಿಗಾವಹಿಸಿ ವೈದ್ಯರ ಜೊತೆ ನಿರಂತರ ಸಂಪರ್ಕದಲ್ಲಿದ್ದಾರೆ. ಘಟನೆ ಸಂಭವಿಸಿದ ರಾತ್ರಿಯೇ ಮರಣೋತ್ತರ ಪರೀಕ್ಷೆ ಮುಗಿಸಿ ಮೃತದೇಹಗಳನ್ನು ಕುಟುಂಬದವರಿಗೆ ಹಸ್ತಾಂತರಿಸಲಾಗಿದೆ. ಸುದ್ದಿಗಾರರಿಗೆ ಪ್ರತಿಕ್ರಿಯಿಸಿದ ಮುಖ್ಯಮಂತ್ರಿ, ರಸ್ತೆ ಅಪಘಾತಗಳನ್ನು ತಡೆಗಟ್ಟುವಲ್ಲಿ ಕ್ರಮ ಕೈಗೊಳ್ಳಲಾಗುತ್ತಿದೆ. ಆದಾಗ್ಯೂ ದುರಂತಗಳು ಸಂಭವಿಸುತ್ತಿವೆ ಎಂದು ವಿಷಾದಿಸಿದರು.

31.36 ಕೋಟಿ ದಂಡ ಪಾವತಿ; 13.26 ಲಕ್ಷ ಪ್ರಕರಣಕ್ಕೆ ಮುಕ್ತಿ

ರಾಜ್ಯ ಸರ್ಕಾರ ಅವಕಾಶ ನೀಡಿತ್ತು. ಈ ನಿಟ್ಟಿನಲ್ಲಿ ಠಾಣೆಗಳು ಹಾಗೂ ಅವುಗಳ ವ್ಯಾಪ್ತಿಯ ಪ್ರಮುಖ ಸ್ಥಳಗಳಲ್ಲಿ ದಂಡ ಪಾವತಿ ಕೇಂದ್ರ ಸ್ಥಾಪಿಸಲಾಗಿತ್ತು. ಹಾಗಾಗಿ ಮೈಸೂರು ನಗರ ಮತ್ತು ಜಿಲ್ಲಾ ಪೊಲೀಸರು, 31,36,78,280 ರೂ. ದಂಡ ಸಂಗ್ರಹಿಸಿ, 13,26,145 ಪ್ರಕರಣ ಇತ್ಯರ್ಥಗೊಳಿಸಿದ್ದಾರೆ. ಮೈಸೂರು ನಗರದಲ್ಲಿಯೇ ಸಂಚಾರ ನಿಯಮ ಉಲ್ಲಂಘನೆ ಪ್ರಕರಣಗಳ ಬಾಕಿ ದಂಡ 29,97, 64,030 ರೂ. ವಸೂಲಾಗಿ 12,70,876 ಪ್ರಕರಣ ಇತ್ಯರ್ಥಗೊಳಿಸಿದರೆ, ಜಿಲ್ಲೆಯಲ್ಲಿ 1,39,14, 250 ರೂ. ದಂಡ ವಸೂಲಿ ಮಾಡಿ, 55,269 ಪ್ರಕರಣಗಳನ್ನು ಮುಕ್ತಾಯಗೊಳಿಸಲಾಗಿದೆ.

ಶೇ.50ರಷ್ಟು ರಿಯಾಯ್ತಿ ದರದಲ್ಲಿ ದಂಡ ಪಾವತಿಗೆ ಸಾರ್ವಜನಿಕರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ ಮುಖ್ಯವಾಗಿ ಸಂಚಾರ ನಿಯಮ ಉಲ್ಲಂಘಿಸಿ, ದಂಡ ಪಾವತಿಸುವುದಕ್ಕಿಂತ ಸಂಚಾರ ನಿಯಮ ಪಾಲಿಸಿ, ಹಣದ ಜೊತೆಗೆ ತಮ್ಮ ಜೀವ ಕಾಪಾಡಿಕೊಳ್ಳುವುದು ಮುಖ್ಯ. ದ್ವಿಚಕ್ರ ವಾಹನ ಸವಾರರು ಕಡ್ಡಾಯವಾಗಿ ಹೆಲ್ಮೆಟ್ ಹಾಗೂ ಕಾರು ಚಾಲಕರು ಸೀಲ್ಟ್ ಬೆಲ್ಟ್ ಹಾಕುವುದರಿಂದ ಜೀವಹಾನಿ ತಡೆಗಟ್ಟಬಹುದು. ಈ ನಿಟ್ಟಿನಲ್ಲಿ ಸಾರ್ವಜನಿಕರು ಸಹಕರಿಸಬೇಕು ಎಂದು ಮೈಸೂರು ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್ ತಿಳಿಸಿದ್ದಾರೆ.

ಮೈಸೂರು ದಸರಾ ಮಹೋತ್ಸವ-2025


ಯುವ ಸಂಭ್ರಮದಲ್ಲಿ ಮೇಳೈಸಿದ ನಾಡಿನ ವೀರನಾರಿಯರ ಪ್ರತಿಷ್ಠೆ

ಗಾಯನ, ನೃತ್ಯದಲ್ಲಿ ಹೊಮ್ಮಿದ ಸ್ವಾಭಿಮಾನ, ಸಮಾನತೆ ಸಂದೇಶ





ಬನ್ನಿಮಂಟಪದ ಸಾಯಿರಂಗ ವಿದ್ಯಾಸಂಸ್ಥೆ ಕಾಲೇಜು ತಂಡದಿಂದ ಕನ್ನಡ ನಾಡು-ನುಡಿ ಕುರಿತಾದ ನೃತ್ಯ. ಮತ್ತೊಂದು ಚಿತ್ರದಲ್ಲಿ ಮೈಸೂರಿನ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು ತಂಡದಿಂದ ಅಯೋಧ್ಯೆಯಲ್ಲಿ ಪ್ರತಿಷ್ಠಾಪಿಸಿರುವ ಬಾಲರಾಮ ಮೂರ್ತಿಯ ಕೆತ್ತನೆಯಲ್ಲಿ ಶಿಲ್ಪಿ ಅರುಣ್ ಯೋಗಿರಾಜ್ ಅವರ ಭಕ್ತಿ ಮತ್ತು ಪರಿಶ್ರಮವನ್ನು ನೃತ್ಯದ ಮೂಲಕ ಕಟ್ಟಿಕೊಡಲಾಯಿತು.



ಮಹಿಳಾ ಸರ್ಕಾರಿ ಕಾಲೇಜು(ಸ್ವಾಯತ್ತ) ತಂಡದಿಂದ ಮಹಿಳಾ ಸ್ವಾತಂತ್ರ್ಯ ಹೋರಾಟಗಾರರಾದ ಝಾನ್ಸಿ ರಾಣಿ ಲಕ್ಷ್ಮೀಬಾಯಿ ಕೊಡುಗೆಯನ್ನು ನೃತ್ಯದ ಮೂಲಕ ಅನಾವರಣಗೊಳಿಸಲಾಯಿತು.

ಮೈಸೂರು, ಸೆ.13(ವಿವಿಹೆಚ್)- ಇಂದಿನ ದಿನಗಳಲ್ಲಿ ಮಹಿಳೆಯರು ಎದುರಿಸುತ್ತಿರುವ ಸಮಸ್ಯೆಗಳು, ಸಮಾಜದಲ್ಲಿನ ಅವರ ಸ್ಥಾನಮಾನಗಳು, ಮಹಿಳಾ ಸಬಲೀಕರಣ, ದೇಶಾದ್ಯಂತ ನಾಡು-ನುಡಿ, ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಧೀರ ಮಹಿಳೆಯರು, ಮಹಿಳಾ ರೈತರು.... ಎಲ್ಲರಿಗಿಂತ ನಾವೇನೂ ಕಮ್ಮಿ ಇಲ್ಲ ಎಂಬಂತೆ ಆಪರೇಷನ್ ಸಿಂಧೂರ, ವೀರಯೋಧರ ಹೋರಾಟ ನೃತ್ಯಗಳು... ಇವು ಗಂಗೋತ್ರಿಯ ಬಯಲು ರಂಗಮಂದಿರದಲ್ಲಿ ಮಹಿಳಾ ವಿಶೇಷ ದಿನದಂದು ಕಂಡುಬಂದ ದೃಶ್ಯಗಳು...

ದೇಶಭಕ್ತಿ ಗೀತೆಗಳು, ನಮ್ಮ ವೀರ ಯೋಧರು, ಗಣಪತಿ ಬಪ್ಪ ಮೋರೆಯ.... ಮೈಸೂರಿನ ಹೆಮ್ಮೆ ಶಿಲ್ಪಿ ಅರುಣ್ ಯೋಗಿರಾಜ್ ಅವರ ಶಿಲ್ಪ ಕಲಾಕೃತಿ ಕುರಿತಾದ ವಿಷಯಗಳಿಗೆ ಮಹಿಳಾ ಮಣಿಗಳು ನರ್ತಿಸುವ ಮೂಲಕ ರಂಜಿಸಿದರು. ಇಂದು ಯುವ ಸಂಭ್ರಮದಲ್ಲಿ ಮಹಿಳಾ ಪ್ರಧಾನ ನೃತ್ಯಗಳು ಹೆಚ್ಚಾಗಿ ಕಂಡುಬಂದವು.

ಮೈಸೂರಿನ ಮಾನಸ ಗಂಗೋತ್ರಿಯ ಬಯಲು ರಂಗಮಂದಿರದಲ್ಲಿ ನಡೆಯುತ್ತಿರುವ 'ಯುವ ಸಂಭ್ರಮ'ದ ನಾಲ್ಕನೇ ದಿನವಾದ ಶನಿವಾರ ಮಹಿಳಾ ಮಣಿಗಳೇ ಮಿಂಚಿದರು. ಕನ್ನಡ ನಾಡು-ನುಡಿ ಜೊತೆಗೆ ಹಾಡು-ನೃತ್ಯದ ಮೂಲಕ ಭಕ್ತಿ ಪರಾಕಾಷ್ಠೆ ಮೆರೆದರು.

ಅಯೋಧ್ಯೆಯಲ್ಲಿ ಪ್ರತಿಷ್ಠಾಪಿತವಾದ ರಾಮಲಲ್ಲಾ ಮೂರ್ತಿಯನ್ನು ಕೆತ್ತಿದ ಮೈಸೂರಿನ ಹೆಮ್ಮೆಯ ಶಿಲ್ಪಿ ಅರುಣ್ ಯೋಗಿರಾಜ್ ಅವರ ಕುರಿತು ಮೈಸೂರಿನ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು ವಿದ್ಯಾರ್ಥಿಗಳಿಂದ 'ವಾಸ್ತುಶಿಲ್ಪ' ವಿಷಯದಡಿ ನೃತ್ಯ ಪ್ರದರ್ಶಿಸಿದರು. ನೆರೆದಿದ್ದವರೆಲ್ಲಾ 'ಜೈ ಶ್ರೀರಾಮ್' ಘೋಷಣೆ ಮೊಳಗಿಸಿ ರಾಮನ ಕೃಪೆಗೆ ಪಾತ್ರರಾದರು.

ಸರಸ್ವತಿಪುರಂನ ಜೆಎಸ್‌ಎಸ್ ಮಹಿಳಾ ಕಾಲೇಜು ವಿದ್ಯಾರ್ಥಿಗಳು ಮಹಿಳಾ ಸಬಲೀಕರಣ ವಿಷಯದಡಿ ಕಾಳಿಕಾ ನೃತ್ಯ ಪ್ರದರ್ಶಿಸಿದರು. 'ಬಂದಳಮ್ಮ ಅಮ್ಮ ಕಾಳಿಕಾ' ನೃತ್ಯಕ್ಕೆ ನೆರೆದಿದ್ದ ಪ್ರೇಕ್ಷಕರ ಚಪ್ಪಾಳೆ, ಶಿಳ್ಳೆಗಳ ಹರ್ಷೋದ್ಗಾರ ಮುಗಿಲು ಮುಟ್ಟಿತ್ತು. ಬನ್ನಿಮಂಟಪದ ಸಾಯಿರಂಗ ವಿದ್ಯಾಸಂಸ್ಥೆ ಕಾಲೇಜು ತಂಡ ಈ ಕನ್ನಡ ಮಣ್ಣನು ಮರಿಬೇಡ ಓ ಅಭಿಮಾನಿ..... ಎಂದು ಕನ್ನಡ ಮೇರು ನಟರು, ಕನ್ನಡಕ್ಕಾಗಿ ದುಡಿದ ಜೀವಗಳಿಗೆ ಗೌರವ ಅರ್ಪಿಸಿದರು. ಕನ್ನಡದ ಹಾಡುಗಳಿಗೆ ಬಯಲು ರಂಗಮಂದಿರವೇ ಧನಿಗೂಡಿಸಿ, ಎದ್ದು ಸಂಭ್ರಮಿಸಿತು.

ವೇದಿಕೆಯಲ್ಲಿ ಅತಿಥಿಗಳಿಂದ ಗಾಯನ

ಕಾರ್ಯಕ್ರಮದ ಅತಿಥಿಯಾಗಿದ್ದ ಮಹಿಳಾ ಆಯೋಗದ ಅಧ್ಯಕ್ಷೆ ಡಾ. ನಾಗಲಕ್ಷ್ಮೀ ಚೌಧರಿ ಅವರು 'ಆಕಾಶದ ನೀಲಿಯಲ್ಲಿ ಚಂದ್ರ ತಾರೆ ತೊಟ್ಟಿಲಲ್ಲಿ' ಗೀತೆಯನ್ನು ಹಾಡಿದರು. ಇವರಿಗೆ ಜೊತೆಗೂಡಿದ ಕರ್ನಾಟಕ ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಉಪಾಧ್ಯಕ್ಷೆ ಡಾ.ಪುಷ್ಪಾ ಅಮರ್‌ನಾಥ್, 'ಗೆದ್ದೇ ಗೇಲ್ತಿವಿ ನಾವು ಗೆದ್ದೇ ಗೆಲ್ತಿವಿ, ಒಂದು ದಿನ' ಗೀತೆಯನ್ನು ಹಾಡುವ ಮೂಲಕ ಎಲ್ಲರನ್ನು ರಂಜಿಸಿದರು.

ಬನ್ನೂರಿನ ಬಾಲಕಿಯರ ಸರ್ಕಾರಿ ಪದವಿಪೂರ್ವ ಕಾಲೇಜು ತಂಡದಿಂದ ಆಪರೇಷನ್ ಸಿಂಧೂರ ವಿಜಯ ಪತಾಕೆಗೂ ಹಿಂದೆ ಸಂಭವಿಸಿದ ಘಟನೆ ಕುರಿತು ಜನರಿಗೆ ಮನಮುಟ್ಟುವಂತೆ ಸಾದರಪಡಿಸಿದರು.

ಮೈಸೂರಿನ ಹಯಗ್ರೀವ ಕಾಲೇಜಿನ ವಿದ್ಯಾರ್ಥಿಗಳು ಹಸು ಮತ್ತು ರೈತನ ಜೀವನದ ಬಗ್ಗೆ ನೃತ್ಯ ಪ್ರದರ್ಶಿಸಿ ರೈತ ನಮ್ಮ ಬಾಳಜೋಡಿ ಎಂಬ ಭಾವನೆ ಮೂಡಿಸಿದರು. ಮಹಾರಾಣಿ ವಾಣಿಜ್ಯ ಕಾಲೇಜು ವಿದ್ಯಾರ್ಥಿನಿಯರು ವಿನಾಯಕನ ಬಗ್ಗೆ ವಿಭಿನ್ನವಾಗಿ ನೃತ್ಯ ಮಾಡಿ, ಸರ್ವ ಸಮಾನತೆಯ ಬಗ್ಗೆ ಸಂದೇಶ ಸಾರಿದರು. ಮಾದರಿ ಬಾಲಿಕಾ ಶಾಲೆ ಮೈಸೂರು, ಹೆಣ್ಣಿನ ಶೋಷಣೆಯ ಚಿತ್ರಣವನ್ನು ಮನಮುಟ್ಟುವಂತೆ ಮಾಡಿದರು.

ಬೆಂಗಳೂರು ದಕ್ಷಿಣ ತಾವರೆಕೆರೆ ಶಾರದಾ ಕಾಲೇಜು ವಿದ್ಯಾರ್ಥಿಗಳು ಯುವ ರೈತರು ಹಾಗೂ ಯೋಧರ ಚಿತ್ರಣ ಕಟ್ಟಿಕೊಟ್ಟರು. ಮಹಿಳಾ ಪದವಿ ಪೂರ್ವ ಕಾಲೇಜು ಮೈಸೂರು ವಿದ್ಯಾರ್ಥಿಗಳು ಗುರುಗಳು ಇಲ್ಲದೆ ಯಾರೂ ಗುರಿ ತಲುಪಲು ಸಾಧ್ಯವಿಲ್ಲ. ಗುರುಗಳಿಂದ ಜೀವನ ಪಾವನ ಎಂದು ಗುರುಭಕ್ತಿ ಸಾರಿದರು.

ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜು ಚನ್ನಪಟ್ಟಣ, ಬೇಲೂರು ಹಳೇಬೀಡಿನ ಕನ್ನಡ ನುಡಿ, ವೈಭವ, ಕನ್ನಡದ ಮಹತ್ವ ಜಾನಪದ ಸಿರಿತನ ಹಳ್ಳಿಯ ಸೊಗಡನ್ನು ಇಂದಿಗೂ ಹೇಗೆ ಜೀವಂತವಾಗಿರಿಸಿವೆ ಎಂಬುದನ್ನು ನೃತ್ಯದ ಮೂಲಕ ಬಿಂಬಿಸಿದರು.

ಮಹಿಳಾ ಸಬಲೀಕರಣ ವಿಷಯ ಕುರಿತು ಮದ್ದೂರು ಮಹಿಳಾ ಕಾಲೇಜು ವಿದ್ಯಾರ್ಥಿಗಳು ತಿಳಿಸಿಕೊಟ್ಟರು. ಮದ್ದೂರು ಮಹಿಳಾ ಕಾಲೇಜು ತಂಡದಿಂದ 'ಭಾರತೀಯ ಸೇನೆಯಲ್ಲಿ ಮಹಿಳಾ ಯೋಧರು' ನೃತ್ಯ ಪ್ರದರ್ಶಿಸಿ ನಾರಿಶಕ್ತಿಯನ್ನು ಮೆರೆದರು.

ವೀರವನಿತೆಯರು, ದೇಶಭಕ್ತಿ, ಸಾಂಸ್ಕೃತಿಕ, ಮಹಿಳಾ ಸಬಲೀಕರಣ, ಕನ್ನಡ ನಾಡು-ನುಡಿ ಸೇರಿದಂತೆ ವಿವಿಧ ವಿಷಯಗಳಡಿ ರಾಜ್ಯದ ನಾನಾ ಭಾಗಗಳಿಂದ ಬಂದ 53 ಶಾಲಾ-ಕಾಲೇಜು ತಂಡ ವಿಭಿನ್ನ ಆಕರ್ಷಕ ಪ್ರತಿಭಾ ಪ್ರದರ್ಶನ ನೀಡಿದರು.

ಮಂಗಳಮುಖಿಯರಿಗೂ ಬೇಕಿದೆ ಸಮಾನ ಹಕ್ಕು: ದಿನದ ವಿಶೇಷ ಎಂಬಂತೆ ಬಂದಳು ಬಂದಳು ನೋಡು ಕಲ್ಪನಾ.. ಗೀತೆಗೆ ಹೆಜ್ಜೆ ಹಾಕುವ ಮೂಲಕ ಮಂಗಳಮುಖಿಯರಿಗೆ ಸಮಾಜದಲ್ಲಿ ನೀಡಬೇಕಾದ ಗೌರವ, ಸ್ಥಾನಮಾನದ ಅವಶ್ಯಕತೆಯನ್ನು ಸಾರಲಾಯಿತು.

ನಂಜನಗೂಡಿನ ಜೆಎಸ್‌ಎಸ್ ಶಿಕ್ಷಕರ ಪ್ರಶಿಕ್ಷಣ ಸಂಸ್ಥೆ ಸುತ್ತೂರು ತಂಡದಿಂದ 'ನಮ್ಮನ್ನು ಬದುಕಲು ಬಿಡಿ, ಮಂಗಳಮುಖಿಯರಿಗೂ ಬದುಕಲು ಹಕ್ಕಿದೆ' ಘೋಷಣೆಯೊಂದಿಗೆ 'ನಾವು ಮನುಷ್ಯರೆ ಕಲ್ಪನಾ ಕರ್ನಾಟಕದಲ್ಲಿ ವಿಷಯದಡಿ ಮಂಗಳಮುಖಿಯರ ಧನಿಯಾಗಿ ನೃತ್ಯ ಸಾದರಪಡಿಸಿದರು. ನೆರೆದಿದ್ದವರೆಲ್ಲಾ ಎದ್ದು ನಿಂತು ಚಪ್ಪಾಳೆ ಬಾರಿಸುವ ಮೂಲಕ ವಿನೂತನ ಪ್ರಯತ್ನಕ್ಕೆ ಬೆಂಬಲ ಸೂಚಿಸಿದರು.

ನನ್ನಪ್ಪ ಎಂದರೆ ನನಗೆ ಅಂಬೇಡ್ಕರ್: ಡಾ.ನಾಗಲಕ್ಷ್ಮೀ ಚೌಧರಿ

ಯುವ ಸಂಭ್ರಮದಲ್ಲಿ ಮಹಿಳೆಯರಿಗಾಗಿಯೇ ವಿಶೇಷ ದಿನ ಆಚರಣೆ ಮಾಡುತ್ತಿದ್ದೇವೆ. ಆದರೂ ಪುರುಷರಿಲ್ಲದೇ ಮಹಿಳೆಯರಿಲ್ಲ. ನನ್ನಪ್ಪ ಎಂದರೆ ನನಗೆ ಅಂಬೇಡ್ಕರ್. ನನ್ನ ತಂದೆ ವಿದ್ಯಾಭ್ಯಾಸ ನೀಡದೇ ಹೋಗಿದ್ದರೆ ನಾನಿಂದು ಡಾಕ್ಟರ್ ಓದುತ್ತಿರಲಿಲ್ಲ. ಸಮಾಜದಲ್ಲಿನ ಮಹಿಳೆಯರ ಸ್ಥಿತಿಗತಿಗಳ ಮೇಲೆ ಅಭಿವೃದ್ಧಿಯನ್ನು ಅಳೆಯುತ್ತೇನೆ ಎಂದು ಅಂಬೇಡ್ಕರ್ ಅವರು ಹೇಳಿದ್ದಾರೆ. ಅವರ ಘೋಷವಾಕ್ಯದಂತೆ ಮಹಿಳೆಯರ ಸಬಲೀಕರಣಕ್ಕೆ ಶಿಕ್ಷಣ ಬಹಳ ಪ್ರಮುಖವಾದ ಅಂಶವಾಗಿದ್ದು, ಶಿಕ್ಷಣ ಪಡೆದಾಗ ಮಾತ್ರ ಸ್ವಾವಲಂಬಿಯಾಗಿ ಬದುಕು ರೂಪಿಸಿಕೊಳ್ಳಲು ಸಾಧ್ಯವಾಗುತ್ತದೆ. ಆ ಮೂಲಕ ಸೂರ್ಯನ ಹಾಗೆ ಸ್ವಾಭಿಮಾನಿಗಳಾಗಿ ಸ್ವಪ್ರಕಾಶಮಾನವಾಗಿ ಬೆಳಗುತ್ತೀರಿ. ಯಾರ ಮೇಲೂ ಅವಲಂಬಿತರಾಗದೇ ಹೆಣ್ಣು, ಗಂಡು ಭೇದವಿಲ್ಲದೇ ಆರ್ಥಿಕವಾಗಿ ಸಬಲರಾದಾಗ ಮಾತ್ರ ಈ ದೇಶಕ್ಕೆ, ನಾಡಿಗೆ, ಮಣ್ಣಿಗೆ ಏನನ್ನಾದರೂ ಕೊಡುಗೆಯಾಗಿ ನೀಡುತ್ತೀರಿ. ಇಲ್ಲವಾದಲ್ಲಿ ಜೀವನದುದ್ದಕ್ಕೂ ಇನ್ನೊಬ್ಬರ ಗುಲಾಮರಾಗಿ ಬದುಕಬೇಕಾಗುತ್ತದೆ ಎಂದು ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ಡಾ. ನಾಗಲಕ್ಷ್ಮೀ ಚೌಧರಿ ತಿಳಿಸಿದರು.

ದಸರಾ ಚಲನಚಿತ್ರೋತ್ಸವಕ್ಕೆ ಚಾಲನೆ

● ಇಂದಿನಿಂದ ಸೆ.20ರವರೆಗೆ ಪ್ರಶಸ್ತಿ ವಿಜೇತ ಚಿತ್ರಗಳ ಪ್ರದರ್ಶನ ● 'ಸು ಫ್ರಂ ಸೋ' ಚಿತ್ರತಂಡದೊಂದಿಗೆ ಉಸ್ತುವಾರಿ ಸಚಿವ ಹೆಚ್.ಸಿ.ಮಹದೇವಪ್ಪ ಚಿತ್ರೋತ್ಸವ ಉದ್ಘಾಟನೆ



ಮೈಸೂರು ದಸರಾ ಚಲನಚಿತ್ರೋತ್ಸವಕ್ಕೆ ಖ್ಯಾತ ಹಿರಿಯ ಕಲಾವಿದೆ ದಿವಂಗತ ಬಿ.ಸರೋಜಾದೇವಿ ಸ್ಮರಣೆಯೊಂದಿಗೆ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಚಾಲನೆ ನೀಡಿದರು. ಶಾಸಕರಾದ ತನ್ವೀರ್ ಸೇಠ್, ಟಿ.ಎಸ್.ಶ್ರೀವತ್ಸ, ಡಾ.ಡಿ.ತಿಮ್ಮಯ್ಯ, ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷೆ ಡಾ.ಪುಷ್ಪಾ ಅಮರನಾಥ್, ಅಪರ ಜಿಲ್ಲಾಧಿಕಾರಿ ಡಾ.ಪಿ.ಶಿವರಾಜು ಮತ್ತಿತರರಿದ್ದರು.

ಮೈಸೂರು, ಸೆ.13(ಎಂಕೆ)- ವಿಶ್ವವಿಖ್ಯಾತ ಮೈಸೂರು ದಸರಾ ಮಹೋತ್ಸವ-2025ರ ಪ್ರಮುಖ ಹಾಗೂ ಮೊದಲ ಆಕರ್ಷಣೆಯಾದ ದಸರಾ ಚಲನಚಿತ್ರೋತ್ಸವಕ್ಕೆ ಖ್ಯಾತ ಹಿರಿಯ ಕಲಾವಿದೆ ದಿವಂಗತ ಬಿ.ಸರೋಜಾದೇವಿ ಸ್ಮರಣೆಯೊಂದಿಗೆ ವಿಧ್ಯುಕ್ತ ಚಾಲನೆ ದೊರೆಯಿತು.

ಮೈಸೂರಿನ ಮಾಲ್ ಆಫ್ ಮೈಸೂರ್‌ನ ನೆಲಮಹಡಿಯಲ್ಲಿ ಶನಿವಾರ ಆಯೋಜಿಸಿದ್ದ ದಸರಾ ಚಲನಚಿತ್ರೋತ್ಸವಕ್ಕೆ 'ಸು ಫ್ರಂ ಸೋ' ಚಿತ್ರತಂಡದೊಂದಿಗೆ ದಿವಂಗತ ಬಿ.ಸರೋಜಾದೇವಿ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ, ದೀಪ ಬೆಳಗಿಸುವ ಮೂಲಕ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಚಾಲನೆ ನೀಡಿದರು.

ಬಳಿಕ ಮಾತನಾಡಿದ ಅವರು, ಸಂಗೀತ, ಸಾಹಿತ್ಯ, ಅಭಿನಯದ ಮೂಲಕ ಸಮಾಜದಲ್ಲಿ ಹೆಚ್ಚು ಜನಪ್ರಿಯತೆ ಪಡೆದಿರುವ ಚಲನಚಿತ್ರ ಕ್ಷೇತ್ರವು, ದೇಶದ ಜನರ ಜೀವನದ ಮೇಲೆ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಮತ್ತು ಧಾರ್ಮಿಕ ಶಕ್ತಿಗಳನ್ನು ಸೇರಿಸುವ ಮೂಲಕ ಸಮಾಜಮುಖಿ ಕೆಲಸ ಮಾಡುತ್ತಿದೆ ಎಂದು ಹೇಳಿದರು.

ಭಾರತದ ಲೇಡಿ ಸೂಪರ್‌ಸ್ಟಾರ್ ಆದ ಬಿ.ಸರೋಜಾದೇವಿ ಅವರು, ರಾಷ್ಟ್ರ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಸಾಧನೆ ಮಾಡಿದ್ದಾರೆ. ಕನ್ನಡ, ತೆಲುಗು, ಹಿಂದಿ ಚಿತ್ರಗಳಲ್ಲಿ ತಮ್ಮ ಅಮೋಘ ನಟನೆಯ ಮೂಲಕ ಜನರ ಮನಸನ್ನು ಗೆದ್ದಿದ್ದಾರೆ. ಅವರಿಗೆ ಹಾಗೂ ಡಾ.ವಿಷ್ಣುವರ್ಧನ್ ಅವರಿಗೂ 'ಕರ್ನಾಟಕ ರತ್ನ' ಪ್ರಶಸ್ತಿ ನೀಡಲು ರಾಜ್ಯ ಸರ್ಕಾರ ನಿರ್ಧರಿಸಿದೆ. ಈ ಮೂಲಕ ಅವರ ಸಾಧನೆಯನ್ನು ಜೀವಂತವಾಗಿರುವ ಕೆಲಸ ಮಾಡಲಾಗುತ್ತಿದೆ ಎಂದರು.

ದಸರಾ ಚಲನಚಿತ್ರೋತ್ಸವದಲ್ಲಿ 84 ಚಿತ್ರಗಳ ಪ್ರದರ್ಶನ...!

ಮಾಲ್ ಆಫ್ ಮೈಸೂರಿನ INOX ಸಿನಿಮಾಸ್‌ನ 03 ಪರದೆಗಳಲ್ಲಿ ನಾಳೆ (ಸೆ.14)ಯಿಂದ ಸೆ.20 ರವರೆಗೆ ಸದಭಿರುಚಿಯ ಸಾಮಾಜಿಕ ಸಂದೇಶ ಸಾರುವ ಹಾಗೂ ರಾಷ್ಟ್ರ-ಅಂತರರಾಷ್ಟ್ರೀಯ ಮಟ್ಟದ ಪ್ರಶಸ್ತಿ ಪುರಸ್ಕೃತ 84 ಚಲನಚಿತ್ರಗಳು ಪ್ರದರ್ಶನಗೊಳ್ಳಲಿವೆ.

ಒಗ್ಗಟ್ಟಿನ ಹಬ್ಬ: ಭಾರತೀಯರಾದ ನಾವೆಲ್ಲರೂ ಒಂದೇ ಎಂದು ತೋರಿಸಿ ಕೊಡುವ ಹಬ್ಬ ನಮ್ಮ ಮೈಸೂರು ದಸರಾ. ಎಲ್ಲರೂ ಒಗ್ಗಟ್ಟಿನಿಂದ ಇರುವುದಕ್ಕೆ ಈ ನಾಡಹಬ್ಬ ಸಾಕ್ಷಿಯಾಗಿದೆ. ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು, ಮೈಸೂರು ಮತ್ತು ದಸರಾ ಹಬ್ಬಕ್ಕೆ ಕೊಟ್ಟಿರುವಂತಹ ಕೊಡುಗೆ ಅಪಾರವಾದದ್ದು. ಅದರಂತೇ ನಾವೆಲ್ಲರೂ ಒಗ್ಗಟ್ಟಾಗಿ, ಒಂದೇ ಎಂಬ ಸಂದೇಶವನ್ನು ನೀಡುವುದರ ಮೂಲಕ ಈ ಚಲನಚಿತ್ರೋತ್ಸವವನ್ನು ಉದ್ಘಾಟನೆ ಮಾಡಿದ್ದೇವೆ ಎಂದು ಹೇಳಿದರು.

ದಸರಾ ಅಂದರೆ ಸಂತೋಷ: ಸು ಫ್ರಂ ಸೋ ಖ್ಯಾತಿಯ ನಟಿ ಸಂಧ್ಯಾ ಅರಕೆರೆ ಮಾತನಾಡಿ, ನಾನು ಮೈಸೂರಿನವಳಾಗಿರುವುದು ನನಗೆ ತುಂಬಾ ಸಂತೋಷವಾಗಿದೆ. ಪ್ರತಿ ಬಾರಿ ನಾನು ಮೈಸೂರಿನವರಾಗಿ ದಸರಾ ವೀಕ್ಷಣೆ ಮಾಡುತ್ತಿದ್ದೆ. ಆದರೆ ಈಗ ಸಿನಿಮಾರಂಗದಿಂದ ಬಂದು ದಸರಾ ಹಬ್ಬದಲ್ಲಿ ಭಾಗಿಯಾಗಿರುವುದು ನನಗೆ ತುಂಬಾ ಸಂತೋಷ ಉಂಟು ಮಾಡಿದೆ ಎಂದು ಸಂಭ್ರಮಿಸಿದರು.

ಮೈಸೂರೆಂದರೆ ನನಗೆ ಹೆಚ್ಚು ಪ್ರೀತಿ: ನಟ ಪೃಥ್ವಿ ಅಂಬರ್ ಅವರು ಮಾತನಾಡಿ, ಕೆಡುಕನ್ನು ಗೆಲ್ಲುವಂತಹ ಒಳಿತನ್ನು ಮಾಡುವಂತಹ ಒಂದು ಹಬ್ಬ ಎಂದರೆ ಅದು ಮೈಸೂರು ದಸರಾ ಹಬ್ಬ. ಮೈಸೂರು ಎಂದರೆ ನನಗೆ ಚಿಕ್ಕ ವಯಸ್ಸಿನಿಂದಲೂ ಒಂದು ದೊಡ್ಡ ಸೆಳೆತ. ಐತಿಹಾಸಿಕವಾಗಿ, ಸಾಂಸ್ಕೃತಿಕವಾಗಿ ಶ್ರೀಮಂತವಾಗಿರುವ ಜಿಲ್ಲೆ ಮೈಸೂರು. ಮೈಸೂರು ಎಂದರೆ ನನಗೆ ಹೆಚ್ಚು ಪ್ರೀತಿ ಎಂದು ಹರ್ಷವ್ಯಕ್ತಪಡಿಸಿದರು.

ಇದೇ ವೇಳೆ ಗಾಯಕ ಜಸ್ಕರನ್ ಸಿಂಗ್, 'ಕೃಷ್ಣಂ ಪ್ರಣಯ ಸಖಿ' ಚಿತ್ರದ 'ದ್ವಾಪರ ದಾಟುತ ನನ್ನನೆ ನೋಡಲು ನನ್ನನ್ನೇ ಸೇರಲು ಬಂದ ರಾಧಿಕೆ' ಹಾಡನ್ನು ಹಾಡುವ ಮೂಲಕ ನೆರೆದಿದ್ದವರ ರಂಜಿಸಿದರು. ಹಾಗೆಯೇ ಸಿನಿಮಾ ಕ್ಷೇತ್ರದಲ್ಲಿ ಸಾಧನೆ ಮಾಡಿದ ವಿವಿಧ ಕಲಾವಿದರು ನಿರ್ದೇಶಕರಿಗೆ ಸನ್ಮಾನ ಮಾಡಲಾಯಿತು.

ಶಾಸಕರಾದ ತನ್ವೀರ್ ಸೇಠ್, ಟಿ.ಎಸ್.ಶ್ರೀವತ್ಸ, ಡಾ.ಡಿ.ತಿಮ್ಮಯ್ಯ, ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷೆ ಡಾ.ಪುಷ್ಪಾ ಅಮರನಾಥ್, ಅಪರ ಜಿಲ್ಲಾಧಿಕಾರಿ ಡಾ.ಪಿ.ಶಿವರಾಜು, ಚಲನಚಿತ್ರೋತ್ಸವ ಉಪ ಸಮಿತಿ ಉಪ ವಿಶೇಷಾಧಿಕಾರಿ ವಿಜಯ್‌ಕುಮಾರ್, ಕಾರ್ಯಾಧ್ಯಕ್ಷೆ ಕೆ.ಶೋಭಾ. ಕಾರ್ಯದರ್ಶಿ ಟಿ.ಕೆ.ಹರೀಶ್, ನಟಿ ಅಂಜಲಿ, ಸಂಗೀತ ನಿರ್ದೇಶಕ ನಾಗಾರ್ಜುನ ಶರ್ಮಾ, ನೃತ್ಯ ನಿರ್ದೇಶಕ ಮುರುಗ ಮತ್ತಿತರರು ಉಪಸ್ಥಿತರಿದ್ದರು.

ಮೈಸೂರು ದಸರಾಕ್ಕೆ ರಂಗಾಯಣದ ನವರಾತ್ರಿ ರಂಗೋತ್ಸವದ ಮೆರುಗು

ಸೆ.22ರಿಂದ ಅ.1ರವರೆಗೆ ಬಿ.ವಿ.ಕಾರಂತ ರಂಗೋತ್ಸವ ಒಳಗೊಂಡಂತೆ ನವರಸಗಳ ನಾಟಕ ಪ್ರದರ್ಶನ



ಚಿತ್ರಪಟ ರಾಮಾಯಣ ನಾಟಕದ ದೃಶ್ಯ

ಮೈಸೂರು, ಸೆ.13(ಎಂಕೆ)- ಕಲಾವಿದರೂ, ಕಲಾಸಕ್ತರಿಂದ ಗಿಜಿಗುಡುವ ಮೈಸೂರು ರಂಗಾಯಣದಲ್ಲಿ ಮನಸೆಳೆಯುವ ನಾಟಕಗಳ ಹೂರಣದೊಂದಿಗೆ ನವರಾತ್ರಿ ರಂಗೋತ್ಸವ ಕಳೆಗಟ್ಟುತ್ತಿದೆ...

ನಾಡಹಬ್ಬ ಮೈಸೂರು ದಸರಾ ಮಹೋತ್ಸವದ ಅಂಗವಾಗಿ ಹತ್ತಾರು ವೇದಿಕೆಗಳಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳು ಕಲಾಪ್ರೇಮಿಗಳಿಗೆ ಸಂಗೀತ ರಸದೌತಣ ನೀಡಿದರೆ, ರಂಗಾಯಣದಲ್ಲಿ ನವರಸಗಳನ್ನೂ ಒಳಗೊಂಡ ನಾಟಕಗಳ ಪ್ರದರ್ಶನ ರಂಗಾಸಕ್ತರ ಮನಸೂರೆಗೊಳ್ಳಲು ಅಣಿಯಾಗುತ್ತಿವೆ.

ಈ ವರ್ಷ ರಂಗಭೀಷ್ಮ ಬಿ.ವಿ.ಕಾರಂತ ಕಾಲೇಜು ರಂಗೋತ್ಸವವನ್ನೊಳಗೊಂಡಂತೆ ಸೆ.22 ರಿಂದ ಅ.1ರವರೆಗೆ ನವರಾತ್ರಿ ರಂಗೋತ್ಸವ ಆಯೋಜನೆಗೊಳ್ಳಲಿದ್ದು, ಮೈಸೂರಿನ ವಿವಿಧ ಕಾಲೇಜು ತಂಡಗಳಿಂದ ಜನಪ್ರಿಯ ನಾಟಕಗಳು ಭೂಮಿಗೀತ ವೇದಿಕೆಯಲ್ಲಿ ಪ್ರದರ್ಶನಗೊಳ್ಳಲಿವೆ. ಸೆ.22ರಂದು ಸಂಜೆ 5.30ಕ್ಕೆ ನವರಾತ್ರಿ ರಂಗೋತ್ಸವ ಉದ್ಘಾಟನೆಗೊಳ್ಳಲಿದ್ದು, ಅದೇ ದಿನ 6.30ಕ್ಕೆ ಮಂಜುನಾಥ ಬೆಳಕೆರೆ ರಚನೆ, ಶಕುಂತಲಾ ಹೆಗಡೆ ನಿರ್ದೇಶನದೊಂದಿಗೆ ಸರಸ್ವತಿಪುರಂನ ಜೆಎಸ್‌ಎಸ್ ಮಹಿಳಾ ಕಾಲೇಜು ವಿದ್ಯಾರ್ಥಿಗಳು 'ಶರೀಫ' ನಾಟಕ ಪ್ರದರ್ಶನ ನೀಡಲಿದ್ದಾರೆ.

ಸೆ.23ರಂದು ಚಾಮರಾಜೇಂದ್ರ ಸರ್ಕಾರಿ ದೃಶ್ಯಕಲಾ ಕಾಲೇಜು(ಕಾವಾ) ವಿದ್ಯಾರ್ಥಿಗಳಿಂದ ನೇಮಿಚಂದ್ರ ಅವರ ಕಾದಂಬರಿ ಆಧಾರಿತ 'ನೋವಿಗದ್ದಿದ ಕುಂಚ' ನಾಟಕ ಪ್ರದರ್ಶನವಾಗಲಿದ್ದು, ವಿನೋದ್ ರಂಗ ನಿರ್ದೇಶಿಸಿದ್ದಾರೆ. ಸೆ.24ರಂದು ಹಾರ್ಡ್ವಿಕ್ ಪದವಿ ಪೂರ್ವ ಕಾಲೇಜು ವಿದ್ಯಾರ್ಥಿಗಳಿಂದ ಅಂಕರಾಜು ಎನ್.ಕೊಳ್ಳೇಗಾಲ ನಿರ್ದೇಶನದಲ್ಲಿ 'ರಾಕ್ಷಸ', ಸೆ.25ರಂದು ಹುಣಸೂರಿನ ಲಾ ಸಲೆಟ್ ಪದವಿ ಪೂರ್ವ ಕಾಲೇಜು ವಿದ್ಯಾರ್ಥಿಗಳಿಂದ ಎಚ್.ಎಸ್.ವೆಂಕಟೇಶಮೂರ್ತಿ ರಚನೆ ಮತ್ತು ಎ.ಎಸ್.ಸುಭಾಷ್ ನಿರ್ದೇಶನದಲ್ಲಿ 'ಚಿತ್ರಪಟ ರಾಮಾಯಣ', ಸೆ.26ರಂದು ಎಂಎಂಕೆ-ಎಸ್‌ಡಿಎಂ ಮಹಿಳಾ ಮಹಾವಿದ್ಯಾಲಯ ವಿದ್ಯಾರ್ಥಿಗಳಿಂದ ರಮೇಶ್ ಕೆ.ಬೆಣಕಲ್ ನಿರ್ದೇಶನದಲ್ಲಿ ಬೀಚಿ ಬರಹಗಳನ್ನಾಧರಿಸಿದ 'ಶ್ರೀ ತಿರ್ಮ್ಮಾಣಮಸ್ತು' ನಾಟಕ ಪ್ರದರ್ಶನವಾಗಲಿದೆ.

400 ವಿದ್ಯಾರ್ಥಿಗಳು ಭಾಗಿ...

ರಂಗಭೂಮಿಗೆ ಯುವ ಸಮೂಹವನ್ನು ಕರೆತರುವ ನಿಟ್ಟಿನಲ್ಲಿ ನವರಾತ್ರಿ ರಂಗೋತ್ಸವ ರೂಪಿಸಲಾಗಿದೆ. ಪರೀಕ್ಷೆ ಹಾಗೂ ಈ ವರ್ಷ ದಸರಾ ಸ್ವಲ್ಪ ದಿನಗಳು ಬೇಗ ಬಂದಿದ್ದರಿಂದ ಕಾಲೇಜು ರಂಗೋತ್ಸವದ ಜೊತೆಗೆ ನವರಾತ್ರಿ ರಂಗೋತ್ಸವ ಒಗ್ಗೂಡಿಸಲಾಗಿದ್ದು, ವಿವಿಧ ಕಾಲೇಜುಗಳಿಂದ ಸುಮಾರು 400 ವಿದ್ಯಾರ್ಥಿಗಳು ಭಾಗವಹಿಸಲಿದ್ದಾರೆ.

- **ಸತೀಶ್ ತಿಪಟೂರು,** ನಿರ್ದೇಶಕರು, ಮೈಸೂರು ರಂಗಾಯಣ

ಹಾಗೆಯೇ ಸೆ.27 ರಂದು ಮಳವಳ್ಳಿ ಶಾಂತಿ ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು ವಿದ್ಯಾರ್ಥಿಗಳಿಂದ ಡಾ.ಎಸ್.ನಟರಾಜು ಬೂದಾಳ್ ರಚನೆ, ಮಧು ಮಳವಳ್ಳಿ ನಿರ್ದೇಶನದ 'ಕಲ್ಯಾಣದ ಬಾಗಿಲು', ಸೆ.28 ರಂದು ಮಹಾಜನ ಪದವಿ ಕಾಲೇಜು ವಿದ್ಯಾರ್ಥಿಗಳಿಂದ ಕೆ.ವಿಅಕ್ಷರ ರಚನೆ ಮತ್ತು ಪ್ರವೀಣ್ ಬೆಳ್ಳಿ ನಿರ್ದೇಶನದಲ್ಲಿ 'ಚೂರಿಕಟ್ಟೆ ಅರ್ಥಾತ್ ಕಲ್ಯಾಣಪುರ', ಸೆ.29 ರಂದು ಹೆಚ್.ಎಸ್.ಶಿವಪ್ರಕಾಶ್ ರಚನೆ ಮತ್ತು ಹುಣಸೂರು ಅರ್ಜುನ್ ನಿರ್ದೇಶನದಲ್ಲಿ 'ಮಾದಾರಿ ಮಾದಯ್ಯ', ಸೆ.30ರಂದು ಗೌತಮ ಸಾಂಸ್ಕೃತಿಕ ಸಂಸ್ಥೆ ತಂಡದಿಂದ ದ.ರಾ.ಬೇಂದ್ರೆ ರಚನೆ ಮತ್ತು ಕೃಷ್ಣಮೂರ್ತಿ ನಿರ್ದೇಶನದಲ್ಲಿ 'ಜಾತ್ರೆ' ಹಾಗೂ ಅ.1 ರಂದು ನಿರಂತರ ಫೌಂಡೇಶನ್ ತಂಡದಿಂದ ದೇವಕಿ ಧರ್ಮಿಷ್ಠೆ ಸುಗುಣ ರಚನೆ ಮತ್ತು ಎಂ.ಎಂ.ಸುಗುಣ ನಿರ್ದೇಶನದಲ್ಲಿ 'ಜನ ಗಣ ಮನ' ನಾಟಕ ಪ್ರದರ್ಶನಗೊಳ್ಳಲಿದೆ.

ಜಾನಪದ ನೃತ್ಯ ಪ್ರದರ್ಶನ: ನಾಟಕಗಳ ಪ್ರದರ್ಶನಕ್ಕೂ ಮುನ್ನ ಸಂಜೆ 5.30ಕ್ಕೆ ರಂಗಾಯಣದ ವನರಂಗದಲ್ಲಿ ಅಂತರರಾಜ್ಯ ಕಲಾತಂಡಗಳಿಂದ ಜಾನಪದ ನೃತ್ಯ ಪ್ರದರ್ಶನ ಇರಲಿದೆ. ತೆಲಂಗಾಣದ 'ಲಂಬಾಡಿ ಅಥವಾ ಮಾತುರಿ', ಮಹಾರಾಷ್ಟ್ರದ 'ಲಾವಣಿ, ಹೋಲಿ', ಗುಜರಾತ್‌ನ 'ಸಿದ್ದಿ ಧುಮಾಲ್ ಮತ್ತು ರಥ್ವಾ', ಒರಿಸ್ಸಾದ 'ಸಂಬಲ್‌ಪುರಿ', ಕೇರಳದ 'ತಿರುವತ್ತಿರಕಳಿ ಮತ್ತು ಒಪ್ಪಾನ್', ಅಸ್ಸಾಂನ 'ಬಿಹು, ಗುಸಾನ್', ಮಧ್ಯಪ್ರದೇಶದ 'ನೋರ್‍ತಾ ಮತ್ತು ಸೈತಾಮ್', ಆಂಧ್ರಪ್ರದೇಶದ 'ತಪ್ಪಾಟ್ಟಗಳು' ಹಾಗೂ ತಮಿಳುನಾಡಿನ 'ಕರಗಂ, ಕಾವಾಡಿ, ತಟ್ಟಪ್ಪಮ್' ಜಾನಪದ ನೃತ್ಯಗಳು ಪ್ರದರ್ಶನಗೊಳ್ಳಲಿವೆ ಎಂದು ರಂಗಾಯಣ ನಿರ್ದೇಶಕ ಸತೀಶ್ ತಿಪಟೂರು 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಯುವ ದಸರಾದಲ್ಲಿ ದೇಶೀಯ ಸಂಸ್ಕೃತಿ, ಪರಂಪರೆ ಬಿಂಬಿಸಲಿ



ಸಂದೇಶ್ ಸ್ವಾಮಿ

ಮೈಸೂರು, ಸೆ.13- ಮೈಸೂರು ದಸರಾ ಅಂಗವಾಗಿ ಆಯೋಜಿಸಲಾಗುವ 'ಯುವ ದಸರಾ' ಕಾರ್ಯಕ್ರಮ, ದೇಶೀಯ ಸಂಸ್ಕೃತಿ ಮತ್ತು ಪರಂಪರೆ ಬಿಂಬಿಸುವ ವೇದಿಕೆಯಾಗಿರಲಿ ಎಂದು ಮಾಜಿ ಮೇಯರ್ ಸಂದೇಶ್ ಸ್ವಾಮಿ ಆಶಿಸಿದ್ದಾರೆ.

ಪ್ರತಿವರ್ಷ ಯುವ ದಸರಾಗೆ ನಾಲ್ಕೈದು ಕೋಟಿ ಖರ್ಚು ಮಾಡಲಾಗುತ್ತದೆ. ವಿವಿಧ ರಾಜ್ಯದ ಕಲಾವಿದರನ್ನು ಆಹ್ವಾನಿಸಿ, ತಂಡಗಳಿಗೆ ಲಕ್ಷಾಂತರ ರೂ. ಗೌರವಧನ ನೀಡಲಾಗುತ್ತದೆ. ಆದರೆ ಯುವ ಸಮುದಾಯವನ್ನು ಆಕರ್ಷಿಸುವ ಈ ಕಾರ್ಯಕ್ರಮದಲ್ಲಿ ಪಾಶ್ಚಾತ್ಯ ಸಂಸ್ಕೃತಿ ವೈಭವೀಕರಿಸುವುದು ನಮ್ಮ ನಾಡಹಬ್ಬಕ್ಕೆ ಅಗೌರವ ಸೂಚಿಸಿದಂತಾಗುತ್ತದೆ. ಈ ಬಗ್ಗೆ ಆಯೋಜಕರು ಗಂಭೀರವಾಗಿ ಚಿಂತನೆ ನಡೆಸಿ, ಸೂಕ್ತ ಕ್ರಮ ವಹಿಸಬೇಕು ಎಂದು ಆಗ್ರಹಿಸಿದ್ದಾರೆ.

ಯುವ ದಸರಾದಲ್ಲಿ ಕಾರ್ಯಕ್ರಮ ನೀಡುವ ಖ್ಯಾತ ಕಲಾವಿದರು, ಈ ಹಿಂದೆಯೇ ಸಿನಿಮಾ, ದೂರದರ್ಶನ ಇನ್ನಿತರ ಮಾಧ್ಯಮಗಳ ಮೂಲಕ ಕೇಳಿರುವ ಹಾಗೂ ನೋಡಿರುವಂತಹ ಹಾಡುಗಳನ್ನೇ ಪ್ರಸ್ತುತಪಡಿಸುತ್ತಾರೆ. ಇದರಿಂದ ಪ್ರೇಕ್ಷಕರಲ್ಲೂ ಬೇಸರ ಮೂಡುತ್ತದೆ. ಯುವ ದಸರಾಗಿಂತ ಯುವ ಸಂಭ್ರಮದಲ್ಲಿ ನಮ್ಮ ನಾಡು-ನುಡಿ, ಕಲೆ, ಸಂಸ್ಕೃತಿ, ಸಾಹಿತ್ಯ, ಸಂಗೀತ, ನೃತ್ಯ, ಪರಂಪರೆ ಜೊತೆಗೆ ಸಾಮಾಜಿಕ ಸಂದೇಶ ಸಾರುವ ಕಾರ್ಯಕ್ರಮಗಳನ್ನು ಪ್ರಸ್ತುತಪಡಿಸಲಾಗುತ್ತಿದೆ. ಯುವ ದಸರಾದಲ್ಲೂ ಇದೇ ಮಾದರಿ ಕಾರ್ಯಕ್ರಮಗಳನ್ನು ಭಿನ್ನವಾಗಿ ಆಯೋಜಿಸುವ ಮೂಲಕ ಯುವ ಸಮುದಾಯಕ್ಕೆ ಪರಂಪರೆ ಹಾಗೂ ಸಂಸ್ಕೃತಿಯನ್ನು ಪರಿಚಯಿಸಬೇಕು ಎಂದು ಮನವಿ ಮಾಡಿದ್ದಾರೆ.

ಕೊಡಗಿನ ಲೇಖಕಿ ಭಾರತಿ ಕೊಡ್ವಕೆರೆ ಅವರಿಗೆ ದತ್ತಿ ಪ್ರಶಸ್ತಿ



ಮಡಿಕೇರಿ,ಸೆ.13– ಕನ್ನಡ ಸಾರಸ್ವತ ಲೋಕದ ಮಿನುಗು ತಾರೆ 'ಕೊಡಗಿನ ಗೌರಮ್ಮ' ಹೆಸರಿನಲ್ಲಿ ಗೋಕರ್ಣದ ಹವ್ಯಕ ಮಹಾಮಂಡಲದಲ್ಲಿ ಸ್ಥಾಪಿಸಲಾಗಿರುವ ಸಣ್ಣಕತೆಗಳ ದತ್ತಿ ಪ್ರಶಸ್ತಿ, ಈ ಬಾರಿ ಕೊಡಗು ಮೂಲದ ಲೇಖಕಿ ಭಾರತಿ ಕೊಡ್ವಕೆರೆ ಅವರ ಮುಡಿಗೇರಿದೆ.

ಕೊಡಗಿನ ವಿರಾಜಪೇಟೆ ಸಮೀಪದ ಕೋಟೆಕೊಪ್ಪಲಿನ ಮೂಟೇರಿ ಆರ್. ಗಂಗಾಧರ ಮತ್ತು ಎಂ.ಜಿ.ಸಾವಿತ್ರಿ ಅವರ ಪುತ್ರಿ, ಕಾಸರಗೋಡಿನ ಕೇಶವ ಪ್ರಸಾದ್ ಅವರ ಪತ್ನಿ ಭಾರತಿ ಕೊಡ್ವಕೆರೆ ಅವರು ಬರೆದಿರುವ ಸಣ್ಣ ಕಥೆ 'ದಿನಚರಿ ಪುಸ್ತಕ ರಹಸ್ಯ'ಕ್ಕೆ ಹವ್ಯಕ ಮಹಾಮಂಡಲದ ಕೊಡಗಿನ ಗೌರಮ್ಮ ದತ್ತಿ ಪ್ರಶಸ್ತಿ ದೊರಕಿದೆ.

ರಾಜ್ಯ, ಕೇಂದ್ರ ಜಾತಿಗಣತಿ ವೇಳೆ ಅರೆಭಾಷೆ ಗೌಡರು 'ಗೌಡ' ಎಂದು ನಮೂದಿಸಿ

ಕೊಡಗು ಗೌಡ ಸಮಾಜಗಳ ಒಕ್ಕೂಟದ ಅಧ್ಯಕ್ಷ ಆನಂದ ಕರಂದ್ಲಾಜೆ ಮನವಿ



ಮಡಿಕೇರಿ,ಸೆ.13– ಕರ್ನಾಟಕ ರಾಜ್ಯ ಸರ್ಕಾರದ ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ಗಣತಿಯಲ್ಲಿ ಹಾಗೂ ಮುಂದಿನ ವರ್ಷ ಆರಂಭಗೊಳ್ಳಲಿರುವ ಕೇಂದ್ರ ಸರಕಾರದ ಜಾತಿ ಗಣತಿಯಲ್ಲಿ ಜಾತಿಯ ಕಾಲಂನಲ್ಲಿ 'ಗೌಡ' ಎಂದು, ಉಪಜಾತಿ 'ಅರೆಭಾಷೆ ಗೌಡ' ಮತ್ತು ಮಾತೃಭಾಷೆ 'ಅರೆಭಾಷೆ' ಎಂದು ಎಲ್ಲಾ ಅರೆಭಾಷೆ ಗೌಡರು ನಮೂದಿಸುವಂತೆ ಕೊಡಗು ಗೌಡ ಸಮಾಜಗಳ ಒಕ್ಕೂಟದ ಅಧ್ಯಕ್ಷ ಆನಂದ ಕರಂದ್ಲಾಜೆ ಅವರು ಮನವಿ ಮಾಡಿದ್ದಾರೆ.

ಪತ್ರಿಕಾ ಹೇಳಿಕೆ ನೀಡಿರುವ ಅವರು ಮೂಲತಃ ಅರೆಭಾಷೆ ಗೌಡರು ಒಕ್ಕಲಿಗ ಸಮುದಾಯದ ಭಾಗವಾಗಿದ್ದರೂ, ಅರೆಭಾಷೆ ಗೌಡರ ಶೈಕ್ಷಣಿಕ, ಕಂದಾಯ ಸೇರಿದಂತೆ ಎಲ್ಲಾ ಮೂಲ ದಾಖಲೆಗಳಲ್ಲಿ ಗೌಡ ಎಂದೇ ನಮೂದಾಗಿದೆ. ಈಗ ಬದಲಾಯಿಸಿ ಮಾಹಿತಿ ನೀಡಿದರೆ ಮುಂದಿನ ದಿನಗಳಲ್ಲಿ ತೊಂದರೆ ಅನುಭವಿಸುವ ಸಾಧ್ಯತೆ ದಟ್ಟವಾಗಿದೆ ಎಂದು ತಿಳಿಸಿದ್ದಾರೆ. ಈ ಕಾರಣದಿಂದ ಬೆಂಗಳೂರು, ಮೈಸೂರು, ಮಡಿಕೇರಿ ಮತ್ತು ಪುತ್ತೂರಿನಲ್ಲಿ ಸಮುದಾಯದ ಸಭೆಗಳನ್ನು ನಡೆಸಿ, ಕೊಡಗಿನ ಎಲ್ಲಾ ಗೌಡ ಸಮಾಜಗಳೊಂದಿಗೆ ಸಾಧಕ ಬಾಧಕಗಳನ್ನು ಚರ್ಚಿಸಿ, ಈ ನಿರ್ಣಯ ಕೈಗೊಳ್ಳಲಾಗಿದೆ. ಗಣತಿಯಲ್ಲಿ ತಮ್ಮ ಜಾತಿಗೆ ಇರುವ ಇನ್ನೊಂದು ಹೆಸರು ಎಂಬ ಕಾಲಂ ಸಹ ಇದ್ದು, ಅಲ್ಲಿ ಒಕ್ಕಲಿಗ ಎಂದು ನಮೂದಿಸಲು ಕೋರಿದ್ದಾರೆ.

ಹಾಗೆಯೇ ಎಲ್ಲಾ ಮೂಲ ದಾಖಲೆಗಳನ್ನು ಒಕ್ಕಲಿಗ ಎಂದು ಹೊಂದಿರುವ ಅರೆಭಾಷೆ ಗೌಡ ಸಮುದಾಯದವರು ಇದ್ದಲ್ಲಿ ಅವರುಗಳು ಜಾತಿ ಒಕ್ಕಲಿಗ, ಉಪಜಾತಿ ಅರೆಭಾಷೆ ಗೌಡ ಮತ್ತು ಮಾತೃಭಾಷೆ ಅರೆಭಾಷೆ ಎಂದು ನಮೂದಿಸಲು ಯಾವುದೇ ಅಭ್ಯಂತರವಿಲ್ಲ ಎಂದು ಆನಂದ ಕರಂದ್ಲಾಜೆ ಸ್ಪಷ್ಟಪಡಿಸಿದ್ದಾರೆ.

ಗೋಣಿಕೊಪ್ಪ ದಸರಾ ಜನೋತ್ಸವದಲ್ಲಿ ಸೆ.28ರಂದು ರಾಜ್ಯ ಮಟ್ಟದ ನೃತ್ಯ ಸ್ಪರ್ಧೆ

ಮಡಿಕೇರಿ,ಸೆ.13– ಗೋಣಿಕೊಪ್ಪ ಕಾವೇರಿ ದಸರಾ ಸಮಿತಿ ವತಿಯಿಂದ ನಡೆಯುವ 47ನೇ ವರ್ಷದ ದಸರಾ ಜನೋತ್ಸವದ ಅಂಗವಾಗಿ ಯುವ ದಸರಾ ಸಮಿತಿಯಿಂದ ರಾಜ್ಯ ಮಟ್ಟದ ನೃತ್ಯ ಸ್ಪರ್ಧೆ ಹಮ್ಮಿಕೊಳ್ಳಲಾಗಿದೆ ಎಂದು ಯುವ ದಸರಾ ಸಮಿತಿ ಅಧ್ಯಕ್ಷ ನಾಮೇರ ಅಂಕಿತ್ ತಿಳಿಸಿದ್ದಾರೆ. ಸೆ.28ರಂದು ಗುಂಪು ವಿಭಾಗದಲ್ಲಿ ಸ್ಪರ್ಧೆ ನಡೆಯಲಿದ್ದು, ಪ್ರಥಮ ಬಹುಮಾನ 25 ಸಾವಿರ ರೂ., ದ್ವಿತೀಯ 15 ಸಾವಿರ ರೂ. ಹಾಗೂ ತೃತೀಯ ಸ್ಥಾನ ಪಡೆಯುವ ತಂಡಕ್ಕೆ 10 ಸಾವಿರ ರೂ. ಬಹುಮಾನ ನೀಡಲಾಗುವುದು.

15 ವರ್ಷಕ್ಕೆ ಮೇಲ್ಪಟ್ಟವರು ಮಾತ್ರ ತಂಡದಲ್ಲಿರಬೇಕು. 5ರಿಂದ 30 ಜನರು ಭಾಗವಹಿಸಬಹುದು. ಯಾವುದೇ ರೀತಿಯ ಸಿಡಿಮದ್ದು, ನೀರು, ಟ್ಯೂಬ್ಲೈಟ್, ಬಣ್ಣದ ಪುಡಿಗಳನ್ನು ನೃತ್ಯದಲ್ಲಿ ಬಳಸುವಂತಿಲ್ಲ. ಹಾಡು ಮತ್ತು ನೃತ್ಯದಲ್ಲಿ ಯಾವುದೇ ಧರ್ಮಕ್ಕೆ ಧಕ್ಕೆ ಉಂಟಾಗಬಾರದು. ಸೆ.25ರ ಸಂಜೆ 4 ಗಂಟೆಯೊಳಗೆ ತಂಡಗಳ ನೋಂದಣಿಗೆ ಅವಕಾಶವಿದೆ. ತಂಡ ನೋಂದಣಿಗಾಗಿ 8088978808, 7899288471, 8105413376 ಸಂಖ್ಯೆ ಸಂಪರ್ಕಿಸುವಂತೆ ಯುವ ದಸರಾ ಸಮಿತಿ ಅಧ್ಯಕ್ಷ ನಾಮೇರ ಅಂಕಿತ್ ಮನವಿ ಮಾಡಿದ್ದಾರೆ.

ಮಡಿಕೇರಿ ದಸರಾ ಮಾದರಿ ಭವ್ಯ ಶೋಭಾಯಾತ್ರೆ ನಡೆಸಿ

ಗೌರಿ–ಗಣೇಶ ಮೂರ್ತಿಗಳ ವಿಸರ್ಜನೆ



ಗೌರಿ–ಗಣೇಶ ಮೂರ್ತಿಗಳ ವಿಸರ್ಜನೋತ್ಸವ ವೈಭವೋಪೇತವಾಗಿ ನಡೆಯಿತು.

ಮಡಿಕೇರಿ,ಸೆ.13– ನಗರದ ಕೆಎಸ್ಆರ್‌ಟಿಸಿ ಬಸ್ ಡಿಪೊ ಬಳಿಯ ಶಾಂತಿನಿಕೇತನ ಬಡಾವಣೆಯಲ್ಲಿ ಶಾಂತಿನಿಕೇತನ ಯುವಕ ಸಂಘದ ವತಿಯಿಂದ ಪ್ರತಿಷ್ಠಾಪಿಸಲಾಗಿದ್ದ ಗೌರಿ ಗಣೇಶ ಮೂರ್ತಿಗಳ ವಿಸರ್ಜನೋತ್ಸವ ಶುಕ್ರವಾರ ರಾತ್ರಿ ವೈಭವೋಪೇತವಾಗಿ ಜರುಗಿತು.

ಮಡಿಕೇರಿ ದಸರಾ ಮಾದರಿಯ ಭವ್ಯ ಶೋಭಾಯಾತ್ರೆಗೆ ಅಪಾರ ಸಂಖ್ಯೆಯಲ್ಲಿ ಸೇರಿದ್ದ ಜನಸ್ತೋಮ ಸಾಕ್ಷಿಯಾಯಿತು.

ಗಣೇಶ ಮೂರ್ತಿ ವಿಸರ್ಜನೋತ್ಸವ ಅಂಗವಾಗಿ ಶಾಂತಿನಿಕೇತನ ಯುವಕ ಸಂಘದ ವತಿಯಿಂದ 'ಲೋಕ ಕಲ್ಯಾಣಕ್ಕಾಗಿ ಗಣೇಶನಿಂದ ಶತ ಮಹಿಷಿಯ ಸಂಹಾರ' ಕಥಾ ಹಂದರ ಹೊಂದಿದ್ದ ಚಲನ ವಲನಗಳನ್ನೊಳಗೊಂಡ ಭವ್ಯ ಮಂಟಪದ ಪ್ರದರ್ಶನ ಜನಮನ ಸೂರೆಗೊಂಡಿತು. ಧ್ವನಿ ಬೆಳಕಿನ ಅಬ್ಬರದೊಂದಿಗೆ ಮಡಿಕೇರಿಯಲ್ಲಿ ಕಿನ್ನರ ಲೋಕವನ್ನೇ ಸೃಷ್ಟಿಸಿದಂತಿತ್ತು.

ಶಾಂತಿಕೇತನ ಬಡಾವಣೆಯಿಂದ ಮುಖ್ಯ ರಸ್ತೆಯ ಒಂದು ಬದಿಯಲ್ಲಿ ಸಾಗಿ ಬಂದ ಶೋಭಾಯಾತ್ರೆ ಜನರಲ್ ತಿಮ್ಮಯ್ಯ ವೃತ್ತದ ಬಳಿ ಆಗಮಿಸುತ್ತಿರುವಂತೆ ಸಹಸ್ರಾರು ಮಂದಿ ನೆರೆದಿದ್ದರು. ಶೋಭಾಯಾತ್ರೆಯಲ್ಲಿ ಜನರು ಕುಣಿದು ಕುಪ್ಪಳಿಸಿದರು. ವಿಸರ್ಜನೋತ್ಸವ ಕಣ್ತುಂಬಿಕೊಳ್ಳಲು ನಗರದ ವಿವಿಧ ಕಡೆಗಳಿಂದ ಸಾವಿರಾರು ಮಂದಿ ಆಗಮಿಸಿದ್ದರು. ಬಳಿಕ ನಗರದ ಗೌರಿಕೆರೆಯಲ್ಲಿ ಉತ್ಸವ ಮೂರ್ತಿಗಳನ್ನು ವಿಸರ್ಜಿಸಲಾಯಿತು.

ಶ್ರೀರಾಮ ಟ್ರಸ್ಟ್ ವಿದ್ಯಾರ್ಥಿಗಳು ಜಿಲ್ಲಾ ಮಟ್ಟಕ್ಕೆ ಆಯ್ಕೆ



ನಾಪೋಕ್ಲು ಚೆರಿಯ ಪರಂಬುವಿನ ಕ್ರೀಡಾಂಗಣದಲ್ಲಿ ನಡೆದ ವಲಯ ಮಟ್ಟದ ಕ್ರೀಡಾಕೂಟದಲ್ಲಿ ಶ್ರೀರಾಮ ಟ್ರಸ್ಟ್ ಆಂಗ್ಲ ಮಾಧ್ಯಮ ಶಾಲೆಯ ವಿದ್ಯಾರ್ಥಿಗಳು ಭಾಗವಹಿಸಿ ಜಿಲ್ಲಾ ಮಟ್ಟಕ್ಕೆ ಆಯ್ಕೆಯಾಗಿದ್ದು ಅವರನ್ನು ಅಭಿನಂದಿಸಲಾಯಿತು.

ನಾಪೋಕ್ಲು: ಇಲ್ಲಿಗೆ ಸಮೀಪದ ಚೆರಿಯ ಪರಂಬುವಿನ ಕ್ರೀಡಾಂಗಣದಲ್ಲಿ ನಡೆದ ವಲಯ ಮಟ್ಟದ ಕ್ರೀಡಾಕೂಟದಲ್ಲಿ ಇಲ್ಲಿನ ಶ್ರೀರಾಮ ಟ್ರಸ್ಟ್ ಆಂಗ್ಲ ಮಾಧ್ಯಮ ಶಾಲೆಯ ವಿದ್ಯಾರ್ಥಿಗಳು ಭಾಗವಹಿಸಿ ಜಿಲ್ಲಾ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ.

ವಲಯ ಮಟ್ಟದ ಕ್ರೀಡಾಕೂಟದಲ್ಲಿ ಹಿರಿಯ ಪ್ರಾಥಮಿಕ ಹಂತದ ಬಾಲಕ, ಬಾಲಕಿಯರು ಹಾಗೂ ಪ್ರೌಢಶಾಲಾ ಬಾಲಕಿಯರು ವಾಲಿಬಾಲ್‌ನಲ್ಲಿ ಪ್ರಥಮ ಸ್ಥಾನ ಗಳಿಸಿದ್ದಾರೆ. ಮೇಲಾಟದಲ್ಲಿ ಪ್ರೌಢಶಾಲಾ ಬಾಲಕ, ಬಾಲಕಿಯರು ಓಟದ ಸ್ಪರ್ಧೆ, ಭಾರದ ಗುಂಡು ಎಸೆತ, ಭರ್ಜಿ ಎಸೆತ, ತಟ್ಟೆ ಎಸೆತದಲ್ಲಿ ಜಿಲ್ಲಾ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ. ತಾಲೂಕು ಮಟ್ಟದಲ್ಲಿ ಪ್ರೌಢಶಾಲಾ ವಿಭಾಗದಲ್ಲಿ ಬಾಲಕರ ಹಾಕಿ, ಬಾಲ್ ಬ್ಯಾಡ್ಮಿಂಟನ್, ಟೇಬಲ್ ಟೆನಿಸ್‌ನಲ್ಲಿ ವಿಜೇತರಾಗಿ ಜಿಲ್ಲಾ ಹಂತಕ್ಕೆ ಪ್ರವೇಶಿಸಿದ್ದಾರೆ.

ಪ್ರೌಢಶಾಲಾ ಬಾಲಕಿಯರು ಶಟಲ್ ಬ್ಯಾಡ್ಮಿಂಟನ್, ಟೇಬಲ್ ಟೆನಿಸ್‌ನಲ್ಲಿ ವಿಜೇತರಾಗಿದ್ದಾರೆ. ಪ್ರಾಥಮಿಕ ಶಾಲಾ ಬಾಲಕಿಯರು ಶಟಲ್ ಬ್ಯಾಡ್ಮಿಂಟನ್‌ನಲ್ಲಿ ಮುಂದಿನ ಹಂತಕ್ಕೆ ಆಯ್ಕೆಯಾಗಿದ್ದರೆ, ಪ್ರಾಥಮಿಕ ಶಾಲಾ ಹಾಗೂ ಪ್ರೌಢಶಾಲಾ ಬಾಲಕಿಯರು ಹಾಗೂ ಬಾಲಕರು ಬಾಲ್ ಬ್ಯಾಡ್ಮಿಂಟನ್ ಹಾಗೂ ಟೇಬಲ್ ಟೆನ್ನಿಸ್‌ನಲ್ಲಿ ದ್ವಿತೀಯ ಸ್ಥಾನವನ್ನು ತಾಲೂಕು ಮಟ್ಟದಲ್ಲಿ ಪಡೆದಿದ್ದು ಜಿಲ್ಲಾ ಮಟ್ಟದಲ್ಲಿ ಪ್ರತಿನಿಧಿಸುತ್ತಿದ್ದಾರೆ. ಮುಖ್ಯ ಶಿಕ್ಷಕರಾದ ಬಿ.ಎಂ ಶಾರದಾ ಅವರ ಮಾರ್ಗದರ್ಶನದಲ್ಲಿ ದೈಹಿಕ ಶಿಕ್ಷಣ ಶಿಕ್ಷಕಿ ಸರಿತ ವಿದ್ಯಾರ್ಥಿಗಳಿಗೆ ತರಬೇತಿ ನೀಡಿದ್ದಾರೆ. ವ್ಯವಸ್ಥಾಪಕರಾಗಿ ಕಾಳಯ್ಯ ಎಂಡಿ ಕರ್ತವ್ಯ ನಿರ್ವಹಿಸಿದ್ದರು.

ಕಾನೂನನ್ನು ಗೌರವಿಸಿದರೆ, ಅಪರಾಧಕ್ಕೆ ಆಸ್ಪದವಿರುವುದಿಲ್ಲ



ಕಾರ್ಯಕ್ರಮವನ್ನು ಉದ್ಘಾಟಿಸುತ್ತಿರುವ ಸಿಪಿಐ ಅನೂಪ್ ಮಾದಪ್ಪ.

ವಿರಾಜಪೇಟೆ,ಸೆ.13– ನಿಯಮಗಳನ್ನು ಪಾಲಿಸುವುದರ ಜೊತೆಗೆ ಅಪರಾಧ ಮುಕ್ತ ಸಮಾಜ ನಿರ್ಮಿಸುವುದು ಪ್ರತಿಯೊಬ್ಬರ ಕರ್ತವ್ಯ ಎಂದು ವಿರಾಜಪೇಟೆ ಸಿಪಿಐ ಅನೂಪ್ ಮಾದಪ್ಪ ಅಭಿಪ್ರಾಯಪಟ್ಟರು.

ಪಟ್ಟಣದ ಸೆಂಟ್‌ಆನ್ಸ್ ಪದವಿ ಕಾಲೇಜಿನಲ್ಲಿ ಪೊಲೀಸ್ ಇಲಾಖೆ ಹಾಗೂ ಪದವಿ ಕಾಲೇಜಿನ ಐಕ್ಯೂಎಸಿ, ಎನ್‌ಎಸ್‌ಎಸ್, ಯುವರೆಡ್ ಕ್ರಾಸ್ ಘಟಕದ ಸಹಯೋಗದಲ್ಲಿ ಆಯೋಜಿಸಲಾಗಿದ್ದ ಸಂಚಾರಿ ನಿಯಮಗಳು ಹಾಗೂ ಮಾದಕವಸ್ತು ಸೇವನೆಯ ಪರಿಣಾಮಗಳು, ಕಾಯಿದೆಗಳ ಕುರಿತ ಜಾಗೃತಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಕಾನೂನನ್ನು ಗೌರವಿಸಿದರೆ, ಅಪರಾಧಕ್ಕೆ ಆಸ್ಪದವಿರುವುದಿಲ್ಲ. ವಿದ್ಯಾರ್ಥಿಗಳು ಸಂಚಾರಿ ನಿಯಮಗಳನ್ನು ಪಾಲಿಸಬೇಕು. ವಾಹನ ಚಾಲನೆಯ ವೇಳೆಯಲ್ಲಿ ಸಂಬಂಧಿತ ದಾಖಲೆಗಳನ್ನು ಹೊಂದಿರಬೇಕು. ವಿದ್ಯಾರ್ಥಿಗಳು ಮಾದಕ ವಸ್ತುಗಳ ಸೇವನೆಯ ದಾಸರಾಗದೇ ಭವ್ಯ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಿ ಎಂದು ಕಿವಿಮಾತು ಹೇಳಿದರು.

ವಿರಾಜಪೇಟೆ ನಗರ ಪೊಲೀಸ್ ಠಾಣೆ ಎಸ್.ಐ ಪ್ರಮೋದ್ ಮಾತನಾಡಿ ಕಾನೂನು ಸುವ್ಯವಸ್ಥೆಗೆ ಎಲ್ಲರೂ ಬದ್ಧರಾಗಿರಬೇಕು. ವಿದ್ಯಾರ್ಥಿ ಹಂತದಿಂದಲೇ ಉತ್ತಮ ವ್ಯಕ್ತಿತ್ವವನ್ನು ಪ್ರತಿಯೊಬ್ಬರು ರೂಪಿಸಿಕೊಳ್ಳಬೇಕು. ಅಪರಾಧ ಪ್ರಕರಣಗಳು ನಡೆಯದಂತೆ ಎಚ್ಚರಿಕೆಯನ್ನು ವಹಿಸಬೇಕು. ಅಪರಾಧವನ್ನು ತಡೆಗಟ್ಟಲು ಪೊಲೀಸ್ ಇಲಾಖೆಯ ಜೊತೆಗೆ ಸಹಕರಿಸಿ ಎಂದರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಪದವಿ ಕಾಲೇಜಿನ ಪ್ರಾಂಶುಪಾಲೆ ತೃಪ್ತಿ ಬೋಪಣ್ಣ ಮಾತನಾಡಿ, ವಿದ್ಯಾರ್ಥಿಗಳಿಗೆ ಕಾನೂನಿನ ಅರಿವು ಮುಖ್ಯ. ಕಾನೂನಿನ ಅರಿವಿದ್ದಲ್ಲಿ ಅಪರಾಧಗಳು ನಡೆಯಲು ಸಾಧ್ಯವಿಲ್ಲ ಎಂದರು.

ವೇದಿಕೆಯಲ್ಲಿ ವಿರಾಜಪೇಟೆ ಗ್ರಾಮಾಂತರ ಪೊಲೀಸ್ ಠಾಣೆಯ ಎಸ್.ಐ ಲತಾ, ಕಾಲೇಜಿನ ಐಕ್ಯೂಎಸಿ ಸಂಚಾಲಕಿ ಹೇಮ, ಎನ್‌ಎಸ್‌ಎಸ್ ಅಧಿಕಾರಿ ಶಾಂತಿಭೂಷಣ್, ಯುವ ರೆಡ್‌ಕ್ರಾಸ್ ಘಟಕದ ಅಧಿಕಾರಿ ವಿಲೀನ ಗೋನ್ಸಾಲ್ವೆಸ್ ಕಾಲೇಜಿನ ಉಪನ್ಯಾಸಕರು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ವಿವಾಹಿತ ವ್ಯಕ್ತಿ ಆತ್ಮಹತ್ಯೆ

ಕುಶಾಲನಗರ : ಪಟ್ಟಣದ ಬೈಚನಹಳ್ಳಿ ನಿವಾಸಿ ಶ್ಯಾಮ್ (43) ಮನೆಯ ಶೌಚಾಲಯದಲ್ಲಿ ನೇಣಿಗೆ ಶರಣಾಗಿದ್ದಾರೆ. ವಿವಾಹಿತರಾಗಿರುವ ಶ್ಯಾಂ ಸೆಂಟ್ರಿಂಗ್ ಕೆಲಸ ಮಾಡುತ್ತಿದ್ದರು. ಮಧ್ಯಾಹ್ನ ಊಟದ ನಂತರ ತಲೆನೋವೆಂದು ಮಲಗಲು ಕೋಣೆಗೆ ತೆರಳಿದ ಅವರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎನ್ನಲಾಗಿದೆ. ಈ ಕುರಿತು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲು ಮಾಡಿಕೊಂಡು ಮುಂದಿನ ಕ್ರಮ ಕೈಗೊಂಡಿದ್ದಾರೆ.

ಸೆ.20ರಂದು ನಾಪೋಕ್ಲು ನಾಡು ಗ್ರಾಹಕರ ಸಹಕಾರ ಸಂಘ ಮಹಾಸಭೆ

ನಾಪೋಕ್ಲು: ನಾಡು ಗ್ರಾಹಕರ ಸಹಕಾರ ಸಂಘ ನಿಯಮಿತ (ನಂ. 274) ನಾಪೋಕ್ಲು ಇದರ ವಾರ್ಷಿಕ ಮಹಾಸಭೆ ಸೆ.20 ರಂದು ಜರುಗಲಿದೆ.

ಸಂಘದ ಅಧ್ಯಕ್ಷ ಪಟ್ರಪಂಡ ಮೋಹನ್ ಮುದ್ದಪ್ಪನವರ ಅಧ್ಯಕ್ಷತೆಯಲ್ಲಿ ನಾಪೋಕ್ಲುವಿನ ಮಹಿಳಾ ಸಮಾಜದ ಸಭಾಂಗಣದಲ್ಲಿ ಬೆಳಗ್ಗೆ 11 ಘಂಟೆಗೆ ನಡೆಯಲಿದೆ.

ಸಂಘದ ಸದಸ್ಯರು ಮಹಾಸಭೆಯಲ್ಲಿ ಭಾಗವಹಿಸಿ ಸಭೆಯನ್ನು ಯಶಸ್ವಿಗೊಳಿಸಬೇಕಾಗಿ ಸಂಘದ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಕೆ.ಎಸ್.ತಿಮ್ಮಯ್ಯ ತಿಳಿಸಿದ್ದಾರೆ.

ಚಾ.ನಗರ, ಯಳಂದೂರಲ್ಲಿ ಕಳ್ಳತನ ಮಾಡಿದ್ದ 9 ಮಂದಿ ಬಂಧನ

6 ಕಳ್ಳತನ ಪ್ರಕರಣ ಬಯಲು, 17 ಲಕ್ಷ ರೂ. ಸ್ವತ್ತುಗಳ ವಶ



ಬಂಧಿತ ಆರೋಪಿಗಳಿಂದ ವಶಪಡಿಸಿಕೊಂಡಿರುವ ಪದಾರ್ಥಗಳು.

ಚಾಮರಾಜನಗರ: ಜಿಲ್ಲೆಯ ಚಾಮರಾಜನಗರ ಹಾಗೂ ಯಳಂದೂರು ಪಟ್ಟಣ ಸೇರಿದಂತೆ ವಿವಿಧೆಡೆ ನಡೆದಿದ್ದ ಸುಮಾರು 6 ಕಳ್ಳತನ ಪ್ರಕರಣಗಳನ್ನು ಜಿಲ್ಲಾ ಪೊಲೀಸರು ಯಶಸ್ವಿಯಾಗಿ ಭೇದಿಸಿದ್ದು, 9 ಮಂದಿ ಆರೋಪಿಗಳನ್ನು ಬಂಧಿಸಿ ಅವರಿಂದ ಸುಮಾರು 17 ಲಕ್ಷ ಮೌಲ್ಯದ ಸ್ವತ್ತುಗಳನ್ನು ವಶಪಡಿಸಿಕೊಂಡಿದ್ದಾರೆ.

ಈ ಸಂಬಂಧ ನಗರದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕಚೇರಿ ಸಭಾಂಗಣದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಜಿಲ್ಲಾ ಪೊಲೀಸ್ ವರಷ್ಠಾಧಿಕಾರಿ ಡಾ.ಬಿ.ಟಿ. ಕವಿತಾ ಮಾತನಾಡಿ, ಚಾಮರಾಜನಗರ ಪಟ್ಟಣ ಪೊಲೀಸ್ ಠಾಣೆ ಹಾಗೂ ಯಳಂದೂರು ಪಟ್ಟಣದಲ್ಲಿ ದಾಖಲಾಗಿದ್ದ 6 ಪ್ರಕರಣಗಳಿಗೆ ಸಂಬಂಧಿಸಿದಂತೆ ಆರೋಪಿಗಳನ್ನು ಬಂಧಿಸಿದ್ದು, ಅವರಿಂದ 10 ಬೈಕ್‌ಗಳು, 2 ಕಾರು ಹಾಗೂ 70 ಗ್ರಾಂ ಚಿನ್ನಾಭರಣವನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಮಾಹಿತಿ ನೀಡಿದರು.

ಚಾಮರಾಜನಗರ ಪಟ್ಟಣ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದ್ದ 5 ಕಳ್ಳತನ ಪ್ರಕರಣ ಸಂಬಂಧ 70 ಗ್ರಾಂ ಚಿನ್ನಾಭರಣ, 2 ಕಾರು, 2 ಬೈಕ್‌ಗಳು, 1.50 ಲಕ್ಷ ನಗದು ಹಣವನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಮಾಹಿತಿ ನೀಡಿದರು.

ಆರೋಪಿಗಳ ಬಂಧನ: ಚಾಮರಾಜನಗರದಲ್ಲಿ ನಡೆದ ಕಳ್ಳತನ ಸಂಬಂಧ ಚಾಮರಾಜನಗರ ಪಟ್ಟಣದ ಇಲಿಯಾಜ್ ನಗರದ ಅಫ್ರಾಜ್‌ಖಾನ್, ಮೈಸೂರು ಕೆ.ಜಿ. ಕೊಪ್ಪಲಿನ ಲೀಲಾ, ಚಾಮರಾಜನಗರ ತಾಲೂಕಿನ ಚಂದಕವಾಡಿ ಗ್ರಾಮದ ರಾಚಪ್ಪಾಜಿ, ತಮಿಳುನಾಡಿ ವಿನೋದ್, ಯಳಂದೂರು ಪಟ್ಟಣದ ಹರೀಶ್ ಎಂಬುವವರನ್ನು ಬಂಧಿಸಲಾಗಿದೆ ಎಂದರು.

ಉಳಿದಂತೆ ಯಳಂದೂರು ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದ್ದ ಬೈಕ್‌ಗಳ ಕಳ್ಳತನ ಸಂಬಂಧ ಬನ್ನೂರು ಹೋಬಳಿಯ ಬಿ.ಬೆಟ್ಟಹಳ್ಳಿಯ ಮದನ್, ಕೆ.ಆರ್.ನಗರ ತಾಲೂಕಿನ ಗಂಧನಹಳ್ಳಿಯ ಅರ್ಜುನ, ಆಲಗೂಡಿನ ಪ್ರವೀಣ್, ಎಡತಲೆಯ ಕಾರ್ತಿಕ್ ಎಂಬುವವರನ್ನು ಬಂಧಿಸಲಾಗಿದೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶಶಿಧರ್, ಡಿವೈಎಸ್‌ಪಿಗಳಾದ ಲಕ್ಷ್ಮಯ್ಯ, ಧರ್ಮೇಂದ್ರ, ಪಟ್ಟಣ ಠಾಣೆಯ ಇನ್ಸ್‌ಪೆಕ್ಟರ್ ಶ್ರೀಕಾಂತ್, ಸೆನ್ ಠಾಣೆಯ ಇನ್ಸ್‌ಪೆಕ್ಟರ್ ಸಾಗರ್ ಇದ್ದರು.

ಹರವೆಯಲ್ಲಿ ವಿಜೃಂಭಣೆಯ ಹಿಂದೂ ಮಹಾಗಣಪತಿ ವಿಸರ್ಜನಾ ಮಹೋತ್ಸವ



ಚಾಮರಾಜನಗರ, ಸೆ.13– ತಾಲೂಕಿನ ಹರವೆ ಗ್ರಾಮದಲ್ಲಿ ಶನಿವಾರ ವಿಜೃಂಭಣೆಯ ಹಿಂದೂ ಮಹಾಗಣಪತಿ ವಿಸರ್ಜನಾ ಮಹೋತ್ಸವ ನಡೆಯಿತು.

ಗ್ರಾಮದ ಬಸವೇಶ್ವರ ದೇವಾಲಯದ ಆವರಣದಲ್ಲಿ ಹರವೆ ಬಾಯ್ಸ್ ಯುವಕರ ಸಂಘದಿಂದ ವೀರಶೈವ ಲಿಂಗಾಯತ ಹಿಂದೂ ಮಹಾಗಣಪತಿಯನ್ನು ಪ್ರತಿಷ್ಠಾಪಿಸುವ ಮೂಲಕ ಪೂಜೆ ನೆರವೇರಿಸಲಾಗುತ್ತಿತ್ತು.

ಶನಿವಾರ ಮಧ್ಯಾಹ್ನ ಗಣಪತಿಮೂರ್ತಿಗೆ ವಿವಿಧ ಹೂಗಳ ಅಲಂಕಾರ ಮಾಡುವ ಮೂಲಕ ಉದ್ಘೋಷಗಳೊಂದಿಗೆ ಮಹಾಮಂಗಳಾರತಿ ನೆರವೇರಿಸಿ ಉತ್ಸವಕ್ಕೆ ಚಾಲನೆ ನೀಡಲಾಯಿತು.

ವೀರಗಾಸೆ, ಗಾರುಡಿಗೊಂಬೆ, ಮಂಗಳ ವಾದ್ಯದ ನಿನಾದದೊಡನೆ ಗ್ರಾಮದ ಪ್ರಮುಖ ಬೀದಿಗಳಲ್ಲಿ ಗಣಪತಿ ವಿಸರ್ಜನೆ ಉತ್ಸವ ವಿಜೃಂಭಣೆಯಿಂದ ನೆರವೇರಿತು. ಬೀದಿಗಳಲ್ಲಿ ಪಟಾಕಿ ಸಿಡಿಸುವುದರ ಮೂಲಕ ಡಕ್ ಸದ್ದಿಗೆ ಯುವಕರು ಕುಣಿದು ಕುಪ್ಪಳಿಸಿದರು. ರಾತ್ರಿ ಗ್ರಾಮದ ಹೊರವಲಯದ ಗೌರಿಕೆರೆಯಲ್ಲಿ ಗಣಪತಿಮೂರ್ತಿಯನ್ನು ವಿಸರ್ಜಿಸಲಾಯಿತು.

ಲೋಕ ಅದಾಲತ್‌ನಲ್ಲಿ ಹಲವು ಪ್ರಕರಣಗಳು ಇತ್ಯರ್ಥ



ನ್ಯಾ.ಜಿ.ಪ್ರಭಾವತಿ ಅವರ ಅಧ್ಯಕ್ಷತೆಯಲ್ಲಿ ಲೋಕ್ ಅದಾಲತ್ ಕಾರ್ಯಕ್ರಮ ನಡೆಯಿತು.

ಚಾಮರಾಜನಗರ, ಸೆ13– ಜಿಲ್ಲೆಯ ಎಲ್ಲಾ ನ್ಯಾಯಾಲಯಗಳಲ್ಲಿ ಶನಿವಾರ ನಡೆದ ರಾಷ್ಟ್ರೀಯ ಮೆಗಾಲೋಕ ಅದಾಲತ್‌ನಲ್ಲಿ ಹಲವು ಪ್ರಕರಣಗಳು ಇತ್ಯರ್ಥಗೊಂಡು ಕಾರ್ಯಕ್ರಮ ಯಶಸ್ವಿಯಾಯಿತು.

ಜಿಲ್ಲಾ ಸೆಷನ್ ಮತ್ತು ಸತ್ರ ನ್ಯಾಯಾಲಯದ ನ್ಯಾಯಧೀಶರಾದ ಜಿ.ಪ್ರಭಾವತಿ ಅವರ ಅಧ್ಯಕ್ಷತೆಯಲ್ಲಿ ಜಿಲ್ಲೆಯ ವಿವಿಧ ನ್ಯಾಯಾಲಯಗಳಲ್ಲಿ ಲೋಕ್ ಅದಾಲತ್ ಕಾರ್ಯಕ್ರಮ ನಡೆಯಿತು. ಅದಾಲತ್‌ನಲ್ಲಿ ಬಾಕಿ ಇರುವ ಬ್ಯಾಂಕ್ ವಸೂಲಾತಿ ಪ್ರಕರಣಗಳು, ಮೋಟಾರ್ ವಾಹನ ಅಪಘಾತ ಪ್ರಕರಣಗಳು, ಕೌಟುಂಬಿಕ ಪ್ರಕರಣಗಳು, ಕಾರ್ಮಿಕ ಸಂಬಂಧಿತ ವಿವಾದಗಳು, ಚೆಕ್ ಬೌನ್ಸ್ ಪ್ರಕರಣಗಳು, ಹಣ ವಸೂಲಾತಿ ಪ್ರಕರಣಗಳು, ಎಂಎಂಡಿಆರ್ ಕಾಯ್ದೆ ಪ್ರಕರಣಗಳು, ಜನನ ನೋಂದಣಿ ಪ್ರಕರಣಗಳು, ಪಾಲು ವಿಭಾಗ ದಾವೆ ಹಾಗೂ ಸಿವಿಲ್ ಪ್ರಕರಣಗಳು, ಕಂದಾಯ ಪ್ರಕರಣಗಳು ಸೇರಿದಂತೆ ಸಾವಿರಾರು ಪ್ರಕರಣಗಳನ್ನು ಯಶಸ್ವಿಯಾಗಿ ಇತ್ಯರ್ಥಪಡಿಸಲಾಯಿತು.

ಇತ್ಯರ್ಥಗೊಂಡಿರುವ ಪ್ರಕರಣಗಳ ನಿಖರ ಸಂಖ್ಯೆ ಸದ್ಯಕ್ಕೆ ತಿಳಿದು ಬಂದಿಲ್ಲ. ನ್ಯಾಯಾಲಯದಲ್ಲಿ ಬಾಕಿ ಪ್ರಕರಣ, ವ್ಯಾಜ್ಯ ಪೂರ್ವ ಪ್ರಕರಣ ಸೇರಿದಂತೆ ಹಲವು ಪ್ರಕರಣಗಳನ್ನು ಇತ್ಯರ್ಥ ಮಾಡುವ ಗುರಿಯನ್ನು ಈ ಬಾರಿ ಪ್ರಾಧಿಕಾರ ಹಾಕಿಕೊಂಡಿತ್ತು. ಹೀಗಾಗಿ, ಸೋಮವಾರ ಅಥವಾ ಮಂಗಳವಾರ ಇತ್ಯರ್ಥಗೊಂಡ ಪ್ರಕರಣಗಳ ನಿಖರ ಮಾಹಿತಿ ತಿಳಿಯಲಿದೆ ಎಂದು ಹೇಳಲಾಗುತ್ತಿದೆ.

ಉಳಿದಂತೆ ಜಿಲ್ಲೆಯ ಕೊಳ್ಳೇಗಾಲ, ಗುಂಡ್ಲುಪೇಟೆ, ಯಳಂದೂರಿನ ನ್ಯಾಯಾಲಯಗಳಲ್ಲೂ ಅದಾಲತ್ ಶನಿವಾರ ಯಶಸ್ವಿಯಾಗಿ ನಡೆದಿದ್ದು, ಸಾಕಷ್ಟು ಪ್ರಕರಣಗಳನ್ನು ರಾಜೀ– ಸಂದಾನದ ಮೂಲಕ ಇತ್ಯರ್ಥಗೊಳಿಸಲಾಗಿದೆ. ರಾಷ್ಟ್ರೀಯ ಮೆಗಾಲೋಕ ಅದಾಲತ್ ಹಿನ್ನೆಲೆಯಲ್ಲಿ ಜಿಲ್ಲೆಯ ವಿವಿಧೆಡೆಯಿಂದ ಕಕ್ಷಿದಾರರು ನ್ಯಾಯಾಲಯಕ್ಕೆ ಬೆಳಗ್ಗೆಯೇ ಬಂದಿದ್ದರು. ಬೆಳಗ್ಗೆ 11 ಗಂಟೆಯ ಸುಮಾರಿಗೆ ಜಿಲ್ಲೆಯ ಎಲ್ಲಾ ನ್ಯಾಯಾಲಯಗಳಲ್ಲಿ ಅದಾಲತ್ ಆರಂಭವಾಯಿತು. ವಕೀಲರು, ಕಕ್ಷಿದಾರರ ಸಮ್ಮುಖದಲ್ಲಿ ನ್ಯಾಯಾಧೀಶರು ಪ್ರಕರಣಗಳ ವಿಚಾರಣೆಯನ್ನು ಮಾಡಿ ಬಹುತೇಕ ಪ್ರಕರಣಗಳನ್ನು ಸ್ಥಳದಲ್ಲಿಯೇ ಇತ್ಯರ್ಥಪಡಿಸಿದರು. ಉಳಿದಂತೆ ರಾಜಿಗೆ ಸಮ್ಮತಿಯಾಗದ ಪ್ರಕರಣಗಳಿಗೆ ಮುಂದಿನ ದಿನಾಂಕವನ್ನು ನೀಡಿದರು.

ಒಂದಾದ ಮೂರು ಜೋಡಿ

ವಿಚ್ಛೇದನ ಹಾಗೂ ಜೀವನಾಂಶಕ್ಕಾಗಿ ನ್ಯಾಯಾಲಯದ ಮೊರೆ ಹೋಗಿದ್ದ ಮೂರು ಜೋಡಿಗಳು ಲೋಕ ಅದಾಲತ್‌ನಲ್ಲಿ ಒಂದಾದರು. ಚಾಮರಾಜನಗರ ತಾಲೂಕಿನ ಹೊಂಗನೂರು ಗ್ರಾಮದ ತೇಜಾ ಹಾಗೂ ಯಳಂದೂರಿನ ಮಹೇಶ್ ಎಂಬ ದಂಪತಿ ಇಬ್ಬರ ನಡುವಿನ ಮನಸ್ತಾಪಗಳಿಂದಾಗಿ ಕಳೆದ ಜೂನ್‌ನಲ್ಲಿ ವಿವಾಹ ವಿಚ್ಛೇದನಕ್ಕೆ ನ್ಯಾಯಾಲಯದ ಮೊರೆ ಹೋಗಿದ್ದರು. ಆದರೆ, ಲೋಕ ಅದಾಲತ್‌ನಲ್ಲಿ ತಮ್ಮ ಮನಸ್ತಾಪಗಳನ್ನು ಮರೆತು ಒಂದಾಗುವುದಾಗಿ ಒಪ್ಪಿಕೊಂಡ ಹಿನ್ನೆಲೆಯಲ್ಲಿ ನ್ಯಾಯಾಧೀಶರ ಸಮ್ಮುಖದಲ್ಲಿ ಪರಸ್ಪರ ಹೂವಿನ ಹಾರ ಬದಲಿಸಿ ಸಿಹಿ ತಿನ್ನಿಸಿ ಒಂದಾದರು.

ಮತ್ತೊಂದು ಪ್ರಕರಣದಲ್ಲಿ ಕುಟುಂಬ ಕಲಹದಿಂದ ಪತಿಯನ್ನು ಬಿಟ್ಟು ಹೋಗಿದ್ದ ಪತ್ನಿಯ ವಿರುದ್ಧ ಚಾಮರಾಜನಗರ ಪಟ್ಟಣದ ರಾಜಶೇಖರಮೂರ್ತಿ ಎಂಬುವವರು ನ್ಯಾಯಾಲಯದಲ್ಲಿ ದಾವೆ ಹೂಡಿದ್ದರು. ಈ ದಂಪತಿಯು ಮತ್ತೆ ಒಂದಾದರು.

ಜೀವನಾಂಶ ಕೋರಿ ಪತ್ನಿ ಆಶಾ ಎಂಬುವವರು ಹಾಗೂ ಅವರ ಇಬ್ಬರು ಮಕ್ಕಳು ಪತಿ ಸೋಮಣ್ಣ ವಿರುದ್ಧ ಕಳೆದ ಒಂದೂವರೆ ವರ್ಷದ ಹಿಂದೆ ದಾವೆ ಹೂಡಿದ್ದರು. ಈ ದಂಪತಿ ಲೋಕ ಅದಾಲತ್‌ನಲ್ಲಿ ಒಂದಾದರು. ನ್ಯಾಯಾಲಯಕ್ಕೆ ಸೋಮಣ್ಣ ಅವರು ಹಾಜರಾದರೆ, ಈತನ ಪತ್ನಿ ವಿಡಿಯೋ ಕಾನ್ಫರೆನ್ಸ್ ಮೂಲಕ ಒಂದಾಗುವುದಾಗಿ ಒಪ್ಪಿಗೆ ಸೂಚಿಸಿದರು.

ಈ ವೇಳೆ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಯೂ ಆದ ನ್ಯಾಯಾಧೀಶರಾದ ಈಶ್ವರ್ ಸೇರಿದಂತೆ ಹಿರಿಯ ಹಾಗೂ ಕಿರಿಯ ವಕೀಲರು, ನ್ಯಾಯಾಲಯದ ಸಿಬ್ಬಂದಿ ಹಾಜರಿದ್ದರು.

ಚೆಕ್ ಬೌನ್ಸ್ ಪ್ರಕರಣ ಇತ್ಯರ್ಥ: ಕೋಲಾರದ ಕೃಷ್ಣಪ್ಪ ಎಂಬುವವರು ಚೆಕ್ ಬೌನ್ಸ್ ಪ್ರಕರಣದಡಿ ಚಾಮರಾಜನಗರದ ಜಗದೀಶ್ ಮತ್ತು ನಾಗೇಶ್ ಎಂಬುವವರ ಮೇಲೆ ಕಳೆದ ಒಂದೂವರೆ ವರ್ಷದ ಹಿಂದೆ ದಾವೆ ಹೂಡಿದ್ದರು. ಆ ಪ್ರಕರಣವು ಇತ್ಯರ್ಥವಾಯಿತು.

ಶೀಘ್ರದಲ್ಲೇ ಚಾಮುಲ್‌ನಲ್ಲಿ ಐಸ್‌ಕ್ರೀಂ, ಶುದ್ಧ ಕುಡಿಯುವ ನೀರಿನ ಘಟಕ ಆರಂಭ



ಚಾಮರಾಜನಗರ ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟದ ಸಭೆಯಲ್ಲಿ ಗಣ್ಯರನ್ನು ಅಭಿನಂದಿಸಲಾಯಿತು.

ಚಾಮರಾಜನಗರ : ಸದ್ಯದಲ್ಲೇ ಚಾಮುಲ್‌ನಲ್ಲಿ ಐಸ್‌ಕ್ರೀಂ ಮತ್ತು ಶುದ್ಧ ಕುಡಿಯುವ ನೀರಿನ ಘಟಕ ಸ್ಥಾಪನೆ ಮಾಡಲಾಗುವುದು ಎಂದು ಅಧ್ಯಕ್ಷ ನಂಜುಂಡಸ್ವಾಮಿ ತಿಳಿಸಿದ್ದಾರೆ.

ತಾಲೂಕಿನ ಕುದೇರಿನಲ್ಲಿ ನಡೆದ ಚಾಮರಾಜನಗರ ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟದ 2024–2025ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಸಾಮಾನ್ಯ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಸಭೆಯಲ್ಲಿ ರೈತರು ಅನೇಕ ವಿಷಯಗಳ ಬಗ್ಗೆ ಚರ್ಚಿಸಿದರು. ಅದರಲ್ಲಿ ಪ್ರಮುಖವಾಗಿ ಐಸ್‌ಕ್ರೀಂ ಘಟಕ, ಶುದ್ಧ ಕುಡಿಯುವ ನೀರಿನ ಘಟಕ ಸ್ಥಾಪನೆ ಮಾಡುವಂತೆ ಜಿಲ್ಲೆಯ ಹಾಲು ಉತ್ಪಾದಕರ ಸಹಕಾರ ಸಂಘಗಳ ಅಧ್ಯಕ್ಷರು ಬೆಂಬಲ ನೀಡಿದ್ದಾರೆ ಅವರ ಬೇಡಿಕೆಯಂತೆ ಸದ್ಯದಲ್ಲೇ ಐಸ್‌ಕ್ರೀಂ, ಶುದ್ಧ ನೀರಿನ ಘಟಕ ಸ್ಥಾಪನೆ ಮಾಡಲಾಗುವುದು ಎಂದರು.

ಜಿಲ್ಲೆಯ ಹಾಲು ಉತ್ಪಾದಕರ ಸಹಕಾರ ಸಂಘಗಳ ಸಹಕಾರದಲ್ಲಿ ಚಾಮುಲ್ ಉತ್ತಮ ಮಟ್ಟದಲ್ಲಿ ನಡೆದುಕೊಂಡು ಹೋಗುತ್ತಿದ್ದು 3.34 ಕೋಟಿ ರೂ. ಲಾಭ ಬಂದಿದ್ದು, ಜಿಲ್ಲೆಯ ಡೇರಿಗಳ ಅಧ್ಯಕ್ಷರ ಸಹಕಾರದಲ್ಲಿ. ಮುಂದಿನ ದಿನಗಳಲ್ಲಿ ಚಾಮುಲ್ ಮತ್ತಷ್ಟು ಉತ್ತಮ ಮಟ್ಟದಲ್ಲಿ ನಡೆದುಕೊಂಡು ಹೋಗಲಿದೆ ಎಂದರು.

ಮುಖ್ಯಮಂತ್ರಿಗಳನ್ನು ಭೇಟಿ ಮಾಡಿ ಚಾಮುಲ್‌ಗೆ ಬಾಕಿ ಬರಬೇಕಾಗಿರುವ 58 ಕೋಟಿ ಅನುದಾನ ಬಿಡುಗಡೆಗೆ ಮನವಿ ಸಲ್ಲಿಸಲಾಗುವುದು. ಐಸ್‌ಕ್ರೀಂ, ಶುದ್ಧ ನೀರಿನ ಘಟಕ ಉದ್ಘಾಟನೆಗೆ ಮುಖ್ಯಮಂತ್ರಿ ಸಿದ್ಧರಾಮ್ಮಯ್ಯ, ಸಹಕಾರ ಸಚಿವರು, ಜಿಲ್ಲಾ ಉಸ್ತುವಾರಿ ಸಚಿವರು, ಸ್ಥಳೀಯ ಶಾಸಕರನ್ನು ಆಹ್ವಾನಿಸಲಾಗುವುದು. ಹಾಲು ಉತ್ಪಾದಕರ ಸಮಾವೇಶ ಮಾಡುವ ಚಿಂತನೆ ಮಾಡಲಾಗಿದೆ ಎಂದರು.

ಕೆಲ್ಲಂಬಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷ ಪು.ಶ್ರೀನಿವಾಸನಾಯಕ ಮಾತನಾಡಿ, ಒಕ್ಕೂಟದಲ್ಲಿ ಎಸ್‌ಸಿ, ಎಸ್‌ಟಿ, ಒಬಿಸಿಗಳಿಗೆ ಮೀಸಲಾತಿ ಕಲ್ಪಿಸಲು ನಿಮ್ಮ ಪ್ರಯತ್ನ ಏನು? ಎಂದು ಅಧ್ಯಕ್ಷರನ್ನು ಪ್ರಶ್ನಿಸಿದಾಗ ಇದರ ಬಗ್ಗೆ ಸರ್ಕಾರ ಮಟ್ಟದಲ್ಲಿ ಚರ್ಚೆ ನಡೆಯುತ್ತದೆ, ಅದು ಆಗುತ್ತದೆ ಎಂದು ಎಂ.ನಂಜುಂಡಸ್ವಾಮಿ ತಿಳಿಸಿದರು.

ಸಭೆಯಲ್ಲಿ ನಿರ್ದೇಶಕರಾದ ಹೆಚ್.ಎಸ್. ನಂಜುಂಡಪ್ರಸಾದ್, ಸದಾಶಿವಮೂರ್ತಿ, ಎಸ್.ಮಹಾದೇವಸ್ವಾಮಿ, ವೈ.ಸಿ. ನಾಗೇಂದ್ರ, ಸುನೀಲ್, ಹೆಚ್.ಎಸ್.ಬಸವರಾಜು, ರೇವಣ್ಣ, ಶೀಲಾ ಪುಟ್ಟರಂಗಶೆಟ್ಟಿ, ಶಾಹುಲ್ ಅಹಮದ್, ವ್ಯವಸ್ಥಾಪಕ ನಿರ್ದೇಶಕ ರಾಜ್ ಕುಮಾರ್, ಜಿಲ್ಲೆಯ ಡೇರಿ ಅಧ್ಯಕ್ಷರು ಭಾಗವಹಿಸಿದ್ದರು

ಬ್ಯುಟಿಷಿಯನ್, ಫ್ಯಾಷನ್ ಡಿಸೈನಿಂಗ್ ತರಬೇತಿ ಪಡೆದವರಿಗೆ ಪ್ರಮಾಣಪತ್ರ ವಿತರಣೆ



ವಿವೇಕ ಗ್ರಾಮೀಣ ಜೀವನಾಧಾರ ಕೇಂದ್ರದಲ್ಲಿ ಪ್ರಮಾಣ ಪತ್ರ ವಿತರಣಾ ಕಾರ್ಯಕ್ರಮವನ್ನು ಉದ್ಘಾಟಿಸುತ್ತಿರುವುದು.

ಗುಂಡ್ಲುಪೇಟೆ: ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್‌ನ ವಿವೇಕ ಗ್ರಾಮೀಣ ಜೀವನಾಧಾರ ಕೇಂದ್ರ ಗುಂಡ್ಲುಪೇಟೆ ಹಾಗೂ ಟೆಕ್ಸಾಸ್ ಇನ್ಸ್ಟ್ರುಮೆಂಟ್ಸ್ ಸಹಯೋಗದಲ್ಲಿ ಏರ್ಪಡಿಸಲಾಗಿದ್ದ ಮೂರು ತಿಂಗಳ ಬ್ಯುಟಿಷಿಯನ್ ಮತ್ತು ಫ್ಯಾಷನ್ ಡಿಸೈನಿಂಗ್ ತರಬೇತಿ ಪೂರ್ಣಗೊಳಿಸಿದ 8ನೇ ಬ್ಯಾಚ್ ಅಭ್ಯರ್ಥಿಗಳಿಗೆ ಇಂದು ವಿವೇಕ ಗ್ರಾಮೀಣ ಜೀವನಾಧಾರ ಕೇಂದ್ರದಲ್ಲಿ ಪ್ರಮಾಣಪತ್ರ ವಿತರಿಸಲಾಯಿತು.

ವೇದಿಕೆಯಲ್ಲಿ ಮುಖ್ಯ ಅತಿಥಿಗಳಾಗಿ ಸ್ವಾಮಿ ವಿವೇಕಾನಂದ ಯೂತ್ ಮೂವ್ ಮೆಂಟ್‌ನ ಸಾಮಾಜಿಕ ಆರ್ಥಿಕ ಸಬಲೀಕರಣ ವಿಭಾಗದ ನಿರ್ದೇಶಕ ಡಾ.ಡೆನ್ನಿಸ್ ಡಿ.ಚೌಹಾಣ್, ಹೊಂಗಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯ ಶಿಕ್ಷಕ ಮಹದೇಶ್ವರ ಸ್ವಾಮಿ ಉಪಸ್ಥಿತರಿದ್ದರು. ಉದ್ಘಾಟನೆ ನೆರವೇರಿಸಿ ಮಾತನಾಡಿದ ಮಹದೇಶ್ವರ ಸ್ವಾಮಿ, ಶಿಕ್ಷಣ ಎಲ್ಲರಿಗೂ ತುಂಬಾ ಅತ್ಯಗತ್ಯ. ಶಿಕ್ಷಣದ ಜೊತೆ ಕೌಶಲ್ಯ ಇದ್ದ ವ್ಯಕ್ತಿಗಳು ಉತ್ತಮ ಸಾಧನೆ ಮಾಡಲು ಸಾಧ್ಯ. ಶಿಕ್ಷಣ ಹಾಗೂ ಕೌಶಲ್ಯ ಇದ್ದವರು ಉನ್ನತವಾಗಿ ಸಾಧನೆ ಮಾಡುತ್ತಾರೆ. ಜೀವನದಲ್ಲಿ ಸಾಧನೆ ಮಾಡಬೇಕಾದರೆ ಗುರಿ ಮುಖ್ಯ ಅದನ್ನು ಸಾಧಿಸುವ ಮನಸ್ಸು ಇದ್ದರೆ ಇಂತಹ ಕೌಶಲ್ಯ ತರಬೇತಿ ಪಡೆದು ಮುಂದಿನ ಜೀವನವನ್ನು ಉನ್ನತ ಮಟ್ಟಕ್ಕೆ ಕೊಂಡೊಯ್ಯಬಹುದು ಎಂದರು.

ಡಾ.ಡೆನ್ನಿಸ್ ಡಿ.ಚೌಹಾಣ್ ಮಾತನಾಡಿ, ನಮ್ಮ ಸಂಸ್ಥೆ ವತಿಯಿಂದ ನೀಡಲಾಗುತ್ತಿರುವ ತರಬೇತಿ ತಮ್ಮ ಜೀವನದ ದಿಕ್ಕನ್ನು ಬದಲಿಸಿಕೊಳ್ಳಲು ಸಹಕಾರವಾಗುತ್ತದೆ. ತರಬೇತಿ ಪಡೆದು ಸುಮ್ಮನೆ ಇದ್ದರೆ ಸಾಧನೆ ಮಾಡಲು ಎಂದಿಗೂ ಸಾಧ್ಯವಿಲ್ಲ. ತಾವು ಪಡೆದ ಕೌಶಲ್ಯ ತರಬೇತಿಯನ್ನು ಉಪಯೋಗಿಸಿ ಉದ್ಯೋಗವನ್ನು ಪ್ರಾರಂಭ ಮಾಡಿ ನಿರಂತರ ಶ್ರಮ ಹಾಕುವ ಮೂಲಕ ತಮ್ಮ ಜೀವನವನ್ನು ಉತ್ತಮಗೊಳಿಸಿಕೊಳ್ಳಲು ತಾವೆಲ್ಲರೂ ಮುಂದಾಗುವುದು ಮುಖ್ಯ ಎಂದರು.

ವಿಆರ್‌ಎಲ್‌ಸಿ ವ್ಯವಸ್ಥಾಪಕ ಚಿನ್ನಮಹದೇವ, ಸಂಯೋಜಕರಾದ ಚಿಕ್ಕಣ್ಣ, ಅಶ್ವಿನಿ ವಿ.ಕೆ, ಶಿಕ್ಷಕರಾದ ಪುಷ್ಪಲತಾ, ನಂದಿನಿ, ಸಿಬ್ಬಂದಿ ಹಾಗೂ ವಿವಿಧ ತರಬೇತಿ ಪಡೆಯುತ್ತಿರುವ ಅಭ್ಯರ್ಥಿಗಳು ಭಾಗವಹಿಸಿದ್ದರು.

ವಾರದ ಮಿತ್ರ
ಸಾಪ್ತಾಹಿಕ ಪುರವಣಿ
ಮೈಸೂರು ಮಿತ್ರ
ಭಾನುವಾರ 14-09-2025
ಪುಟ 9

ಮಹಾ ಮೇಧಾವಿ ವಿಶ್ವೇಶ್ವರಯ್ಯ



ತುಂಬಾ ಬುದ್ಧಿವಂತ್ರಿ ಅವ್ರು ಒಂದು ರೀತಿ ವಿಶ್ವೇಶ್ವರಯ್ಯ ಇದ್ದಹಾಗೆ, ಎಂಥಾ ಅದ್ಭುತ ಬುದ್ಧಿಶಕ್ತಿ ಅಂತೀರಿ ಅವರದ್ದು ವಿಶ್ವೇಶ್ವರಯ್ಯನ ತುಂಡು ಕಣ್ರೀ, ಏನ್ ಮೇಧಾವಿತನ ಅಂತೀರ್‍ರಿ ವಿಶ್ವೇಶ್ವರಯ್ಯನ ತಲೆ ಕಣ್ರೀ ಅವರದ್ದು, ಚೋಟುದ್ದ ಇದಾಳೆ ಆ ಹುಡುಗಿ ಆದರೆ ಎಂಥಾ ಜ್ಞಾಪಕ ಶಕ್ತಿ ಗೊತ್ತಾ? ವಿಶ್ವೇಶ್ವರಯ್ಯನ ಮೆದುಳು ಕಣ್ರೀ ಅವಳದ್ದು, ಅವನಿಗಿರೋ ಜ್ಞಾನ ನೋಡಿದ್ರೆ ಥೇಟ್ ವಿಶ್ವೇಶ್ವರಯ್ಯನ ಅಪರಾವತಾರವೇ. ಇಂಥ ಮಾತುಗಳು ಇವತ್ತಿಗೂ ನಮ್ಮಲ್ಲಿ ಚಾಲ್ತಿಯಲ್ಲಿವೆ. ಅದ್ಭುತ ಬುದ್ಧಿಶಕ್ತಿಗೆ, ಅಪಾರ ಜ್ಞಾನಕ್ಕೆ, ಅಪ್ರತಿಮ ಜ್ಞಾಪಕಶಕ್ತಿಗೆ, ಮಹಾ ಮೇಧಾವಿತನಕ್ಕೆ ಮತ್ತೊಂದು ಹೆಸರೇ ವಿಶ್ವೇಶ್ವರಯ್ಯ ! ಇದು ಕೇವಲ ಒಂದು ಹೆಸರಲ್ಲ. ಒಂದು ಮಹಾ ಶಕ್ತಿ, ಒಂದು ಮಹಾ ಕಾಯಕ, ಒಂದು ಮಹಾ ಸಾಕಾರ, ಒಂದು ಮಹಾ ಕಾರ್ಯಶಿಖರ, ಒಂದು ಜೀವಿತದ ಮಹಾ ಮೌಲ್ಯ, ಒಂದು ಆದರ್ಶದ ಮಹಾ ಪರ್ವ, ಅಭಿವೃದ್ಧಿಯ ಒಂದು ಮಹಾ ಚಕ್ರ, ಸಾಧನೆಗಳ ಒಂದು ಮಹಾ ಮಾರ್ಗ, ಯೋಜನೆಗಳ ಒಂದು ಮಹಾ ದರ್ಶನ ಇವೆಲ್ಲದರ ಮಹಾ ಸಂಗಮವೇ ವಿಶ್ವಕಂಡ ಮಹಾ ಮೇಧಾವಿ, ಭಾರತ ರತ್ನ ಮೋಕ್ಷಗುಂಡಂ ಸರ್ ಎಂ. ವಿಶ್ವೇಶ್ವರಯ್ಯ.

ಅಭಿವೃದ್ಧಿಯ ಹರಿಕಾರ ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಸದಾಶಯದಂತೆ ಕನ್ನಡ ನಾಡಿನ ಜೀವನದಿ ಕಾವೇರಿಯನ್ನು ಹಿಡಿದಿಟ್ಟು ಕನ್ನಂಬಾಡಿ ಕಟ್ಟೆ ಕಟ್ಟಿ ಬೆಂಗಾಡನ್ನೆಲ್ಲಾ ಬಂಗಾರದ ಬೆಳೆಯಾಗಿಸಿದ ಈ ಬಂಗಾರದ ಮನುಷ್ಯನ ಮೆದುಳಿಗೆ ಇಂದಿನ ಯಾವ ಅತ್ಯಾಧುನಿಕ ಕಂಪ್ಯೂಟರ್‌ಗಳೂ ಸಮವಲ್ಲ. ಅಂಥ ಅದ್ಭುತ ಮೆದುಳಿನ ವಿಶ್ವೇಶ್ವರಯ್ಯನವರ ತಲೆಯಲ್ಲರಳಿ ಕಾರ್ಯರೂಪಗೊಂಡ ಯೋಜನೆಗಳು ಅಸಂಖ್ಯಾತ. ಅಭಿವೃದ್ಧಿಯ ಪಥದಲ್ಲಿ ಆಧುನಿಕ ಭಾರತ ವನ್ನು ಕರೆದೊಯ್ದವರ ಪೈಕಿ ಮೊದಲ ಸಾಲಿನಲ್ಲೇ ಮಿನುಗುವ ಹೆಸರು ಇವರದು. ಅಷ್ಟೇ ಅಲ್ಲ ಜಗತ್ಪ್ರಸಿದ್ಧ ವಾಸ್ತು ಶಿಲ್ಪವರೇಣ್ಯರಾಗಿ, ಅದ್ಭುತ ಅಭಿಯಂತರರಾಗಿ ವಿಶ್ವೇಶ್ವರಯ್ಯನವರ ಹೆಸರು ಜಗತ್ತಿನಲ್ಲಿ ಅಜರಾಮರ. ವಿಶ್ವೇಶ್ವರಯ್ಯನವರಂಥ ವಿಸ್ಮಯದೋಪಾದಿಯ ಮೇಧಾವಿ ಇಂಜಿನಿಯರನ್ನು ಇನ್ನೆಂದಿಗೂ ಕಾಣಲಾಗದೆಂದು ಜಗತ್ತು ಎಂದೋ ನಿರ್ಧರಿಸಿಯಾಗಿದೆ. ಇಂಥ ಮೇಧಾವಿ, ನಿಸ್ವಾರ್ಥಿ, ದೇಶಪ್ರೇಮಿ, ಕಾಯಕಯೋಗಿ, ಶ್ರೇಷ್ಠ ಇಂಜಿನಿಯರ್ ವಿಶ್ವೇಶ್ವರಯ್ಯ ಈ ನಾಡಿಗೆ, ಈ ದೇಶಕ್ಕೆ, ಈ ಪ್ರಪಂಚಕ್ಕೆ ಕೊಟ್ಟ ಅನುಪಮ ಕೊಡುಗೆ ಒಂದೆರಡಲ್ಲ ಅಸಂಖ್ಯಾತ, ಇವತ್ತಿಗೂ ಅವು ವಿಶ್ವೇಶ್ವರಯ್ಯ ನವರ ಹೆಸರನ್ನೇ ಪಠಿಸುತ್ತಿವೆ.

ಹಿಂದೂಸ್ಥಾನ್ ಏರ್‌ಕ್ರಾಫ್ಟ್ ಫ್ಯಾಕ್ಟರಿ (ಈಗಿನ ಹೆಚ್‌ಎಎಲ್), ಸ್ಟೇಟ್ ಬ್ಯಾಂಕ್ ಆಫ್ ಮೈಸೂರು, ಚೇಂಬರ್ ಆಫ್ ಕಾಮರ್ಸ್, ಮೈಸೂರು ಪೇಪರ್ ಮಿಲ್ಸ್, ಮೈಸೂರು ವಿಶ್ವವಿದ್ಯಾನಿಲಯ, ಭದ್ರಾವತಿ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆ, ಬೆಂಗಳೂರು ಮುದ್ರಣಾಲಯ, ಬೆಂಗಳೂರು ಮೆಕ್ಯಾನಿಕಲ್ ಇಂಜಿನಿಯರಿಂಗ್ ಶಾಲೆ (ಈಗ ಇದು ಜಯಚಾಮರಾಜೇಂದ್ರ ಪಾಲಿಟೆಕ್ನಿಕ್ ಕಾಲೇಜ್ ಆಗಿದೆ), ಮೈಸೂರು ಗಂಧದೆಣ್ಣೆ ಕಾರ್ಖಾನೆ, ಮೈಸೂರು ಸ್ಯಾಂಡಲ್ ಸೋಪ್ ಕಾರ್ಖಾನೆ, ಕೆ.ಆರ್. ಮಿಲ್, ಸಾರ್ವಜನಿಕ ಗ್ರಂಥಾಲಯಗಳು, ಕನ್ನಡ ಸಾಹಿತ್ಯ ಪರಿಷತ್, ಚನ್ನಪಟ್ಟಣದ ರೇಷ್ಮೆ ಕೈಗಾರಿಕೆ, ಜೋಗದ ಜಲ ವಿದ್ಯುತ್ ಯೋಜನೆ, ಶಿವನಸಮುದ್ರ ಜಲ ವಿದ್ಯುತ್ ಯೋಜನೆ, ನಂದಿ ಬೆಟ್ಟದ ರೋಪ್‌ವೇ, ಮಿಥಿಕ್ ಸೊಸೈಟಿ, ಕಬ್ಬನ್ ಪಾರ್ಕ್, ಸೆಂಚುರಿ ಕ್ಲಬ್, ಮಲೆನಾಡು ಅಭಿವೃದ್ಧಿ ಮಂಡಳಿ, ಕೃಷಿ ಶಾಲೆ, ವಾಣಿಜ್ಯ ಶಾಲೆ, ಮೈಸೂರಿನಲ್ಲಿ ಪ್ರತ್ಯೇಕವಾದ ರೈಲ್ವೆ ವಿಭಾಗ ಸ್ಥಾಪನೆ, ಮಂಗಳೂರಿನ ಹೆಂಚು ಮತ್ತು ಇಟ್ಟಿಗೆಯ ಕಾರ್ಖಾನೆ, ಬೆಂಕಿ ಕಡ್ಡಿ ಕಾರ್ಖಾನೆ, ತುಂಗಭದ್ರಾ ಜಲಾಶಯ, ಪ್ಯಾರಾಸಿಟಾಯ್ಡ್ ಲ್ಯಾಬೊರೇಟರಿ, ಭಟ್ಕಳ ಬಂದರು, ಹಿಂದೂ ಮಾಡರ್ನ್ ಹೋಟೆಲ್, ಹೆಬ್ಬಾಳದ ಕೃಷಿ ಸಂಶೋಧನಾ ಕೇಂದ್ರ, ದೇಶದಲ್ಲಿಯೇ ಮೊಟ್ಟ ಮೊದಲಿಗೆ ಕಡ್ಡಾಯ ಪ್ರಾಥಮಿಕ ಶಿಕ್ಷಣ ಜಾರಿ, ಕನ್ನಂಬಾಡಿಗೆ ವಿಶ್ವದಲ್ಲಿಯೇ ಮೊದಲ ಸ್ವಯಂ ಚಾಲಿತ ಗೇಟ್‌ಗಳ ಅಳವಡಿಕೆ... ಹೀಗೆ ಹೇಳುತ್ತಾ ಹೋದರೆ ವಿಶ್ವೇಶ್ವರಯ್ಯನವರ ಮೆದುಳಿನ ಮಹದ ದ್ಭುತ ಶಕ್ತಿಯಿಂದ ಯೋಜನೆಗಳಾಗಿ ರೂಪುಗೊಂಡು ನಾಡಿಗೆ ಸಮರ್ಪಣೆಗೊಂಡ ಸಾಧನೆಯ ಶಿಖರಗಳ ಪಟ್ಟಿ ಬೆಳೆಯುತ್ತಾ ಹೋಗುತ್ತದೆ. ಇದು ವಿಶ್ವೇಶ್ವರಯ್ಯನವರು ನಾಡಿಗೆ ನೀಡಿದ ಕೊಡುಗೆಯಾಯಿತಷ್ಟೆ.

ಸೆಪ್ಟೆಂಬರ್ 15, ಇಂಜಿನಿಯರ್ಸ್ ದಿನಾಚರಣೆ. ತನ್ನಿಮಿತ್ತ ಈ ಲೇಖನ.

ಹೀಗೆಯೇ ನಾಡಿನಿಂದಾಚೆಗೂ ದೇಶ ವ್ಯಾಪಿ ವಿಶ್ವೇಶ್ವರಯ್ಯನವರ ಸಾಧನೆಯ ಹೆಗ್ಗುರುತುಗಳಿದ್ದು, ಪೂನಾದ ಜಲನಿರ್ಗಮನ ಯೋಜನೆ, ಭೂಪಾಲ್ ನಗರದ ನೀರು ಸರಬರಾಜು ಹಾಗೂ ವಿದ್ಯುಚ್ಛಕ್ತಿ ಯೋಜನೆ ಮತ್ತು ಬಿಹಾರ, ಪಶ್ಚಿಮ ಬಂಗಾಳ ಹಾಗೂ ಅಸ್ಸಾಂ ರಾಜ್ಯಗಳ ಗಂಗಾನದಿ ಸೇತುವೆ ನಿರ್ಮಾಣ, ಗ್ವಾಲಿಯರ್‌ನ ಟ್ರಿಗ್ರಾ ಅಣೆಕಟ್ಟಿನ ಪುನರ್ನಿರ್ಮಾಣ, ಮುಂಬೈನ ಸಿಂಧ್‌ನಲ್ಲಿರುವ ಸುಕ್ಕೂರು ಅಣೆಕಟ್ಟು ಯೋಜನೆ, ಒರಿಸ್ಸಾ ಪ್ರಾಂತ್ಯದ ಮಹಾನದಿ ಪ್ರವಾಹ ನಿಯಂತ್ರಣ ಯೋಜನೆ, ಮುಂಬೈನ ಆಟೋಮೊಬೈಲ್ ಕಂಪನಿ ಮುಂತಾದವು ವಿಶ್ವೇಶ್ವರಯ್ಯನವರ ಸಾಧನೆಗಳಾಗಿದ್ದು, ಭಾರತೀಯರೆಲ್ಲರೂ ಹೆಮ್ಮೆ ಪಡುವಂತಿದೆ., ಹಾಗೆಯೇ ದೇಶದಿಂದಾಚೆಗೂ ಇವರ ಮೇಧಾವಿತನದ ಮಹತ್ತರ ಮೈಲುಗಲ್ಲುಗಳನ್ನು ಕಾಣಬಹುದಾಗಿದ್ದು, ಇವುಗಳಲ್ಲಿ ಅಮೆರಿಕಾದ ಪನಾಮ ನದಿಗೆ ಅಳವಡಿಸಿರುವ ವಿಶ್ವೇಶ್ವರಯ್ಯನವರು ಆವಿಷ್ಕರಿಸಿದ ಸ್ವಯಂಚಾಲಿತ ತೂಬಿನ ಬಾಗಿಲುಗಳು ಮತ್ತು ಆಸ್ಟ್ರೇಲಿಯಾದ ಹೇಡನ್ ನಗರದ ಜಲನಿರ್ಗಮನ ಯೋಜನೆ ಪ್ರಮುಖವೆನಿಸಿವೆ.

ಇಂಥ ಭಾರತರತ್ನ ಸರ್ ಎಂ. ವಿಶ್ವೇಶ್ವರಯ್ಯನವರು ಜನಿಸಿದ್ದು 1860 ಸೆಪ್ಟಂಬರ್ 15 ರಂದು. ಜನ್ಮಸ್ಥಳ ಕರ್ನಾಟಕದ ಹಿಂದಿನ ಕೋಲಾರ ಜಿಲ್ಲೆಯ ಚಿಕ್ಕಬಳ್ಳಾಪುರ ತಾಲೂಕಿನ ಮುದ್ದೇನಹಳ್ಳಿ ಗ್ರಾಮ. ಇವರ ಪೂರ್ವಿಕರು ಆಂಧ್ರಪ್ರದೇಶದ ಕರ್ನೂಲ್ ಜಿಲ್ಲೆಯ ಮೋಕ್ಷಗುಂಡಂ ಎಂಬ ಗ್ರಾಮದವರಾಗಿದ್ದು, 1624 ರಲ್ಲೇ ಇಲ್ಲಿಗೆ ಬಂದು ನೆಲೆಸಿದ್ದರು. ತಂದೆ ಮೋಕ್ಷಗುಂಡಂ ಶ್ರೀನಿವಾಸ ಶಾಸ್ತ್ರಿಗಳು ಸಂಪ್ರದಾಯಸ್ಥ ಬ್ರಾಹ್ಮಣರೂ, ವೇದ ಶಾಸ್ತ್ರಗಳಲ್ಲಿ ನಿಪುಣರೂ, ಸಂಸ್ಕೃತ ವಿದ್ವಾಂಸರೂ, ಅನುಭವಿ ಆಯುರ್ವೇದ ವೈದ್ಯರೂ ಆಗಿದ್ದರು. ತಾಯಿ ಸುಸಂಸ್ಕೃತೆ ಶ್ರೀಮತಿ ವೆಂಕಟಲಕ್ಷ್ಮಮ್ಮ. ಈ ದಂಪತಿಯ ಆರು ಮಕ್ಕಳ ಪೈಕಿ ಎರಡನೆಯವರೇ ವಿಶ್ವೇಶ್ವರಯ್ಯನವರು. ಜ್ಞಾನದ ನಿಧಿಯಾಗಿ, ವಿದ್ವತ್ತಿನ ಗಣಿಯಾಗಿ ಸರಸ್ವತಿಯ ನೆಲೆವೀಡಾದ ಕುಟುಂಬವಾದರೂ ಬಡ ಬ್ರಾಹ್ಮಣರು ಎಂಬ ಮಾತಿಗೆ ಅನ್ವರ್ಥವಾಗಿ ಕಿತ್ತು ತಿನ್ನುವ ಬಡತನ ಇವರದ್ದಾಗಿತ್ತು. ಇಂತಹ ಕುಟುಂಬದಲ್ಲಿ ಹುಟ್ಟಿದ ವಿಶ್ವೇಶ್ವರಯ್ಯನವರು ಮುಂದೆ ವಿಶ್ವವೇ ಬೆರಗಾಗುವಂತೆ ಬೆಳೆದದ್ದು, ಭಾರತರತ್ನವಾಗಿ ಬೆಳಗಿದ್ದು, ಸಾಧನೆಯ ಹಿಮಾಲಯವೇ ತಾವಾದದ್ದು ಒಂದು ವಿಸ್ಮಯವೇ ಸರಿ !...

ವಿಶ್ವೇಶ್ವರಯ್ಯನವರು ಬಾಲ್ಯದಲ್ಲೇ ತಂದೆಯನ್ನು ಕಳೆದುಕೊಂಡವರು. ಆಗ ಅವರು ಕುಟುಂಬಸಹಿತ ಮುದ್ದೇನಹಳ್ಳಿಯನ್ನು ಬಿಟ್ಟು ಚಿಕ್ಕಬಳ್ಳಾಪುರಕ್ಕೆ ಬಂದು ಸೋದರ ಮಾವ ಹೆಚ್. ರಾಮಯ್ಯನವರನ್ನು ಆಶ್ರಯಿಸಿದ್ದರು. ಸೋದರ ಮಾವ ರಾಮಯ್ಯನವರೇ ಆಗ ವಿಶ್ವೇಶ್ವರಯ್ಯನವರ ಮುಂದಿನ ಭವಿಷ್ಯಕ್ಕೆ ಮಾರ್ಗದರ್ಶಕರಾಗಿದ್ದು. ಹಾಗಾಗಿ ಅವರ ಪ್ರಭಾವವೇ ವಿಶ್ವೇಶ್ವರಯ್ಯನವರ ಮೇಲೆ ಹೆಚ್ಚುಂಟು. ಅಂತೆಯೇ ಪ್ರಾಥಮಿಕ ಶಿಕ್ಷಣವನ್ನು ಹುಟ್ಟೂರು ಮುದ್ದೇನಹಳ್ಳಿ ಸಮೀಪದ ಕಂದವರ ಗ್ರಾಮದ ಸರ್ಕಾರಿ ಪ್ರಾಥಮಿಕ ಶಾಲೆಯಲ್ಲೂ ಮತ್ತು ಮಾಧ್ಯಮಿಕ ಶಿಕ್ಷಣವನ್ನು ಚಿಕ್ಕಬಳ್ಳಾಪುರದ ಸರ್ಕಾರಿ ಮಾಧ್ಯಮಿಕ ಶಾಲೆಯಲ್ಲೂ ಹಾಗೂ ಪ್ರೌಢಶಿಕ್ಷಣವನ್ನು ಬೆಂಗಳೂರಿನ ವೆಸ್ಲಿಯನ್ ಮಿಷನ್ ಪ್ರೌಢಶಾಲೆಯಲ್ಲೂ ಕಲಿತ ವಿಶ್ವೇಶ್ವರಯ್ಯನವರಿಗೆ ಶ್ರೀಕೃಷ್ಣಗಿರಿಯ ರಾಘವೇಂದ್ರರಾಯರು ಮತ್ತು ಬಿ. ವೆಂಕಟಪತಿ ಅಯ್ಯಂಗಾರರು ಹಾಗೂ ನಾಥಮುನಿ ನಾಯ್ಡು ಅವರುಗಳು ಮೆಚ್ಚಿನ ಗುರುಗಳಾಗಿದ್ದರು. ಕಷ್ಟವೆನ್ನದೆ ವಿದ್ಯೆಯನ್ನು ಇಷ್ಟಪಟ್ಟು ಕಲಿತ ವಿಶ್ವೇಶ್ವರಯ್ಯ ಸೆಂಟ್ರಲ್ ಕಾಲೇಜು ವಿದ್ಯಾರ್ಥಿಯಾಗಿ 1881ರಲ್ಲಿ ಅತ್ಯುತ್ತಮ ಶ್ರೇಣಿಯಲ್ಲಿ ಬಿಎ ಪದವಿ ಗಳಿಸಿದರು.


ಬನ್ನೂರು ಕೆ.ರಾಜು
ಸಾಹಿತಿ, ಪತ್ರಕರ್ತ
ಮೊ: 9481533167

ವಿಶ್ವೇಶ್ವರಯ್ಯನವರಿಗೆ ಎಷ್ಟೊಂದು ಡಿಮ್ಯಾಂಡ್ ಇತ್ತೆಂದರೆ ಅವರು ಒಪ್ಪಿಕೊಂಡಿದ್ದ ಕೆಲಸ ಪೂರ್ಣಗೊಳ್ಳುವುದನ್ನೇ ಕಾದು ಭಾರತ ಸರ್ಕಾರ ಅವರ ಸೇವೆಯನ್ನು ಬಯಸಿ ನ್ಯೂ ಕ್ಯಾಪಿಟಲ್ ಎನ್‌ಕ್ವೈರಿ ಕಮಿಟಿ (1925), ಬ್ಯಾಕ್ ಬೇ ಎನ್‌ಕ್ವೈರಿ ಕಮಿಟಿ (1923), ಇರಿಗೇಷನ್ ಕಮಿಟಿ (1932) ಗಳ ಅಧ್ಯಕ್ಷರಾಗಿ ನೇಮಿಸಿತ್ತು. ನಾಲ್ವಡಿ ಕೃಷ್ಣರಾಜ ಒಡೆಯರ ನಂತರ ಪಟ್ಟಕ್ಕೆ ಬಂದ ಶ್ರೀ ಜಯಚಾಮರಾಜ ಒಡೆಯರ್ ಸಹ ಇವರ ಸೇವೆಯನ್ನು ಬಳಸಿಕೊಳ್ಳಲು ಬಯಸಿದರಾದರೂ ಇದಕ್ಕೆ ವಿಶ್ವೇಶ್ವರಯ್ಯ ನವರು ಒಪ್ಪದೆ ಮಾರ್ಗದರ್ಶಕರಾಗಷ್ಟೇ ಇರಲು ಸಮ್ಮತಿಸಿದ್ದರು. ಆಗಲೇ ಬೆಂಗಳೂರಿನಲ್ಲಿ ಏಷ್ಯಾ ಖಂಡದಲ್ಲಿಯೇ ಅತ್ಯಂತ ದೊಡ್ಡದಾದ ವಿಮಾನ ಕಾರ್ಖಾನೆ ಆರಂಭವಾದದ್ದು. ಇದಕ್ಕಾಗಿ ತಮಗೆ ಸಂದ ಗೌರವಧನವನ್ನು ಒಂದು ಪೈಸೆಯನ್ನೂ ಬಳಸಿಕೊಳ್ಳದೆ, ಮಹಾರಾಜರ ಹೆಸರಿನಲ್ಲೇ 'ಶ್ರೀ ಜಯಚಾಮರಾಜೇಂದ್ರ ಪಾಲಿಟೆಕ್ನಿಕ್ ಕಾಲೇಜ್' ಅನ್ನು ವಿಶ್ವೇಶ್ವರಯ್ಯನವರು ಪ್ರಾರಂಭಿಸಿದ್ದರು.

ಆನಂತರ ಹೆಚ್ಚಿನ ಶಿಕ್ಷಣವನ್ನು ಪಡೆಯಲು ಅವರಿಗಿದ್ದ ಬಡತನವನ್ನು ಸೂಕ್ಷ್ಮವಾಗಿ ಅರಿತಿದ್ದ ಅಂದಿನ ಸೆಂಟ್ರಲ್ ಕಾಲೇಜ್ ಪ್ರಿನ್ಸಿಪಾಲ್ ಚಾರ್ಲ್ಸ್‌ವಾಟರ್ ಅವರು ಆಗ ದಿವಾನರಾಗಿದ್ದ ರಂಗಾಚಾರ್ಲ್ ಅವರಿಗೆ ಹೇಳಿ ವಿಶ್ವೇಶ್ವರಯ್ಯನವರಿಗೆ ನೆರವು ದೊರಕಿಸಿಕೊಟ್ಟಿದ್ದರು. ಇದರಿಂದ ಅವರಿಗೆ ಸರ್ಕಾರದ ವಿದ್ಯಾರ್ಥಿ ವೇತನ ಸಿಕ್ಕಿ ಉನ್ನತ ಶಿಕ್ಷಣಕ್ಕೆ ಮುಂಬೈಗೆ ಹೋಗಿ ಪುಣೆಯ ಸೈನ್ಸ್ ಕಾಲೇಜು ಸೇರಿ ಎಲ್.ಸಿ.ಇ. ಮತ್ತು ಎಫ್.ಸಿ.ಇ.ಎಲ್. (ಇಂಜಿನಿಯರಿಂಗ್) ಪರೀಕ್ಷೆಗಳಲ್ಲಿ ಇಡೀ ಮುಂಬೈ ಪ್ರಾಂತ್ಯಕ್ಕೆ ಮೊದಲ ಸ್ಥಾನಗಳಿಸಿ 1883ರಲ್ಲಿ ಇಂಜಿನಿಯರ್ ಪದವಿಪಡೆದಿದ್ದರು. ಆಗ 'ಜೇಮಬರ್‌ಕ್ಲೆ' ಎಂಬ ಬಹುಮಾನ ಇವರಿಗೆ ದೊರೆತಿತ್ತು.

ವಿದ್ಯಾರ್ಥಿ ದಿಶೆಯಲ್ಲೇ ತಮ್ಮ ಅಗಾಧ ಪ್ರತಿಭೆಯಿಂದ ಕೀರ್ತಿ ಶಿಖರ ಏರಿದ್ದ 23ರ ತರುಣ ಇಂಜಿನಿಯರ್ ಪದವೀಧರ ವಿಶ್ವೇಶ್ವರಯ್ಯನವರನ್ನು ಕರೆದು ಮುಂಬೈ ಸರ್ಕಾರ ಕೆಲಸಕೊಟ್ಟಿತ್ತು. ಮುಂಬೈ ಪ್ರಾಂತ್ಯದ ನಾಸಿಕ್ ಜಿಲ್ಲೆಯಲ್ಲಿ ಲೋಕೋಪಯೋಗಿ ಇಲಾಖೆಯಲ್ಲಿ ಅಸಿಸ್ಟೆಂಟ್ ಇಂಜಿನಿಯರ್ ಆಗಿ ವಿಶ್ವೇಶ್ವರಯ್ಯನವರು ಮೊದಲಿಗೆ ತಮ್ಮ ವೃತ್ತಿ ಜೀವನವನ್ನು ಆರಂಭಿಸಿದ್ದರು. ನಂತರದ ದಿನಗಳಲ್ಲಿ ಅವರು ಹಂತ ಹಂತವಾಗಿ ವಿವಿಧ ಹುದ್ದೆಗಳನ್ನೇರಿ, ಹಲವು ಸ್ಥಾನಗಳನ್ನು ಅಲಂಕರಿಸಿ ಜಗತ್ತೇ ಬೆರಗುಗೊಳ್ಳುವಂತೆ ಸಾಧನೆಯ ಹಿಮಾಲಯವನ್ನೇ ಸೃಷ್ಟಿಸಿದ್ದು ಈಗ ನಮ್ಮ ಕಣ್ಮುಂದಿನ ಇತಿಹಾಸವಾಗಿದೆ.

ದಿವಾನ್ ವಿ.ಪಿ. ಮಾಧವರಾಯರ ಸಲಹೆಯ ಮೇರೆಗೆ ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರೇ ಖುದ್ದು ಮುಂಬೈನಲ್ಲಿದ್ದ ವಿಶ್ವೇಶ್ವರಯ್ಯನವರನ್ನು ಬರಮಾಡಿ ಕೊಂಡು 1909ರ ನವೆಂಬರ್ 15ರಂದು ಅವರನ್ನು ಮೈಸೂರಿನ ಮುಖ್ಯ ಇಂಜಿನಿಯರ್ ಆಗಿ ನೇಮಿಸಿದ್ದರು. ವಿಶ್ವೇಶ್ವರಯ್ಯನವರ ಮೇಧಾವಿತನಕ್ಕೆ ಮಾರು ಹೋಗಿದ್ದ ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರು 1912ರ ನವೆಂಬರ್‌ನಲ್ಲಿ ಟಿ. ಆನಂದರಾಯರು ದಿವಾನ್ ಪದವಿಯಿಂದ ನಿವೃತ್ತರಾದ ನಂತರ ಇವರನ್ನೇ ದಿವಾನರಾಗಿ ನೇಮಕ ಮಾಡಿದ್ದರು.

ದಿವಾನರಾಗಿ ಅವರು ಕಾರ್ಯನಿರ್ವಹಿಸಿದ್ದು ಕೇವಲ ಏಳು ವರ್ಷಗಳು ಮಾತ್ರವೇ. ಆದರೂ ಏಳು ಶತಮಾನಗಳಲ್ಲಿ ಮಾಡುವಷ್ಟು ಕೆಲಸಗಳನ್ನು ಮಾಡಿ, 1919ರ ಡಿಸೆಂಬರ್ 9ರಂದು ದಿವಾನ್ ಪದವಿಯಿಂದ ನಿವೃತ್ತಿ ಹೊಂದಿದ್ದರು.

ವಿಶ್ವೇಶ್ವರಯ್ಯನವರಿಗೆ ಎಷ್ಟೊಂದು ಡಿಮ್ಯಾಂಡ್ ಇತ್ತೆಂದರೆ ಅವರು ಒಪ್ಪಿಕೊಂಡಿದ್ದ ಕೆಲಸ ಪೂರ್ಣಗೊಳ್ಳುವುದನ್ನೇ ಕಾದು ಭಾರತ ಸರ್ಕಾರ ಅವರ ಸೇವೆಯನ್ನು ಬಯಸಿ ನ್ಯೂ ಕ್ಯಾಪಿಟಲ್ ಎನ್‌ಕ್ವೈರಿ ಕಮಿಟಿ (1925), ಬ್ಯಾಕ್ ಬೇ ಎನ್‌ಕ್ವೈರಿ ಕಮಿಟಿ (1923), ಇರಿಗೇಷನ್ ಕಮಿಟಿ (1932)ಗಳ ಅಧ್ಯಕ್ಷರಾಗಿ ನೇಮಿಸಿತ್ತು ನಾಲ್ವಡಿ ಕೃಷ್ಣರಾಜ ಒಡೆಯರ ನಂತರ ಪಟ್ಟಕ್ಕೆ ಬಂದ ಶ್ರೀ ಜಯಚಾಮರಾಜ ಒಡೆಯರ್ ಸಹ ಇವರ ಸೇವೆಯನ್ನು ಬಳಸಿಕೊಳ್ಳಲು ಬಯಸಿದರಾದರೂ ಇದಕ್ಕೆ ವಿಶ್ವೇಶ್ವರಯ್ಯನವರು ಒಪ್ಪದೆ ಮಾರ್ಗದರ್ಶಕರಾಗಷ್ಟೇ ಇರಲು ಸಮ್ಮತಿಸಿದ್ದರು. ಆಗಲೇ ಬೆಂಗಳೂರಿನಲ್ಲಿ ಏಷ್ಯಾ ಖಂಡದಲ್ಲಿಯೇ ಅತ್ಯಂತ ದೊಡ್ಡದಾದ ವಿಮಾನ ಕಾರ್ಖಾನೆ ಆರಂಭವಾದದ್ದು. ಇದಕ್ಕಾಗಿ ತಮಗೆ ಸಂದ ಗೌರವಧನವನ್ನು ಒಂದು ಪೈಸೆಯನ್ನೂ ಬಳಸಿಕೊಳ್ಳದೆ, ಮಹಾರಾಜರ ಹೆಸರಿನಲ್ಲೇ 'ಶ್ರೀ ಜಯ ಚಾಮರಾಜೇಂದ್ರಪಾಲಿಟೆಕ್ನಿಕ್ ಕಾಲೇಜ್' ಅನ್ನು ವಿಶ್ವೇಶ್ವರಯ್ಯನವರು ಪ್ರಾರಂಭಿಸಿದ್ದರು.


ಇಂಥ ಮಹಾಮೇಧಾವಿ ವಿಶ್ವೇಶ್ವರಯ್ಯನವರಿಗೆ 1915ರಲ್ಲಿ ಬ್ರಿಟಿಷ್ ಸರ್ಕಾರ "ಸರ್" ಎಂಬ ಗೌರವವನ್ನೂ, 1955ರಲ್ಲಿ ಭಾರತ ಸರ್ಕಾರವು ತನ್ನ ಅತ್ಯುನ್ನತ ಪ್ರಶಸ್ತಿಯಾದ "ಭಾರತ ರತ್ನ" ವನ್ನೂ ನೀಡಿ ಗೌರವಿಸಿವೆ. ಇವರಿಗೆ ಬಂದಿರುವ ವಿಶ್ವವಿದ್ಯಾಲಯಗಳ ಗೌರವ ಡಾಕ್ಟರೇಟ್‌ಗಳಿಗಂತೂ ಲೆಕ್ಕವಿಲ್ಲ. ಇವರಿಗೆ ನೂರು ತುಂಬಿದ ಸಂದರ್ಭದಲ್ಲಿ 1960ರಲ್ಲಿ ಬೆಂಗಳೂರಿನಲ್ಲಿ ನಡೆದ ಶತಮಾನೋತ್ಸವದಲ್ಲಿ ಅಂದಿನ ಪ್ರಧಾನಿ ಜವಹರಲಾಲ್ ನೆಹರು ಅವರೇ ಖುದ್ದು ಹಾಜರಿದ್ದು ವಿಶ್ವೇಶ್ವರಯ್ಯನವರನ್ನು ಅಭಿನಂದಿಸಿದ್ದರು.

ಸರ್.ಎಂ. ವಿಶ್ವೇಶ್ವರಯ್ಯನವರು ತಮ್ಮ 102ನೇ ವರ್ಷದಲ್ಲಿ 1962ರಲ್ಲಿ ಏಪ್ರಿಲ್ 14ರ ಬೆಳಿಗ್ಗೆ 6-15ಕ್ಕೆ ವಿಧಿವಶರಾದರು. ಅವರ ಜನ್ಮದಿನ ಸೆಪ್ಟಂಬರ್ 15 ಅನ್ನು ದೇಶಾದ್ಯಂತ ಇಂಜಿನಿಯರ್ಸ್ ದಿನಾಚರಣೆಯನ್ನಾಗಿ ಪ್ರತೀ ವರ್ಷ ಆಚರಿಸಲಾಗುತ್ತಿದೆ. ಇದು ಅವರಿಗೆ ಸಲ್ಲಿಸುತ್ತಿರುವ ಒಂದು ಮಹಾಗೌರವವೇ ಸರಿ.

ವಿಷಾದನೀಯ ವಿಷಯವೆಂದರೆ ವಿಶ್ವೇಶ್ವರಯ್ಯನವರ ಸಾಂಸಾರಿಕ ಜೀವನ ಮಾತ್ರ ಸುಖಕರವಾಗಿರಲಿಲ್ಲ. ಸುಗುಣವಂತೆ ಸಾವಿತ್ರಮ್ಮನ ಜೊತೆ ವೈವಾಹಿಕ ಜೀವನಕ್ಕೆ ಕಾಲಿಟ್ಟಿದ್ದ ಅವರ ಜೋಡಿ ಹೆಚ್ಚು ದಿನ ಬಾಳ್ವೆ ಮಾಡಲು ವಿಧಿ ಬಿಡದೆ ಸಾವಿತ್ರಮ್ಮನನ್ನು ಕರೆದೊಯ್ದಿತ್ತು. ಆಗ ತಾಯಿ ವೆಂಕಟಲಕ್ಷ್ಮಮ್ಮ ಮತ್ತು ಸೋದರಮಾವ ರಾಮಯ್ಯನವರು ವಿಶ್ವೇಶ್ವರಯ್ಯನವರಿಗೆ ಮತ್ತೊಂದು ಮದುವೆ ಮಾಡಿದರು. ಸತಿ-ಪತಿಗಳೊಂದಾಗಿ ಸಂತಸದಿಂದ ಸಂಸಾರ ಮಾಡುತ್ತಿದ್ದ ಸಮಯದಲ್ಲೇ ವಿಧಿಯ ಕ್ರೂರ ಕಣ್ಣು ಇವರ ಮೇಲೆ ಬಿದ್ದು ಹೆರಿಗೆ ಸಮಯದಲ್ಲಿ ಅವರ ಎರಡನೆಯ ಹೆಂಡತಿಯೂ ಸಾವಿಗೀಡಾದರು. ಕೆಲವು ದಿನಗಳ ನಂತರ ತಾಯಿಯ ಒತ್ತಾಯಕ್ಕೆ ಮಣಿದು ವಿಶ್ವೇಶ್ವರಯ್ಯನವರು ಮೂರನೇ ಮದುವೆಯನ್ನೂ ಆದರು, ಆದರೆ ಇಲ್ಲೂ ಸಹ ಅವರು ಸುಖ ಕಾಣಲಾಗಲಿಲ್ಲ.

ಮಕ್ಕಳ ಚಿತ್ರಕಥೆ: ಗೆಳೆಯರ ಆಯ್ದುಕೊಳ್ಳುವ ಮುನ್ನ ಎಚ್ಚರ...!


■ ಹೆಚ್.ಜಿ.ಎನ್.ಪ್ರಸಾದ್
ಮೊ. 98453 76199




ಒಂದು ಕಾಡಿನಲ್ಲಿ ಒಂದು 'ಕಪ್ಪೆ' ಹಾಗೂ ಒಂದು 'ಇಲಿ' ನಡುವೆ ಪರಸ್ಪರ ಗೆಳೆತನ ಬೆಳೆಯಿತು.




ಆ ಗೆಳೆತನ ಎಷ್ಟರ ಮಟ್ಟಿಗೆ ಗಾಢವಾಗಿತ್ತೆಂದರೆ, ಅವೆರಡೂ ಪರಸ್ಪರ ಒಂದು ನಿಮಿಷವೂ ಬಿಟ್ಟಿರಲಾರದಂತಹ ಬಾಂಧವ್ಯ ಬೆಳೆದುಬಿಟ್ಟಿತ್ತು.




ಅವೆರಡೂ ಸದಾಕಾಲ ಒಟ್ಟಿಗೆ ಇರಲು ತೀರ್ಮಾನಿಸಿ, ಒಂದು ಹಗ್ಗದಿಂದ ತಮ್ಮ ಒಂದೊಂದು ಕಾಲಿಗೆ ಗಂಟು ಹಾಕಿಕೊಂಡು ಚಲಿಸತೊಡಗಿದ್ದವು.



ಹೀಗಿರುವಾಗ ಒಮ್ಮೆ ಕೆರೆಯ ನೀರಲ್ಲಿ ತೇಲುತ್ತಿದ್ದ ಕೀಟವೊಂದನ್ನು ಕಂಡ ಕಪ್ಪೆ, 'ಅಬ್ಬಾ... ನನಗೆ ಆಹಾರ ಸಿಕ್ಕಿತು...!' ಎಂದು ಸಂತೋಷದಿಂದ ನೀರಿಗೆ ಧುಮುಕಿಯೇ ಬಿಟ್ಟಿತು.



ಕಪ್ಪೆಯು ತನಗೆ ಸಿಕ್ಕ ಆಹಾರವನ್ನು ಸಂತೋಷದಿಂದ ತಿನ್ನತೊಡಗಿತು. ಆದರೆ, ಇದರ ಅರಿವಿರದ ಹಗ್ಗದ ಮತ್ತೊಂದು ತುದಿ ಕಟ್ಟಿಕೊಂಡಿದ್ದ ಇಲಿ ನೀರಿನಲ್ಲಿ ಮುಳುಗಿ ಪ್ರಾಣ ಕಳೆದುಕೊಳ್ಳಬೇಕಾಯಿತು.



ಆಗ ಅಲ್ಲಿಯೇ ಹಾರಾಡುತ್ತಿದ್ದ ಕಾಗೆಯೊಂದು ಕೆರೆಯ ನೀರಿನಲ್ಲಿ ಸತ್ತು ತೇಲುತ್ತಿದ್ದ ಇಲಿಯ ದೇಹವನ್ನು ಕಚ್ಚಿಕೊಂಡು ಹಾರಿತು. ಆಗ ಅದರ ಜೊತೆಗೆ ಹಗ್ಗದ ಮತ್ತೊಂದು ತುದಿಯಲ್ಲಿದ್ದ ಕಪ್ಪೆಯೂ ಕಾಗೆ ಆಹಾರವಾಯಿತು.

ನೀತಿ :- ಸ್ನೇಹಿತರ ಆಯ್ಕೆಯಲ್ಲಿ ಎಚ್ಚರವಿರಬೇಕು. ಅತಿಯಾಸೆ, ಸ್ವಾರ್ಥವುಳ್ಳವರು ಸ್ನೇಹಕ್ಕೆ ಬೆಲೆ ಕೊಡಲಾರರು. ಅವರು ಸ್ವಾರ್ಥ ಸಾಧನೆಗೆ ಸ್ನೇಹಿತರನ್ನು ಬಲಿ ಕೊಡುತ್ತಾರೆ. ಮಾತ್ರವಲ್ಲ, ತಾವೂ ಬಲಿಯಾಗುತ್ತಾರೆ.

ವಾರಭವಿಷ್ಯ

14.09.2025 ರಿಂದ 20.09.2025

ಈ ವಾರದಲ್ಲಿ ಗ್ರಹಗಳ ರಾಶಿ ಸಂಚಾರ:- ರವಿ-ಸಿಂಹ, ಕನ್ಯಾ, ಚಂದ್ರ-ವೃಷಭ, ಮಿಥುನ, ಕಟಕ, ಸಿಂಹ, ಕುಜ-ತುಲಾ, ಬುಧ-ಸಿಂಹ, ಕನ್ಯಾ ಗುರು-ಮಿಥುನ, ಶುಕ್ರ-ಕಟಕ, ಸಿಂಹ, ಶನಿ-ಮೀನ, ರಾಹು-ಕುಂಭ ಮತ್ತು ಕೇತು-ಸಿಂಹ.


ವಿ.ಕೇಶವಮೂರ್ತಿ
ಜ್ಯೋತಿಷ್ಯ ವಿದ್ವಾಂಸರು, 'ಭಾವಸಾರ್ ರತ್ನ'
'ಚೈತನ್ಯಶ್ರೀ ಪ್ರಶಸ್ತಿ ಪುರಸ್ಕೃತರು'
'ಕಲ್ಪದ್ರುಮ ಜ್ಯೋತಿಷ್ಯ ಅಧ್ಯಯನ ಕೇಂದ್ರ'
ವಿಳಾಸ: 533, 6ನೇ ಕ್ರಾಸ್, ಬೋಗಾದಿ ಉತ್ತರ,
ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ, ಮೈಸೂರು.
ಮೊ: 9740973224, 9739548720

ಮೇಷ (ಚು,ಚೆ,ಲ,ಲಿ,ಲು,ಲೆ,ಲೊ,ಅ)

ಕುಟುಂಬ ಸದಸ್ಯರ ಆರೋಗ್ಯ ವಿಷಯದಲ್ಲಿ ವೈದ್ಯಕೀಯ ಸಮಾಲೋಚನೆಯ ಅಗತ್ಯವಿದೆ. ವೃತ್ತಿ ಜೀವನದ ವ್ಯವಹಾರಗಳು ನೀವಂದುಕೊಂಡಂತೆ ಸಾಗುವುದರಿಂದ ನಿರಾಳವೆನಿಸುವುದು. ಕೈಗೊಂಡ ಕಾರ್ಯಗಳಲ್ಲಿ ಕೊಂಚ ಅಡೆತಡೆಗಳು ಇರುತ್ತವೆ. ಮನೆಯ ವಾತಾವರಣ ಗೊಂದಲಮಯವಾಗುತ್ತದೆ. ಹೊಸ ಸಾಲ ಮಾಡಲು ಪ್ರಯತ್ನಿಸುವಿರಿ.

ಶ್ರೀ ಗಣಪತಿ ಪ್ರಾರ್ಥನೆ. ಶುಭ ಸಂಖ್ಯೆ-2

ವೃಷಭ (ಇ,ಉ,ಎ,ಒ,ವ,ವಿ,ವು,ವೆ,ವೊ)

ವಾರದ ಆದಿಗೆ ಧಾರ್ಮಿಕ ಕಾರ್ಯಗಳಲ್ಲಿ ಭಾಗವಹಿಸುವಿರಿ. ಎಲೆಕ್ಟ್ರಿಕಲ್ ವಸ್ತು ವ್ಯಾಪಾರಿಗಳಿಗೆ ಉತ್ತಮ ವ್ಯಾಪಾರ ಹಾಗೂ ಹೆಚ್ಚಿನ ಧನ ಲಾಭವಾಗುವುದು. ಮನೆಯಲ್ಲಿ ಮಂಗಳ ಕಾರ್ಯ ಜರುಗುವುದು. ವಿದ್ಯಾರ್ಥಿಗಳು ತಮ್ಮ ಗುರುಗಳಿಂದ ಪ್ರಶಂಸೆಗೆ ಪಾತ್ರರಾಗುವರು. ಕಲಾವಿದರಿಗೆ ಸರ್ಕಾರದಿಂದ ಗೌರವ ಪ್ರಾಪ್ತಿ. ಸರ್ಕಾರಿ ನೌಕರರಿಗೆ ಪದೋನ್ನತಿಯ ಸಹಿತ ವರ್ಗಾವಣೆ ಆಗುವ ಸಾಧ್ಯತೆ.

ಶ್ರೀ ಲಲಿತಾ ಅಷ್ಟೋತ್ತರ ಪಠಿಸಿ. ಶುಭ ಸಂಖ್ಯೆ-6

ಮಿಥುನ (ಕ,ಕಿ,ಕು,ಘ,ಙ,ಛ,ಕೆ,ಕೊ,ಹ)

ವಾರದಾರಂಭಕ್ಕೆ ಉಚ್ಛ ಚಂದ್ರನ ಕೃಪೆಯಿಂದ ಕೈ ಹಾಕಿದ ಕೆಲಸಗಳಲ್ಲಿ ಸಫಲತೆಯನ್ನು ಹೊಂದುವಿರಿ. ಮನೋಕಾರಕ ಚಂದ್ರ ದೃಢ ನಿರ್ಧಾರಗಳನ್ನು ತೆಗೆದುಕೊಳ್ಳಲು ಪ್ರೇರಕನಿದ್ದಾನೆ. ಹೊಸ ವೃತ್ತಿ ಆರಂಭಿಸಲು ಸುಸಮಯವಾಗಿದೆ. ಆದರೆ ಕಬ್ಬಿಣ, ಸಿಮೆಂಟ್ ವ್ಯಾಪಾರಿಗಳಿಗೆ ನಿರೀಕ್ಷಿತ ಮಟ್ಟದ ವ್ಯಾಪಾರವಾಗದು. ಸರ್ಕಾರಿ ನೌಕರರು ಅಡ್ಡದಾರಿ ಹಿಡಿದು ಸಂಕಷ್ಟಕ್ಕೆ ಗುರಿಯಾಗುವರು.

ಶ್ರೀ ಲಿಂಗಾಷ್ಟಕ ಪಠಿಸಿ. ಶುಭ ಸಂಖ್ಯೆ-4

ಕಟಕ (ಹೊ,ಹು,ಹೆ,ಡ,ಡಿ,ಡು)

ಈ ವಾರ ಪೂರ್ತಿ ನಿಮ್ಮ ರಾಶ್ಯಾಧಿಪತಿ ಚಂದನ ಶ್ರೀರಕ್ಷೆಯ ಜೊತೆಗೆ ಗಜಕೇಸರಿ ಯೋಗವೂ ಏರ್ಪಡುವುದರಿಂದ ಜೀವನದಲ್ಲಿ ಹರ್ಷ ಉಲ್ಲಾಸಗಳು, ಇಷ್ಟ ಬಂಧುಗಳ ಮಿಲನಗಳು ನಿಮ್ಮಲ್ಲಿ ನವ ಉತ್ಸಾಹವನ್ನು ತುಂಬಲಿದೆ. ಶಿಕ್ಷಣ ಕ್ಷೇತ್ರದವರಿಗೆ ಸರ್ಕಾರದಿಂದ ಗೌರವ ಪ್ರಾಪ್ತಿ. ಸ್ತ್ರೀಯರು ಪ್ರಸಾಧನ ವಸ್ತುಗಳಿಗೆ ಹೆಚ್ಚಿನ ಹಣ ವ್ಯಯಿಸುವರು. ನಶಾ ವಸ್ತುಗಳಿಂದ ದೂರವಿದ್ದರೆ ಕ್ಷೇಮ.

ಶ್ರೀ ದುರ್ಗಾಸ್ತೋತ್ರ ಜಪಿಸಿ. ಶುಭ ಸಂಖ್ಯೆ-7

ಸಿಂಹ (ಮ,ಮಿ,ಮು,ಮೊ,ಮೆ,ಟ,ಟಿ,ಟು,ಟೆ)

ವೈಯಕ್ತಿಕ ಕ್ಷೇತ್ರದಲ್ಲಿ ಇದು ಅಭಿವೃದ್ಧಿಯ ವಾರ. ಚರ-ಸ್ಥಿರ ಆಸ್ತಿ ವ್ಯವಹಾರಗಳು ನಿಮ್ಮ ಭಾಗ್ಯದ ಬಾಗಿಲು ತೆರೆಯಲಿದೆ. ಹಾಗೆಂದು ಯೋಚಿಸಿದ್ದೆಲ್ಲವನ್ನೂ ಮಾಡಬೇಡಿ, ಯೋಚಿಸಿ ಮಾಡಿ. ವಿದ್ಯುತ್ ಯಂತ್ರಗಳ ಮೇಲೆ ಕೆಲಸ ಮಾಡುವಾಗ ಎಚ್ಚರಿಕೆ ಇರಲಿ. ಗುಡಿ ಕೈಗಾರಿಕೆ ಮಾಡುವವರಿಗೆ ಸರ್ಕಾರದ ಮನ್ನಣೆ. ವಾರಾಂತ್ಯಕ್ಕೆ ಜನಸೇವೆಯಿಂದ ಮನಃ ತೃಪ್ತಿ ಹಾಗೂ ಪ್ರಸಿದ್ಧಿಗೆ ಬರುವಿರಿ.

ಶ್ರೀ ಕೃಷ್ಣಾಷ್ಟಕ ಪಠಿಸಿ. ಶುಭ ಸಂಖ್ಯೆ-4

ಕನ್ಯಾ (ಟೊ,ಪ,ಪಿ,ಪು,ಷ,ಣ,ಠ,ಪೆ,ಪೊ)

ಈ ವಾರದಲ್ಲಿ ಗುತ್ತಿಗೆದಾರರಿಗೂ, ಇಂಜಿನಿಯರ್‌ಗಳಿಗೂ ಉತ್ತಮ ಬೇಡಿಕೆ ಹಾಗೂ ಧನಲಾಭವಾಗುವುದು. ನಿಂತು ಹೋಗಿದ್ದ ಕೆಲಸಗಳು ಮರು ಚಾಲನೆಗೊಳ್ಳುವುದು. ತೆರಿಗೆ ಅಧಿಕಾರಿಗಳಿಂದ ವ್ಯಾಪಾರಿಗಳಿಗೆ ಕಿರುಕುಳ ಹಾಗೂ ನಿಮ್ಮ ರಹಸ್ಯ ಬಯಲಾಗುವುದು. ಶ್ರೀಮತಿಯೊಡನೆ ಮುನಿಸು ಒಳ್ಳೆಯದಲ್ಲ. ದೂರ ಪ್ರಯಾಣಗಳನ್ನು ತ್ಯಜಿಸಿ. ಶನಿದೇವ ಶುಭನಿಲ್ಲ, ವೇಗ ಚಾಲನೆ ಮುಖ್ಯವಲ್ಲ. ಸುರಕ್ಷಿತ ಚಾಲನೆ ಮುಖ್ಯ.

ಶ್ರೀ ಶ್ರೀನಿವಾಸ ದರ್ಶನ. ಶುಭ ಸಂಖ್ಯೆ-9

ತುಲಾ (ರ,ರಿ,ರು,ರೆ,ರೊ,ತ,ತಿ,ತು,ತೆ)

ನಿಮ್ಮ ಉದ್ಯೋಗ ವ್ಯವಹಾರಗಳಲ್ಲಿ ಆಸಕ್ತಿ ತೋರುವುದರಿಂದ ಹೆಚ್ಚಿನ ಲಾಭವನ್ನು ಹೊಂದುವಿರಿ. ಎಣ್ಣೆ, ಕಾಳು ಹಾಗೂ ಖಾದ್ಯ ತೈಲ ತಯಾರಿಕೆಗೆ ದೊಡ್ಡ ಮಟ್ಟದಲ್ಲಿ ವ್ಯಾಪಾರ ಹಾಗೂ ಲಾಭವಾಗುವುದು. ಶ್ರೀ ಗುರು ಹಾಗೂ ಶ್ರೀ ಶನಿ ಶುಭ ಸ್ಥಾನದಲ್ಲಿ ಭ್ರಮಿಸುತ್ತಿರುವ ಫಲವಾಗಿ ಧಾರ್ಮಿಕ ಕಾರ್ಯಗಳಲ್ಲಿ ಭಾಗವಹಿಸುತ್ತಿರುವ ಜೊತೆ ಆಸ್ತಿ ಸಂಪಾದನೆ, ಶತ್ರುಗಳ ಮೇಲೆ ವಿಜಯ.

ಶ್ರೀ ಶಕ್ತಿ ದೇವತೆ ಆರಾಧನೆ. ಶುಭ ಸಂಖ್ಯೆ-5

ವೃಶ್ಚಿಕ (ತೊ,ನ,ನಿ,ನು,ನೆ,ನೊ,ಯ,ಯಿ,ಯು)

ವಾರದಾರಂಭಕ್ಕೆ ಚಂದ್ರಗ್ರಹದ ಶುಭ ದೃಷ್ಟಿಯ ಫಲವಾಗಿ ಮನೆಯಲ್ಲೂ, ಮನದಲ್ಲೂ ಹರ್ಷೋಲ್ಲಾಸಗಳನ್ನು ಅನುಭವಿಸುವಿರಿ. ವ್ಯಾಪಾರ ವ್ಯವಹಾರಗಳು ಸಾಧಾರಣವಾಗಿ ನಡೆಯುವುದು. ಯಾವುದೇ ಕೆಲಸವನ್ನು ಶ್ರದ್ಧಾ ಭಕ್ತಿಗಳಿಂದ ಮಾಡಿದಾಗ ಪೂರ್ಣಫಲ ದೊರೆಯುವುದು. ನಿಮಗೆ ಕೆಡುಕು ಉಂಟು ಮಾಡುವವರ ಬಗ್ಗೆ ಎಚ್ಚರಿಕೆಯಿಂದ ಇರಿ. ವಾರಾಂತ್ಯಕ್ಕೆ ಸಮಾಜ ಸೇವೆಯಿಂದ ಮನಸ್ಸು ಹಗುರವಾಗುವುದು.

ಶ್ರೀ ಶನಿ ಅಷ್ಟೋತ್ತರ ಪಠಿಸಿ. ಶುಭ ಸಂಖ್ಯೆ-3

ಧನುಸ್ಸು (ಯೆ,ಯೊ,ಬ,ಬಿ,ಬು,ಧ,ಭ,ಢ,ಬೆ)

ನಿಮ್ಮ ರಾಶ್ಯಾಧಿಪತಿಗಳು ಶುಭನಾಗಿದ್ದಾಗ ನೀವು ಯಾವುದಾದರೂ ಸಂಘ ಸಂಸ್ಥೆಗೆ ನಾಯಕರಾಗುವ ಯೋಗವಿದೆ. ಶತ್ರುವಿನ ಶತ್ರುವನ್ನು ಬಳಸಿಕೊಂಡು ಗೆಲ್ಲುವುದು. ಧನಕಾರಕನಾದ ಬೃಹಸ್ಪತಿಯ ಕೃಪೆಯಿಂದ ವ್ಯಾಪಾರ-ವ್ಯವಹಾರಗಳು ದ್ವಿಗುಣವಾಗಿ ನಡೆಯಲಿದೆ. ಆರ್ಥಿಕ ಸಮಸ್ಯೆಗಳಿಂದ ಮುಕ್ತಿ ದೊರೆಯುವುದು. ವಾರದ ಕಡೆಗೆ ದೈಹಿಕ ನ್ಯೂನತೆಯ ಕಾರಣ ವೈದ್ಯರ ದರ್ಶನ.

ಶ್ರೀ ಗುರುಸ್ತುತಿ. ಶುಭ ಸಂಖ್ಯೆ-1

ಮಕರ (ಬೊ,ಜ,ಜಿ,ಖಿ,ಖು,ಖೆ,ಖೊ,ಗ,ಗಿ)

ಈ ವಾರದಲ್ಲಿ 'ಮಾತು ಬೆಳ್ಳಿಯಾದರೆ ಮೌನ ಬಂಗಾರವೆಂಬಂತೆ ಇರಲು ಪ್ರಯತ್ನಿಸಿ. ನಿಮ್ಮ ಸುತ್ತ ಸ್ವಾರ್ಥಸಾಧಕ ಜನರಿದ್ದಾರೆ. ವ್ಯಾಪಾರ, ವ್ಯವಹಾರಗಳು ಮಂದಗತಿಯಲ್ಲಿ ಸಾಗಿದರೂ ಆದಾಯಕ್ಕೇನೂ ಕೊರತೆ ಆಗದು. ಮನೆಯಲ್ಲಿ ಹಿರಿಯರ ಆರೋಗ್ಯದ ಬಗ್ಗೆ ಕಾಳಜಿ ಇರಲಿ. ನಿಮ್ಮ ಹಾದಿಯಲ್ಲಿ ರಾಹು-ಕೇತು ಗ್ರಹಗಳು ಅಡ್ಡರಿದ್ದಾರೆ. ನೀವು ಅಡ್ಡದಾರಿ ಹಿಡಿದರೆ ತೊಂದರೆಗೆ ಸಿಲುಕುವಿರಿ.

ಶ್ರೀ ವಿಷ್ಣುನಾಮ ಸ್ತುತಿ. ಶುಭ ಸಂಖ್ಯೆ-8

ಕುಂಭ (ಗು,ಗೆ,ಗೊ,ಸ,ಸಿ,ಸು,ಸೆ,ಸೊ,ದ)

ಈ ವಾರ ಮಿಶ್ರಫಲದ ಜೊತೆಗೆ ನಿಮಗಾಗದವರ ಸವಾಲುಗಳನ್ನು ಎದುರಿಸಲು ಸಿದ್ಧವಾಗಿರಿ. ಶುಭ ಗುರುವಿನ ಪರಿಣಾಮ ಮನೆಯಲ್ಲಿ ಹರುಷ, ಉಲ್ಲಾಸಗಳು, ಬರಬೇಕಾದ ಹಣ ಕೈ ಸೇರುವುದು. ದೇವತಾ ದರ್ಶನದಿಂದ ಮನಸ್ಸು ತಿಳಿಯಾಗುವುದು. ನೆರೆಹೊರೆಯಲ್ಲಿ ಅಸಮಾಧಾನ ಉಂಟಾದೀತು. ಕಡ್ಡಿಯನ್ನು ಗುಡ್ಡ ಮಾಡದಿರಿ. ಮಿತವಾಗಿ ಬಾಳುವುದೇ ಹಿತವಾದ ಬಾಳು.

ಶ್ರೀ ವೆಂಕಟೇಶ್ವರ ದರ್ಶನ. ಶುಭ ಸಂಖ್ಯೆ-2

ಮೀನ (ದಿ,ದು,ಖ,ಝ,ಥ,ತೆ,ದೊ,ಚ,ಚಿ)

'ಗುರಿ ತಲುಪಬೇಕೆಂದರೆ ಗುರು ಬೇಕು' ವಾರದಾರಂಭಕ್ಕೆ ಸರಿಯಾದ ಮೌಲ್ಯಗಳನ್ನು ಅಳವಡಿಸಿಕೊಂಡರೆ ಜೀವನದಲ್ಲಿ ಯಶಸ್ಸನ್ನು ಕಾಣುವಿರಿ. ನೋಡಿದ ತಕ್ಷಣ ಯಾರನ್ನೂ ನಂಬದಿರಿ. ಅಷ್ಟಮ ಕುಜನಿಂದ ಒಡಹುಟ್ಟಿದವರೊಂದಿಗೆ ಕಲಹಗಳು ಉಂಟಾಗುವುದು. ವಿಕೋಪಕ್ಕೆ ಹೋಗದಂತೆ ಎಚ್ಚರ ವಹಿಸಿ. ಚಾಡಿ ಮಾತಿನಿಂದ ಚಾವಡಿ ಹಾಳಾಯಿತು ಎಂಬ ಗಾದೆ ನೆನಪಿರಲಿ.

ಶ್ರೀ ಔದಂಬರ ವೃಕ್ಷ ಪ್ರದಕ್ಷಿಣೆ. ಶುಭ ಸಂಖ್ಯೆ-5

ಮೈಸೂರು ಮಿತ್ರ

ರಾಷ್ಟ್ರೀಯ ಲೋಕ್ ಅದಾಲತ್

ಹುಣಸೂರಲ್ಲಿ 1271 ಪ್ರಕರಣಗಳು ಇತ್ಯರ್ಥ

ಹುಣಸೂರು, ಸೆ.13–ಇಲ್ಲಿನ ಕೋರ್ಟ್ ಅವರಣದಲ್ಲಿ ಶನಿವಾರ ನಡೆದ ರಾಷ್ಟ್ರೀಯ ಲೋಕ್ ಅದಾಲತ್‌ನಲ್ಲಿ ಎಲ್ಲಾ ಸಿವಿಲ್ ಮತ್ತು ಕ್ರಿಮಿನಲ್ ಹಾಗೂ ವ್ಯಾಜ್ಯ ಪೂರ್ವ ಪ್ರಕರಣಗಳು ಸೇರಿ ಒಟ್ಟು 1271 ಪ್ರಕರಣಗಳು ಇತ್ಯರ್ಥವಾಗಿ 2.44 ಕೋಟಿ ರೂ. ವಸೂಲಾಯಿತು.



ಹುಣಸೂರಿನಲ್ಲಿ ಶನಿವಾರ ರಾಷ್ಟ್ರೀಯ ಲೋಕ್ ಅದಾಲತ್ ನಡೆಯಿತು.

ಚೆಕ್ ಬೌನ್ಸ್ 33 ಪ್ರಕರಣಗಳು 37, 56,500 ರೂ. ಗಳಿಗೆ, ಹಣ ವಸೂಲಾತಿಯ 3 ಪ್ರಕರಣಗಳು 18,60,600 ರೂ. ಗಳಿಗೆ, ಮೋಟಾರ್ ವಾಹನ ಕಾಯಿದೆಯ 1 ಪ್ರಕರಣ 17ಲಕ್ಷ ರೂ., ಅಸ್ತಿ ವಿಭಾಗ ದಾವೆ 13 ಪ್ರಕರಣಗಳು ಜನನ ಮತ್ತು ಮರಣ ನೋಂದಣಿಯಲ್ಲಿ 18 ಪ್ರಕರಣಗಳು ಇಂದಿನ ರಾಷ್ಟ್ರೀಯ ಲೋಕಾ ಅದಾಲತ್‌ನಲ್ಲಿ ಇತ್ಯರ್ಥವಾಯಿತು.

ಇಂದಿನ ರಾಷ್ಟ್ರೀಯ ಲೋಕ್ ಅದಾಲತ್‌ನಲ್ಲಿ 8ನೇ ಹೆಚ್ಚುವರಿ ಜಿಲ್ಲಾ ಸತ್ರ ನ್ಯಾಯಾಲಯದಲ್ಲಿ 137 ಪ್ರಕರಣಗಳ ಪೈಕಿ 128 ಪ್ರಕರಣಗಳು 34,92,307/–ರೂ. ಗೆ ಇತ್ಯರ್ಥವಾಯಿತು, ಅದೇ ರೀತಿ ಪ್ರಧಾನ ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಲಯದಲ್ಲಿ 597 ಪ್ರಕರಣಗಳ ಪೈಕಿ 282 ಪ್ರಕರಣಗಳು ರೂ.84,84,131/– ಕ್ಕೆ ಇತ್ಯರ್ಥವಾಯಿತು, ಇದೇ ರೀತಿ ಹೆಚ್ಚುವರಿ ಹಿರಿಯ ಶ್ರೇಣಿ ಸಿವಿಲ್ ನ್ಯಾಯಲಯದಲ್ಲಿ 994 ಪ್ರಕರಣಗಳ ಪೈಕಿ 150 ಪ್ರಕರಣಗಳು ರೂ.85,07,070/– ಕ್ಕೆ ಇತ್ಯರ್ಥವಾಯಿತು, ಪ್ರಧಾನ ಸಿವಿಲ್ ನ್ಯಾಯಾಲಯದಲ್ಲಿ 495 ಪ್ರಕರಣಗಳ ಪೈಕಿ 374 ಪ್ರಕರಣಗಳು ರೂ.15,53,934/–ಕ್ಕೆ ಇತ್ಯರ್ಥವಾಯಿತು, ಅದೇ ರೀತಿ ಹೆಚ್ಚುವರಿ ಸಿವಿಲ್ ನ್ಯಾಯಾಲಯದಲ್ಲಿ 346 ಪ್ರಕರಣಗಳ ಪೈಕಿ 337 ಪ್ರಕರಣಗಳು ರೂ.23,72,385/–ಕ್ಕೆ ಇತ್ಯರ್ಥವಾಯಿತು, ಎಲ್ಲ ಐದು ನ್ಯಾಯಲಯಗಳಲ್ಲಿ ಒಟ್ಟು 2569 ಪ್ರಕರಣಗಳ ಪೈಕಿ 1277 ಪ್ರಕರಣಗಳು ರೂ.2,44, 09,827/– ಗಳಿಗೆ ಇತ್ಯರ್ಥವಾಗಿವೆ

ಇಂದು ನಡೆದ ರಾಷ್ಟ್ರೀಯ ಲೋಕಾ ಅದಾಲತ್‌ನಲ್ಲಿ 8ನೇ ಹೆಚ್ಚುವರಿ ಜಿಲ್ಲಾ ಸತ್ರ ನ್ಯಾಯಲಯದ ನ್ಯಾಯಾದೀಶರಾದ ಟಿ. ಗೋವಿಂದಯ್ಯ, ಪ್ರಧಾನ ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಲಯದ ನ್ಯಾಯಾಧೀಶರು ಹಾಗೂ ತಾಲೂಕು ಕಾನೂನು ಸೇವಾ ಸಮಿತಿಯ ಅದ್ಯಕ್ಷೆ ಶ್ರೀಮತಿ. ಅನಿತಾ, ಹೆಚ್ಚುವರಿ ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಲಯದ ನ್ಯಾಯಾಧೀಶರಾದ ಶ್ರೀಮತಿ.ಭಾಗ್ಯಮ್ಮ, ಪ್ರಧಾನ ಸಿವಿಲ್ ನ್ಯಾಯಲಯದ ನ್ಯಾಯದೀಶರು ಹಾಗೂ ತಾಲೂಕು ಕಾನೂನು ಸೇವಾ ಸಮಿತಿಯ ಸದಸ್ಯ ಕಾರ್ಯದರ್ಶಿಗಳಾದ ಶ್ರೀಮತಿ. ಅಯಿಷಾಭಿ.ಪಿ.ಮದೆದ್, ಹೆಚ್ಚುವರಿ ಸಿವಿಲ್ ನ್ಯಾಯಾಲಯದ ನ್ಯಾಯಾಧೀಶರಾದ ಶ್ರೀಮತಿ. ನಮ್ರತಾ.ಎಸ್. ಹೊಸಮಠ, ಹಾಗೂ ವಕಿಲರು ಕಕ್ಷಿದಾರರು ಹಾಜರಿದ್ದರು.

ಕುವೆಂಪುಗೆ ಭಾರತರತ್ನಕ್ಕೆ ಸರ್ಕಾರದ ಶಿಫಾರಸ್ಸು ಸ್ವಾಗತಾರ್ಹ

ಕೆ.ಆರ್.ನಗರ: ರಾಷ್ಟ್ರಕವಿ ಕುವೆಂಪು ಅವರಿಗೆ ಭಾರತರತ್ನ ಪ್ರಶಸ್ತಿ ನೀಡುವಂತೆ ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಿರುವ ರಾಜ್ಯ ಸರ್ಕಾರದ ತೀರ್ಮಾನ ಸ್ವಾಗತಾರ್ಹ ಎಂದು ಜಿಲ್ಲಾ ಗ್ರಾಮಾಂತರ ಕಾಂಗ್ರೆಸ್ ಹಿರಿಯ ಪ್ರಧಾನ ಕಾರ್ಯದರ್ಶಿಗಳೂ ಆದ ಒಕ್ಕಲಿಗ ವೇದಿಕೆಯ ಜಿಲ್ಲಾಧ್ಯಕ್ಷ ಸಿ.ಜೆ.ಪಾಲಾಕ್ಷ ಹೇಳಿದ್ದಾರೆ.

ದೇಶದ ಪರಮೋಚ್ಚ ಗೌರವವಾಗಿರುವ ಭಾರತ ರತ್ನಕ್ಕೆ ಕುವೆಂಪು ಅವರನ್ನು ಹೆಸರಿಸಿ, ಶಿಫಾರಸ್ಸು ಮಾಡುವ ಮೂಲಕ ಸರ್ಕಾರ ಕನ್ನಡ ಸಾಹಿತ್ಯ ಲೋಕಕ್ಕೆ ಅಪಾರವಾದ ಕೊಡುಗೆಯನ್ನು ನೀಡಿದೆ ಎಂದು ಸಂತಸ ವ್ಯಕ್ತಪಡಿಸಿರುವ ಅವರು ಕೇಂದ್ರ ಸರ್ಕಾರ ರಾಜ್ಯ ಸರ್ಕಾರದ ಶಿಫಾರಸ್ಸನ್ನು ಪರಿಗಣಿಸುತ್ತದೆ ಎಂಬ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಜಗತ್ತಿಗೆ ವಿಶ್ವಮಾನವ ಸಂದೇಶ ಸಾರಿದ ರಾಷ್ಟ್ರಕವಿಗಳ ಬದುಕು ಮತ್ತು ಸಾಹಿತ್ಯದ ಸಾಧನೆಗೆ ದಶಕಗಳ ಹಿಂದೆಯೇ ಭಾರತ ರತ್ನ ನೀಡಬೇಕಿತ್ತು. ಆದ್ದರಿಂದ ಈ ವಿಳಂಬವನ್ನು ಅರಿತ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ನೇತೃತ್ವದ ಕಾಂಗ್ರೆಸ್ ಸರ್ಕಾರ ಈಗ ಇಂತಹ ತೀರ್ಮಾನ ಮಾಡಿರುವುದು ಹೆಮ್ಮೆ ಪಡುವ ವಿಚಾರ ಎಂದು ಸಂತಸ ವ್ಯಕ್ತಪಡಿಸಿದ್ದಾರೆ.

ದಸರಾ ಕುಸ್ತಿ ಸಮಿತಿಗೆ ನಂಜನಗೂಡಿನವರನ್ನು ಪರಿಗಣಿಸಿ

ನಂಜನಗೂಡು: ದಸರಾ ಮಹೋತ್ಸವದ ಅಂಗವಾಗಿ ಕುಸ್ತಿ ಪಂದ್ಯಾವಳಿ ನಡೆಸಲು ಪೈಲ್ವಾನರುಗಳ ಜೋಡಿ ಕಟ್ಟುವ ಕಾರ್ಯ ನಡೆಯುತ್ತಿದೆ. ಈ ಬಾರಿ ಕುಸ್ತಿ ಸಮಿತಿಗೆ ನಂಜನಗೂಡಿನ ಪೈ.ಪ್ರಸನ್ನ ಅವರನ್ನು ಅಧ್ಯಕ್ಷರನ್ನಾಗಿ ಮಾಡಬೇಕು ಎಂದು ಪೈ.ನೂರ್ ಅಹಮ್ಮದ್ ಜಿಲ್ಲಾಡಳಿತಕ್ಕೆ ಮನವಿ ಮಾಡಿದರು.



ಪತ್ರಿಕಾಗೋಷ್ಠಿಯಲ್ಲಿ ಮಾತನಾಡುತ್ತಿರುವ ಪೈ.ನೂರು ಅಹಮ್ಮದ್.

ನಗರದ ಪತ್ರಕರ್ತರ ಭವನದಲ್ಲಿ ಶನಿವಾರ ಪತ್ರಿಕಾಗೋಷ್ಠಿ ನಡೆಸಿ ಮಾತನಾಡಿದ ಅವರು, ಮೈಸೂರು ಜಿಲ್ಲೆಯಲ್ಲಿ ನಂಜನಗೂಡಿನ ಪೈಲ್ವಾನರುಗಳು ಕುಸ್ತಿಗೆ ಹೆಸರುವಾಸಿ, ನಮ್ಮ ಹಲವು ಹಿರಿಯ ಕುಸ್ತಿ ಪಟುಗಳು ಜಿಲ್ಲೆಗೆ ಹೆಸರು ತಂದಿದ್ದಾರೆ. ಈ ಬಾರಿ ಕುಸ್ತಿ ಸಮಿತಿಗೆ ನಂಜನಗೂಡಿನವರನ್ನು ಅಧ್ಯಕ್ಷರನ್ನಾಗಿ ಮಾಡಬೇಕು, ದಸರಾ ಕುಸ್ತಿ ಪಂದ್ಯಾವಳಿಯಲ್ಲಿ ದಸರಾ ಕಂಠೀರವ, ಕೇಸರಿ, ದಸರಾ ಕುಮಾರ್ ಪ್ರಶಸ್ತಿ ಪಡೆದವರಿಗೆ ಗದೆ, ಪಾರಿತೋಷಕ ಬಿಟ್ಟರೆ ಸರ್ಕಾರದ ಯಾವ ಸವಲತ್ತುಗಳೂ ದೊರೆಯುವುದಿಲ್ಲ, ಹಿರಿಯ ಪೈಲ್ವಾನರುಗಳು ಸಂಕಷ್ಟದಲ್ಲಿದ್ದು, ಅವರಿಗೆ ಪಿಂಚಣಿ ಸೌಲಭ್ಯ ನೀಡಬೇಕು, ಪ್ರಶಸ್ತಿ ವಿಜೇತ ಕುಸ್ತಿ ಪಟುಗಳಿಗೆ ಸರ್ಕಾರಿ ಉದ್ಯೋಗ ನೀಡಬೇಕು ಎಂದು ಮನವಿ ಮಾಡಿದರು.

ಪೈಲ್ವಾನ್ ಪ್ರಸನ್ನ ಮಾತನಾಡಿ, ನಗರದ ಪ್ರಸಿದ್ಧ ಗರಡಿ ಮನೆಗಳು ಶಿಥಿಲವಾಗಿವೆ, ಅವುಗಳಿಗೆ ಕಾಯಕಲ್ಪ ನೀಡಬೇಕು. ಪಾಯಿಂಟ್ ಕುಸ್ತಿಪಟುಗಳಿಗೆ ಸರ್ಕಾರಿ ಉದ್ಯೋಗದಲ್ಲಿ ಮೀಸಲಾತಿ ಇರುವಂತೆ, ನಾಡಿನ ವಿಶಿಷ್ಟ ಕಲೆಯಾದ ಮಟ್ಟಿ ಕುಸ್ತಿಪಟುಗಳಿಗೂ ಆದ್ಯತೆ ನೀಡಬೇಕು. ದಸರಾ ಕುಸ್ತಿ ಪಂದ್ಯಾವಳಿ ಸಮಿತಿಯಲ್ಲಿ ನಂಜನಗೂಡು ತಾಲೂಕಿನ ಪೈಲ್ವಾನರುಗಳಿಗೆ ಸ್ಥಾನಮಾನ ನೀಡಬೇಕು, ಜೊತೆಗೆ ದಸರಾ ಕುಸ್ತಿ ಪಂದ್ಯಾವಳಿಯಲ್ಲಿ ಭಾಗವಹಿಸುವ ಕುಸ್ತಿಪಟುಗಳಿಗೆ ಸಂಭಾವನೆಯನ್ನು ಹೆಚ್ಚು ಮಾಡಬೇಕು ಎಂದು ಹೇಳಿದರು.

ಈವೇಳೆ ಪೈ. ಶ್ರೀಕಂಠ, ಪೈ.ನಾಗಣ್ಣ, ಪೈಗೋಳೂರು ಮಣಿ, ಪೈ ಚೆಲುವರಾಜ್ ಉರ್ಫ್ ಕೆಂಪು ಹೋರಿ, ಪೈಸಮೀರ್ ಇದ್ದರು.

ಕಣ್ಣಿನ ಉಚಿತ ತಪಾಸಣಾ ಶಿಬಿರ



ಬನ್ನೂರಿನಲ್ಲಿ ರೋಟರಿ ಸಂಸ್ಥೆ, ಕಾನ್‌ಸಿಂಗ್‌ಜಿ ರಾಜ್ ಪುರೋಹಿತ್, ಶ್ರೀ ಗೌರಿದೇವಿ, ಲಯನ್ಸ್ ಕ್ಲಬ್ ಆಫ್ ಈರೋಡ್ ಕಾವೇರಿ ಟ್ರಸ್ಟ್, ಕೊಯಮತ್ತೂರು ಕಣ್ಣಿನ ಆಸ್ಪತ್ರೆ ಸಂಯುಕ್ತಾಶ್ರಯದಲ್ಲಿ ಶನಿವಾರ ಕಣ್ಣಿನ ಉಚಿತ ತಪಾಸಣಾ ಶಿಬಿರವನ್ನು ಹಮ್ಮಿಕೊಳ್ಳಲಾಗಿತ್ತು.

ಬೀಟೆ ಮರ ಸಾಗಿಸುತ್ತಿದ್ದವನ ಬಂಧನ

ಹುಣಸೂರು, ಸೆ.13– ಅಕ್ರಮವಾಗಿ ಮಹೀಂದ್ರ ಬೊಲೇರೋ ವಾಹನದಲ್ಲಿ ಸೌದೆಯ ಪರೋಟದೊಳಗೆ ಬೀಟೆ ಮರದ ಕಟ್ ಸೈಜ್‌ಗಳನ್ನು ಸಾಗಿಸುತ್ತಿದ್ದ ಆರೋಪಿಯನ್ನು ಮಾಲು ಸಮೇತ ಅರಣ್ಯ ಇಲಾಖೆ ಅಧಿಕಾರಿಗಳು ಬಂಧಿಸಿದ್ದಾರೆ.

ಹುಣಸೂರು ತಾಲೂಕಿನ ಈರದಾಸಯ್ಯನ ಕೊಪ್ಪಲು ಗ್ರಾಮದ ದರ್ಶನ್ ಬಿನ್ ರಮೇಶ್ ಬಂಧಿತ ಆರೋಪಿಯಾಗಿದ್ದು, ಈತ ಸೆ.11ರ ಗುರುವಾರ ಸಂಜೆ ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ಆನೆಚೌಕೂರು ಅರಣ್ಯ ತನಿಖಾ ಠಾಣೆಯ ಮೂಲಕ ಮಹೀಂದ್ರ ಬೊಲೇರೋ ವಾಹನದಲ್ಲಿ ಅಕ್ರಮವಾಗಿ ಬೀಟೆ ಮರದ ಕಟ್ ಸೈಜ್‌ಗಳನ್ನು ಬಚ್ಚಿಟ್ಟು ಅದರ ಮೇಲೆ ಸಿಲ್ವರ್ ಮರದ ಪರೋಟಗಳನ್ನು ತುಂಬಿ ಕೊಂಡು ಸಾಗಿಸುತ್ತಿದ್ದ.

ಚೆಕ್‌ಪೋಸ್ಟ್‌ನಲ್ಲಿ ಪರಿಶೀಲನೆ ನಡೆಸಿದಾಗ ಆರೋಪಿ ಮಾಲು ಸಮೇತ ಸಿಕ್ಕಿ ಬಿದ್ದಿದ್ದಾನೆ. ವಾಹನದ ಮಾಲೀಕ ವಿರಾಜಪೇಟೆಯ ನೆಹರೂನಗರದ ನಿವಾಸಿ ಎ.ಎಂ.ಮೊಹಮ್ಮದ್ ಇನಾಯತ್ ಬಿನ್ ಎಸ್.ಎಂ ಅಸ್ರಫ್ ತಲೆಮರೆಸಿಕೊಂಡಿದ್ದು, ಪತ್ತೆ ಕಾರ್ಯ ನಡೆಸಲಾಗುತ್ತಿದೆ.

ಆರೋಪಿಯನ್ನು ಪೊನ್ನಂಪೇಟೆ ಘನ ನ್ಯಾಯಾಲಯದ ನ್ಯಾಯಾಧೀಶರ ಮುಂದೆ ಹಾಜರುಪಡಿಸಲಾಗಿದೆ ಎಂದು ಆರ್‌ಎಫ್ ಒ ಸುಬ್ರಮಣ್ಯ ತಿಳಿಸಿದ್ದಾರೆ. ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ನಿರ್ದೇಶಕಿ ಸೀಮಾ, ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು ಲಕ್ಷ್ಮೀಕಾಂತ್ ಎನ್, ಆನೆಚೌಕೂರು ವಲಯ ಅರಣ್ಯಾಧಿಕಾರಿ ದೇವರಾಜು ಡಿ ನೇತೃತ್ವದಲ್ಲಿ ಉಪ ವಲಯ ಅರಣ್ಯಾಧಿಕಾರಿ ಚನವೀರೇಶ ಗಾಣಗೇರ–ಮೋಜಿಣಿದಾರರಾದ ರಮ್ಯ ಸಿ.ಎನ್.ಮಹದೇವ, ಗಸ್ತು ಅರಣ್ಯಪಾಲಕ ಹಾಗೂ ಸಿಬ್ಬಂದಿಗಳು ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದರು ಎಂದು ಅರಣ್ಯ ಇಲಾಖೆಯ ಪ್ರಕಟಣೆ ತಿಳಿಸಿದೆ.

ಯುವ ಸೌರಭ ಕಾರ್ಯಕ್ರಮಗಳಿಂದ ಗ್ರಾಮೀಣ ಕಲೆಗಳಿಗೆ ಪ್ರೋತ್ಸಾಹ

ನಂಜನಗೂಡು: ಗ್ರಾಮೀಣ ಭಾಗದ ಕಲೆಗಳಿಗೆ ಪ್ರೋತ್ಸಾಹ ನೀಡುವ ಸಲುವಾಗಿ ಹಾಗೂ ಗ್ರಾಮೀಣ ಕಲಾವಿದರ ಕಲಾ ಪ್ರದರ್ಶನಕ್ಕೆ ವೇದಿಕೆ ಕಲ್ಪಿಸುವ ನಿಟ್ಟಿನಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವತಿಯಿಂದ ನಂಜನಗೂಡು ಯುವ ಸೌರಭ ಕಾರ್ಯಕ್ರಮ ನಡೆಸಲಾಗುತ್ತಿದೆ ಎಂದು ದರ್ಶನ್ ಧ್ರುವನಾರಾಯಣ ಹೇಳಿದರು.

ನಗರದ ಪ್ರಥಮ ದರ್ಜೆ ಕಾಲೇಜಿನಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವತಿಯಿಂದ ಏರ್ಪಡಿಸಲಾಗಿದ್ದ ಯುವ ಸೌರಭ ಸಾಂಸ್ಕೃತಿಕ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಇತ್ತೀಚಿನ ದಿನಗಳಲ್ಲಿ ಪಾಶ್ಚಿಮಾತ್ಯ ಸಂಸ್ಕೃತಿಯ ಅನುಕರಣೆಯಿಂದಾಗಿ ಇಂದಿನ ತಲೆಮಾರಿನ ಯುವಕರು ಪಾಶ್ಚಿಮಾತ್ಯ ಸಂಸ್ಕೃತಿಗೆ ಮಾರುಹೋಗುವಂತಹ ಪ್ರಕರಣಗಳು ಹೆಚ್ಚಾಗಿವೆ. ಇದರಿಂದಾಗಿ ನಮ್ಮ ನಾಡಿನ ಜಾನಪದ ಸಂಸ್ಕೃತಿ ಮತ್ತು ಜಾನಪದ ಕಲೆಗಳು ಅವಸಾನದ ಅಂಚಿಗೆ ತಲುಪುತ್ತಿವೆ. ಇಂತಹ ಸನ್ನಿವೇಶದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಮ್ಮ ಜಾನಪದ ಸಂಸ್ಕೃತಿ ಮತ್ತು ಕಲಾ ವೈಭವವನ್ನು ಉಳಿಸಿ ಬೆಳೆಸುವ ಸಲುವಾಗಿ ಇಂತಹ ಕಾರ್ಯಕ್ರಮಗಳನ್ನು ರೂಪಿಸಿ ಕಲಾವಿದರಿಗೆ ಪ್ರೋತ್ಸಾಹ ನೀಡುತ್ತಾ ಬಂದಿರುವುದು ಸಂತಸದ ವಿಷಯವಾಗಿದೆ ಎಂದರು.



ನಂಜನಗೂಡಿನಲ್ಲಿ ನಡೆದ ಯುವ ಸೌರಭ ಸಾಂಸ್ಕೃತಿಕ ಕಾರ್ಯಕ್ರಮವನ್ನು ಶಾಸಕ ದರ್ಶನ್ ಧ್ರುವನಾರಾಯಣ್ ಉದ್ಘಾಟಿಸಿದರು.

ಮೈಸೂರು ಭಾಗದ ನಾಡಹಬ್ಬ ದಸರಾ ವಿಶ್ವ ವಿಖ್ಯಾತಿಗಳಿಸಿದೆ, ದಸರಾ ಭಾಗವಾದ ಯುವ ದಸರಾ ಮತ್ತು ಯುವ ಸಂಭ್ರಮಗಳಲ್ಲಿ ಯುವಕರು ಭಾಗವಹಿಸಬೇಕೆಂಬ ಉತ್ಸಾಹ ಅಭಿಲಾಷೆ ಹೊಂದಿರುತ್ತಾರೆ, ಅವರ ಉತ್ಸಾಹಕ್ಕೆ ಪೂರಕ ವಾತಾವರಣ ನಿರ್ಮಿಸಬೇಕು ಮತ್ತು ಗ್ರಾಮೀಣ ಭಾಗದ ಕಲಾವಿದರ ಕಲೆಯನ್ನು ಉತ್ತೇಜಿಸಿ ಪ್ರೋತ್ಸಾಹ ನೀಡುವ ಮೂಲಕ ಉಳಿಸಿ ಬೆಳೆಸಬೇಕು ಎಂಬ ಸಲುವಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಯುವ ಸೌರಭ ಕಾರ್ಯಕ್ರಮವನ್ನು ನಡೆಸಲಾಗುತ್ತಿದೆ. ಕಲಾವಿದರು ಇದರ ಸದುಪಯೋಗವನ್ನು ಪಡೆದುಕೊಂಡು ನಿಮ್ಮ ಕಲೆಯನ್ನು ಪ್ರದರ್ಶನ ಮಾಡಿ ನಿಮ್ಮ ಪ್ರತಿಭೆಯನ್ನು ಪ್ರದರ್ಶಿಸಿ ಆತ್ಮವಿಶ್ವಾಸವನ್ನು ವೃದ್ಧಿಸಿಕೊಳ್ಳಬೇಕು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಕಲಾ ಪ್ರದರ್ಶನ ಮಾಡಿ ಪ್ರತಿಭೆ ಪ್ರದರ್ಶಿಸಿದ ಕಲಾವಿದರಿಗೆ ಬಹುಮಾನ ವಿತರಿಸಲಾಯಿತು, ಅಲ್ಲದೆ ಪ್ರಥಮ ಬಿಕಾಂ ವಿದ್ಯಾರ್ಥಿಗಳಿಗೆ ಉತ್ತಮ್ ಚಾರಿಟೇಬಲ್ ಟ್ರಸ್ಟ್ ವತಿಯಿಂದ ಉಚಿತವಾಗಿ ಪುಸ್ತಕಗಳು ಮತ್ತು ಬ್ಯಾಗ್‌ಗಳನ್ನು ವಿತರಿಸಲಾಯಿತು.

ಮಾಜಿ ಶಾಸಕ ಕಳಲೆ ಕೇಶವಮೂರ್ತಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವಿಭಾಗಿಯ ಜಂಟಿ ನಿರ್ದೇಶಕ ಮಲ್ಲಿಕಾರ್ಜುನ್, ಜಿಲ್ಲಾ ನಿರ್ದೇಶಕ ಸುದರ್ಶನ್, ಕಾಲೇಜಿನ ಪ್ರಾಂಶುಪಾಲರಾದ ಕೆಂಪೇಗೌಡ, ಡಾ.ಕೆಂಪಮ್ಮ, ಮಹದೇವ ಪ್ರಸಾದ್ ಉಪಸ್ಥಿತರಿದ್ದರು.

ಇಂಜನಿಯರ್‌ಗಳು ಉದ್ಯೋಗದಾತರಾಗಬೇಕು



ಸ್ಟಾರ್ಟಪ್ ಆರಂಭಿಸುವ ಕಾರ್ಯಾಗಾರವನ್ನು ಭಾಸ್ಕರ್ ಕಳಲೆ ಉದ್ಘಾಟಿಸಿದರು.

ನಂಜನಗೂಡು: ಟೈ–ಮೈಸೂರು ಸಂಸ್ಥೆ ನೆಕ್ಸ್ಟ್ ಫೌಂಡರ್ಸ್ ಯೋಜನೆಯಡಿ ಇಂಜಿನಿಯರ್ ಪದವೀಧರರು ಸ್ಟಾರ್ಟಪ್ ಆರಂಭಿಸುವ ಮೂಲಕ ಸ್ವಂತ ಉದ್ಯಮ ಸ್ಥಾಪಿಸಿ, ಯುವಕರಿಗೆ ಉದ್ಯೋಗ ನೀಡುವ ಉದ್ಯೋಗಧಾತರಾಗಬೇಕು ಎಂದು ಟೈ–ಮೈಸೂರು ಸಂಸ್ಥೆಯ ಭಾಸ್ಕರ್ ಕಳಲೆ ತಿಳಿಸಿದರು.

ತಾಲೂಕಿನ ತಾಂಡವಪುರ ಎಂಐಟಿ ಕಾಲೇಜಿನಲ್ಲಿ ಗುರುವಾರ ವಿದ್ಯಾರ್ಥಿಗಳಿಗೆ ಟೈ–ಮೈಸೂರು ಸಂಸ್ಥೆ ನೆಕ್ಸ್ಟ್ ಫೌಂಡರ್ಸ್ ಯೋಜನೆಯಡಿ ಸ್ಟಾರ್ಟಪ್ ಆರಂಭಿಸುವ ಕಾರ್ಯಾಗಾರವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಅಮೇರಿಕಾದಲ್ಲಿ ಭಾರತೀಯರು ಸ್ಟಾರ್ಟಪ್ ಆರಂಭಿಸಲು ಕಷ್ಟವಾಗಿತ್ತು, ಮೊದಲಿಗೆ ಭಾರತದ ವಿನೋದ್ ಕೋಸ್ಲಾ ಸೇರಿದಂತೆ 3 ಮಂದಿಯ ತಂಡ ಸ್ಟಾರ್ಟಪ್ ಆರಂಭಿಸಿದರು, ಸಮಸ್ಯೆಗಳನ್ನು ಮೆಟ್ಟಿ ನಿಂತು ಯಶಸ್ವಿಯಾದರು, 1992ರಲ್ಲಿ ಬೆಂಗಳೂರಿನಲ್ಲಿ ಚಿಕ್ಕದಾಗಿ ಸ್ಟಾರ್ಟಪ್ ಉದ್ಯಮ ಆರಂಭವಾಯಿತು, ಈಗ ದೇಶದ ಸಿಲಿಕಾನ್ ಸಿಟಿಯಾಗಿ ಬೆಳೆದು ನಿಂತಿದೆ, ಈಗ ಸಿಡ್ನಿ, ಸಿಂಗಾಪುರ್, ಮಲೇಷಿಯಾ ಸೇರಿದಂತೆ ವಿಶ್ವದ ಬಿಜಿನೆಸ್ ಮಾಡೆಲ್‌ಗಳಾಗಿ ಪ್ರಸಿದ್ಧರಾಗಿದ್ದಾರೆ, ಯುವಕರು ಸ್ವಂತ ಪರಿಶ್ರಮದಿಂದ ಉದ್ಯಮ ಕಟ್ಟಿ ಯುವಕರಿಗೆ ಉದ್ಯೋಗ ಸೃಷ್ಟಿಸುವ ಕಾರ್ಯ, ದೇಶವನ್ನು ಶ್ರೀಮಂತವಾಗಿ ಕಟ್ಟುವ ಕಾರ್ಯವಾಗಿದೆ. ಟೈ–ಮೈಸೂರು ಸಂಸ್ಥೆ ವಿಶ್ವದಾದ್ಯಂತ 65 ಕಡೆ ಯುವಕರಿಗೆ ತರಬೇತಿ ನೀಡಿ ಉದ್ಯಮ ಸ್ಥಾಪಿಸಲು ಪ್ರೇರಣೆ ನೀಡುತ್ತಿದೆ ಎಂದು ಹೇಳಿದರು.

ಟೈ–ಮೈಸೂರು ಸಂಸ್ಥೆಯ ಸಹ ಸದಸ್ಯ ಮಂಜುನಾಥ್ ಭಟ್ ಮಾತನಾಡಿ, ವಿಶ್ವಾದ್ಯಂತ ಸ್ಟಾರ್ಟಪ್‌ಗಳಿಗೆ ಹೆಚ್ಚಿನ ಮಾನ್ಯತೆ ಇದೆ, ಸ್ವಂತ ಉದ್ಯಮ ಸ್ಥಾಪಿಸಬೇಕೆಂಬ ಅಭಿಲಾಷೆ ಹೊಂದಿರುವ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ದೆಸೆಯಿಂದಲೇ ಸ್ಟಾರ್ಟಪ್ ಆರಂಭಿಸಲು ಟೈ–ಮೈಸೂರು ಸಂಸ್ಥೆ ಸಹಕಾರ, ನೆರವು, ಮಾರ್ಗದರ್ಶನ ನೀಡಲಿದೆ.

ಕಾಲೇಜಿನ ಪ್ರಾಂಶುಪಾಲ ವೈ.ಟಿ.ಕೃಷ್ಣೇಗೌಡ ಮಾತನಾಡಿ, ಹಳ್ಳಿಯ ಹಿನ್ನೆಲೆಯಿಂದ ಬಂದ ಪ್ರೊಫೆಸರ್‌ಗಳು ಕೂಡಿ ಸ್ಥಾಪಿಸಿದ ಎಂ.ಐ.ಟಿ ಇಂಜಿನಿಯರಿಂಗ್ ಕಾಲೇಜು ಬೃಹತ್ತಾಗಿ ಬೆಳೆದು ಮೈಸೂರಿನಲ್ಲಿ ನರ್ಸಿಂಗ್ ಕಾಲೇಜ್, ಪ್ರಥಮದರ್ಜೆ ಕಾಲೇಜು, ತಾಂತ್ರಿಕ ಕಾಲೇಜುಗಳನ್ನು ಸ್ಥಾಪಿಸುವ ಮೂಲಕ 10 ಸಾವಿರ ವಿದ್ಯಾರ್ಥಿಗಳು ಕಲಿಯಲು ಅವಕಾಶವಾಗಿದೆ ಎಂದರು.

ಸಮಾರಂಭದಲ್ಲಿ ಎಂಐಟಿ ಕಾಲೇಜಿನ ಟ್ರಸ್ಟಿಗಳಾದ ಎಚ್.ಕೆ.ಚೇತನ್, ಧರ್ಮ ಪ್ರಸಾದ್, ಪ್ರಾಧ್ಯಾಪಕರಾದ ಡಾ.ಸುನೀಲ್, ಪ್ರೊ.ಮೊಹಮದ್ ಸಲಾಮತ್ ಸೇರಿದಂತೆ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಸಾಮಾಜಿಕ ಸೇವೆಯಲ್ಲಿ ತೊಡಗಿಸಿಕೊಂಡವರಿಗೆ ಮತ್ತಷ್ಟು ಪ್ರಶಸ್ತಿಗಳು ಬರಲಿ: ವಾಟಾಳು ಶ್ರೀಗಳು

ತಿ.ನರಸೀಪುರ, ಸೆ.13–ಸಾರ್ವಜನಿಕರ ಅನುಕೂಲಕ್ಕಾಗಿ ಯಾವುದೇ ಪ್ರತಿಫಲವನ್ನು ಬಯಸದೇ ಕೆಲಸ ಕಾರ್ಯಗಳನ್ನು ಮಾಡಿ ಸಾಮಾಜಿಕ ಕ್ಷೇತ್ರದಲ್ಲಿ ತೊಡಗಿಕೊಂಡಿರುವ ಬಿ.ಮರಯ್ಯನವರಿಗೆ ಮತ್ತಷ್ಟು ಪ್ರಶಸ್ತಿ, ಪ್ರಶಂಸೆಗಳು ದೊರಕುವಂತಾಗಲಿ ಎಂದು ವಾಟಾಳು ಸೂರ್ಯ ಸಿಂಹಾಸನಮಠದ ಶ್ರೀ ಸಿದ್ದಲಿಂಗಶಿವಾಚಾರ್ಯ ಸ್ವಾಮೀಜಿ ಹಾರೈಸಿದರು.

ಗೌರವ ಡಾಕ್ಟರೇಟ್ ಪದವಿ ಪಡೆದ ತಾ.ಪಂ.ಮಾಜಿ ಉಪಾಧ್ಯಕ್ಷ ಬಿ.ಮರಯ್ಯ ಅವರನ್ನು ವಾಟಾಳು ಮಠದಲ್ಲಿ ಅಭಿನಂದಿಸಿ ಅಮರು ಮಾತನಾಡಿದರು. ಯಾವುದೇ ಸ್ವಾರ್ಥವಿಲ್ಲದೇ ನಿಸ್ವಾರ್ಥವಾಗಿ ಮಾಡುವ ಕೆಲಸ ಕಾರ್ಯಗಳೇ ಸಮಾಜ ಸೇವೆ ಎನಿಸಿಕೊಳ್ಳುತ್ತದೆ. ಇದು ನಗರದ, ರಾಜ್ಯ ಮಟ್ಟದಲ್ಲೂ, ರಾಷ್ಟ್ರಮಟ್ಟದಲ್ಲೂ ಆಗಬಹುದು. ದೇಶದ ಅತಿರಥಮಹಾರಥರೆಲ್ಲಾ ರಾಷ್ಟ್ರಮಟ್ಟದಲ್ಲಿ ಸಮಾಜ ಸೇವೆಗೈದಿದ್ದಾರೆ. ಈ ಮಟ್ಟಕ್ಕೆ ಎಲ್ಲರೂ ಏರಲು ಸಾಧ್ಯವಿಲ್ಲವಾ ದರೂ ಪ್ರತಿಯೊಬ್ಬರೂ ತಮ್ಮ ತಮ್ಮ ಯೋಗ್ಯತಾನುಸಾರ ಸಮಾಜ ಸೇವೆಯನ್ನು ಮಾಡಬಹುದಾಗಿದೆ. 'ಜನಸೇವೆಯೇ ಜನಾರ್ಧನನ ಸೇವೆ' ಎಂಬ ಗಾದೆಯು ಸಮಾಜ ಸೇವೆಯು ದೇವರ ಪೂಜೆಗಿಂತ ಶ್ರೇಷ್ಠ ಎಂಬುದನ್ನು ತಿಳಿಸುತ್ತದೆ ಎಂದರು.



ಡಾಕ್ಟರೇಟ್ ಪ್ರಶಸ್ತಿ ಪುರಸ್ಕೃತರಾದ ತಾಲೂಕು ಪಂಚಾಯ್ತಿ ಮಾಜಿ ಉಪಾಧ್ಯಕ್ಷ ಬಿ.ಮರಯ್ಯ ಅವರನ್ನು ವಾಟಾಳು ಮಠದ ಶ್ರೀ ಸಿದ್ದಲಿಂಗಶಿವಾಚಾರ್ಯ ಸ್ವಾಮೀಜಿ ಸನ್ಮಾನಿಸಿದರು.

ಸಮಾಜ ಸೇವೆ ಮಾಡುವವರನ್ನು ಕೇವಲ ರಾಜಕೀಯ ಮತ್ತು ಜಾತಿಯಿಂದ ನೋಡದೆ ಅವರು ಮಾಡುವ ಉತ್ತಮ ಕೆಲಸ ಕಾರ್ಯಗಳನ್ನು ನೋಡಿ ಬೆಂಬಲಿಸಬೇಕು.ಈ ನಿಟ್ಟಿನಲ್ಲಿ ಬಿ.ಮರಯ್ಯನವರ ಸಾಮಾಜಿಕ ಸೇವೆ ಶ್ಲಾಘನೀಯವಾಗಿದ್ದು, ಸಮಾಜಕ್ಕೆ ಏನಾದರೂ ಕೊಡುಗೆ ನೀಡಬೇಕು ಎನ್ನುವ ಆತ್ಮವಿಶ್ವಾಸವನ್ನು ಬೆಳೆಸಿಕೊಂಡು ಬೇರೆಯವರಿಗೆ ಪ್ರೇರಣೆಯಾಗಬೇಕು. ಕೇವಲ ದುಡ್ಡು ಸಂಪಾದನೆ ಮಾಡುವುದನ್ನೇ ವೃತ್ತಿಯನ್ನಾಗಿ ಮಾಡಿಕೊಳ್ಳಬಾರದು ಎಂದರು.

ಸನ್ಮಾನ ಸ್ವೀಕರಿಸಿ ಮಾತನಾಡಿದ ಡಾ.ಮರಯ್ಯ, ಪ್ರಶಸ್ತಿಯಿಂದ ಜವಾಬ್ದಾರಿ ಮತ್ತಷ್ಟು ಹೆಚ್ಚಿದೆ. ಶ್ರೀಗಳು ನನ್ನನ್ನು ಗೌರವಿಸುವ ಮೂಲಕ ನನಗೆ ಸಾಮಾಜಿಕ ಸೇವೆಯಲ್ಲಿ ಹೆಚ್ಚಿನ ರೀತಿಯಲ್ಲಿ ತೊಡಗಿಸಿಕೊಳ್ಳಲು ಪ್ರೇರಣೆ ನೀಡಿದ್ದು, ನನ್ನ ಶಕ್ತಿಯಾನುಸಾರ ಸಮಾಜ ಸೇವೆ ನಿರಂತರವಾಗಿ ಸಾಗಲಿದೆ ಎಂದರು.

ಈ ವೇಳೆ ವಾಟಾಳು ಮಠದ ಕಿರಿಯ ಶ್ರೀಗಳಾದ ಶಿವಕುಮಾರಸ್ವಾಮಿ, ಪುರಸಭೆ ಕೆಡಿಪಿ ಸದಸ್ಯ ದಿವಾಕರ್ ಸೇರಿದಂತೆ ಮತ್ತಿತರರಿದ್ದರು.

ದಸರಾ ಚಲನಚಿತ್ರ ಉಪ ಸಮಿತಿ ಅಧ್ಯಕ್ಷರಾಗಿ ದೇವಲಾಪುರ ಸಿದ್ದರಾಜು ನೇಮಕ



ದಸರಾ ಚಲನಚಿತ್ರ ಉಪ ಸಮಿತಿ ಅಧ್ಯಕ್ಷರಾಗಿ ಆಯ್ಕೆಯಾದ ದೇವಲಾಪುರ ಸಿದ್ದರಾಜು ಅವರನ್ನು ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅಭಿನಂದಿಸಿದರು.

ಸರಗೂರು: ದಸರಾ ಚಲನಚಿತ್ರೋತ್ಸವದ ಉಪ ಸಮಿತಿಯ ಅಧ್ಯಕ್ಷರಾಗಿ ಸರಗೂರು ಹೆಚ್.ಡಿ.ಕೋಟೆ ತಾಲೂಕಿನ ದೇವಲಾಪುರ ಸಿದ್ದರಾಜು ಅವರನ್ನು ನೇಮಕ ಮಾಡಲಾಗಿದೆ.

ನಾಡಹಬ್ಬ ಮೈಸೂರು ದಸರಾ ಮಹೋತ್ಸವ–2025ರ ಆಚರಣೆ ಅಂಗವಾಗಿ ಮಾಲ್ ಆಫ್ ಮೈಸೂರಿನಲ್ಲಿ ನಡೆದ ಕಾರ್ಯಕ್ರಮದಲ್ಲಿ ಚಲನಚಿತ್ರ ಉಪ ಸಮಿತಿ ಅಧ್ಯಕ್ಷರಾಗಿ ದೇವಲಾಪುರ ಸಿದ್ದರಾಜು ಅವರನ್ನು ಸಮಾಜ ಕಲ್ಯಾಣ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಹೆಚ್.ಸಿ. ಮಹದೇವಪ್ಪ ಅವರು, ಅಧಿಕಾರೇತರನ್ನು ಅಭಿನಂದಿಸಿ ಸನ್ಮಾನಿಸಿದರು. ಇದೇ ಸಂದರ್ಭದಲ್ಲಿ ಶಾಸಕರಾದ ತನ್ವೀರ್ ಸೇಠ್, ಶ್ರೀವತ್ಸ, ತಿಮ್ಮಯ್ಯ, ಡಾ.ಮರಿದೇವಯ್ಯ, ಇನ್ನಿತರ ಗಣ್ಯರು ಉಪಸ್ಥಿತರಿದ್ದರು

ದಸರಾ ಚಲನಚಿತ್ರೋತ್ಸವ ಉಪ ಸಮಿತಿಯ ಅಧ್ಯಕ್ಷರಾಗಿ ಆಯ್ಕೆ ಮಾಡಿದ ಸಮಾಜ ಕಲ್ಯಾಣ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಹೆಚ್.ಸಿ. ಮಹದೇವಪ್ಪರವರು ಹಾಗೂ ಸಂಸದರಾದ ಸುನೀಲ್ ಬೋಸ್ ಹಾಗೂ ತಾಲೂಕಿನ ಶಾಸಕರಾದ ಅನಿಲ್ ಚಿಕ್ಕಮಾದುರವರಿಗೆ ಚಲನಚಿತ್ರದ ಉಪ ಸಮಿತಿ ಅಧ್ಯಕ್ಷರಾದ ದೇವಲಾಪುರ ಸಿದ್ದರಾಜು ಅಭಿನಂದನೆ ಸಲ್ಲಿಸಿದ್ದಾರೆ.



ಸಮವಸ್ತ್ರ ವಿತರಣೆ

ಬನ್ನೂರಿನ ಸಮೀಪದ ಯಾಚೇನಹಳ್ಳಿಯ ಸರ್ಕಾರಿ ಹಿರಿಯ ಪ್ರೌಢಶಾಲೆಯಲ್ಲಿ ಶನಿವಾರ ಇನ್ವೆಂಟಿಕ್ ಫೌಂಡೇಶನ್‌ನ ಸಿಇಓ ಕೆಂಪೇಗೌಡ, ಮಕ್ಕಳಿಗೆ ಉಚಿತವಾಗಿ ಸಮವಸ್ತ್ರ ವಿತರಣೆ ಮಾಡಿದರು.

ವಾರ್ಷಿಕ ಮಹಾಸಭೆ

ಮೈಸೂರು: ಮೈಸೂರಿನ ಶ್ರೀ ಭೂಮಾತಾ ಗೃಹ ನಿರ್ಮಾಣ ಸಹಕಾರ ಸಂಘದ 2024–25ನೇ ಸಾಲಿನ ವಾರ್ಷಿಕ ಮಹಾಸಭೆನಾಳೆ (ಸೆ14) ನಡೆಯಲಿದೆ. ಮೈಸೂರು ಹುಣಸೂರು ರಸ್ತೆಯ ದೊಡ್ಡಕಾಡನಹಳ್ಳಿಯ ಭೂಮಾತಾ ನಗರದಲ್ಲಿ ಅಂದು ಬೆಳಿಗ್ಗೆ 10 ಗಂಟೆಗೆ ಸಭೆ ನಡೆಯಲಿದೆ.

ಡಿಸಿಸಿ ಬ್ಯಾಂಕ್ ಆಡಳಿತ ಮಂಡಳಿ ರಚನೆ ನಂತರ ಸಹಕಾರ ಸಂಘದ ಸದಸ್ಯರಿಗೆ ಸಾಲ ವಿತರಣೆ

ವಾರ್ಷಿಕ ಮಹಾಸಭೆಯಲ್ಲಿ ಬ್ಯಾಂಕಿನ ಮೇಲ್ವಿಚಾರಕ ಘೋಷಣೆ

ತಿ.ನರಸೀಪುರ, ಸೆ.13– ಡಿಸಿಸಿ ಬ್ಯಾಂಕಿನಲ್ಲಿ ಆಡಳಿತ ಮಂಡಳಿ ರಚನೆಯಾಗುತ್ತಿದ್ದಂತೆ ಸಹಕಾರ ಸಂಘದ ಹೊಸ ಸದಸ್ಯರಿಗೆ ಸಾಲ ವಿತರಣೆ ಮಾಡಲು ಶಿಫಾರಸ್ಸು ಮಾಡಲಾಗುತ್ತದೆ ಎಂದು ಎಂಸಿಡಿಸಿಸಿ ಬ್ಯಾಂಕಿನ ಮೇಲ್ವಿಚಾರಕ ಎನ್.ಎಸ್.ಶೇಖರ್ ಭರವಸೆ ನೀಡಿದರು.



ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯಲ್ಲಿ ಸಂಘದ ಅಧ್ಯಕ್ಷ ಎಂ.ನಿಂಗಪ್ಪ ಮಾತನಾಡಿದರು.

ತಾಲೂಕಿನ ವಾಟಾಳು ಗ್ರಾಮದಲ್ಲಿ ಹಮ್ಮಿಕೊಳ್ಳಲಾಗಿದ್ದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ವಾರ್ಷಿಕ ಮಹಾಸಭೆಯಲ್ಲಿ ಭಾಗವಹಿಸಿ ಅಮರು ಮಾತನಾಡಿದರು.

ಜಿಲ್ಲಾ ಬ್ಯಾಂಕಿನಲ್ಲಿ ಇನ್ನೂ ಸಹ ಆಡಳಿತ ಮಂಡಳಿ ರಚನೆಯಾಗದಿರುವ ಹಿನ್ನೆಲೆಯಲ್ಲಿ ಸರ್ಕಾರಿ ಅಧಿಕಾರಿಗಳು ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಅವರಿಗೆ ಹೊಸ ಸಾಲ ವಿತರಣೆ ಮಾಡಲು ಅವಕಾಶ ಇರುವುದಿಲ್ಲ. ಹಾಗಾಗಿ ಹೊಸ ಸಾಲ ವಿತರಣೆ ಮಾಡಲು ಸಾಧ್ಯವಾಗಿಲ್ಲ. ಒಂದು ತಿಂಗಳ ಅವಧಿಯಲ್ಲಿ ಆಡಳಿತ ಮಂಡಳಿ ರಚನೆಯಾಗಲಿದ್ದು, ಹೊಸ ಸದಸ್ಯರಿಗೆ ಸಾಲ ವಿತರಿಸಲು ಅಗತ್ಯ ಕ್ರಮ ಕೈಗೊಳ್ಳಲಾಗುತ್ತದೆ ಎಂದರು.

ವಾಟಾಳು ಗ್ರಾಮದಲ್ಲಿರುವ ಹೊಸ ಸಹಕಾರ ಸಂಘಕ್ಕೆ ಮೂಗೂರು ಹಾಗೂ ಹೆಳವರಹುಂಡಿ ಗ್ರಾಮದ ಸಂಘದಿಂದ ಕೆಲ ಸದಸ್ಯರು ಬಂದಿದ್ದಾರೆ.ಆ ಭಾಗದಲ್ಲಿ ಕೆಲ ಸದಸ್ಯರು ಸುಸ್ತಿದಾರರಾಗಿದ್ದಾರೆ. ಹಾಗಾಗಿ ಸುಸ್ತಿದಾರರಿಗೆ ಸಾಲ ಕೊಡಲು ಸಾಧ್ಯವಿಲ್ಲ. ಪಡೆದ ಸಾಲವನ್ನು ನಿಯಮಾನುಸಾರ ಮರುಪಾವತಿ ಮಾಡಿದರೆ ಮತ್ತಷ್ಟು ಹೆಚ್ಚಿನ ಸಾಲ ಪಡೆಯಬಹುದು. ಆ ನಿಟ್ಟಿನಲ್ಲಿ ರೈತರು ಪಡೆದ ಸಾಲವನ್ನು ಸಕಾಲಕ್ಕೆ ಮರು ಪಾವತಿಸಿ ಸರ್ಕಾರದಿಂದ ನೀಡಲಾಗುತ್ತಿರುವ ಶೂನ್ಯ ಬಡ್ಡಿ ಸಾಲ ಪಡೆದು ಆರ್ಥಿಕವಾಗಿ ಮುನ್ನಡೆ ಸಾಧಿಸುವಂತೆ ಸಲಹೆ ನೀಡಿದರು. ಸಂಘದ ನಿರ್ದೇಶಕ ಮೋಹನ್ ಮಾತನಾಡಿದರು.

ಗ್ರಾಮೀಣಾಭಿವೃದ್ಧಿಗೆ ಆದಿ ಕರ್ಮಯೋಗಿ ಅಭಿಯಾನ

ಹೆಚ್.ಡಿ.ಕೋಟೆ, ಸೆ.13– ಗ್ರಾಮಾಂತರ ಪ್ರದೇಶದಲ್ಲಿ ಅಭಿವೃದ್ಧಿಗಾಗಿ ಆದಿ ಕರ್ಮಯೋಗಿ ಅಭಿಯಾನವನ್ನು ಆಯೋಜಿಸಲಾಗಿದೆ ಎಂದು ತಾಲೂಕು ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿ ಮಹೇಶ್ ತಿಳಿಸಿದರು.



ತಾಲೂಕು ಮಟ್ಟದ ಮಾಸ್ಟರ್ಸ್ ತರಬೇತಿ ಕಾರ್ಯಕ್ರಮವನ್ನು ಪರಿಶಿಷ್ಟ ಕಲ್ಯಾಣ ವರ್ಗಗಳ ಅಧಿಕಾರಿ ಮಹೇಶ್ ಉದ್ಘಾಟಿಸಿದರು.

ಪಟ್ಟಣದ ತಾಲೂಕು ಪಂಚಾಯಿತಿ ಆವರಣದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ವತಿಯಿಂದ ಧರ್ತಿ ಆಬಾ ಜನಜಾತೀಯ ಗ್ರಾಮ ಉತ್ಕರ್ಷ ಅಭಿಯಾನದಡಿ ಆದಿ ಕರ್ಮಯೋಗಿ ಅಭಿಯಾನದಡಿ ತಾಲೂಕು ಮಟ್ಟದ ಮಾಸ್ಟರ್ಸ್ ತರಬೇತಿದಾರರು ಮತ್ತು ತಾಲೂಕು ಮಟ್ಟದ ಅಧಿಕಾರಿಗಳ ಸಮನ್ವಯದೊಂದಿಗೆ ಒಂದು ದಿನದ ಓರಿಯೆಂಟೇಷನ್ ಮತ್ತು ಒಂದು ದಿನದ ಕಾರ್ಯಾಗಾರ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಆದಿವಾಸಿಗಳನ್ನು ಮುಖ್ಯವಾಹಿನಿಗೆ ತರಲು ಈ ಹಿಂದೆ ಹಲವು ಇಲಾಖೆಗಳು ಹಲವು ರೀತಿ ಯೋಜನೆ ರೂಪಿಸುತ್ತಿದ್ದವು. ಆದರೆ ಈ ಯೋಜನೆಯಲ್ಲಿ ಎಂಟು ಇಲಾಖೆಗಳು ಒಗ್ಗೂಡಿ ಅಭಿವೃದ್ಧಿ ಮಾಡುವ ನಿಟ್ಟಿನಲ್ಲಿ ಈ ಯೋಜನೆಗೆ ದಿಟ್ಟ ಹೆಜ್ಜೆಯನ್ನು ಇಟ್ಟಿದೆ ಎಂದು ತಿಳಿಸಿದರು.

ಒಂದು ಸಮುದಾಯ ಅಭಿವೃದ್ಧಿಯಾಗಬೇಕಾದರೆ ಒಗ್ಗಟ್ಟು ಅವಶ್ಯಕತೆ ಇರುವುದರಿಂದ ಈ ಯೋಜನೆಯಡಿ ಹಲವು ಇಲಾಖೆಗಳು ಒಗ್ಗಟ್ಟಿನಿಂದ ಕೆಲಸ ಮಾಡುತ್ತವೆ ಎಂದರು.

ಈ ಯೋಜನೆಯಡಿ ರಾಜ್ಯದಲ್ಲಿ 14 ಜಿಲ್ಲೆಗಳ 993 ಗ್ರಾಮಗಳನ್ನು ಆಯ್ಕೆ ಮಾಡಿಕೊಂಡಿದೆ. ಅದರಲ್ಲಿ ಎಚ್.ಡಿ.ಕೋಟೆ ಮತ್ತು ಸರಗೂರು ತಾಲೂಕುಗಳಲ್ಲಿ 23 ಗ್ರಾಮಗಳು ಆಯ್ಕೆಯಾಗಿವೆ ಎಂದರು.

ಇದೇ ಸಂದರ್ಭದಲ್ಲಿ ಆರೋಗ್ಯ ಇಲಾಖೆಯ ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ಶರಣಪ್ಪ, ಪರಿಶಿಷ್ಟ ವರ್ಗಗಳ ಇಲಾಖೆಯ ಕಚೇರಿ ವ್ಯವಸ್ಥಾಪಕ ನಾಗರಾಜು, ಕಂದಾಯ ಇಲಾಖೆಯ ಆರ್.ಐ. ಗೋವಿಂದರಾಜು, ವಿಎ ಗಳಾದ ಯೋಗೇಶ್, ಮೊದಿನ್‌ಗೌಸ್, ವಿವೇಕಾನಂದ ಯೂತ್ ಮೂವ್‌ಮೆಂಟ್ ವ್ಯವಸ್ಥಾಪಕ ಬಿ.ವಿ. ಶಂಕರ್, ಸಂಯೋಜಕ ನಾಗೇಶ್, ಡಿ.ಬಿ.ಕುಪ್ಪೆ ಪಿ.ಡಿ.ಓ ಸ್ವಾಮಿ, ಸಿ.ಡಿ.ಪಿ.ಓ ರಂಜಿತ, ಶಿಕ್ಷಣ ಇಲಾಖೆಯ ಚನ್ನನಾಯಕ ಇದ್ದರು.

ಮೈಸೂರಿನ ವರುಣ ಕೆರೆ ಬಳಿ ಶ್ರೀ ಶಿವರಾತ್ರಿ ರಾಜೇಂದ್ರ ಅನುಭವ ಮಂಟಪ ಅನಾವರಣ

ತಳ ಸಮುದಾಯಗಳಿಗೆ ಶಕ್ತಿ ತುಂಬದಂತೆ ಪಟ್ಟಭದ್ರ ಹಿತಾಸಕ್ತಿಗಳ ಷಡ್ಯಂತ್ರ

- ಶರಣರ ಅನುಭವ ಮಂಟಪ ವಿಶ್ವದ ಮೊದಲ ಸಂಸತ್
- ಬಸವಣ್ಣ ಯಾವುದೇ ಜಾತಿ, ಪಂಗಡಕ್ಕೆ ಸೇರದ ವಿಶ್ವ ನಾಯಕ
- ಕೆಲವರಿಗೆ ಒಂದೊತ್ತಿನ ಊಟಕ್ಕಾಗಿ ನರಳಾಟ
- ಗ್ಯಾರಂಟಿ ಯೋಜನೆಗೆ 1 ಲಕ್ಷ ಕೋಟಿ ವಿನಿಯೋಗ

ಮುಖ್ಯಮಂತ್ರಿ ಸಿದ್ದರಾಮಯ್ಯ ಕಳವಳ



ಮೈಸೂರಿನ ವರುಣ ಕೆರೆ ಪಕ್ಕದಲ್ಲಿರುವ ಶ್ರೀ ಶಿವರಾತ್ರಿ ರಾಜೇಂದ್ರ ನಗರದಲ್ಲಿ ನೂತನವಾಗಿ ನಿರ್ಮಿಸಿರುವ ಶ್ರೀ ಶಿವರಾತ್ರಿ ರಾಜೇಂದ್ರ ಅನುಭವ ಮಂಟಪವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಶನಿವಾರ ಉದ್ಘಾಟಿಸಿದರು. ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ನಿವೃತ್ತ ಡಿಜಿಪಿ ಎಲ್.ರೇವಣ್ಣ ಸಿದ್ದಯ್ಯ, ಪಶು ಸಂಗೋಪನಾ ಸಚಿವ ಕೆ.ವೆಂಕಟೇಶ್ ಅವರನ್ನು ಚಿತ್ರದಲ್ಲಿ ಕಾಣಬಹುದು.

ಮೈಸೂರು, ಸೆ.13(ಬಿಎಲ್‌ಯು)– ಚಲನ ರಹಿತವಾದ ಜಾತಿ ವ್ಯವಸ್ಥೆ ಆಳವಾಗಿ ಬೇರೂರಿದ್ದು, ತಳ ಸಮುದಾಯಗಳಿಗೆ ಆರ್ಥಿಕ ಹಾಗೂ ಸಾಮಾಜಿಕವಾಗಿ ಶಕ್ತಿ ತುಂಬದಂತೆ ಪಟ್ಟಭದ್ರ ಹಿತಾಸಕ್ತಿಗಳು ಷಡ್ಯಂತ್ರ ರೂಪಿಸಿವೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಆತಂಕ ವ್ಯಕ್ತಪಡಿಸಿದರು.

ಮೈಸೂರಿನ ವರುಣ ಕೆರೆ ಪಕ್ಕದಲ್ಲಿರುವ ಶ್ರೀ ಶಿವರಾತ್ರಿ ರಾಜೇಂದ್ರನಗರದಲ್ಲಿ ನೂತನವಾಗಿ ನಿರ್ಮಿಸಿರುವ ಶ್ರೀ ಶಿವರಾತ್ರಿ ರಾಜೇಂದ್ರ ಅನುಭವ ಮಂಟಪ ಉದ್ಘಾಟಿಸಿ ಮಾತನಾಡಿದ ಅವರು, ಸ್ವಾತಂತ್ರ್ಯ ಬಂದು 78 ವರ್ಷಗಳಾದರೂ ಇನ್ನು ಕೂಡ ಜಾತಿ ವ್ಯವಸ್ಥೆಯಿಂದ ನಮ್ಮ ಸಮಾಜ ಮುಕ್ತವಾಗಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಕಳೆದ 800 ವರ್ಷ ಹಿಂದೆಯೇ ಕ್ರಾಂತಿಕಾರಿ ಬಸವಣ್ಣನವರು ಜಾತಿ ಮುಕ್ತ ಸಮಾಜ ನಿರ್ಮಾಣ ಮಾಡಲು ಅನುಭವ ಮಂಟಪ ನಿರ್ಮಾಣ ಮಾಡಿದರು. ಸಮ ಸಮಾಜ ನಿರ್ಮಾಣ ಮಾಡುವ ನಿಟ್ಟಿನಲ್ಲಿ ಅನುಭವ ಮಂಟಪದಲ್ಲಿ ಚರ್ಚೆಗಳು ನಡೆಯುತ್ತಿತ್ತು. ಇದು ವಿಶ್ವದ ಮೊದಲ ಸಂಸದೀಯ ವ್ಯವಸ್ಥೆಯಾಗಿತ್ತು ಜಾತಿ, ಧರ್ಮ, ಪಂಗಡ, ವರ್ಗ ರಹಿತ ಸಮಾಜ ನಿರ್ಮಿಸಲು ಅನುಭವ ಮಂಟಪದಲ್ಲಿ ಕ್ರಾಂತಿಕಾರಿ ನಿಲುವುಗಳನ್ನು ತೆಗೆದುಕೊಂಡಿದ್ದರು ಎಂದು ಸಿದ್ದರಾಮಯ್ಯ ಹೇಳಿದರು.

ಶಿಕ್ಷಣದಿಂದ ಮಾತ್ರ ಜ್ಞಾನ ವೃದ್ಧಿಯಾಗುತ್ತದೆ, ಸ್ವಾಭಿಮಾನದ ಬದುಕಿಗೆ ಸ್ಫೂರ್ತಿಯಾಗುತ್ತದೆ, ಸಮ ಸಮಾಜ ಪರಿಕಲ್ಪನೆ ಹುಟ್ಟುತ್ತದೆ ಎಂದು ಅರಿತಿದ್ದ ಬಸವಣ್ಣನವರು, ಸಮಾಜದ ಬದಲಾವಣೆಗೆ ಶಿಕ್ಷಣವೇ ಮದ್ದು ಎಂಬ ಕಟು ಸತ್ಯ ತಿಳಿಸಿ ಹೇಳುತ್ತಿದ್ದರು ಎಂದರು.

ಆದರೆ ಮಹಿಳೆಯರು ಸೇರಿದಂತೆ ಬಹಳಷ್ಟು ಜನರಿಗೆ ಶಿಕ್ಷಣವೇ ದೊರೆಯುತ್ತಿರಲಿಲ್ಲ. ಶಿಕ್ಷಣ ಕೆಲವರ ಸ್ವತ್ತು ಎಂಬಂತೆ ಸೀಮಿತ ರೇಖೆಯನ್ನು ಹಾಕಲಾಗಿತ್ತು. ಈ ಹಿನ್ನೆಲೆ ಬಸವಾದಿ ಶರಣರು ಮೊದಲು ಶಿಕ್ಷಣದ ಬಗ್ಗೆ ಅರಿವು ಮೂಡಿಸಲು ಆರಂಭಿಸಿದರು. ಸಮಾಜದ ಕೊಳಕು ತೆಗೆಯಲು ಹಾಗೂ ಜನರ ಉಜ್ವಲ ಭವಿಷ್ಯಕ್ಕೆ ಶಿಕ್ಷಣವೇ ದಾರಿದೀಪ ಎಂದು ಅಂದೇ ಸಾರಿದ್ದರು ಎಂದರು.

ಇದಕ್ಕೆಲ್ಲಾ ಮೂಲ ಕಾರಣರಾದ ಬಸವಣ್ಣನವರು ಸಾಂಸ್ಕೃತಿಕ ನಾಯಕರಾಗಿದ್ದರು. ಯಾವುದೇ ಜಾತಿ, ಧರ್ಮ, ಪಂಗಡಕ್ಕೆ ಸೇರದ ವಿಶ್ವ ನಾಯರಾಗಿದ್ದರು. ಅಸಮಾನತೆ ಇಲ್ಲದ, ಜಾತ್ಯಾತೀತ ಪರಿಕಲ್ಪನೆಯ ಅನುಭವ ಮಂಟಪಕ್ಕೆ ಅಲ್ಲಮ ಪ್ರಭುವನ್ನು ಅಧ್ಯಕ್ಷರಾಗಿ ಮಾಡಿದ್ದರು ಎಂದು ತಿಳಿಸಿದರು.

ಬಸವಾದಿ ಶರಣರ ಜಾತ್ಯಾತೀತ ಚಿಂತನೆ 800 ವರ್ಷಗಳಿಂದ ಬೇರೆ ಬೇರೆ ರೂಪ ಪಡೆಯುತ್ತಿದ್ದರೂ ಇಂದಿಗೂ ಕೂಡ ಬಹಳಷ್ಟು ಸಮುದಾಯಗಳಿಗೆ ಸಮಾನತೆ, ಸ್ವಾತಂತ್ರ್ಯ ದೊರೆತಿಲ್ಲ. ಜಾತಿ ವ್ಯವಸ್ಥೆಯಲ್ಲೆ ಇಂದಿಗೂ ನರಳುತ್ತಿದ್ದಾರೆ ಎಂದು ಸಿದ್ದರಾಮಯ್ಯ ಅಸಮಾಧಾನ ವ್ಯಕ್ತಪಡಿಸಿದರು.

ಆಧುನಿಕತೆಯಲ್ಲಿ ಶಿಕ್ಷಣ ವಿಸ್ತಾರ ಪಡೆದು, ತಂತ್ರಜ್ಞಾನ ಕ್ರಾಂತಿಯಾದರೂ, ಜಾತಿ ಸಾಮರಸ್ಯ ಇನ್ನು ಮೂಡಿಲ್ಲ. ಜಾತಿ, ಧರ್ಮ, ವರ್ಗ, ಅಸಹಿಷ್ಣುತೆ ಇನ್ನು ತನ್ನ ವ್ಯಾಪ್ತಿಯನ್ನು ವಿಸ್ತರಿಸಿಕೊಳ್ಳುತ್ತಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಕೆಲವರಿಗೆ ವಾಂತಿ ಮಾಡುವಷ್ಟು ಆಹಾರ ಇದ್ದರೆ, ಮತ್ತೆ ಕೆಲವರಿಗೆ ಒಂದೊತ್ತಿನ ಊಟವಿಲ್ಲದೆ ನರಳುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ನಮ್ಮ ಸರ್ಕಾರ ಒಂದು ಲಕ್ಷ ಕೋಟಿ ಹಣವನ್ನು ಗ್ಯಾರಂಟಿ ಯೋಜನೆಗೆ ವಿನಿಯೋಗ ಮಾಡಿದ್ದು, ಸಮ ಸಮಾಜ ನಿರ್ಮಾಣಕ್ಕೆ ಕ್ರಾಂತಿಕಾರಿ ಹೆಜ್ಜೆ ಇಟ್ಟಿದೆ ಎಂದು ಸಿದ್ದರಾಮಯ್ಯ ಹೇಳಿದರು.

ಅನುಭವ ಮಂಟಪ ಉದ್ಘಾಟನೆ ಮಾಡಿದ ಸಿದ್ದರಾಮಯ್ಯ ಅವರು ತಮ್ಮ ಭಾಷಣದ ಬಹು ಸಮಯವನ್ನು ಜಾತೀಯತೆಯ ಕರಾಳತೆಯನ್ನು ಒಂದೊಂದಾಗಿ ಬಿಡಿಸಿ ಹೇಳಿದರು.

ತರುವಾಯ ಮಾತನಾಡಿದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅವರು, ಜಾತಿ ಮುಕ್ತ ಸಮಾಜ ನಿರ್ಮಾಣ ಮಾಡಲು ಬಸವಣ್ಣನವರು 800 ವರ್ಷದ ಹಿಂದೆಯೇ ದಿಟ್ಟ ಹೆಜ್ಜೆ ಇಟ್ಟಿದ್ದರು. ಜಾತ್ಯಾತೀತ ಸಮಾಜ ನಿರ್ಮಾಣ ಮಾಡಲು ಅನುಭವ ಮಂಟಪದಲ್ಲಿ ಚರ್ಚೆಗಳು ನಡೆಯುತ್ತಿತ್ತು. ಅನುಭವ ಮಂಟಪದಲ್ಲಿ ಎಲ್ಲಾ ಸಮುದಾಯದವರು ಸಂಘಟಿತರಾಗಿ ಸಮ ಸಮಾಜ ನಿರ್ಮಾಣಕ್ಕೆ ಮುನ್ನುಡಿ ಬರೆದಿದ್ದರು ಎಂದರು.

ಡಾ.ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮೀಜಿ ಅವರು ತಮ್ಮ ಇಡೀ ಬದುಕನ್ನು ವಿದ್ಯಾರ್ಥಿಗಳ ಶ್ರೇಯೋಭಿವೃದ್ಧಿಗೆ ಮುಡುಪಾಗಿಟ್ಟಿದ್ದರು. ಪ್ರಸಾದ ನಿಲಯಗಳು ಗುಣಾತ್ಮಕ ಹಾಗೂ ಸರ್ವಕಾಲಿಕವಾಗಿರಬೇಕು ಎಂದು ಹಗಲಿರುಳು ದುಡಿದರು. ಪ್ರಸಾದ ನಿಲಯದ ಮಕ್ಕಳಿಗೆ ಮನೆಯಲ್ಲಿ ವಾಸ ಮಾಡುವಂತಹ ವಾತಾವರಣ ನಿರ್ಮಾಣ ಮಾಡಿದ್ದರು ಎಂದು ಸ್ವಾಮೀಜಿ ಹೇಳಿದರು.

ಗೃಹ ನಿರ್ಮಾಣ ಸಹಕಾರ ಸಂಘದ ಪದಾಧಿಕಾರಿಗಳಾದ ಚನ್ನಬಸಪ್ಪ, ಪ್ರೊ.ಸುಬ್ಬಪ್ಪ, ಡಾ.ನಂಜುಂಡಪ್ಪ ಅವರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಚದರಡಿಗೆ 311 ರೂಪಾಯಿಯಂತೆ ನಿವೇಶನ

ಜೆಎಸ್‌ಎಸ್ ಪ್ರಸಾದ ನಿಲಯಗಳ ಹಿರಿಯ ವಿದ್ಯಾರ್ಥಿಗಳ ಗೃಹ ನಿರ್ಮಾಣ ಸಹಕಾರ ಸಂಘದ ಅಧ್ಯಕ್ಷ ಎಲ್.ರೇವಣ್ಣ ಸಿದ್ದಯ್ಯ ಮಾತನಾಡಿ, ವರುಣ ಕೆರೆ ಪಕ್ಕ 400 ಎಕರೆಯಲ್ಲಿ 1,400 ನಿವೇಶನಗಳನ್ನು ನಿರ್ಮಿಸಿದ್ದು, ಬಡಾವಣೆ ಆರಂಭದಲ್ಲಿ ಚದರಡಿಗೆ ನಿಗದಿ ಮಾಡಿದ್ದ 311 ರೂಪಾಯಿ ದರದಲ್ಲೆ ಈಗಲೂ ನಿವೇಶನ ನೀಡಲಾಗುವುದು ಎಂದು ತಿಳಿಸಿದರು.

ಈ ಮೂಲಕ ಗೃಹ ನಿರ್ಮಾಣ ಸಹಕಾರ ಸಂಘವೊಂದು ಆರಂಭದಲ್ಲಿ ಇದ್ದ ದರವನ್ನು ಈಗಲೂ ನೀಡುತ್ತಿರುವ ಕರ್ನಾಟಕದ ಮೊದಲ ಸಹಕಾರ ಸಂಘವಾಗಿದೆ ಎಂದು ಹೇಳಿದರು.

ಸುತ್ತೂರು ಮಠದ ಡಾ.ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮೀಜಿ ಅವರು ಮಹಾದಾಸೋಹಿಯಾಗಿದ್ದರು. ಆರ್ಥಿಕ ಸಂಕಷ್ಟ ಎದುರಾದ ಸಮಯದಲ್ಲಿ ತಮ್ಮ ಚಿನ್ನದ ಕರಡಿಗೆಯನ್ನು ಮಾರಾಟ ಮಾಡಿ ಪ್ರಸಾದ ನಿಲಯ ನಡೆಸಿದರು ಎಂದು ಹೇಳಿದರು.

ಪ್ರತಿಯೊಬ್ಬರನ್ನು ಪ್ರೀತಿ ವಿಶ್ವಾಸದಿಂದ ನೋಡಿಕೊಳ್ಳುತ್ತಿದ್ದರು. ದಾಸೋಹದ ಜೊತೆಗೆ ಸಾಮಾಜಿಕ ಕಾರ್ಯಗಳನ್ನು ಕೂಡ ಮಾಡುತ್ತಿದ್ದರು. ಈ ಮೂಲಕ ಸಮ ಸಮಾಜ ನಿರ್ಮಾಣ ಮಾಡುವ ನಿಟ್ಟಿನಲ್ಲಿ ಹಲವು ಕೊಡುಗೆಗಳನ್ನು ನೀಡಿದ್ದಾರೆ ಎಂದು ರೇವಣ್ಣ ಸಿದ್ದಯ್ಯ ಹೇಳಿದರು.

ಸುಖಿ ರಾಜ್ಯ ನಿರ್ಮಾಣಕ್ಕಾಗಿ ಸಿದ್ದರಾಮಯ್ಯರ ದಿಟ್ಟ ಹೆಜ್ಜೆ

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಯಾವುದೇ ವಿಚಾರದಲ್ಲೂ ರಾಜಿ ಮಾಡಿಕೊಳ್ಳದೆ ಸುಖಿ ರಾಜ್ಯ ನಿರ್ಮಾಣ ಮಾಡುವ ದಿಟ್ಟ ಹೆಜ್ಜೆ ಇಟ್ಟಿದ್ದಾರೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಹೇಳಿದರು.

ಬಸವಣ್ಣ ಹಾಗೂ ಸಂವಿಧಾನದ ಆಶಯದಂತೆ ಸಿದ್ದರಾಮಯ್ಯ ಅವರು ಆಡಳಿತ ನಡೆಸುತ್ತಿದ್ದಾರೆ. ಆದರೆ ತಮ್ಮ ಇಷ್ಟು ವರ್ಷದ ರಾಜಕಾರಣದಲ್ಲಿ ಅನುಸರಿಸಿಕೊಂಡು ಬಂದಿರುವ ತತ್ವ, ಸಿದ್ಧಾಂತವನ್ನು ಮರೆತಿಲ್ಲ ಎಂದರು.

ಸುತ್ತೂರು ಮಠದ ಡಾ.ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮೀಜಿ ಅವರು ತ್ರಿವಿಧ ದಾಸೋಹ ಮಾಡುವ ಮೂಲಕ ಮನೆ ಮಾತಾಗಿದ್ದರು. ಆರ್ಥಿಕ ಸಂಕಷ್ಟದ ಕಾಲದಲ್ಲಿ ಪ್ರಸಾದ ನಿಲಯವನ್ನು ಯಶಸ್ವಿಯಾಗಿ ನಡೆಸಿಕೊಂಡು ಬಂದರು ಎಂದು ಹೇಳಿದರು.

ಡಾ.ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮೀಜಿ ಅವರು ಹಾಕಿಕೊಟ್ಟ ಬುನಾದಿಯಲ್ಲಿ ಈಗಿನ ಸ್ವಾಮೀಜಿ ಜೆಎಸ್‌ಎಸ್ ಶಿಕ್ಷಣ ಸಂಸ್ಥೆಯನ್ನು ರಾಜ್ಯ, ದೇಶ ಮಾತ್ರವಲ್ಲದೆ ಅಂತರ ರಾಷ್ಟ್ರೀಯ ಮಟ್ಟದಲ್ಲೂ ವಿಸ್ತರಿಸಿದ್ದಾರೆ ಎಂದು ಡಾ.ಮಹದೇವಪ್ಪ ಪ್ರಶಂಸೆ ವ್ಯಕ್ತಪಡಿಸಿದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಮಿರಾಯ್ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ಮಿರಾಯ್(ಕ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಬಾಘಿ–4 (ಹಿಂ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಘಾಟಿ (ತೆ)	4 ಪ್ರದರ್ಶನಗಳು
ಗಾಯಿತ್ರಿ	
ಕೂಲಿ (ಕ)	4 ಪ್ರದರ್ಶನಗಳು
ರಾಜಕಮಲ್	
ಘಾಟಿ (ತೆ)	4 ಪ್ರದರ್ಶನಗಳು
ಸಂಗಂ	
ಮಿರಾಯ್ (ತೆ)	4 ಪ್ರದರ್ಶನಗಳು
ಲಿಡೋ	
ಜಂಬೋ ಸರ್ಕಸ್(ಕ) + ಸನ್ ಆಫ್ ಮುತ್ತಣ್ಣ (ಕ)	2+2 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ನಿದ್ರಾದೇವಿ ನೆಕ್ಸ್ಟ್ ಡೋರ್(ಕ) +ರಾಮನಗರ (ಕ)	2+2 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ಕೂಲಿ (ತ): ಬೆ.7ಕ್ಕೆ, ಮ.3ಕ್ಕೆ, ರಾ.10.15ಕ್ಕೆ, ವಾರ್ –2 (ಹಿಂ): ಬೆ.10.45ಕ್ಕೆ, ಸಂ.6.40ಕ್ಕೆ.
ಸ್ಕ್ರೀನ್ 2	ಕೂಲಿ (ತ): ಬೆ.7ಕ್ಕೆ, ಸು ಫ್ರಂ ಸೋ (ಕ): ಬೆ.10.20ಕ್ಕೆ, ಮ.1.15ಕ್ಕೆ, ಸಂ.4.10ಕ್ಕೆ, ರಾ.7ಕ್ಕೆ, ವಾರ್ –2 (ಹಿಂ): ರಾ.9.50ಕ್ಕೆ.
ಸ್ಕ್ರೀನ್ 3	ಕೂಲಿ (ತ): ಬೆ.7.05ಕ್ಕೆ, ರಾ.8.15ಕ್ಕೆ, ಕೂಲಿ (ಕ): ಬೆ.10.30ಕ್ಕೆ, ಮಹಾವತಾರ ನರಸಿಂಹ (3ಡಿ)(ಕ): ಮ.1.50ಕ್ಕೆ, ವಾರ್ –2 (ಹಿಂ): ಸಂ.4.35ಕ್ಕೆ.
ಸ್ಕ್ರೀನ್ 4	ಕೂಲಿ (ತ): ಬೆ.7ಕ್ಕೆ, ಬೆ.11.55ಕ್ಕೆ, ಮ.3.25ಕ್ಕೆ, ಸಂ.6.45ಕ್ಕೆ, ರಾ.10.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಜೆಎಸ್‌ಎಸ್ ಉನ್ನತ ಶಿಕ್ಷಣ, ಸಂಶೋಧನಾ ಅಕಾಡೆಮಿಯಿಂದ 'ಕ್ಲಾಸ್ ಟು ಕೆರಿಯರ್' ಅಂತರರಾಷ್ಟ್ರೀಯ ಕಾರ್ಯಾಗಾರ



ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿಯ ಸ್ಕೂಲ್ ಆಫ್ ಲೈಫ್ ಸೈನ್ಸಸ್ ವಿಭಾಗದಲ್ಲಿ 'ಕ್ಲಾಸ್ ಟು ಕೆರಿಯರ್' ಅಂತರರಾಷ್ಟ್ರೀಯ ಕಾರ್ಯಾಗಾರಕ್ಕೆ ಶನಿವಾರ ಚಾಲನೆ ನೀಡಲಾಯಿತು.

ಮೈಸೂರು, ಸೆ.13(ಎಂಕೆ)– ಮೈಸೂರಿನ ಶಿವರಾತ್ರೀಶ್ವರ ನಗರದಲ್ಲಿರುವ ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿಯ ಸ್ಕೂಲ್ ಆಫ್ ಲೈಫ್ ಸೈನ್ಸಸ್ ವಿಭಾಗದಲ್ಲಿ ತರಬೇತಿ ಮತ್ತು ಪ್ಲೇಸ್‌ಮೆಂಟ್ ಸೆಲ್, ಬಯೋಕೆಮಿಸ್ಟ್ರಿ ವಿಭಾಗ ಹಾಗೂ ಗ್ಲೋಬಲ್ ಅಸೋಸಿಯೇಷನ್ ಆಫ್ ಸೈಂಟಿಫಿಕ್ ಯಂಗ್ ಮೈಂಡ್ಸ್, ಮೈಸೂರು (GASYM) ಸಹಯೋಗದೊಂದಿಗೆ 'ತರಗತಿಯಿಂದ ವೃತ್ತಿಜೀವನಕ್ಕೆ (ಕ್ಲಾಸ್ ಟು ಕೆರಿಯರ್)' ಕುರಿತ ಎರಡು ದಿನಗಳ ಅಂತರರಾಷ್ಟ್ರೀಯ ಕಾರ್ಯಾಗಾರಕ್ಕೆ ಶನಿವಾರ ಚಾಲನೆ ನೀಡಲಾಯಿತು.

ಕಾರ್ಯಾಗಾರ ಉದ್ಘಾಟಿಸಿದ ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿಯ ಕುಲಸಚಿವ ಡಾ.ಬಿ.ಮಂಜುನಾಥ್ ಮಾತನಾಡಿ, ತರಬೇತಿ ಕಾರ್ಯಾಗಾರಗಳಿಂದ ಕೌಶಲ್ಯತೆ ಹಾಗೂ ಸಂಪನ್ಮೂಲ ವ್ಯಕ್ತಿಗಳ ಮೂಲಕ ಜ್ಞಾನ ವೃದ್ಧಿಯಾಗುತ್ತದೆ. ಉನ್ನತ ಸ್ಥಾನಗಳನ್ನು ತಲುಪಲು ಕಾರ್ಯಾಗಾರಗಳು ಉತ್ತಮ ಕಲಿಕಾ ವೇದಿಕೆಯಾಗಿದ್ದು, ಸದ್ಬಳಕೆ ಮಾಡಿಕೊಳ್ಳುವಂತೆ ಸಲಹೆ ನೀಡಿದರು.

ಗ್ಲೋಬಲ್ ಅಸೋಸಿಯೇಷನ್ ಆಫ್ ಸೈಂಟಿಫಿಕ್ ಯಂಗ್ ಮೈಂಡ್ಸ್ ಸಂಸ್ಥಾಪಕ ಅಧ್ಯಕ್ಷ ಡಾ.ಸಿ.ಆರ್.ಸುನೀಲ್‌ಕುಮಾರ್ ಮಾತನಾಡಿ, ಪ್ರಸ್ತುತ ಸ್ಪರ್ಧಾತ್ಮಕ ಕಾಲಘಟ್ಟದಲ್ಲಿ ಕೌಶಲಾಧಾರಿತ ತರಬೇತಿ ಕಾರ್ಯಾಗಾರಗಳು ವಿದ್ಯಾರ್ಥಿಗಳ ಕೆರಿಯರ್ ಬಿಲ್ಡ್‌ಗೆ ಅವಶ್ಯವಾಗಿದ್ದು, ಆತ್ಮವಿಶ್ವಾಸ ತುಂಬುವ ಮಾತುಗಳು ವಿದ್ಯಾರ್ಥಿಗಳ ಮೇಲೆ ಪರಿಣಾಮ ಬೀರಲಿದೆ. ಅದರಂತೆ ವಿದ್ಯಾರ್ಥಿಗಳು ಕೂಡ ಕಾರ್ಯಾಗಾರಗಳ ಸದ್ಬಳಕೆ ಮಾಡಿಕೊಳ್ಳಬೇಕು ಎಂದು ಸಲಹೆ ನೀಡಿದರು. ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿ ಡೀನ್ ಡಾ.ಕೆ.ಎ.ರವೀಶ್, ಗ್ಲೋಬಲ್ ಕಸ್ಟಮರ್ ಆಪರೇಷನ್ ಲ್ಯಾಬ್‌ಕ್ರಾಪ್ ನಿರ್ದೇಶಕಿ ವಿದ್ಯಾ ನವಿಲೆ, ಡಾ.ಕೆ.ಸುಮನ ಮತ್ತಿತರರಿದ್ದರು.

ಹೆಚ್.ಡಿ.ಕೋಟೆ ರಸ್ತೆಯಲ್ಲಿ ದೀಪಾಲಂಕಾರಕ್ಕೆ ಆಗ್ರಹ

ಮೈಸೂರು, ಸೆ.13(ಎಂಕೆ)– ನಾಡಹಬ್ಬ ಮೈಸೂರು ದಸರಾ ಹಿನ್ನೆಲೆಯಲ್ಲಿ ನಗರದೆಲ್ಲೆಡೆ ವಿದ್ಯುತ್ ದೀಪಾಲಂಕಾರ ಮಾಡಲಾಗುತ್ತಿದ್ದು, ಪ್ರತೀ ವರ್ಷದಂತೆಯೇ ಈ ವರ್ಷವೂ ಮೈಸೂರು–ಹೆಚ್.ಡಿ.ಕೋಟೆ ರಸ್ತೆಗೆ ವಿದ್ಯುತ್ ದೀಪಾಲಂಕಾರ ಮಾಡದೆ ನಿರ್ಲಕ್ಷಿಸಲಾಗುತ್ತಿದೆ ಎಂದು ಸ್ಥಳೀಯ ನಿವಾಸಿಗಳು ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ಮೈಸೂರು ನಗರ, ಮೈಸೂರು–ಹುಣಸೂರು ರಸ್ತೆ, ಮೈಸೂರು–ಬೆಂಗಳೂರು ರಸ್ತೆ, ಟಿ.ನರಸೀಪುರ, ಬನ್ನೂರು, ನಂಜನಗೂಡು ರಸ್ತೆ ಮಾರ್ಗವಾಗಿ ರಿಂಗ್ ರಸ್ತೆವರೆಗೂ ದಸರಾ ವಿದ್ಯುತ್ ದೀಪಾಲಂಕಾರ ಇರಲಿದ್ದು, ಹೆಚ್.ಡಿ.ಕೋಟೆ ರಸ್ತೆಗೆ ಮಾತ್ರ ಪ್ರತೀ ವರ್ಷ ವಿದ್ಯುತ್ ದೀಪಾಲಂಕಾರದಿಂದ ವಂಚಿಸಲಾಗುತ್ತಿದೆ ಎಂದು ಬೇಸರ ವ್ಯಕ್ತಪಡಿಸಿದ್ದಾರೆ.

ಮೈಸೂರು–ಹೆಚ್.ಡಿ.ಕೋಟೆ ಮಾರ್ಗದ ನಂಜುಮಳಿಗೆ, ಸಿಲ್ಕ್ ಫ್ಯಾಕ್ಟರಿ ಸರ್ಕಲ್ ವರೆಗೆ ಮಾತ್ರ ವಿದ್ಯುತ್ ದೀಪಾ ಲಂಕಾರವಿಲಿದೆ. ಶ್ರೀರಾಂಪುರ ಜಂಕ್ಷನ್‌ನಲ್ಲಿ ವಿದ್ಯುತ್ ದೀಪಾಲಂಕಾರ ಇರಲಿದ್ದು, ಸಿಲ್ಕ್ ಫ್ಯಾಕ್ಟರಿಯಿಂದ ರಿಂಗ್ ರಸ್ತೆ ಜಂಕ್ಷನ್ ವರೆಗೆ ವಿದ್ಯುತ್ ದೀಪಾಲಂಕಾರವಿರಲಿ. ಸರಿಯಾಗಿ ಬೀದಿದೀಪಗಳು ಬೆಳಗುತಿಲ್ಲ. ಸಿಲ್ಕ್ ಫ್ಯಾಕ್ಟರಿ ಸರ್ಕಲ್‌ನಿಂದ ಶ್ರೀರಾಂಪುರ –ರಿಂಗ್‌ರೋಡ್ ಜಂಕ್ಷನ್‌ವರೆಗಿನ ಮೂರ್‍ನಾಲ್ಕು ಕಿಲೋಮೀಟರ್ ರಸ್ತೆ ಬಿಕೋ ಎನ್ನುತ್ತಿರುತ್ತದೆ ಎಂದಿದ್ದಾರೆ.

ಮೈಸೂರು ದಸರಾ ವಿದ್ಯುತ್ ದೀಪಾಲಂಕಾರ ರಿಂಗ್ ರಸ್ತೆಯೊಳಗಿನ ನಗರದೆಲ್ಲೆಡೆಯ ಪ್ರಮುಖ ರಸ್ತೆಗಳಲ್ಲಿಯೂ ಇರಬೇಕು. ಆದರೆ, ಎಲ್ಲಾ ರಸ್ತೆಗಳಿಗೆ ವಿದ್ಯುತ್ ದೀಪಾಲಂಕಾರ ಮಾಡಿ, ಹೆಚ್.ಡಿ.ಕೋಟೆ ಮಾರ್ಗದ ರಸ್ತೆಯಲ್ಲಿ ಮಾತ್ರ ಅರ್ಧಂಬರ್ಧ ಮಾಡುತ್ತಿರುವುದೇಕೆ ಎಂದು ಪ್ರಶ್ನಿಸಿದ್ದಾರಲ್ಲದೆ ರಿಂಗ್ ರಸ್ತೆ ಜಂಕ್ಷನ್‌ವರೆಗೂ ವಿದ್ಯುತ್ ದೀಪಾಲಂಕಾರ ಮಾಡುವಂತೆ ಆಗ್ರಹಿಸಿದ್ದಾರೆ.

ಸಾಧಕ ಶಿಕ್ಷಕರಿಗೆ 'ಡಾ.ಸರ್ವಪಲ್ಲಿ ರಾಧಾಕೃಷ್ಣನ್ ಪ್ರಶಸ್ತಿ' ಪ್ರದಾನ



ಮೈಸೂರು ಕನ್ನಡ ವೇದಿಕೆ ವತಿಯಿಂದ ಸಾಧಕ ಶಿಕ್ಷಕರಿಗೆ 'ಡಾ.ಸರ್ವಪಲ್ಲಿ ರಾಧಾಕೃಷ್ಣನ್ ಪ್ರಶಸ್ತಿ' ನೀಡಿ ಅಭಿನಂದಿಸಲಾಯಿತು.

ಮೈಸೂರು, ಸೆ.13(ಎಂಕೆ)– ಶಿಕ್ಷಕರ ದಿನಾಚರಣೆ ಅಂಗವಾಗಿ ಮೈಸೂರು ಕನ್ನಡ ವೇದಿಕೆ ವತಿಯಿಂದ ಸಾಧಕ ಶಿಕ್ಷಕರಿಗೆ 'ಡಾ.ಸರ್ವಪಲ್ಲಿ ರಾಧಾಕೃಷ್ಣನ್ ಪ್ರಶಸ್ತಿ' ನೀಡಿ ಅಭಿನಂದಿಸಲಾಯಿತು.

ಮೈಸೂರಿನ ಕೃಷ್ಣಮೂರ್ತಿಪುರಂನಲ್ಲಿರುವ ನಮನ ಕಲಾಮಂಟಪದಲ್ಲಿ ಆಯೋಜಿಸಿದ್ದ ಶಿಕ್ಷಕರ ದಿನಾಚರಣೆಯಲ್ಲಿ ಶಿಕ್ಷಕರಾದ ಬಸವರಾಜೇಂದ್ರ ಸ್ವಾಮಿ, ಎನ್.ಆರ್.ಸುಮ, ಎ.ನಾರಾಯಣ ರಾವ್, ಡಾ.ಟಿ.ಅನಿತಾ, ಪ್ರತಿಭಾ, ಸಿ.ಎಲ್.ಶರ್ಮಿಳಾ, ಎಂ.ಎ.ಸವಿತಾ, ಗ್ರೀಷ್ಮ ಪ್ರಸನ್ನ ಹಾಗೂ ಎಸ್.ಸುಪ್ರಿಯಾ ಅವರಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಸಂಧ್ಯಾ ಸುರಕ್ಷಾ ಟ್ರಸ್ಟ್ ಅಧ್ಯಕ್ಷ ನಟರಾಜ ಜೋಯಿಸ್, ಮನೆಯಲ್ಲಿ ತಾಯಿ–ತಂದೆ ನಮಗೆ ಮಾರ್ಗದರ್ಶನ ನೀಡಿದರೆ, ಶಾಲೆಯಲ್ಲಿ ಶಿಕ್ಷಕರು ನಮ್ಮ ತಪ್ಪುಗಳನ್ನು ತಿದ್ದಿ, ಕಲಿಸುತ್ತಾರೆ. ಹಾಗಾಗಿ ನಮ್ಮ ಜೀವನದಲ್ಲಿನ ಈ ಮೂವರು ಗುರುಗಳನ್ನು ಅತ್ಯಂತ ಗೌರವದಿಂದ ಕಾಣಬೇಕು. ಸಮಾಜದಲ್ಲಿ ಒಳಿತು–ಕೆಡುಕು ಎರಡೂ ಇದ್ದು, ಅವುಗಳಲ್ಲಿ ನಮ್ಮ ಆಯ್ಕೆ ಒಳಿತಾಗಿರಬೇಕು. ಇದಕ್ಕೆ ಶಿಕ್ಷಕರ ಮಾರ್ಗದರ್ಶನ ಅತ್ಯವಶ್ಯ. ಶಿಕ್ಷಣದಿಂದ ಮಾತ್ರವೇ ಜಗತ್ತಿನ ಉದ್ಧಾರ ಸಾಧ್ಯ ಎಂದರು.

ಶ್ರೀ ಮಲೆಮಹದೇಶ್ವರ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಎ.ಈ.ರಘು ಮಾತನಾಡಿ, ಎಲ್ಲರೂ ಸರ್ಕಾರಿ ಹುದ್ದೆ, ಸರ್ಕಾರಿ ಸೌಲಭ್ಯಗಳನ್ನು ಬಯಸುತ್ತಾರೆ. ಆದರೆ, ತಮ್ಮ ಮನೆಯ ಪಕ್ಕದಲ್ಲೇ ಇರುವ ಸರ್ಕಾರಿ ಶಾಲೆಗೆ ಮಾತ್ರ ತಮ್ಮ ಮಕ್ಕಳನ್ನು ಸೇರಿಸುವುದಕ್ಕೆ ಹಿಂದೆ ಮುಂದೆ ನೋಡುತ್ತಾರೆ. ಇದರಿಂದಾಗಿ ನಗರ ಪ್ರದೇಶದ ಸರ್ಕಾರಿ ಶಾಲೆಗಳಲ್ಲಿ ಮಕ್ಕಳ ಸಂಖ್ಯೆ ಕಡಿಮೆ ಇದ್ದರೆ, ಶಿಕ್ಷಕರ ಸಂಖ್ಯೆ ಜಾಸ್ತಿ. ಅದೇ ಗ್ರಾಮೀಣ ಭಾಗದಲ್ಲಿ ಮಕ್ಕಳ ಸಂಖ್ಯೆ ಜಾಸ್ತಿ ಇದ್ದು, ಶಿಕ್ಷಕರ ಸಂಖ್ಯೆ ಕೊರತೆ ಕಾಣುತ್ತಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಇದೇ ವೇಳೆ ಹಿರಿಯ ಹೋರಾಟಗಾರ ಚಿಕ್ಕಲ್ಲೂರು ಮಂಜೇಗೌಡರನ್ನು ಸನ್ಮಾನಿಸಲಾಯಿತು. ದಂತ ವೈದ್ಯ ಡಾ.ಲೋಕೇಶ್, ಜಿಲ್ಲಾ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಉಪಾಧ್ಯಕ್ಷ ಸಾಲುಂಡಿ ದೊರೆಸ್ವಾಮಿ, ಮೈಸೂರು ಕನ್ನಡ ವೇದಿಕೆ ಅಧ್ಯಕ್ಷ ಎಸ್.ಬಾಲಕೃಷ್ಣ, ನಾಲಾಬೀದಿ ರವಿ ಮತ್ತಿತರರಿದ್ದರು.

ಜೆಎಸ್‌ಎಸ್ ಅರ್ಬನ್ ಹಾತ್‌ನಲ್ಲಿ ಗಾಂಧಿಶಿಲ್ಪ ಬಜಾರ್ ಮೇಳ ಆರಂಭ

ಶಾಸಕ ಟಿ.ಎಸ್.ಶ್ರೀವತ್ಸ ಚಾಲನೆ



'ಗಾಂಧಿ ಶಿಲ್ಪ ಬಜಾರ್ 148ನೇ ಮೇಳದಲ್ಲಿ ಶಾಸಕ ಟಿ.ಎಸ್.ಶ್ರೀವತ್ಸ ವಿವಿಧ ಮಳಿಗೆಗಳಿಗೆ ಭೇಟಿ ನೀಡಿ, ಸಾಮಗ್ರಿಗಳ ವಿವರಣೆ ಪಡೆದರು.

ಮೈಸೂರು, ಸೆ.13(ಎಸ್‌ಪಿಎನ್)– ರಾಜ್ಯ ಮತ್ತು ರಾಷ್ಟ್ರ ಪ್ರಶಸ್ತಿ ಪುರಸ್ಕೃತ ಕುಶಲಕರ್ಮಿಗಳ ನೇತೃತ್ವದಲ್ಲಿ ಆಯೋಜಿಸಿರುವ ರಾಷ್ಟ್ರಮಟ್ಟದ ಹತ್ತು ದಿನಗಳ 'ಗಾಂಧಿ ಶಿಲ್ಪ ಬಜಾರ್ ಮೇಳ'ಕ್ಕೆ ಶಾಸಕ ಟಿ.ಎಸ್.ಶ್ರೀವತ್ಸ ಚಾಲನೆ ನೀಡಿದರು.

ಮೈಸೂರು ಹೆಬ್ಬಾಳ ಕೈಗಾರಿಕಾ ಪ್ರದೇಶದಲ್ಲಿರುವ ಮೈಸೂರು ಜೆಎಸ್‌ಎಸ್ ಅರ್ಬನ್ ಹಾತ್‌ನಲ್ಲಿ ಭಾರತ ಸರ್ಕಾರದ ಜವಳಿ ಸಚಿವಾಲಯದ ಅಭಿವೃದ್ಧಿ ಆಯುಕ್ತರ ಕಚೇರಿ(ಕರಕುಶಲ), ಜೆಎಸ್‌ಎಸ್ ಮಹಾವಿದ್ಯಾಪೀಠದ ಸಹಯೋಗದೊಂದಿಗೆ ಶುಕ್ರವಾರದಿಂದ ಸೆ.21ರವರೆಗೆ ಆಯೋಜಿಸಿರುವ ರಾಷ್ಟ್ರಮಟ್ಟದ 'ಗಾಂಧಿ ಶಿಲ್ಪ ಬಜಾರ್ 148ನೇ ಮೇಳ'ಕ್ಕೆ ಚಾಲನೆ ನೀಡಿದರು.

ಬಳಿಕ ಶಾಸಕ ಟಿ.ಎಸ್.ಶ್ರೀವತ್ಸ ಮಾತನಾಡಿ, ಈ ಮೇಳದಲ್ಲಿ ವಿವಿಧ ರಾಜ್ಯಗಳ 150ಕ್ಕೂ ಹೆಚ್ಚು ಕುಶಲಕರ್ಮಿಗಳು ಗಾಂಧಿ ಶಿಲ್ಪ ಬಜಾರ್‌ನಲ್ಲಿ ಭಾಗವಹಿಸಿದ್ದಾರೆ. ಜೆಎಸ್‌ಎಸ್ ಮೈಸೂರು ಅರ್ಬನ್ ಹಾತ್ ಆವರಣದಲ್ಲಿ ಈವರೆಗೆ 147 ಮೇಳಗಳು ಯಶಸ್ವಿಯಾಗಿವೆ. ಈ ಬಾರಿಯ 148ನೇ ಮೇಳವನ್ನು ಬಹಳ ಅಚ್ಚುಕಟ್ಟಾಗಿ ಆಯೋಜನೆ ಮಾಡಲಾಗಿದೆ ಎಂದರು.

ದೇಶದ 25ಕ್ಕೂ ಹೆಚ್ಚು ರಾಜ್ಯಗಳ ರಾಷ್ಟ್ರ ಮತ್ತು ರಾಜ್ಯ ಪ್ರಶಸ್ತಿ ಪುರಸ್ಕೃತ ಕರಕುಶಲ ಕರ್ಮಿಗಳು ಹಾಗೂ ಕೈಮಗ್ಗ ನೇಕಾರರು, ಕರಕುಶಲ ಮತ್ತು ಕೈಮಗ್ಗ ಉತ್ಪನ್ನಗಳು ಒಂದೇ ಸೂರಿನಡಿಯಲ್ಲಿ ಮೈಸೂರಿನ ಗ್ರಾಹಕರಿಗೆ ಲಭ್ಯವಾಗುವಂತೆ ಪ್ರದರ್ಶನ ಮತ್ತು ಮಾರಾಟಕ್ಕೆ ವ್ಯವಸ್ಥೆ ಕಲ್ಪಿಸಲಾಗಿದೆ. ಗ್ರಾಹಕರ ಅಗತ್ಯತೆ ಮತ್ತು ಅಭಿರುಚಿಯನ್ನು ತಿಳಿದುಕೊಂಡಿರುವ ಕುಶಲ ಕರ್ಮಿಗಳು, ಮಾರುಕಟ್ಟೆಗೆ ಬೇಕಾದ ನವೀನ ವಿನ್ಯಾಸದ ವಸ್ತುಗಳನ್ನು ರೂಪಿಸಿಕೊಳ್ಳಲು ಈ ಮೇಳ ಸಹಕಾರಿಯಾಗಲಿದೆ ಎಂದರು.

ಈ ಮೇಳದಲ್ಲಿ ಮರದಿಂದ ಕೆತ್ತಿದ ಶಿಲ್ಪಗಳು, ಶಿಲಾ ಶಿಲ್ಪ, ಕಂಚಿನ ವಿಗ್ರಹಗಳು, ಮರದ ಕುಂದಣ ಕಲೆ, ಮಣ್ಣಿನ ಮಡಿಕೆಗಳು, ಪೇಪರ್, ರತ್ನಗಂಬಳಿ, ಹತ್ತಿ ಜಮಖಾನ, ಇಮಿಟೇಶನ್ ಆಭರಣಗಳು, ಮರದ ಅರಗಿನ ಕಲಾವಸ್ತುಗಳು, ಬಾಟಿಕ್, ಕಲಾಂಕಾರಿ ಚಿತ್ರಕಲೆ, ಚರ್ಮದ ಆಕರ್ಷಕ ವಸ್ತುಗಳು, ಕಲಾತ್ಮಕ ಚರ್ಮದ ಚಪ್ಪಲಿಗಳು, ಚನ್ನಪಟ್ಟಣದ ಗೊಂಬೆಗಳು, ಕಸೂತಿ ಕಲೆ, ಉತ್ತರಪ್ರದೇಶ ರಾಜ್ಯದ ಚಿಕನ್ ಎಂಬ್ರಾಯಿಡರಿ ಕಲಾತ್ಮಕ ಕಲ್ಲಿನ ವಸ್ತುಗಳು, ಪಂಜಾಬ್ ರಾಜ್ಯದ ಫುಲ್ಕಾರಿ ಬಟ್ಟೆಗಳು, ಪಶ್ಚಿಮಬಂಗಾಳದ ಕಾಂತಾ ಸೀರೆಗಳು ಈ ಮೇಳದಲ್ಲಿ ಗ್ರಾಹಕರಿಗೆ ಒಂದೇ ಸೂರಿನಡಿ ಖರೀದಿಗೆ ಸಿಗಲಿದೆ ಎಂದರು.

ಇದೇ ಪ್ರಥಮ ಬಾರಿಗೆ ಈ ಮೇಳದ 10 ದಿನಗಳಲ್ಲಿ ಜೆಎಸ್‌ಎಸ್ ಆಸ್ಪತ್ರೆ ವತಿಯಿಂದ ಕರಕುಶಲಕರ್ಮಿಗಳಿಗೆ, ಕೈಮಗ್ಗ ನೇಕಾರರಿಗೆ ಮತ್ತು ಮೇಳಕ್ಕೆ ಭೇಟಿ ನೀಡುವ ಗ್ರಾಹಕರಿಗೆ ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನೂ ಆಯೋಜಿಸಿರುವುದು ವಿಶೇಷವಾಗಿದ್ದು, ಇದರ ಪ್ರಯೋಜನ ಪಡೆಯುವಂತೆ ಗ್ರಾಹಕರಲ್ಲಿ ಮನವಿ ಮಾಡಿದರು.

ಈ ಮೇಳಕ್ಕೆ ಪ್ರತಿ ದಿನ ಬೆಳಗ್ಗೆ 10.30ರಿಂದ ರಾತ್ರಿ 9ಗಂಟೆಯವರೆಗೆ ಉಚಿತ ಪ್ರವೇಶವಿದೆ. ಇದರ ಸದುಪಯೋಗ ಪಡಿಸಿಕೊಳ್ಳುವಂತೆ ಮೈಸೂರಿನ ಗ್ರಾಹಕರಲ್ಲಿ ಮನವಿ ಮಾಡಿದರು. ಈ ವೇಳೆ ಚೆನ್ನೈನ ಜವಳಿ ಮಂತ್ರಾಲಯದ ಅಭಿವೃದ್ಧಿ ಆಯುಕ್ತರ ಕಚೇರಿಯ ಉಪನಿರ್ದೇಶಕ ಕೆ.ಧನರಾಜನ್, ಮೈಸೂರು ಕರಕುಶಲ ಸೇವಾ ಕೇಂದ್ರದ ಸಹಾಯಕ ನಿರ್ದೇಶಕ ಎಸ್.ವಿನೋದ್ ಕುಮಾರ್, ಮೈಸೂರು ಜೆಎಸ್‌ಎಸ್ ಅರ್ಬನ್ ಹಾತ್ ಯೋಜನಾಧಿಕಾರಿ ಎಂ.ಶಿವನಂಜಸ್ವಾಮಿ, ಸಾಬೀರ, ಕರಕುಶಲ ಸೇವಾಕೇಂದ್ರದ ಸ್ವದೇಶಗಾರ ಸೇರಿದಂತೆ ಇತರರಿದ್ದರು.

ಗುರುಗಳನ್ನು ಸನ್ಮಾನಿಸಲು ಬಂದ ಶಿಷ್ಯನ ಸನ್ಮಾನಿಸಿ ವಿನೂತನ ರೀತಿ ಶಿಕ್ಷಕರ ದಿನಾಚರಣೆ



ಶಿಷ್ಯನಿಗೆ ಸನ್ಮಾನಿಸುವ ಮೂಲಕ ಶಿಕ್ಷಕರ ದಿನವನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು.

ಮೈಸೂರು,ಸೆ.13–ತನ್ನ ಯಶಸ್ಸಿಗೆ ಕಾರಣರಾದ ಗುರುಗಳನ್ನು ಅಭಿನಂದಿಸಲು ಬಂದ ಶಿಷ್ಯನಿಗೆ ಗುರುಗಳೇ ಸನ್ಮಾನಿಸುವ ಮೂಲಕ ಶಿಕ್ಷಕರ ದಿನಾಚರಣೆಯನ್ನು ಅರ್ಥಪೂರ್ಣಗೊಳಿಸಿದ ಅಪರೂಪದ ಪ್ರಸಂಗವೊಂದು ಎನ್.ಆರ್.ಮೊಹಲ್ಲಾದ ಸರ್ಕಾರಿ ಐಟಿಐ ಕಾಲೇಜಿನಲ್ಲಿ ಸಂಭವಿಸಿದೆ.

ಹೆಚ್.ಡಿ.ಕೋಟೆಯ ಲಿಂಗರಾಜು ಗುರುಗಳನ್ನು ಸನ್ಮಾನಿಸಲು ಬಂದು ತಾನೇ ಸನ್ಮಾನಿತನಾದ ವಿದ್ಯಾರ್ಥಿ.

ತಾನು ಓದಿದ ಹಾಗೂ ಯಶಸ್ವಿ ವ್ಯಕ್ತಿಯಾಗಲು ಮತ್ತು ಉದ್ಯಮಿಯಾಗಿ ಸಾವಿರಾರು ಜನರಿಗೆ ಕೆಲಸ ನೀಡಲು ಕಾರಣವಾದ ಐಟಿಐ ಕಾಲೇಜಿಗೆ ಮತ್ತು ಇಲ್ಲಿನ ಶಿಕ್ಷಕರಿಗೆ ಧನ್ಯವಾದ ತಿಳಿಸಲು ಈತ ತಾನು ಓದಿದ ಸರ್ಕಾರಿ ಐಟಿಐ ಕಾಲೇಜಿಗೆ ಬಂದಿದ್ದ ಲಿಂಗರಾಜು ಹೆಚ್.ಡಿ.ಕೋಟೆ ಅವರನ್ನು ನೂರಾರು ಮಕ್ಕಳ ಮುಂದೆ ಸನ್ಮಾನಿಸಿ, ಐಟಿಐ ಮಾಡುವುದರಿಂದ ಆಗುವ ಲಾಭಗಳು ಮತ್ತು ಸಾಧನೆಗಳನ್ನು ರಾಜ್ಯ ಪ್ರಶಸ್ತಿ ಪುರಸ್ಕೃತ ಎನ್‌ಎಸ್‌ಎಸ್ ಅಧಿಕಾರಿ ಹಾಗೂ ತರಬೇತಿ ಅಧಿಕಾರಿಯಾದ ಜಿ.ರವಿಶಂಕರ್ ಅವರು ತಿಳಿಸಿ, ನೂರಾರು ವಿದ್ಯಾರ್ಥಿಗಳಿಗೆ ಐಟಿಐ ಮಾಡಲು ಪ್ರೇರಣೆ ಆಗುವಂತೆ ಮಾತನಾಡಿದರು.

ಇಲ್ಲಿನ ಉಪಪ್ರಾಚಾರ್ಯರಾದ ಬೋಪಯ್ಯ ಅವರು ಐಟಿಐಗಳಲ್ಲಿ ಶಿಸ್ತು ಪಾಲನೆ ಮಾಡಿದರೆ 2 ವರ್ಷದ ನಂತರ ಜೀವನಕ್ಕೆ ಖಂಡಿತ ದಾರಿ ಆಗುತ್ತದೆ ಎಂದು ಹತ್ತಾರು ಉದಾಹರಣೆ ನೀಡಿ ತಿಳಿಸಿಕೊಟ್ಟರು.

ಸನ್ಮಾನ ಸ್ವೀಕರಿಸಿ ಮಾತನಾಡಿದ ಲಿಂಗರಾಜು, ನಾನು ಪಿಯುಸಿ, ಡಿಗ್ರಿ ಮಾಡಿ ಐಟಿಐಗೆ ಸೇರಿದ್ದೆ. ಈ ಐಟಿಐ ಮಾಡಿದ್ದರಿಂದಲೇ ನನಗೆ ಜಾಸ್ತಿ ಅನುಕೂಲ ಆಯಿತು ಎಂಬುದನ್ನು ಈ ಸಂದರ್ಭದಲ್ಲಿ ತಿಳಿಸಿಕೊಟ್ಟರು, ಸಂಸ್ಥೆಯ ಮತ್ತೊಬ್ಬ ಅಧಿಕಾರಿಯಾದ ಮಂಜು ಅವರು ಸ್ವಾಗತಿಸಿದರು ಮತ್ತು ಕುಮಾರ್ ವಂದಿಸಿದರು.

ಮಾದಪ್ಪನ ದರ್ಶನಕ್ಕೆ ತಿರುಪತಿ ಮಾದರಿ ವ್ಯವಸ್ಥೆ

ಚಾಮರಾಜನಗರ: ಮಲೆ ಮಹದೇಶ್ವರ ಬೆಟ್ಟಕ್ಕೆ ದಿನೇ ದಿನೇ ಭಕ್ತರ ಸಂಖ್ಯೆ ಹೆಚ್ಚಾಗುತ್ತಿದೆ. ಮಹದೇಶ್ವರನ ದರ್ಶನಕ್ಕಾಗಿ ಭಕ್ತರು ಗಂಟೆಗಟ್ಟಲೇ ಸರತಿ ಸಾಲಿನಲ್ಲಿ ನಿಲ್ಲಬೇಕಾದ ಪರಿಸ್ಥಿತಿ ಉಂಟಾಗುತ್ತಿದೆ. ಹಾಗಾಗಿ, ಭಕ್ತರು ಸುಗಮವಾಗಿ ಮಹದೇಶ್ವರನ ದರ್ಶನ ಪಡೆಯಲು ಅನುಕೂಲವಾಗುವಂತೆ ತಿರುಪತಿ ಮಾದರಿಯಲ್ಲಿ ಕ್ಯೂ ಕಾಂಪ್ಲೆಕ್ಸ್ ನಿರ್ಮಾಣ ಮಾಡಲಾಗುತ್ತಿದೆ.

ಮಲೆ ಮಹದೇಶ್ವರ ಬೆಟ್ಟ ದಕ್ಷಿಣ ಭಾರತದ ಪ್ರಮುಖ ಯಾತ್ರಾ ಸ್ಥಳ. ಕೋಟ್ಯಂತರ ಭಕ್ತರ ಆರಾಧ್ಯ ದೈವ ಮಲೆ ಮಹದೇಶ್ವರನ ಸನ್ನಿಧಿಗೆ ನಿತ್ಯ ಸಾವಿರಾರು ಭಕ್ತರು ಬರುತ್ತಿದ್ದಾರೆ. ಅದರಲ್ಲೂ ಅಮಾವಾಸ್ಯೆ, ಜಾತ್ರೆ ಹಾಗೂ ರಜಾದಿನಗಳಲ್ಲಿ ಭಕ್ತರ ಸಂಖ್ಯೆ ಲಕ್ಷ ದಾಟುತ್ತದೆ. ಶಕ್ತಿ ಯೋಜನೆ ಜಾರಿಯಾದ ನಂತರ ಭಕ್ತರು ಸಂಖ್ಯೆ ಮತ್ತಷ್ಟು ಹೆಚ್ಚಾಗಿದ್ದು, ಮಹದೇಶ್ವರನ ದರ್ಶನ ಪಡೆಯಲು ಭಕ್ತರು ಗಂಟೆಗಟ್ಟಲೆ ಸರತಿ ಸಾಲಿನಲ್ಲಿ



ನಿಲ್ಲಬೇಕಾದ ಪರಿಸ್ಥಿತಿ ಇದೆ. ಹಾಗಾಗಿ, ಭಕ್ತರು ಸುಗಮ ಹಾಗೂ ಬೇಗ ಮಹದೇಶ್ವರನ ದರ್ಶನ ಪಡೆಯಲು ಅನುಕೂಲವಾಗುವಂತೆ ತಿರುಪತಿ ಮಾದರಿಯಲ್ಲಿ ಕ್ಯೂ ಕಾಂಪ್ಲೆಕ್ಸ್ ನಿರ್ಮಿಸಲಾಗುತ್ತಿದೆ. ಈ ಕಾಂಪ್ಲೆಕ್ಸ್‌ಗಳಲ್ಲಿ ಭಕ್ತರು ಕುಳಿತುಕೊಳ್ಳಲು ಆಸನ ವ್ಯವಸ್ಥೆ, ಕುಡಿಯುವ ನೀರಿನ ಸೌಲಭ್ಯ, ಉಪಾಹಾರ, ಮಕ್ಕಳ ಆರೈಕೆ ಕೇಂದ್ರ ಮೊದಲಾದ ಸೌಲಭ್ಯಗಳನ್ನು ಒಳಗೊಂಡಿದೆ.

ಬೆಟ್ಟಕ್ಕೆ ಬರುವ ಭಕ್ತರು ಮಹದೇಶ್ವರನ ದರ್ಶನ ಪಡೆಯಲು ಮೊದಲೇ ಸಮಯ ನಿಗದಿ ಮಾಡಲು ಸಹ ನಿರ್ಧರಿಸಲಾಗಿದೆ. ಇದರಿಂದ ಭಕ್ತರು ದೇವಸ್ಥಾನ ಆವರಣದಲ್ಲಿ ಅನವಶ್ಯಕವಾಗಿ ಕಾಯುವುದು ತಪ್ಪಲಿದೆ. ಕ್ಯೂ ಕಾಂಪ್ಲೆಕ್ಸ್ ಅಲ್ಲದೇ ಒಂದೇ ಬಾರಿಗೆ 4 ಸಾವಿರ ಮಂದಿ ಕುಳಿತು ಭೋಜನ ಮಾಡುವ ಸುಸಜ್ಜಿತ ದಾಸೋಹ ಭವನವನ್ನು ನಿರ್ಮಿಸಲಾಗುತ್ತಿದೆ.

ಎಲ್ಲವೂ ಅಂದುಕೊಂಡಂತೆ ಆದರೆ ಮೂರು ತಿಂಗಳ ಒಳಗೆ ತಿರುಪತಿ ಮಾದರಿ ಕ್ಯೂ ಕಾಂಪ್ಲೆಕ್ಸ್ ಹಾಗೂ ಸುಸಜ್ಜಿತ ದಾಸೋಹ ಭವನ ನಿರ್ಮಾಣ ಕಾಮಗಾರಿ ಮುಗಿಯಲಿದೆ. ಇದೇ ವೇಳೆ, ಕಾಲ್ನಡಿಗೆಯಲ್ಲಿ ಬರುವ ಭಕ್ತರಿಗೆ ಬೆಟ್ಟದಿಂದ ಮಹದೇಶ್ವರ ಬೆಟ್ಟದವರೆಗೆ ತಿರುಪತಿ ಮಾದರಿ ಮೆಟ್ಟಿಲು ನಿರ್ಮಾಣ ಕಾಮಗಾರಿಯು ಪೂರ್ಣಗೊಳ್ಳುವ ನಿರೀಕ್ಷೆಯಿದೆ.

ಮಹಿಳೆಯ ಅನ್ನನಾಳ ಸಮಸ್ಯೆಗೆ ಯಶಸ್ವಿ ಅತ್ಯಾಧುನಿಕ ಎಂಡೋಸ್ಕೋಪಿಕ್ ಚಿಕಿತ್ಸೆ; ಗೋಪಾಲಗೌಡ ಶಾಂತವೇರಿ ಆಸ್ಪತ್ರೆ ಹೆಗ್ಗಳಿಕೆ



ಮೈಸೂರು, ಸೆ.13– ಅನ್ನನಾಳಕ್ಕೆ ಸಂಬಂಧಿಸಿದ ಅಪರೂಪದ ಸಮಸ್ಯೆಯಿಂದ ಬಳಲುತ್ತಿದ್ದ ಮಹಿಳೆಗೆ, ಮೈಸೂರಿನ ಗೋಪಾಲಗೌಡ ಶಾಂತವೇರಿ ಮೆಮೋರಿಯಲ್ ಆಸ್ಪತ್ರೆ ಯಲ್ಲಿ ಅತ್ಯಾಧುನಿಕ ಎಂಡೋಸ್ಕೋಪಿಕ್ ಚಿಕಿತ್ಸೆ ನೀಡಿ, ಗುಣಪಡಿಸಲಾಗಿದೆ.

ಸುಮಾರು ಎರಡು ವರ್ಷಗಳಿಂದ ನಿರಂತರ ಕೆಮ್ಮು, ವಾಂತಿ ಹಾಗೂ ಅನ್ನನಾಳದಲ್ಲಿ ಹಿಮ್ಮುಖ ಹರಿವು(ರಿಗರ್ಗಿಟೇಶನ್) ಸಮಸ್ಯೆಯಿಂದ ಬಳಲುತ್ತಿದ್ದ ಮಧ್ಯ ವಯಸ್ಕ ಮಹಿಳೆಯೊಬ್ಬರು ಇತ್ತೀಚೆಗೆ ಗೋಪಾಲಗೌಡ ಶಾಂತವೇರಿ ಆಸ್ಪತ್ರೆಗೆ ಚಿಕಿತ್ಸೆಗೆ ಭೇಟಿ ನೀಡಿದ್ದರು. ಸಾಮಾನ್ಯ ವೈದ್ಯಕೀಯ ಪರೀಕ್ಷೆಯ ಬಳಿಕ ಅವರನ್ನು ಅಪ್ಪರ್ ಜಿಐ ಎಂಡೋಸ್ಕೋಪಿಕ್‌ಗೆ ಒಳಪಡಿಸಿದಾಗ ಅನ್ನನಾಳದಲ್ಲಿ ಅಪರೂಪದ ಚಲನಶೀಲ ಅಕ್ಯಾಲೇಶಿಯಾ ಕಾರ್ಡಿಯಾ ಸಮಸ್ಯೆ ಪತ್ತೆಯಾಯಿತು. ನಂತರ ಅವರಿಗೆ ಅತ್ಯಾಧುನಿಕ ತೃತೀಯ ಅಂತರ ಎಂಡೋಸ್ಕೋಪಿ ವಿಧಾನವೆಂದು ಪರಿಗಣಿಸಿರುವ ಪರ್ ಓರಲ್ ಎಂಡೋಸ್ಕೋಪಿಕ್ ಮೈಯೊಟೊಮಿ(ಪಿಒಇಎಂ) ಮೂಲಕ ಚಿಕಿತ್ಸೆ ನೀಡಲಾಯಿತು. ಆಸ್ಪತ್ರೆಯ ಗ್ಯಾಸ್ಟ್ರೋ ಎಂಟರಾಲಜಿಸ್ಟ್ ಮತ್ತು ಹೆಪಟಾಲಜಿಸ್ಟ್ ಡಾ.ಟಿ.ಆರ್. ವಿಜಯ್ ಕುಮಾರ್ ನೇತೃತ್ವದ ತಂಡವು ಅತ್ಯಾಧುನಿಕ ಪಿಒಇಎಂ ವಿಧಾನದ ಮೂಲಕ ಚಿಕಿತ್ಸೆ ನೀಡಿ, ರೋಗಿಯನ್ನು ಗುಣಪಡಿಸುವಲ್ಲಿ ಯಶಸ್ವಿಯಾಗಿದೆ. ಸದ್ಯ ಮಹಿಳೆ ಎರಡು ವರ್ಷಗಳಿಂದ ಅನುಭವಿಸುತ್ತಿದ್ದ ಸಮಸ್ಯೆಯಿಂದ ಸುಧಾರಿಸಿಕೊಳ್ಳುತ್ತಿದ್ದಾರೆ ಎಂದು ಆಸ್ಪತ್ರೆಯ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಇಂದು ಶ್ರೀ ಕೃಷ್ಣ ಜಯಂತಿ

ಮೈಸೂರು, ಸೆ.13(ಬಿಎಲ್‌ಯು)– ಮೈಸೂರಿನ ಕೊಲ್ಲಗೇರಿಯ ಶ್ರೀ ಪ್ರಸನ್ನ ನಂಜುಂಡೇಶ್ವರ ಮತ್ತು ಶ್ರೀ ಕೃಷ್ಣ ದೇವಾಲಯದಲ್ಲಿ ನಾಳೆ (ಸೆ.14) 43 ನೇ ಶ್ರೀ ಕೃಷ್ಣ ಜಯಂತಿ ಕಾರ್ಯಕ್ರಮ ನಡೆಯಲಿದೆ.

ನಾಳೆ ಬೆಳಿಗ್ಗೆ 7 ಗಂಟೆಗೆ ಮಹಾಗಣಪತಿಗೆ ಬೆಣ್ಣೆ ಅಲಂಕಾರ, ವಿಶೇಷ ಪೂಜೆ, ಮಹಾ ಮಂಗಳಾರತಿಯಿಂದ ಧಾರ್ಮಿಕ ಪೂಜಾ ಕೈಂಕರ್ಯ ಆರಂಭವಾಗಲಿದೆ. ನಾಳೆ ಹಾಗೂ ನಾಡಿದ್ದು ಹಲವು ವಿವಿಧ ಧಾರ್ಮಿಕ ಕಾರ್ಯಗಳು ನೆರವೇರಲಿದೆ.

ಬಾಂಗ್ಲಾ ವಿರುದ್ಧ ಶ್ರೀಲಂಕಾಕ್ಕೆ ಜಯ



ಬಾಂಗ್ಲಾ ವಿರುದ್ಧ ಗೆದ್ದ ಶ್ರೀಲಂಕಾ ತಂಡದ ಆಟಗಾರರ ಸಂಭ್ರಮ

ಮೈಸೂರು, ಸೆ.13(ವಿವಿಹೆಚ್)– ಬ್ಯಾಟಿಂಗ್ ಮತ್ತು ಬೌಲಿಂಗ್‌ನ ಆಲ್‌ರೌಂಡರ್ ಪ್ರದರ್ಶನ ಸಹಾಯದಿಂದ 2025ರ ಏಷ್ಯಾಕಪ್ ಪಂದ್ಯಾವಳಿಯ ಐದನೇ ಪಂದ್ಯದಲ್ಲಿ ಶ್ರೀಲಂಕಾ ತಂಡ ಬಾಂಗ್ಲಾದೇಶವನ್ನು 6 ವಿಕೆಟ್‌ಗಳಿಂದ ಮಣಿಸುವಲ್ಲಿ ಯಶಸ್ವಿಯಾಗಿದೆ.

ಅಬುಧಾಬಿಯ ಶೇಖ್ ಜಾಯೆದ್ ಕ್ರೀಡಾಂಗಣದಲ್ಲಿ ಶನಿವಾರ ರಾತ್ರಿ ನಡೆದ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟ್ ಮಾಡಿದ ಬಾಂಗ್ಲಾದೇಶ ಮಂದ ಬ್ಯಾಟಿಂಗ್‌ನಿಂದಾಗಿ 20 ಓವರ್‌ಗಳಲ್ಲಿ ತನ್ನ ಪ್ರಮುಖ 5 ವಿಕೆಟ್ ಕಳೆದುಕೊಂಡು 139 ರನ್ ಗಳಿಸಿ ಎದುರಾಳಿ ತಂಡಕ್ಕೆ 140 ರನ್‌ಗಳ ಸಾಧಾರಣ ಗುರಿ ನೀಡಿತು. ನಿಸ್ಸಾಂಕ ಅವರ ಅರ್ಧ ಶತಕದಾಟದ ಬಲದಿಂದ ಈ ಸಾಧಾರಣ ಮೊತ್ತ ಬೆನ್ನತ್ತುವಲ್ಲಿ ಸಫಲವಾದ ಶ್ರೀಲಂಕಾ 14.4 ಓವರ್‌ಗಳಲ್ಲಿ 4 ವಿಕೆಟ್ ನಷ್ಟಕ್ಕೆ 140 ರನ್ ಬಾರಿಸಿ 6 ವಿಕೆಟ್‌ಗಳಿಂದ ಗೆದ್ದು ಬೀಗಿತು.

ಸ್ಕೋರ್ ವಿವರ

ಬಾಂಗ್ಲಾದೇಶ–139/5 (20 ಓವರ್)– ನಾಯಕ ಲಿಟನ್ ದಾಸ್ 28(26), ಜಾಕೆರ್ ಅಲಿ ನಾಟ್‌ಔಟ್ 41(34), ಶಮೀಮ್ ಹೊಸೇನ್ ಅಜೇಯ 42(34), ವನಿಂದು ಹಸರಂಗ 25ಕ್ಕೆ2, ನುವಾನ್ ತುಷಾರ 17ಕ್ಕೆ1, ಚಾಮಿರಾ 17ಕ್ಕೆ1.

ಶ್ರೀಲಂಕಾ–140/4 (14.4 ಓವರ್)– ನಿಸ್ಸಾಂಕ 50(34), ಕಮಿಲ್ ಮಿಶಾರ ಅಜೇಯ 46(32), ನಾಯಕ ಚರಿತ್ ಅಸಲಂಕ ನಾಟ್‌ಔಟ್ 10(4), ಮಹೆದಿ ಹಸನ್ 29ಕ್ಕೆ2, ತಂಝೀಮ್ ಹಸನ್ ಸಕೀಬ್ 23ಕ್ಕೆ1, ಮುಸ್ತಫಿಜೂರ್ ರೆಹಮಾನ್ 35ಕ್ಕೆ1

ಪಂದ್ಯಶ್ರೇಷ್ಠ: ಕಮಿಲ್ ಮಿಶಾರ

ಮಣಿಪಾಲ್ ಆಸ್ಪತ್ರೆಯಿಂದ ಮಾವುತರು, ಕಾವಾಡಿಗರು, ಕುಟುಂಬ ಸದಸ್ಯರಿಗೆ ಆರೋಗ್ಯ ತಪಾಸಣೆ

ಮೈಸೂರು, ಸೆ.13– ದಸರಾ ಮಹೋತ್ಸವದ ಅಂಗವಾಗಿ ಮೈಸೂರಿನ ಮಣಿಪಾಲ್ ಆಸ್ಪತ್ರೆಯು ಗಜಪಡೆಯ ನಿರ್ವಹಣೆ ಮಾಡುವ ಮಾವುತರು, ಕಾವಾಡಿಗರು ಮತ್ತು ಅವರ ಕುಟುಂಬದ ಸದಸ್ಯರಿಗೆ ಆರೋಗ್ಯ ತಪಾಸಣಾ ಶಿಬಿರ ಆಯೋಜಿಸಲಾಗಿತ್ತು.

ಈ ವೇಳೆ ಮಣಿಪಾಲ್ ಆಸ್ಪತ್ರೆ ನಿರ್ದೇಶಕ ಪ್ರಮೋದ್ ಕುಂದರ್ ಮಾತನಾಡಿ, ದಸರಾ ಸಂಪ್ರದಾಯ, ಶಿಸ್ತು ಮತ್ತು ಸಾಮಾಜಿಕ ಪಾಲ್ಗೊಳ್ಳುವಿಕೆಯನ್ನು ಪ್ರತಿನಿಧಿಸುತ್ತದೆ. ಈ ಆರೋಗ್ಯ ಶಿಬಿರದ




ಮಾವುತರು, ಕಾವಾಡಿಗರು ಮತ್ತು ಕುಟುಂಬದ ಸದಸ್ಯರಿಗೆ ಆರೋಗ್ಯ ತಪಾಸಣೆ.

ಮೂಲಕ ಆನೆಗಳ ಯೋಗಕ್ಷೇಮ, ನೋಡಿಕೊಳ್ಳುವವರ ಅರೋಗ್ಯ ಸುಧಾರಣೆಗೆ ಮಣಿಪಾಲ್ ಆಸ್ಪತ್ರೆ ಆಸಕ್ತಿ ತೋರಿಸುತ್ತದೆ ಎಂದರು.

ಉಪ ಅರಣ್ಯ ಸಂರಕ್ಷಣಾಧಿಕಾರಿ ಐ.ಬಿ.ಪ್ರಭುಗೌಡ ಇದೇ ವೇಳೆ ಮಾತನಾಡಿ, ಆನೆಗಳಿಗೆ ನೀಡುವ ಆರೈಕೆಯಷ್ಟೇ ಮಾವುತರು, ಕಾವಾಡಿಗರು ಮತ್ತು ಅವರ ಕುಟುಂಬಗಳ ಆರೋಗ್ಯವೂ ಮುಖ್ಯವಾಗಿದೆ. ಮಣಿಪಾಲ್ ಆಸ್ಪತ್ರೆ ಮೈಸೂರು ವತಿಯಿಂದ ಈ ಉಪಯುಕ್ತ ಸೇವೆ ಶ್ಲಾಘನೀಯ ಎಂದರು.

ಶ್ರದ್ಧಾಂಜಲಿ



ಮೈಸೂರು ಸರಸ್ವತಿಪುರಂ ನಿವಾಸಿ
ನಿವೃತ್ತ ಸ.ಪ್ರಾ. ಶಾಲಾ ಶಿಕ್ಷಕರು
ಶ್ರೀಮಾನ್ ವಾಲ್ಮೀಕಿ ಕಣ್ಣಮ್ಮಾಚಾರ್
(80) ರವರು ಅಲ್ಪ ಕಾಲದ ಅನಾರೋಗ್ಯದಿಂದ ದಿ. 13.09.2025ರಂದು ವೈಕುಂಠವಾಸಿಯಾದರೆಂದು ತಿಳಿಸಲು ವಿಷಾಧಿಸುತ್ತೇವೆ.
***
ಇಂತಿ ದುಃಖತಪ್ತರು:
ಕುಟುಂಬವರ್ಗ ಮತ್ತು ಸ್ನೇಹಿತರು

5ನೇ ವರ್ಷದ ಸವಿನೆನಪು



ಶ್ರೀಮತಿ **ಅಂಜನಮ್ಮ**
(ನಿವೃತ್ತ ನೌಕರರು, ಆರೋಗ್ಯ & ಕುಟುಂಬ ಕಲ್ಯಾಣ ಇಲಾಖೆ)

ಮರೆಯಲಾಗದ ಮಧುರ ನೆನಪುಗಳೊಂದಿಗೆ ಸದಾ ನಿಮ್ಮ ನೆನಪಿನಲ್ಲಿರುವ ಇಂತಿ ನಿಮ್ಮ ಮಗ
ಜೆ.ಮಹದೇವ್ ಪ್ರಸಾದ್
ಲೆಕ್ಕ ಪರಿಶೋಧಕರು ಮತ್ತು ಕುಟುಂಬ ವರ್ಗದವರು

2ನೇ ವರ್ಷದ ಪುಣ್ಯಸ್ಮರಣೆ



ಶ್ರೀಮತಿ ಚಿಕ್ಕತಾಯಮ್ಮನವರು
ನಿಧನ: 14.09.2023
ನೀವು ನಮ್ಮನ್ನಗಲಿ ಇಂದಿಗೆ ಎರಡು ವರ್ಷ ಕಳೆದಿದೆ.
ನಮ್ಮೆಲ್ಲರ ಬಾಳಿಗೆ ಬೆಳಕು ನೀಡಿ ಕಾಪಾಡಿ ಹಗಲಿರುಳು ಸದಾ ನಿಮ್ಮ ನೆನಪಿನಲ್ಲಿರುವ
ದುಃಖತಪ್ತರು: ಪತಿ: ಬಸವೇಗೌಡರು, ಮಕ್ಕಳು, ಮೊಮ್ಮಕ್ಕಳು ಹಾಗೂ ಕುಟುಂಬವರ್ಗದವರು
ಡಿ.ಸಾಲುಹುಂಡಿ, ಮೈಸೂರು ತಾ॥

ಮೈಸೂರು ಮಿತ್ರ 46
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ವಿಜಯನಗರ ಪತ್ತಿನ ಸಹಕಾರ ಸಂಘ ನಿಯಮಿತ

#12, ನೆಲಅಂತಸ್ತು, ಕನ್ನಡ ಸಾಹಿತ್ಯ ಪರಿಷತ್ತು ಭವನ ರಸ್ತೆ, ಕುವೆಂಪು ವಿದ್ಯಾವರ್ಧಕ ಟ್ರಸ್ಟ್ ಮುಂಭಾಗ, ವಿಜಯನಗರ 1ನೇ ಹಂತ, ಮೈಸೂರು–570017 । ದೂರವಾಣಿ: 2415869

ನಮ್ಮ ಸಂಘದ 22ನೇ ವಾರ್ಷಿಕ ಮಹಾಸಭೆಯನ್ನು ದಿನಾಂಕ 14–09–2025 ರ ಭಾನುವಾರ ಬೆಳಿಗ್ಗೆ 11.00 ಗಂಟೆಗೆ ಮುಲಕನಾಡು ಭವನ, ಹುಣಸೂರು ಮುಖ್ಯರಸ್ತೆ, ಐಶ್ವರ್ಯ ಪೆಟ್ರೋಲ್ ಬಂಕ್ ಪಕ್ಕ, ಏರ್ಪಡಿಸಲಾಗಿದೆ. ಸಂಘದ ಅಧ್ಯಕ್ಷರಾದ ಶ್ರೀ ಕೆ.ಎಂ.ತೀರ್ಥರಾಜು ರವರ ಅಧ್ಯಕ್ಷತೆಯಲ್ಲಿ ಕರೆಯಲಾಗಿದೆ. ಆಹ್ವಾನ ಪತ್ರಿಕೆ ತಲುಪದಿದ್ದವರು ಇದನ್ನೇ ಆಹ್ವಾನ ಪತ್ರಿಕೆಯೆಂದು ಪರಿಗಣಿಸಿ ಸಭೆಗೆ ಭಾಗವಹಿಸಬೇಕಾಗಿ ವಿನಂತಿ.

ಆಡಳಿತ ಮಂಡಳಿ ಅಪ್ಪಣೆ ಮೇರೆಗೆ
ಸಹಿ/– ಶ್ರೀಮತಿ ನಂದಿನಿ ಎಂ. ಕಾರ್ಯದರ್ಶಿ

ದಿ ಯೂನಿಯನ್ ರೈತ ಸೇವಾ ಸಹಕಾರ ಸಂಘ, ನಿಯಮಿತ

ಕಡಕೊಳ–571311, ಮೈಸೂರು ತಾಲ್ಲೂಕು

ಸಂಘಟನೆ ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ ರವರಿಂದ

ಮಾನ್ಯ ಸದಸ್ಯರೆ,

ದಿನಾಂಕ 15–9–2025, ಸೋಮವಾರ. ಸಮಯ: ಮಧ್ಯಾಹ್ನ 2 ಗಂಟೆಗೆ. ಸ್ಥಳ: ಮಹಾವೀರ ಭವನದಲ್ಲಿ ನಮ್ಮ ಸಂಘದ ಅಧ್ಯಕ್ಷರಾದ K.R. ನಾರಾಯಣ ರವರ ಅಧ್ಯಕ್ಷತೆಯಲ್ಲಿ 2024–25ರ ವಾರ್ಷಿಕ ಮಹಾಸಭೆಯನ್ನು ಹಮ್ಮಿಕೊಳ್ಳಲಾಗಿದೆ. ಎಲ್ಲಾ ಸದಸ್ಯರು ತಪ್ಪದೇ ಬರಬೇಕೆಂದು ಕೋರಲಾಗಿದೆ ಹಾಗೂ ಸದಸ್ಯರಿಗೆ ಆಹ್ವಾನ ಪತ್ರಿಕೆಯನ್ನು ಮನೆ ಮನೆಗೆ ತಲುಪಿಸಿದ್ದು, ತಮಗೆ ತಲುಪದೇ ಇದ್ದಲ್ಲಿ, ಇದನ್ನೇ ಆಹ್ವಾನ ಪತ್ರಿಕೆ ಎಂದು ಪರಿಗಣಿಸಿ ಬರಬೇಕೆಂದು ಕೋರಲಾಗಿದೆ.

ಇಂತಿ ತಮ್ಮ ವಿಶ್ವಾಸಿ
ದಿ ಯೂನಿಯನ್ ರೈತ ಸೇವಾ ಸಹಕಾರ ಸಂಘ, ನಿಯಮಿತ

ಹೋಟೆಲು ಮಾಲೀಕರ ಪತ್ತಿನ ಸಹಕಾರ ಸಂಘ (ನಿ), ಮೈಸೂರು.

#1265, 2ನೇ ಮುಖ್ಯ ರಸ್ತೆ, ಉತ್ತೇತ್ತೂರು ಸೀತಾರಾಮ್ ರಾವ್ ಭವನ, ಕೃಷ್ಣಮೂರ್ತಿಪುರಂ, ಮೈಸೂರು. ದೂ: 0821–2568528

2024–25ನೇ ಸಾಲಿನ ವಾರ್ಷಿಕ ಸಾಮಾನ್ಯ ಸಭೆಯ ಆಹ್ವಾನ ಪತ್ರಿಕೆ

ಮಾನ್ಯ ಸಹಕಾರ ಬಂಧುಗಳೇ, ಮೇಲ್ಕಂಡ ಸಂಘದ 2024–25ನೇ ಸಾಲಿನ ವಾರ್ಷಿಕ ಸಾಮಾನ್ಯ ಸಭೆಯನ್ನು ದಿನಾಂಕ : 16–09–2025 ಮಂಗಳವಾರ ಬೆಳಿಗ್ಗೆ 10.00 ಗಂಟೆಗೆ ಬಿ.ಎನ್.ರಸ್ತೆ, ಸಬರ್ಬನ್ ಬಸ್ ಸ್ಟ್ಯಾಂಡ್ ಎದುರು ಇರುವ **ಹೋಟೆಲ್ ಪೈ ವಿಸ್ತಾ** ಆವರಣದಲ್ಲಿ ಸಂಘದ ಅಧ್ಯಕ್ಷರಾದ **ಶ್ರೀ ನಾರಾಯಣ ವಿ ಹೆಗಡೆ** ಯವರ ಘನ ಅಧ್ಯಕ್ಷತೆಯಲ್ಲಿ ಕರೆಯಲಾಗಿದೆ. ಸಾಮಾನ್ಯ ಸಭೆಯ ನೋಟೀಸ್ ತಲುಪದೇ ಇದ್ದ ಸದಸ್ಯರು ಇದನ್ನೇ ನೋಟೀಸ್ ಎಂದು ಪರಿಗಣಿಸಿ ಸಭೆಗೆ ಆಗಮಿಸಬೇಕಾಗಿ ವಿನಂತಿ.

ಸ್ಥಳ : ಮೈಸೂರು
ದಿನಾಂಕ: 14–09–2025
ಆಡಳಿತ ಮಂಡಳಿಯ ಅಪ್ಪಣೆಯ ಮೇರೆಗೆ
ಎಂ.ಅನಿತ, ಮುಖ್ಯ ಕಾರ್ಯನಿರ್ವಹಣಾಧಿಕಾರಿ